1930

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ || ೧ ||
ದೊರೆಯಲುಜ್ವಲಮಹಾರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ||
ಗರಳಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ | ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೨೪. ಮಂಗಳೂರು, ತಾ. ೩ನೇ ಶುಕ್ರವಾರ ಜನವರಿ ೧೯೩೦. (3 – 1 – '30.) ಸಂಚಿಕೆ ೧

The Improved

REPUBLIC

Model A 1. 22 passengers Light Truck.

Model C 1. 22 passengers heavy duty Truck.

Model D 1. & DA 1. Capacity $1\frac{1}{2}$ to 2 Tons.



SOLE DISTRIBUTORS

for Bombay Presidency, Mysore, Coorg & Western Districts of Madras Presidency.

The Canara Public Conveyance Company, Limited,

Kodialbail.

(MANGALORE.)

30 ಹಂಡ್ರಡ್ ವೇಟಿನ ಬಸ್ಸುಗಳು.



40 ಕುದುರೆ ಶಕ್ತಿಯುಳ್ಳ ಎಂಜಿನ್

ಸುಲಭ ತರದ ಯಂತ್ರಸಾಧನ.

ಅಂದರೆ

ಇಟ್ಟುಕೊಳ್ಳಲು ಖರ್ಚು ಕಡಿಮೆ

ಚಲಿಸುವ ಭಾಗಗಳು ಕಡಿಮೆ

ದುರುಸ್ತಿಯ ಆವಶ್ಯಕತೆ ಕಡಿಮೆ

ಬಾಳಿಕೆ ಹೆಚ್ಚು

ಪೆಟ್ರೋಲ್ ತನ್ನ ಭಾರದ ಬಲದಿಂದಲೇ ಕಾರ್ಬುರೆಟರಿಗೆ ಹರಿಯುತ್ತದೆ

(ಅನಾವಶ್ಯಕ ಭಾಗಗಳೇ ಇಲ್ಲ)

ಪೆಟ್ರೋಲಿನ ಖರ್ಚು ಬಹಳ ಕಡಿಮೆ

(ಡಿಸ್ಟ್ರಿಬ್ಯೂಟರ್ಸ್) ವ್ಯಾಪಾರಿಗಳು:—

ಪಿಯರ್ಸಲೆಸ್ಲಿ ಮತ್ತು ಕಂಪನಿ ಲಿಮಿಟೆಡ್, ಕಲ್ಲಿಕೋಟೆ.
ಜನರಲ್ ಮೋಟರ್ ಏಜನ್ಸಿ, ಹುಬ್ಬಳ್ಳಿ.

ಇನ್ನು ಇವರ ಕಡೆಯಿಂದ ನೇಮಿಸಿದ ವ್ಯಾಪಾರಸ್ಥರು.

ಫೋರ್ಡ ಮೋಟರ್ ಕಂಪೆನಿ. ಒಫ್ ಇಂಡಿಯಾ ಲಿಮಿಟೆಡ್.

I. M. 30/1

ಅನುಕ್ರಮಣಿಕೆ.

ಅಗ್ರಲೇಖ
ಹೊಸ ವರ್ಷ, ಕಾಂಗ್ರೆಸ್ಸಿನ ತೀರ್ಮಾನ. . . . ೩
ದ. ಕ. [illegible] ಸಂಘಕ್ಕೆ, [illegible] ಸಂಘಕ್ಕೆ, [illegible] ಸಂಘಕ್ಕೆ, ಮುದ್ರಣಾಲಯ ಸಂಘಕ್ಕೆ, ಎಸ್. ಎಸ್. ಎಲ್. ಸಿ. [illegible] ಅವಶ್ಯಕತೆ . . . ೪-೫
[illegible] ೩
[illegible] ಉಪರತಿಗಳ ಮೂಲ ೯
[illegible] ವರ್ತಮಾನ ೧೧
[illegible] ವರ್ತಮಾನ . . . . ,,
ಸ್ಥಳೀಯ ವಿಷಯ:—ಮಂಗಳೂರು, ಪಡುಬಿದ್ರೆ, ಮುಲ್ಕಿ, ಬೆಳ್ಮಣ್ಣು, ಗುರುಪುರ, ... ೧೨
ಪುತ್ತೂರಿನಲ್ಲಿ ಜರಗಿದ ದ. ಕ. ಬ್ರಾಹ್ಮಣ ಬ್ರಾಹ್ಮಣ ಸಂಘದ ಸಭೆ ಮಹಾಧಿವೇಶನ. ೧೨
ತಾ. ೩ನೇ ಜನವರಿ ೧೯೩೦ [ಜಿಲ್ಲಾ ಪ್ರಚಾರ ಸಮಿತಿ] . ೧
ಮದ್ಯಪಾನ ನಿಷೇಧ ಕಾಂಗ್ರೆಸ್, ಲಾಹೋರ್ . . ೧೩
ಆಲ್ ಇಂಡಿಯಾ ಟೀಚರ್ಸ್ ಫೆಡರೇಶನ್ ಮಹಾಸಭೆಯ ನಿರ್ಣಯಗಳು ೧೩
ಪಂಡಿತ ಜವಾಹಿರಲಾಲರು, ಮೈಸೂರು ರಾಜ್ಯದಲ್ಲಿರುವ ಹಳೇ ಬೀಜ, ಬೀಡಿ ವ್ಯವಸಾಯ . . . ೧೪
ಅವಿವೇಕದ ಪರಿಣಾಮ [ಕಥೆ] . . ೧೫-೨೧-೨೫
ಲಾಹೋರ ಕಾಂಗ್ರೆಸ್ ಅಧಿವೇಶನ . . ೧೭-೧೯-೨೩-೨೬
ಮಾತೆಯ ಕಾರುಣ್ಯ ೨೫
ಪಂಜಾಬ್ ಹಿಂದೂ ಮಹಾಸಭೆ, ಲಾಹೋರ್ . . ೫

ಸ್ವದೇಶಾಭಿಮಾನಿ.

ತಾರೀಕು ೩ನೇ ಶುಕ್ರವಾರ ಜನವರಿ ೧೯೩೦.

ಹೊಸ ವರ್ಷ.

ಜನವರಿಯು ಕ್ರಿಸ್ತೀಯರಿಗೆ ಹೊಸ ವರ್ಷ ಪ್ರಾರಂಭ. ಪ್ರಕಟಣೆಯ ಕಾರಣದಿಂದ ಸ್ವದೇಶಾಭಿಮಾನಿಗೂ ಹೊಸ ವರ್ಷವು ಆರಂಭವಾಯಿತು. ೨೩ ವರ್ಷಗಳ ತನ್ನ ಹಿಂದಿನ ಅತಿಕ್ರಾಂತ ಪರಿಶ್ರಮವನ್ನು ಅವಲೋಕಿಸುತ್ತ ಸ್ವದೇಶಾಭಿಮಾನಿಯು ೨೪ನೇ ವರ್ಷದ ಪ್ರಗಲ್ಭ ತಾರುಣ್ಯವನ್ನು ಸೇರುತ್ತಿದೆ. ಈ ೨೩ ವರ್ಷಗಳ ವರೆಗೆ ಕರ್ನಾಟಕೀಯರೊಡನೆ ಸ್ಥಾಪಿಸಿದ ಅವಿಚ್ಛಿನ್ನ ದೀರ್ಘ ಸಂಬಂಧವನ್ನು ಪುನರಾಲೋಕಿಸಿ ಸ್ವದೇಶಾಭಿಮಾನಿಯು ತನ್ನ ಆತ್ಮ ಸಂತುಷ್ಟಿಯನ್ನು ಹೊಂದುತ್ತಿದೆ.

ಆದರೆ ಕಳೆದ ವರ್ಷದಷ್ಟೇ ಶ್ರೇಷ್ಠವಾದ ಹೊಸ ವರ್ಷದ ಪ್ರಥಮಾಂಕವನ್ನು ಈ ಬಾರಿಯೂ ಸ್ವದೇಶಾಭಿಮಾನಿಗೆ ಕೊಡಲಾಗದಿದ್ದುದಕ್ಕೆ ಅವಳು ಕ್ಷಮಾಯಾಚನೆ ಗೈಯುವಳು. ಮುದ್ರಣಕ್ಕೂ, ಸಂಪಾದಕರಿಗೂ ಸಮಯಾಭಾವ ಉಂಟಾದುದೇ ಇದಕ್ಕೆ ಕಾರಣವಾಯಿತು.

ಕಳೆದ ವರ್ಷದ ಸಿಂಹಾವಲೋಕನವನ್ನು ಮಾಡಿದರೆ ಸ್ವದೇಶಾಭಿಮಾನಿಯು ತನ್ನ ಕರ್ತವ್ಯಗಳನ್ನೂ ಜವಾಬ್ದಾರಿಯನ್ನೂ ಸರಿಯಾಗಿ ನಿರ್ವಹಿಸಿದೆಯೆನ್ನಲು ನಮಗೆ ಸಂಕೋಚವಾಗುವುದಿಲ್ಲ. ಎಲ್ಲಾ ದೇಶ, ವಿದೇಶ ವಿಷಯಗಳನ್ನೂ; ರಾಷ್ಟ್ರೀಯ ಅಂತರ್ರಾಷ್ಟ್ರೀಯ ರಾಜಕೀಯ ವಿಷಯಗಳನ್ನೂ ವ್ಯಷ್ಟಿ, ಸಮಷ್ಟಿಯ ಹಿತಕರ ವಿಷಯಗಳನ್ನೂ, ಕೃಷಿ ಕೈಗಾರಿಕೆಯ ವಿಷಯಗಳನ್ನೂ, ಉದ್ಯೋಗ ವಾಣಿಜ್ಯ ವಿಷಯಗಳನ್ನೂ, ಸ್ಥಳೀಕ, ಅಖಿಲ ಕರ್ನಾಟಕ ವಿಷಯಗಳನ್ನೂ ಸ್ವದೇಶಾಭಿಮಾನಿಯು ನಿಸ್ಸಂಕೋಚವಾಗಿಯೂ, ನಿಷ್ಪಕ್ಷಪಾತವಾಗಿಯೂ ನಿರ್ಭಯವಾಗಿಯೂ ತರ್ಕಿಸಿರುವದು. ಓದುಗರು ಈ ಮೂಲಕ ತಮ್ಮ ಲೋಕಜ್ಞಾನವನ್ನು ವಿಕಾಸಪಡಿಸಿ ಸ್ವತಂತ್ರಾಭಿಪ್ರಾಯಗಳನ್ನು ಕಟ್ಟಲು ಸಹಾಯಪಡೆದಿರುವರಾದರೆ ಸ್ವದೇಶಾಭಿಮಾನಿಯು ಅಷ್ಟರಿಂದಲೇ ಧನ್ಯಳೆನಿಸುವಳು.

ಇನ್ನು ಪತ್ರಿಕೆಗಳ ಅಭಿವೃದ್ಧಿಯ ವಿಷಯವಾಗಿ ಮಾತನಾಡುವುದಾದರೆ, ಪತ್ರಿಕಾ ಪ್ರಕಟಣೆಗೆ ಕಾರಣವಾದ, ಸಂಪಾದಕ, ಲೇಖಕ ಮತ್ತು ವಾಚಕ ಈ ಮೂರು ವರ್ಗಗಳ ಸುಧಾರಣೆಯು ಇನ್ನೂ ಆಗಬೇಕಷ್ಟು ಆಗಿಲ್ಲವೆಂಬುದನ್ನು ಒಪ್ಪಬೇಕಾಗಿದೆ. ಇವು ಮೂರಲ್ಲದೆ, ಮುದ್ರಣಾಲಯದ ಸುಧಾರಣೆಯು ತೀವ್ರವಾಗಿ ಸುಧಾರಿಸುವ ಅಗತ್ಯವಿದೆ. "ವಾಚಕರು ಓದುವುದರಲ್ಲಿ ಉತ್ಸುಕರಾಗಬೇಕು ಮಾತ್ರವಲ್ಲ. ಓದಿದ ಮೇಲೆ ಅಥವಾ ಸ್ವತಂತ್ರವಾಗಿ ಸಾರ್ವಜನಿಕ ವಿಷಯದ ಮೇಲೆ ಅವರೊಳಗೆ ಯಾವುದೊಂದು ಆಲೋಚನೆಯು ಉಂಟಾದರೆ ಅದನ್ನು ಗೌರವಿತ ರೀತಿಯಲ್ಲಿ ಬರೆಯುವ ಉತ್ಸಾಹವೂ ಅವರಿಗಿರಬೇಕು. ಕರ್ನಾಟಕದಲ್ಲಿ ಹಲವು ಜವಾಬ್ದಾರೀ ವ್ಯವಸಾಯಗಳಲ್ಲಿರುವ ಪ್ರಮುಖರು ತಮ್ಮ ಅನುಭವದ ಅಭಿಪ್ರಾಯಗಳನ್ನು ಇತರರ ಆಲೋಚನೆಯ ಬಗ್ಗೆ ಕೊಡುವುದಿಲ್ಲ. ಇದು ಅವರ ದೋಷವೊ, ಸಂಪಾದಕತನದ ದೋಷವೊ ಹೇಳಬರುವುದಿಲ್ಲ. ಆದರೆ ನಮ್ಮಂತಹ ಸಾಪ್ತಾಹಿಕಗಳಲ್ಲಿ "ಲೇಖಕ" ವರ್ಗದ ಆವಶ್ಯಕತೆಯು "ಅನುಭವಿಕ"ರೆನ್ನುವವರ ಆವಶ್ಯಕತೆಗಿಂತ ಕಡಿಮೆಯಾಗಿದೆ. ಆದುದರಿಂದ ವಾಙ್ಮಯ ಲೇಖನಗಳು ಸಾಪ್ತಾಹಿಕಗಳಲ್ಲಿ ಒಂದೊಂದು ಬಾರಿ ಬರಬಹುದಾದರೂ ಅವುಗಳು ಲೇಖನ ಸ್ಥಳವನ್ನು ಹೆಚ್ಚಾಗಿ ಆಕ್ರಮಿಸಬಾರದು, ಅಲ್ಲದೆ ಲೇಖನಗಳು ಒಬ್ಬರಿಂದಲೇ ಆಗಲಿ, ಒಂದೇ ಲೇಖಕ ವ್ಯಕ್ತಿಯ ಆದರ್ಶ ರಚಯಿತರಿಂದಾಗಲಿ ಬರಬಾರದು. ಸಾಪ್ತಾಹಿಕಗಳು, ನಾವು ಕೂಡ, ಪತ್ರಿಕೆಗಳನ್ನು ಇಂತಹ ಶ್ರೇಷ್ಠ ತರಗತಿಗೆ ಏಳಿಸಲಾರವಾದುವೆಂಬುದು, ಸಂಪಾದಕತನಕ್ಕೂ, ವಾಚಕ ವರ್ಗಕ್ಕೂ, ಕರ್ನಾಟಕ ಪ್ರಮುಖರಿಗೂ ಕುಂದನ್ನೆಣಿಸುವುದು.

ಕರ್ನಾಟಕ ವಾರ್ತಾ ಪತ್ರಿಕೆಗಳು ತಮ್ಮ ಕುಂದನ್ನು ಕಳೆದು ಬೆಳೆಯಲೆಂದು ಬಯಸಿ ನಮ್ಮ ಈ ವರ್ಷದ ಕೆಲಸದಲ್ಲಿ ಭರವಸೆಯಿಂದ ಕೈಯನ್ನಿಕ್ಕುವೆವು.

ಕಾಂಗ್ರೆಸ್ಸಿನ ತೀರ್ಮಾನ.

೧೯೨೯ನೇ ಇಸವಿಯ ಕಡೆಯ ಘಂಟೆಯು ಕಳೆಯುವ ವರ್ಷದ ಸೂಚನೆಕೊಟ್ಟು, ೧೯೩೦ನೇ ಇಸವಿಯ ಪ್ರಥಮ ಮುಹೂರ್ತವು ಹೊಸ ವರ್ಷವನ್ನುಸುರುವ ಆ ಸಂದಿಗ್ಧ ಸಮಯದಲ್ಲಿಯೇ ಕಲ್ಕತ್ತಾ ಕಾಂಗ್ರೆಸ್ಸಿನ ನಿರ್ಧಾರಕ್ಕನುಸಾರವಾಗಿ ಪಂಡಿತ ಜವಾಹಿರಲಾಲ ನೆಹರೂರವರು ಕಾಂಗ್ರೆಸ್ಸಿನ ಮತ್ತು ಹಿಂದೂಸ್ಥಾನದ ಸಮಗ್ರ ಜನತೆಯ ಪರವಾಗಿ ಹಿಂದೀ ಸ್ವಾತಂತ್ರ್ಯವನ್ನು ಹಿಂದೀಯರ ಗುರಿಯಾಗಿ ಪ್ರಕಟಿಸಿದರು. ಕಾಂಗ್ರೆಸ್ಸಿನ ತೀರ್ಮಾನವನ್ನು ಕುತೂಹಲದಿಂದ ಕಾಯುತ್ತಿದ್ದ ಪ್ರಪಂಚಕ್ಕೆ ಈ ಪ್ರಚಂಡ ತೀರ್ಮಾನವು ಮಿಂಚಿಸಲ್ಪಟ್ಟಿತು. ಕಾಂಗ್ರೆಸ್ಸು ಕೂಡಲೆ ಪ್ರಾಣಾಯಾಮಾರಂಭಮಾಡಿದ ಲಾರ್ಡ ಇರ್ವಿನರ ಆಶಯಗಳೂ ಮಿ. ವೆಜ್‌ವುಡ್ ಬೆನ್ನರ ಸೂಚನೆಗಳೂ ಬಿದ್ದು ಹೋದವು. ಹಿಂದೂಸ್ಥಾನದ ಶಕ್ತಿಯೂ, ಸಾಹಸವೂ, ನಿರ್ಭಯತೆ ಹಿಂದಣ ಪೂರ್ವ ಸ್ಥಿತಿಯೂ, ಸ್ಥಿರವಾದ ಕ್ಲೇಶವಿಲ್ಲದ ಭಾವನೆಯಿಂದ ಬರೆಯಲ್ಪಟ್ಟಿತು.

ಯುವಕ ಪಂಡಿತ ಜವಾಹಿರಲಾಲ, ಸ್ವಾತಂತ್ರ್ಯದ ಉಪಾಸಕರಾದ ಪಂ. ಜವಾಹಿರಲಾಲ ನೆಹರೂರವರು ಯಾವಾಗ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರೋ, ಕಾಂಗ್ರೆಸ್ಸು ಸ್ವಾತಂತ್ರ್ಯದ ಕಡೆಗೆ ಧಾವಿಸುತ್ತದೆ ಎಂದು ಆಗಲೇ ಕಂಡುಬಂದಿತು. ಮತ್ತು ಈ ತೀರ್ಮಾನ ಘೋಷಣೆಯಿಂದ ಏನನ್ನು ನಾವು ನಿರೀಕ್ಷಿಸಿದ್ದೆವೋ ಅದೆಲ್ಲವೂ ಆಯಿತು. ಈ ಬಾರಿ ತೀರ್ಮಾನ ಅಧ್ಯಕ್ಷರ ಭಾಷಣ ವಾದರೂ ಉತ್ಸಾಹವೂ ತೀಕ್ಷ್ಣವೂ ಆಗಿದ್ದಿತು. ಆ ಭಾಷಣವು ಈ ಬಾರಿಯ ಕಾಂಗ್ರೆಸ್ ಕಾರ್ಯನಿರ್ವಾಹಕ್ಕೆ ಮುನ್ನುಡಿಯನ್ನು ಬರೆಯಿತೆಂದು ಹೇಳಲು ಸಂದೇಹವಿಲ್ಲ.

"ಲೋಕವು ಪ್ರಸವವೇದನೆಯಲ್ಲಿದೆ; ಆ ವೇದನೆಯಿಂದ ಒಂದು ನೂತನ ರಚನೆಯು ಜನಿಸುವುದು." ಎಂದು ಭವಿಷ್ಯದ್ವಾಣಿಯನ್ನು ಅಧ್ಯಕ್ಷಭಾಷಣದ ಉಪಕ್ರಮದಲ್ಲಿ ಅವರು ಕಾತರ ಹಿಂದೂಸ್ಥಾನಕ್ಕೆ ಉಸುರಿ ಆಶೆಯನ್ನು ತೋರಿಸಿದರು.

"ಚೈನಾ, ತುರ್ಕಿ, ಪರ್ಶಿಯಾ, ಈಜಿಪ್ತ್, ರಶ್ಯಾ ಮೊದಲಾದ ಎಲ್ಲಾ ದೇಶಗಳೂ ಸಚೇತನವಾಗಿ ಚಲಿಸುತ್ತವೆ; ಹಿಂದೂಸ್ಥಾನವು ಲೋಕದೊಳಗುಂಟಾದ ಆಂದೋಲನದ ಒಂದು ಅಂಶವಾತ್ರವಾಗಿದೆ. ಹಿಂದೂಸ್ಥಾನವು ಇತರ ದೇಶಗಳಿಗೆ ಕೊಡಬೇಕಾದ ಸಂದೇಶವಿದೆ; ಹಾಗೆಯೇ ಇತರ ದೇಶಗಳಿಂದ ಅದು ಸ್ವೀಕರಿಸಬೇಕಾದ ಸಂದೇಶಗಳೂ ಹಲವಿವೆ" ಎಂದು ಅಧ್ಯಕ್ಷರು ಹಿಂದೀ ಚಳವಳದ ವಿಶಾಲತೆಯನ್ನೂ ತೋರಿಸಿದರು. ವ್ಯಾಸರಾಯರ ಆತ್ಮಾರ್ಪಣದ ವಿಷಯವಾಗಿ ಹೇಳುವಾಗ, "ವ್ಯಾಸರಾಯರ ಉದ್ದೇಶವೂ ಒಳ್ಳೆಯದಿತ್ತು; ಭಾವನೆಯೂ ಶಾಂತಿಯ ಭಾವನೆಯಾಗಿತ್ತು. ಆದರೆ [illegible] ಸ್ವಾತಂತ್ರ್ಯ [illegible] ಸ್ವಾತಂತ್ರ್ಯವನ್ನು ಹೊಂದಲಾರರು" ಎಂದು ವ್ಯಾಸರಾಯರ, [illegible] ದೊರೆಗಿನ ಆಧಾರದ ಗುಟ್ಟನ್ನು ತೋರಿಸುವರು. "[illegible] ಸಾಮ್ರಾಜ್ಯದ [illegible] ದುರವಸ್ಥೆಯಾಗಿದೆ. ಮತ್ತು ನಮ್ಮ ಜನರು ಅದನ್ನು ಬಹು ದೀರ್ಘಕಾಲ ಹೊತ್ತಿದ್ದಾರೆ. ಅವರ ಬೆನ್ನು ಬಗ್ಗಿದೆ; ಅವರ ಚೇತನವು ಮುರಿದಿದೆ. ಈ ಭಾರದಿಂದ ಅವರಿಗೆ ಮುಕ್ತಿಯಿಲ್ಲವಾದರೆ ಅವರು ಬ್ರಿಟಿಷ ಪ್ರಜಾಸತ್ತೆಯಲ್ಲಿ ಹೇಗೆ ಭಾಗಿಗಳಾದಾರು!" ಎಂದು ಅಧ್ಯಕ್ಷರು ಸ್ವಾತಂತ್ರ್ಯದ ಆವಶ್ಯಕತೆಯನ್ನು ತೋರಿಸಿದ್ದಾರೆ. ಮತ್ತು ದೇಶದ ಜವಾಬ್ದಾರ ಧುರೀಣರ ಅಧಿಕಾರದಿಂದ "ನಮಗೆ ಶರ್ತಹಾಕುವ ಹಕ್ಕು ಬ್ರಿಟಿಷ ಪಾರ್ಲಿಮೆಂಟಿಗೆ ಇದೆಯೆಂದು ಈ ಕಾಂಗ್ರೆಸ್ಸು ಒಪ್ಪಿಲ್ಲ, ಒಪ್ಪುವದೂ ಇಲ್ಲ. ಅದರೊಡನೆ ನಮ್ಮ ಪ್ರಾರ್ಥನೆಯೂ ಇಲ್ಲ" ಎಂದು ಹೇಳಿ "ಆದರೆ ನಾವು ಲೋಕದ ಪಾರ್ಲಿಮೆಂಟಿಗೂ, ಲೋಕದ ಮನಸ್ಸಾಕ್ಷಿಗೂ ನಾವು ವಿನಂತಿಮಾಡಿಕೊಳ್ಳುತ್ತೇವೆ; ಮತ್ತು ಅವರಲ್ಲಿ—ಪರಜನಾಂಗದ ಅಧೀನತೆಗೆ ಹಿಂದೂಸ್ಥಾನವು ಒಪ್ಪುವುದಿಲ್ಲ—ಎಂದು ನಾವು ಪ್ರಕಟಿಸುತ್ತೇವೆ" ಎಂದು ಹಿಂದುಸ್ಥಾನದೊಳಗಿನ ಚಳವಳದ ವಿಶಾಲತೆಗೆ ಮತ್ತು ಮಹತ್ವಕ್ಕೆ ಇನ್ನೊಂದು ಉದಾಹರಣೆಯನ್ನು ಕೊಟ್ಟಿದ್ದಾರೆ. ಮುಂದೆ ಕಾಂಗ್ರೆಸು ಹೇಗೆ ಕೆಲಸಗಳನ್ನು ನಿರ್ವಹಿಸಬೇಕೆಂದು ಸೂಚಿಸಿ ಅಧ್ಯಕ್ಷರು "ಇವೆಲ್ಲವೂ ಅಧಿಕಾರ ಪಡೆಯುವಿಕೆಗಾಗಿ ಸೂಚಿಸಿದ ಪವಿತ್ರ ಆಶೆಗಳು ಆಗಿವೆ. ಆದುದರಿಂದ ಅಧಿಕಾರವನ್ನು ಗೆದ್ದು ಪಡೆಯುವುದೇ ಈಗಿನ ಮುಖ್ಯ ಪ್ರಶ್ನೆಯಾಗಿದೆ. ಇದನ್ನು ವಕೀಲರ ಶಬ್ದಗಳ ಪೀಠಿಕೆಯಿಂದ ನಾವು ಹೊಂದಲಾರೆವು; ಜನಾಂಗದ ಇಚ್ಛೆಯನ್ನು ಸಾಧ್ಯಪಡಿಸಲು ಸರಕಾರವನ್ನು ಒಗ್ಗಿಸಬಲ್ಲ ಕಾರ್ಯಕ್ರಮವನ್ನು ರಚಿಸಬೇಕು" ಎಂದುಹೇಳಿದರು. ಶಾಂತವಾದ ಸಾರ್ವಜನಿಕ ಚಳವಳ, ಕೌನ್ಸಿಲು, ಎಸೆಂಬ್ಲಿಗಳ ಬಹಿಷ್ಕಾರ, ಕರನಿರಾಕರಣೆ, ಶಿಸ್ತು ಮತ್ತು ವ್ಯವಸ್ಥೆ ಇವುಗಳನ್ನು ಈ ಉದ್ದೇಶಕ್ಕಾಗಿ ಹೇಗೆ ರಚಿಸಬೇಕೆಂದು ಸೂಚಿಸಿ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು.

ಅಧ್ಯಕ್ಷರ ಭಾಷಣವು ಹಿಂದೂಸ್ಥಾನದಲ್ಲಿ ಬೆಳೆಯುತ್ತಾ ಬರುತ್ತಿರುವ ಅಭಿಪ್ರಾಯಗಳ ಸೂಚನೆಯು ಮಾತ್ರವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಆ ಭಾಷಣವು ಈಗಿನ ಸಮಯಕ್ಕೆ ತಕ್ಕದೊ, ಇಲ್ಲವೇ, ರೌಂಡ್ ಟೇಬಲ್ ಕಾನ್ಫರೆನ್ಸಿನ ಕಾರಣದಿಂದ ಸೌಮ್ಯ ಘೋಷಣಾ ಧುರೀಣತ್ವವನ್ನು ಕೊಡಬಲ್ಲ ಭಾಷಣದ ಆವಶ್ಯಕತೆಯು ಈ ಸಂದಿಗ್ಧ ಸ್ಥಿತಿಯಲ್ಲಿ ಅಗತ್ಯವಿದ್ದಿತೊ ಎಂಬುದನ್ನು ಸರಿಯಾಗಿ ಹೇಳಬರುವಂತಿಲ್ಲ. ಆದರೆ ಪಂಡಿತ ಜವಾಹಿರಲಾಲರು ಯಾವ ಭಾವವಿಕಾಸವನ್ನು ಪ್ರತಿನಿಧಿಸುವವರೋ ಅದನ್ನು ಅತ್ಯಂತ ಉಚ್ಚವಾದ ಭಾಷೆಯಲ್ಲಿ ತಮ್ಮ ಅಧ್ಯಕ್ಷ ಭಾಷಣದ ಮೂಲಕ ವ್ಯಕ್ತಮಾಡಿರುವರೆಂಬುವದನ್ನು ಒಪ್ಪಬೇಕಾಗಿದೆ.

ಆದರೆ ಬರೇ ಆದರ್ಶಗಳಿಂದಲೂ ಅನುಭೂತಿಯಿಂದಲೂ ವಸ್ತುಸ್ಥಿತಿಯನ್ನು ಉಪೇಕ್ಷಿಸಲಾಗುವುದಿಲ್ಲ. ಕಾಂಗ್ರೆಸ್ಸು ತನ್ನ ಮಹತ್ತರದ ತೀರ್ಮಾನವನ್ನು ಮಾಡಿ ದೇಶದ ಇತಿಹಾಸದಲ್ಲಿ ನೂತನ ಜವಾಬ್ದಾರಿಯನ್ನುಂಟುಮಾಡಿದೆ. ಆದರೆ ಅಂದಿನ ತಾತ್ಪರ್ಯವನ್ನು ಅದು ತೋರಿಸಿದ್ದಾದರೆ ಹಿತವಾಗುತ್ತಿರಲಿಲ್ಲವೇ? ಎಂಬ ಒಂದು ಪ್ರಶ್ನೆಯು ಹಲವು ದೇಶಹಿತಚಿಂತಕರ ಮನಸ್ಸಿನಲ್ಲಿ ಉಂಟಾಗುತ್ತಿದೆ.

ಕಾಂಗ್ರೆಸ್ಸು ಸ್ವಾತಂತ್ರ್ಯದ ತೀರ್ಮಾನಕ್ಕೆ ಬಂದುದರಿಂದ ನಾವು ಅಭಿಪ್ರಾಯಪಡುವುದಿಲ್ಲ. ಆದರೆ ಅಂತಹ ಪ್ರಮುಖ ತೀರ್ಮಾನಕ್ಕೆ ಬರುವ ಮೊದಲು ಮುಖ್ಯ ಸರಕಾರವು ಮುಂದೊತ್ತಿದ ಕೈಯು ಬರೇ ಮೋಸದ ಕೈಯೊ ಎಂದು ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋಗಿಯೇ ನಿಶ್ಚಯಿಸುವುದು ಅಗತ್ಯವಿತ್ತೆಂದೇ ನಮ್ಮ ಅಭಿಪ್ರಾಯವಾಗಿದೆ.

ಈ ತೀರ್ಮಾನವೇ ಕಾಂಗ್ರೆಸ್ಸಿನ ಒಳಗೆ ಭೇದಗಳನ್ನುಂಟುಮಾಡಿರುವುದೆ. ಕೇಳ್ಕರರಂತಹ ರೆಸ್ಪಾನ್ಸಿವ್ ಕೋಆಪರೇಟರರು ಕಾಂಗ್ರೆಸ್ಸಿನ ಈ ನೂತನ ಧೋರಣವನ್ನು ಸ್ವೀಕರಿಸಲಾರರು. ಅತ್ತ ಸುಭಾಸಬೋಸ್, ಶ್ರೀನಿವಾಸ ಅಯ್ಯಂಗಾರರು ಪ್ರತ್ಯೇಕ ಪಕ್ಷವನ್ನೇ ರಚಿಸಿರುವರು. ಮಾಲವೀಯ, ಕೇಳ್ಕರ, ಪ್ರಕಾಶಂ, ಅನೆ, ಜಯಕರ, ಆಣೆ ಮೊದಲಾದವರು ಸ್ವಾತಂತ್ರ್ಯದ ಠರಾವನ್ನು ಮೂರು ತಿಂಗಳ ಮಟ್ಟಿಗಾದರೂ ಮುಂದರಿಸಿ ಹಾಕಬೇಕೆಂದು ಕೇಳಿದುದನ್ನು ಕಾಂಗ್ರೆಸ್ಸು ತಿರಸ್ಕರಿಸಿ ಒಳಗೆ ಮೂರು ಪಕ್ಷಗಳಿಗೆ ಎಡೆಕೊಟ್ಟುದು ವಿವೇಕದ ಲಕ್ಷಣವಾಗಿಲ್ಲವೆಂದು ತೋರುವುದು.

ಲಾರ್ಡ ಇರ್ವಿನರೊಡನೆ ಸಂಭಾಷಣೆ ನಡೆದು ಅವರ ಆಶ್ವಾಸನವನ್ನು ಮಹಾತ್ಮಾಜೀಯವರೂ, ಪಂಡಿತ ಮೋತಿಲಾಲ

[illegible] ಈಗಿನ ಜವಾಬ್ದಾರಿಯು ಬಹಳ ದೊಡ್ಡದಾಗಿದೆ.

ಕಾಂಗ್ರೆಸ್ಸು ರೌಂಡ್ ಟೇಬಲ್ ಕೊನ್ಫರೆನ್ಸಿನಂತಹ ಅನೇಕ ವಿಷಮ ಸಂದರ್ಭಗಳನ್ನು ತಿರಸ್ಕರಿಸುವಷ್ಟು ಅದು ಶಕ್ತಿಶಾಲಿಯಾಗಿರುವುದಾಗಿಲ್ಲ. ಕಾಂಗ್ರೆಸ್ ಸಂಸ್ಥೆಗಳೊಳಗಿನ ಕಲಹಗಳು, ಕಾಂಗ್ರೆಸ್ ಅಧಿಕಾರಿಗಳೊಳಗೇನೇ ಇರುವ ಮನಃಕ್ಲೇಶಗಳು, ಕಾಂಗ್ರೆಸ್ ಕಾರ್ಯನಿರ್ವಾಹಕದಲ್ಲಿ ತೋರುವ ಸ್ವಾರ್ಥಮಯ ವಾತಾವರಣವೂ, ಕಾಂಗ್ರೆಸ್ಸು ಇಂತಹ ಸಾರ್ವಜನಿಕ ಜೀವನಕ್ಕೆ ಕೈಹಾಕುವಷ್ಟು ಶಕ್ತಿಯನ್ನು ಕೊಡಲಾರವು. ಮೇಲಾಗಿ ಅಂತಹ ಸಂಸ್ಥೆಗಳು ಬೊಂಬು ಧೋರಣವನ್ನು ಹೆಚ್ಚು ಹೆಚ್ಚು ಧೈರ್ಯದಿಂದ ಬಯಲಿಗೆ ತರುತ್ತಿದೆಯೆಂದೂ, ಕಾಂಗ್ರೆಸ್ಸಿನ ಹೆಸರಿನಲ್ಲಿಯೇ ಹಿಂಸೆಯ ಕೆಲಸಗಳು ನಡೆದು ಸರಕಾರಕ್ಕೆ ನೆವನಗಳನ್ನು ಕೊಡುತ್ತಿದೆಯೆಂದೂ ತಿಳಿದುಬರುವುದು. ಹಿಂದೀ ಮಜೂರ ಮುಖಂಡರ ಧೋರಣವೂ ಹೆಚ್ಚು ಆಶಾಜನಕವಾಗಿಲ್ಲ. ಕಾಂಗ್ರೆಸನ್ನು ನಿಂದಿಸುವುದೂ, ಅದರ ಧುರೀಣರನ್ನು ಬಂಧಿಸುವುದೂ ಅವರ ಈಗಿನ ಕ್ರಮವಾಗಿ ಬಂದಿದೆ. ಕ್ರಾಂತಿಕಾರರೂ ತಮ್ಮ ಬೊಂಬು ಧೋರಣದ ಉತ್ಸಾಹದ ಮುಂದೆ ಕಾಂಗ್ರೆಸ ಚಳವಳವನ್ನು ಹೀನೈಸುವರು. ಹೀಗಾಗಿ ಕಾಂಗ್ರೆಸ್ಸು ಸರಕಾರದ, ಕ್ರಾಂತಿಕಾರರ, ಮಜೂರರ, ಈ ಎಲ್ಲಾ ಕಡೆಗಳಿಂದಲೂ ವಿರೋಧಗಳನ್ನು ಹೊಂದುವದು. ಕಾಂಗ್ರೆಸ್ ತೀರ್ಮಾನವು ಕ್ರಾಂತಿಕಾರರನ್ನು ಮತ್ತಷ್ಟು ಬಲಪಡಿಸುವಾಗ ಅವರ ನಿಂದೆಗೆ ಮತ್ತೂ ಹೆಚ್ಚು ಪಾತ್ರರಾಗಬೇಕಾಗುವುದು.

ಯಾವ ಉದಾರ ಮನಸ್ಸಿನಿಂದ ಲೋರ್ಡ ಇರ್ವಿನರು ಇಂಗ್ಲೆಂಡಿಗೆ ಹೋಗಿ ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಪ್ರಯತ್ನಿಸಿ ಅದನ್ನು ಪಡೆದು ಅವರು ಹಿಂದಿರುಗಿದರೂ ಅದನ್ನು ನಾವು ತಿಲಮಾತ್ರವೂ ಮಾನಿಸಲಿಲ್ಲವೆಂದಾಯಿತು. ರೌಂಡ್ ಟೇಬಲ್ ಕೊನ್ಫರೆನ್ಸು ನಮಗೆ ಕೂಡಲೆ ಡೊಮಿನಿಯನ್ ಸ್ಟೇಟಸನ್ನು ತಂದೀತೆಂದು ನಾವು ನೆನಸುವುದಿಲ್ಲ. ಆದರೆ ಇಂಗ್ಲೆಂಡಿನ ಸರಕಾರ ಬದಲಾವಣೆ, ವ್ಹೈಸರಾಯರ ಉದಾರಧೋರಣ, ಪಾರ್ಲಿಮೆಂಟಿನ ತಿದ್ದಿದ ಮಾನಸಿಕತೆ, ಇವನ್ನು ನಾವು ಸುಳ್ಳೆನ್ನಲಾಗುವುದಿಲ್ಲ. ಮಿ. ವೆಜ್‌ವುಡ್ ಬೆನ್ನರ ಕೆಲವು ಭಾಷಣಗಳಲ್ಲಿ ಮನಃಪೂರ್ವಕತೆಯು ಇರಲಿಲ್ಲವೆನ್ನಲು ನಮಗೆ ಧೈರ್ಯವಾಗುವುದಿಲ್ಲ. ಆದರೆ ವ್ಹೈಸರಾಯರೂ, ಬ್ರಿಟಿಷ ಸರಕಾರವೂ ಡೊಮಿನಿಯನ್ ಸ್ಟೇಟಸ್ಸಿಗೆ ಈಗಲೇ ಒಪ್ಪಿಗೆ ಕೊಡಬೇಕೆಂದು ಕೇಳುವುದು ರಾಷ್ಟ್ರೀಯ ಆಶಯಗಳ ದೃಷ್ಟಿಯಿಂದ ಸರಿಯಾದರೂ ಕಾರ್ಯಕಾರಿತೆಯ ದೃಷ್ಟಿಯಿಂದ ಸರಿಯಲ್ಲ. ಬ್ರಿಟಿಷ ಸರಕಾರದ ಈಗಿನ ಜವಾಬ್ದಾರಿಯ ಸ್ಥಿತಿಯಲ್ಲಿಯೂ ಅವರು ಅಂತಹ ಮಾತನ್ನು ಕೊಡಲಾರರು.

ಅಂತೂ ತೀರ್ಮಾನವಾಯಿತು. ಇಡೀ ದೇಶದ ಪ್ರತಿನಿಧಿಗಳು ಕೂಡಿ ಈ ತೀರ್ಮಾನವನ್ನು ರಚಿಸಿದರು. ಯುದ್ಧರಂಗದೊಳಗಿನ ಯೋಧರಂತೆ ಹಿಂದೀಯರಾದರೂ ಹಿಂದೆಗೆಯಲಾರರು. ತೀರ್ಮಾನ ಮಾಡದಿದ್ದರೆ ಒಳ್ಳೇಯದಾಗುತ್ತಿತ್ತೆಂದು ನಮಗನ್ನಿಸಿದರೂ, ತೀರ್ಮಾನವಾದ ಮೇಲೆ ಕಾಲು ಹಿಂದೆಗೆದರೆ ದೇಶಕ್ಕೆ ನಷ್ಟವು ಬಹಳವಾಗಬಹುದಾದುದರಿಂದ ಈ ತೀರ್ಮಾನವನ್ನು ನಡೆಯಿಸಿ ಕೊಡುವ ಭಾರವು ಪ್ರತಿ ಒಬ್ಬ ಹಿಂದೀಯನದಾಗಿದೆ. ಕಾಂಗ್ರೆಸ್ಸು ರೌಂಡ ಟೇಬಲ ಕಾನ್ಫರೆನ್ಸಿಗೆ ಹೋಗಿದ್ದರೆ ಲಾಭವಾಗಬಹುದಿತ್ತೆಂದು ತೋರಿದರೂ, ಕಾಂಗ್ರೆಸ್ಸು ಅಲ್ಲಿಗೆ ಹೋಗದಿದ್ದರೆ, ಲಿಬರಲ್ ಮೊದಲಾದ ಪಕ್ಷಗಳಿಂದ ಕೂಡಿದ ರೌಂಡ್ ಟೇಬಲ್ ಕೊನ್ಫರೆನ್ಸು ಹಾನಿಕರವಾಗಬಹುದೆಂದೇ ತೋರುತ್ತದೆ. ಆದುದರಿಂದ ಸರಕಾರದ ಕಡೆಯಿಂದ ಸರಿಯಾದ ಕರೆಯು ಬರುವ ತನಕ ರಾಷ್ಟ್ರೀಯ ಧ್ವಜವನ್ನು ಮೇಲೆತ್ತಿ ಸ್ವಾತಂತ್ರ್ಯದ ಹಾದಿಯನ್ನು ರಚಿಸಲು ಪ್ರತಿ ಹಿಂದೀಯನೂ ತನ್ನ ಶಕ್ತಿಯನ್ನು ಒಟ್ಟುಗೂಡಿಸುವುದು ಕರ್ತವ್ಯವಿದೆ.

ದ. ಕ. ದ್ರಾವಿಡ ಬ್ರಾಹ್ಮಣರ ದಶಮ ಪರಿಷತ್ತು.

ಕಳೆದ ತಿಂಗಳ ತಾ. ೨೭ನೇ ದಿನ ಮೇಲಿನ ಪರಿಷತ್ತು ಪುತ್ತೂರಿನಲ್ಲಿ ಸೇರಿತು. ಪುತ್ತೂರಿನ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನವು ಈ ಪರಿಷತ್ತಿಗೆ ಅತ್ಯಂತ ಅನುಕೂಲವಾದ ಸ್ಥಳವಾಗಿದ್ದಿತು. ಆದರೆ ಯಾವ ಉದಾರ ವಿಶಾಲ ಸ್ಥಳದಲ್ಲಿ ಈ ಪರಿಷತ್ತು ಕೂಡಿತೊ, ಆ ಸ್ಥಳದ ಪ್ರೇರಣೆಯೂ ಕೆಲವು [illegible] ಊಹೆಯೇ ಅಗತ್ಯವಿಲ್ಲ. ಶ್ರೀ. ಶಾರದರು ಶಾರದಾ ಮಸೂದೆಯನ್ನು ಸಮರ್ಥಿಸಿದುದಕ್ಕೆ ಅವರ ಮೇಲೆ ಅವಿಶ್ವಾಸದ ಠರಾವನ್ನು ತಾರದೆ ಇದ್ದುದೂ, ಶಾರದ ಮಸೂದೆಯು ಕಾನೂನು ರದ್ದಾಗುವಂತೆ ಒಂದು ಮಹತ್ವದ ಯಜ್ಞಯಾಗವನ್ನು ಮಾಡಬೇಕೆಂದು ಠರಾಯಿಸದಿದ್ದುದೂ, ಇವೇ, ಒಂದು ರೀತಿಯಲ್ಲಿ ಪರಿಷತ್ತಿನ ಮಹಾನ್ ಔದಾರ್ಯದ ಮತ್ತು ವಿಶಾಲ ಧೋರಣದ ಲಕ್ಷಣವಾಗಿವೆ ಎಂದು ಅಭಿನಂದಿಸಲೂ ಬಹುದು. ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಕಾರ್ಯಗಳ ಸಂಕ್ಷೇಪ ವಿವರವಾದ ಮೇಲೆ, ಕರ್ನಾಟಕ ಬೇಂಕಿನ ಸ್ಥಿತಿಯು ನಿವೇದಿಸಲ್ಪಟ್ಟು, ಆ ಮೇಲೆ ರಾಷ್ಟ್ರಬಂಧುವಿನ ಇತಿಹಾಸವನ್ನು ಅದರ ಸಂಪಾದಕರೇ ಹೇಳಿದರೆಂದ ಮೇಲೆ "ರಾಷ್ಟ್ರಬಂಧು"ವು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಕಡೆಯ ಜಾತೀಯ ಪತ್ರಿಕೆಯಾಗಿರುತ್ತದೆಂದು ನಾವು ತಿಳಿಯುವುದರಲ್ಲಿ ಅಡ್ಡಿಯಿರಲಾರದೆಂದು ನಾವು ನೆನಸುತ್ತೇವೆ. ಇದೇ ಪ್ರಶ್ನೆಯ ವಿಷಯವಾಗಿ ಹೋದ ವರ್ಷ ನಮಗೆ ಸಂದೇಹ ಉಂಟಾದುದನ್ನು ಹೇಳಿದ್ದೆವು. ರಾಷ್ಟ್ರಬಂಧುವಿನ ಹಿಂದಿನ ಮತ್ತು ಮುಂದಿನ ಧೋರಣವನ್ನು ಈ ದೃಷ್ಟಿಯಿಂದ ಲಕ್ಷಿಸುವುದರಲ್ಲಿ ರಾಷ್ಟ್ರಬಂಧುವು ನಿಷೇಧಿಸಲಾರದೆಂದು ನೆನಸುವೆವು. ಅಂತೂ ಜಾತೀಯವಾಗಲಿ, ಹಿಂದೂ ಸಮಾಜದ ಕಡೆಗಿನದ್ದಾಗಲಿ, ಯಾವುದೊಂದು ತರದ ಚೇತನಾತ್ಮಕ ಕಾರ್ಯಕ್ರಮವು ಈ ಬಾರಿಯ ಪರಿಷತ್ತಿನಲ್ಲಿ ಆಗಲಿಲ್ಲವೆಂದು ನಾವು ಅನ್ಯ ಜಾತೀಯವಾಗಿ ಹೇಳುವುದರಿಂದ ಪರಿಷತ್ತಿನವರು ನಮ್ಮನ್ನು ಕ್ಷಮಿಸುವರೆಂದು ಬಯಸುವೆವು

ವಿದ್ಯಾರ್ಥಿಗಳ ಪರಿಷತ್ತು

ಡಿಸೆಂಬರ ತಾ. ೩೦ರಲ್ಲಿ ಲಾಹೋರಿನಲ್ಲಿ ಪಂಡಿತ ಮದನಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ಪರಿಷತ್ತು ಸೇರಿತು. ಕೆಲವು ಪ್ರಮುಖ ಧುರೀಣರು ಹಾಜರಿದ್ದರು. ಪ್ರತಿ ಒಬ್ಬ ಧುರೀಣರೂ ಕೊಟ್ಟ ಭಾಷಣವು ಅತ್ಯಂತ ಮನನೀಯವಿರುತ್ತದೆ. ಗಾಂಧಿಜಿಯವರು ತಮ್ಮ ಸಂದೇಶವನ್ನು ಕಳಿಸಿದ್ದರು. "ಆತ್ಮಸಂಯಮ, ಶಿಸ್ತು ಮತ್ತು ಖಾದಿ ಪ್ರಚಾರ" ಇವೇ ವಿದ್ಯಾರ್ಥಿಗಳ ಕರ್ತವ್ಯವಾಗಿವೆ. ಆದರೆ ಈಗಿನ ವಿದ್ಯಾರ್ಥಿಗಳಲ್ಲಿ ಇವು ಎಷ್ಟಿವೆ? ಆತ್ಮಸಂಯಮವೆಂಬುದು ಏನೆಂದು ಯಾರಿಗೂ ಗೊತ್ತಿಲ್ಲ. ಶಿಸ್ತು ಅರಳಿಕ್ಕೆ ಸ್ವಾತಂತ್ರ್ಯದ ತತ್ತ್ವ ಹೆಚ್ಚಾಗಿದೆ; ಖಾದಿಯೆಂತೂ ಪ್ರಚಾರವಿಲ್ಲ. ವಿದ್ಯಾರ್ಥಿಗಳು ಈ ಉತ್ತಮ ಉಪದೇಶವನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಳ್ಳುವುದು ಅಗತ್ಯ. ಜವಾಹಿರಲಾಲರು ಇನ್ನೊಂದು ಮುಖ್ಯ ವಿಷಯದ ಎಚ್ಚರಿಕೆ ಕೊಡುವ ಅವಶ್ಯಬಿತ್ತು. ಯುವಕರು ಜವಾಬ್ದಾರಿಯನ್ನು ತಿಳಿದುಕೊಳ್ಳುವುದಿಲ್ಲ. ತಮ್ಮ ಕರ್ತವ್ಯಗಳ ತಾವು ಮಾಡುವ ಕೆಲಸಗಳ ಜವಾಬ್ದಾರಿಯನ್ನೂ ಯುವಕರು ಅರಿಯಬೇಕು ಎಂದು ಹೇಳಿದರು. ವಲ್ಲಭಭಾಯಿ ಪಟೇಲರು ಇನ್ನೊಂದು ಹೊಸ ವಿಷಯವನ್ನು ಹೇಳಿದರು. ವಿದ್ಯಾರ್ಥಿ ಯುವಕರು ಹಿರಿಯರನ್ನು ಟೀಕಿಸುವುದೆಂದರೆ ಬಹಳ ಮುಂದೆ. ಆದರೆ ಹಿರಿಯರೇ ರಾಷ್ಟ್ರೀಯತೆಯ ಬುನಿಗಟ್ಟನ್ನು ಹಾಕಿದವರು. ಆ ಕಾರಣದಿಂದ ಯುವಕರ ಕೆಲಸ ಸುಲಭವಾಗಿದೆ; ಆದುದರಿಂದ ಹಿರಿಯರನ್ನು ಟೀಕಿಸಬಾರದು, ಮತ್ತು ವಿದ್ಯಾರ್ಥಿಗಳು ತಾವು ಕಾರ್ಯತಃ ಮಾಡಿ ತೋರಿಸಲಾಗದ ವಿಷಯಗಳ ಮೇಲೆ ಮಾತನಾಡದೆ, ತಾವು ಮಾಡಬಲ್ಲೆವೆಂಬುದರ ವಿಷಯಗಳ ಮೇಲೆ ಮಾತ್ರವೇ ಮಾತನಾಡಬೇಕು ಎಂದು ಅವರು ಹೇಳಿದರು. ಮಿ. ಜಾಫರ್ ಅಲಿಯವರು ವಿದ್ಯಾರ್ಥಿಗಳು ಐಕ್ಯದ ಸಂದೇಶವನ್ನು ಹರಡಬೇಕಾಗಿ ಹೇಳಿದರು. ಶ್ರೀಮತಿ ಕಮಲಾ ದೇವಿ ಎಂಬವರು ವಿದ್ಯಾರ್ಥಿಗಳ ದುಂದುಗಾರಿಕೆಯ ಜೀವನಕ್ರಮವನ್ನು ಖಂಡಿಸಿದರು. ಈಗಿನ ವಿದ್ಯಾರ್ಥಿಗಳ ದುಂದುಗಾರಿಕೆಯು ಬಹಳ ಹೆಚ್ಚಿನದಾಗಿದೆ. ಶಹರುಗಳಲ್ಲಿಯ ಹೊಸ್ಟೆಲು ಲೋಜು, ಹೋಟೇಲು, ನಾಟಕ, ಸಿನೇಮಾ, ಫೇಶನು ಮೊದಲಾದವುಗಳು ವಿದ್ಯಾರ್ಥಿಗಳ ಮೂಲಕ ಹಿರಿಯರ ಹಣವನ್ನು ಬರಿದು ಮಾಡುತ್ತವೆ. ಈ ದುಂದುಗಾರಿಕೆಯನ್ನು [illegible] ಪಡಿಸುವುದು, ಹಿಂದೀಯ ವಿದ್ಯಾಭಿವೃದ್ಧಿಯ ಬಗ್ಗೆ ಅತ್ಯಂತ ಅಗತ್ಯವಾಗಿದೆ. ಶ್ರೀಮತಿ ಕಮಲಾ ದೇವಿಯವರ ಎಚ್ಚರಿಕೆಯನ್ನು ವಿದ್ಯಾರ್ಥಿಗಳು ಕಾರ್ಯದಲ್ಲಿ ತೆಗೆದುಕೊಳ್ಳುವರಾಗಿ ಆಶಿಸುವೆವು. ಈ ಪರಿಷತ್ತಿನಲ್ಲಿ ಮಂಜೂರಾದ ಠರಾವುಗಳನ್ನು ನಾವಿಲ್ಲಿ ಚರ್ಚಿಸುವ ಅವಶ್ಯಕತೆಯನ್ನು ಕಾಣುವುದಿಲ್ಲ.

[illegible] ಪರಿಷತ್ತು.

[illegible] ಕಾಂಗ್ರೆಸ್ ವಾರದಲ್ಲಿ ಈ ಪರಿಷತ್ತು ಶ್ರೀ. [illegible] ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿತು. "ಹಿಂದೂಸ್ಥಾನದಲ್ಲಿ [illegible] ಮದ್ಯಕ್ಕೆ ಖರ್ಚುಮಾಡುವನು; ಅವನ ಸರಾಸರಿ ಆರ್ಜನೆಯು ದಿನ ಒಂದಕ್ಕೆ ಎಂಟಾಣೆಯಾಗಿದೆ. ಆದುದರಿಂದ ಮದ್ಯದಿಂದ ಪ್ರತಿ ವ್ಯಕ್ತಿಯ ಆರ್ಥಿಕ ಸ್ಥಿತಿಯು ಹೇಗೆ ಕೆಡುವುದೆಂದು ತಿಳಿಯುವುದು. ಒಂದು ಬಾರಿ ಮದ್ಯವು ಖರ್ಚಿಲ್ಲದೆ ಧರ್ಮಾರ್ಥವಾಗಿಯೇ ಸಿಕ್ಕುವುದೆಂದರೂ ಮೆದುಳಿಗೂ ದೇಹಕ್ಕೂ ವಿಷವಾಗಿರುವ ಮದ್ಯದ ಉಪಯೋಗವನ್ನು ಮನುಷ್ಯನು ಮಾಡಕೂಡದು" ಎಂದು ಶ್ರೀ. ರಾಜಗೋಪಾಲಾಚಾರ್ಯರು ಅಧ್ಯಕ್ಷ ಭಾಷಣದಲ್ಲಿ ಹೇಳಿದರು. ಮದ್ಯಪಾನವು ದೇಶದಲ್ಲಿ ಎಷ್ಟು ಹೆಚ್ಚಿಯದೆಂಬುದಕ್ಕೆ ಸಂಖ್ಯೆಗಳನ್ನೆತ್ತಬೇಕಾಗಿಲ್ಲ; ಸಾಮಾಜಿಕ ಸ್ಥಿತಿಯನ್ನು ಪರಿಶೀಲಿಸಿದಲ್ಲಿ ತಿಳಿಯುವುದು. ಅದರ ನಿವಾರಣೆ ಹೇಗೆಂಬುದೇ ಈಗಿನ ಮುಖ್ಯ ಸಮಸ್ಯೆಯಾಗಿರುತ್ತದೆ. ಮದ್ಯಪಾನವನ್ನು ವರ್ಜಿಸಬೇಕೆಂಬುದರಲ್ಲಿ ಹಿಂದೂಸ್ಥಾನದ ಕುಡುಕರು ಕೂಡ ಬೇರೆ ಅಭಿಪ್ರಾಯವನ್ನು ಹೇಳುವುದಿಲ್ಲ. ದುರಭ್ಯಾಸಗಳನ್ನು ತಾವಾಗಿ ಬಿಡುವುದು ಕಷ್ಟ. ಬಲಾತ್ಕಾರದಿಂದ ಬಿಡಿಸಿದರೆ ಮಾತ್ರವೇ ದುರಭ್ಯಾಸಗಳು ನಾಶವಾಗುವುವು. ಸರಕಾರವೇ ಈ ಕೆಲಸವನ್ನು ಕಾನೂನಿನ ಮೂಲಕ ಎತ್ತಿಕೊಳ್ಳಬೇಕು. ಅಮೇರಿಕದ ಉದಾಹರಣೆಯನ್ನು ಇತರ ದೇಶಗಳು ಇನ್ನೂ ಅನುಕರಿಸದಿರುವುದು ಶೋಚನೀಯ. ಮದ್ರಾಸ ಪ್ರಾಂತ್ಯದಲ್ಲಿ ಮದ್ಯಪಾನ ನಿಷೇಧದ ಬಗ್ಗೆ ಸರಕಾರ ಸಹಾಯದಿಂದ ಪ್ರಚಾರ ಕಮಿಟಿಗಳು ಏರ್ಪಟ್ಟಿವೆ. ಆದರೆ ಮದ್ಯದ ಅಂಗಡಿಗಳು ಇರುವ ತನಕ, ಪ್ರಚಾರ ಕೆಲಸದಿಂದ ಯಾವ ಲಾಭವಾಗುವುದೋ! ಒಂದು ಕಡೆಯಿಂದ "ಕುಡಿಯಿರಿ" ಎಂದು ಮದ್ಯ ವಿಕ್ರಯಿಸುವುದೂ, ಇನ್ನೊಂದು ಕಡೆಯಿಂದ "ಕುಡಿಯಬೇಡಿರಿ" ಎಂದು ಹೇಳಲಿಕ್ಕೆ ಬೇಸರಕಾರೀ ಕಮಿಟಿಗಳನ್ನೇರ್ಪಡಿಸುವುದೂ ನೋಡಿದರೆ ಸರಕಾರವು ಜನರ ಕಣ್ಣಿನಲ್ಲಿ ಮಣ್ಣೆರಚಲಿಕ್ಕೆ ಯತ್ನಿಸುತ್ತಿದೆಯಲ್ಲದೆ ಮನಃಪೂರ್ವಕವಾದ ಪ್ರಯತ್ನಗಳನ್ನು ಮಾಡಲು ಸಿದ್ಧರಿಲ್ಲವೆಂಬುದು ಸ್ಪಷ್ಟವಾಗುತ್ತದೆ. [illegible] ಸರಕಾರದ ಧೋರಣವು ಪೂರ್ತಿ ಬದಲಾಗುವ ತನಕ ಮದ್ಯಪಾನವು ಕಡಿಮೆಯಾಗದೆಂದು ಖಂಡಿತ ತೋರುವುದು. ಪ್ರಚಾರ ಕಮಿಟಿಗಳು [illegible] ಜನರಿಗೆ ಮದ್ಯಪಾನದ ಹಾನಿಯ [illegible] ಕಡಿಮೆಮಾಡಬಲ್ಲವೆಂದು ನಿರೀಕ್ಷಿಸಲಾಗುವುದಿಲ್ಲ. ನಮ್ಮ ಪ್ರಾಂತ್ಯದೊಳಗಿನ ಮದ್ಯಪಾನ ವಿಕ್ರಯದ ಹಿಂದಿನ ಮೂರು ತಿಂಗಳ ಸಂಖ್ಯೆಯನ್ನು ನೋಡಿದರೂ ಇದು ಹೆಚ್ಚು ವಿಶದವಾಗಬಹುದು. ಮೇಲಿನ ಪರಿಷತ್ತಿನಲ್ಲಿ ಮೂರು ಠರಾವುಗಳು ಮಂಜೂರಾದವು (೧) ಮದ್ಯಪಾನವು ಪೂರ್ಣವಾಗಿ ನಿಷೇಧಿಸಲ್ಪಡಬೇಕು. (೨) ಮದ್ಯ ಸೇವನೆಯ ನಿವಾರಣೆ ಬಗ್ಗೆ ಚಳವಳವನ್ನು ಬಲಪಡಿಸಲು ಜನರು ಕಮಿಟಿಗಳನ್ನೇರ್ಪಡಿಸಬೇಕೆಂದು ಕೇಳಿಕೊಳ್ಳುವುದು. (೩) ಶಾಲೆಯ ಪಠ್ಯಪುಸ್ತಕಗಳಲ್ಲಿ ಮದ್ಯಪಾನದ ಹಾನಿಯ ಪಾಠಗಳನ್ನು ಕೂಡಿಸಬೇಕಾಗಿ ಅಧಿಕಾರಿಗಳಿಗೆ ಸೂಚಿಸುವುದು. [illegible] ವಿಷಯದಲ್ಲಿ ಈ ಪರಿಷತ್ತೇ ಒಂದು ಅಖಿಲ ಭಾರತ ಸಂಸ್ಥೆಯನ್ನೇರ್ಪಡಿಸಿದ್ದರೆ ಉತ್ತಮವಿತ್ತೆಂದು ನಮಗನ್ನಿಸುವುದು.

ವೈದ್ಯಕೀಯ ಪರಿಷತ್ತು.

ಜನತೆಯ ಕಡೆಗೆ ಸಹಾನುಭೂತಿ ಪೂರ್ವಕವಾಗಿ ಅವರ ಸಂಕಷ್ಟಗಳಲ್ಲಿ ಕರುಣೆಯನ್ನು ತೋರಿಸಬೇಕಾದ ಕೆಲವು ವ್ಯಕ್ತಿಗಳಲ್ಲಿ ವೈದ್ಯಕೀಯ ವ್ಯಕ್ತಿಯು ಮೊದಲನೆಯವನು. [illegible] ಸಂಕಷ್ಟಗಳಿಂದ ಬಿಡುಗಡೆಯನ್ನು ಹೊಂದಲು ವೈದ್ಯರೇ ಪ್ರಾರ್ಥಿಸಲ್ಪಡುವರು. ಮಾತೆಯ ಪ್ರೀತಿಯೂ, ಪಿತನ ಪ್ರೇಮವೂ, ಪತಿಯ ಅನುತಾಪವೂ, ಪತ್ನಿಯ [illegible], ರೋಗಗಳಿಂದ ಎಚ್ಚರಿಸಲ್ಪಟ್ಟಾಗ ಅವುಗಳನ್ನು ನಿರಾಶೆಯಿಂದ ತಪ್ಪಿಸುವುದು ವೈದ್ಯನೇ. ಆದರೆ ಸಾಮಾನ್ಯ ವೈದ್ಯರು ಈ ತಮ್ಮ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುವರು? ದೊಡ್ಡ ದೊಡ್ಡ ವೈದ್ಯರೆಂದರೆ ಅವರ ಸಮಯದ ಬೆಲೆಗೆ ಮಿತಿಯೇ ಇಲ್ಲ. ಈ ಮಿತಿಯಿಲ್ಲದ ಬೆಲೆಯನ್ನು ಕೊಟ್ಟೇ ಅವರನ್ನು ಕರೆಯಬೇಕಾಗುವುದು. ಸರಕಾರದ ನೌಕರಿಯ ಅದೃಷ್ಟ ಲಾಭವಿದ್ದ ವೈದ್ಯರಂತೂ ಕೆಲವು ಕಡೆಗಳಲ್ಲಿ ಯಾವ ಜವಾಬ್ದಾರಿಯನ್ನೂ ತೋರಿಸುವುದಿಲ್ಲ. ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಿನಕ್ಕೆ ನಾಲ್ಕೇ ಐದೂ ಘಂಟೆಗಳ ಕಾಲವಿದ್ದು ೩೦೦-೪೦೦ ಜನರಿಗೆ ಚಿಕಿತ್ಸೆ ನಡೆಸಿ, ಮತ್ತೆ ಆ ದಣುವಿನಿಂದ ಒಂದು ಮಿನಿಟಾದರೂ

...ದುಡ್ಡು ಸಿಕ್ಕುವ [illegible] ವಿಚಾರಗಳ ಆವಶ್ಯಕತೆಯೊದಗುವುದು. ದುಡ್ಡಿಲ್ಲವಾದರೆ ರೋಗಿಯು ಮರಣೋನ್ಮುಖನಾದರೂ ಡಾಕ್ಟರರು ಆಸ್ಪತ್ರೆಯಿಂದ ಅಲ್ಲಾಡಲಾರರು. ರೋಗಿ ಉಳಿಯಲಿ, ಸಾಯಲಿ, ಆ ಜವಾಬ್ದಾರಿಯಿಲ್ಲದಿದ್ದರೂ ದುಡ್ಡು ಕೈ ಸೇರಬೇಕು. ಸರಕಾರದ ಇತರ ವೃತ್ತಿಯ ಎಲ್ಲಾ ನೌಕರಿಗಳು "ಪ್ರೈವೇಟ್ ಪ್ರೆಕ್ಟಿಸ್"ನ ಅಧಿಕಾರ ವಿರದೆ, ಅವರು 'whole time servant' ಎಂದಿರುವರು. ಅವರ ಸಂಬಳದ ತರಗತಿಯೂ ಕೆಳಗಿನದು, ಅವರು ಯಾರೊಡನೆ ದುಡ್ಡು ತೆಗೆದು ಕೊಂಡರೆ 'ಲಂಚ'ದ ಆರೋಪಕ್ಕೆ ಬೀಳಬೇಕಾಗುವುದು. ಆದರೆ ಡಾಕ್ಟರರಿಗೆ ಆ ನಿಬಂಧನೆಗಳೇ ಇಲ್ಲ. ಅವರ ವೃತ್ತಿಪರ ತಾತ್ವಿಕ ಜವಾಬ್ದಾರಿಯು ದೊಡ್ಡದಾದಷ್ಟಕ್ಕೆ ಆ ಜವಾಬ್ದಾರಿಯ ನೆವನದಿಂದಲೇ ಅವರು ಸರಕಾರಿ ನೌಕರಿಯಲ್ಲಿ ಬೇಜವಾಬ್ದಾರಿಯನ್ನು ತೋರಿಸಲು ಅಧಿಕೃತರಾಗಿರುವರು. ಸರಕಾರೀ ನೌಕರಿಯು ಹೀಗೆ ಅನಾವಶ್ಯಕ ಸೌಕರ್ಯಗಳನ್ನೊಳಗೊಂಡಿರುವಾಗ ಖಾಸಗಿ ವೃತ್ತಿಯು ಬಹಳ ಕಷ್ಟದಿಂದ ದುಡಿಯಬೇಕಾಗಿದೆ. ದುಡ್ಡಿರುವವರ ಚಿಕಿತ್ಸೆಯಲ್ಲಿ ಖಾಸಗಿ ಡಾಕ್ಟರರಿಗೆ ಸರಕಾರೀ ಡಾಕ್ಟರರೇ ಪ್ರತಿಸ್ಪರ್ಧಿಗಳು. ದುಡ್ಡಿಲ್ಲದ ಕಡೆಯಲ್ಲಿ ಸ್ಪರ್ಧೆಯೂ ಇಲ್ಲ; ದುಡ್ಡೂ ಇಲ್ಲ. ಇತ್ತ ಹಿಂದೂಸ್ಥಾನವು ಬಡವರದು. ಬಡಜನ ಸಂಖ್ಯೆಯೇ ಮುಖ್ಯ; ಅವರ ಆರ್ಜನೆಯು ಉಣಲಿಕ್ಕೇನೇ ಸಾಲದಿದ್ದಾಗ ಸ್ವಾಸ್ಥ್ಯ ಸಾಧನೆಗೇನು ವೆಚ್ಚಮಾಡಿಯಾರು? ವೈದ್ಯಕೀಯ ವೃತ್ತಿಯ ಮುಂದೆ ಇದೇ ದೊಡ್ಡ ಸಮಸ್ಯೆ. ಹಿಂದೀ ಜನತೆಯ ಸ್ವಾಸ್ಥ್ಯವು ಅವರ ಶುಶ್ರೂಷೆಗೆ ಒಪ್ಪಿಸಲ್ಪಟ್ಟಿದೆ. ಅದನ್ನು ತಾವು ಯೋಗ್ಯ ಪ್ರತಿಫಲವನ್ನು ಹೊಂದಿಯೂ, ಜನತೆಯ ಕಡೆಗೆ ಸಹಾನುಭೂತಿಯನ್ನು ತೋರಿಸಿಯೂ, ಜನತೆಗೆ ಹೆಚ್ಚು ವ್ಯಯವಾಗದಂತೆಯೂ, ಹೇಗೆ ನಡಿಸಬೇಕು? ಈ ಪ್ರಶ್ನೆಯು ಲಾಹೋರಿನಲ್ಲಿ ದಶಂಬರ ತಾ. [illegible]ರಲ್ಲು ಡಾ. ಬಿ. ಸಿ. ರಾಯ್ ರವರ ಅಧ್ಯಕ್ಷತೆಯಲ್ಲಿ ಕೂಡಿದ ಅಖಿಲ ಭಾರತ ವೈದ್ಯಕೀಯ ಪರಿಷತ್ತಿನಲ್ಲಿ ತಲೆದೋರದಿದ್ದುದು ವಿಷಾದಕರವಿದೆ.

ಲಿಬರಲ್ ಪರಿಷತ್ತು.

ಕಳೆದ ೩ನೇ ತಾರೀಕಿನಲ್ಲಿ ಮದ್ರಾಸಿನಲ್ಲಿ ಸರ್. ಪಿ. ಸೆಟ್ಲೂರರವರ ಅಧ್ಯಕ್ಷತೆಯಲ್ಲಿ ಲಿಬರಲ್ ಪರಿಷತ್ತು ಕೂಡಿತು. ಸರ್. ಸಿ. ಪಿ. ರಾಮಸ್ವಾಮಯ್ಯರರೇ ಸ್ವಾಗತಾಧ್ಯಕ್ಷರಾಗಿದ್ದರು. ಸ್ವಭಾವತಃ ಎರಡೂ ಅಧ್ಯಕ್ಷ ಭಾಷಣಗಳೂ ಲೋರ್ಡ ಇರ್ವಿನ್ ಆಶ್ವಾಸನದ ನಂತರ ಉಂಟಾದ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿ ತಮ್ಮ ಸೂಚನೆಗಳನ್ನು ಕೊಡುವಂತಹವುಗಳಾಗಿದ್ದುವು. ಮತ್ತು ಲಿಬರಲ್ ಪಕ್ಷದ ನಿಶ್ಚಿತ ಧೋರಣಕ್ಕನುಸಾರವಾಗಿಯೇ ಈ ಎರಡೂ ಭಾಷಣಗಳು ಇರ್ವಿನ್ ಆಶ್ವಾಸನ ನಿರಾಕರಣೆಯನ್ನು ನಿಷೇಧಿಸುವುವು. ಕಾಂಗ್ರೆಸ್ಸಿನ ಧೋರಣವು ತೀಕ್ಷ್ಣವಾಗುತ್ತ ಬಂದಹಾಗೆ ಲಿಬರಲ್ ಧೋರಣವಾದರೂ ಅದೇ ಹೆಜ್ಜೆಯಲ್ಲಿ ಬೆಳೆಯುತ್ತಿದೆಯೆಂಬುದು ಅಭಿನಂದನೀಯವಾದುದು. ಸರ್. ಸಿ. ಪಿ. ರಾಮಸ್ವಾಮಯ್ಯರ ಭಾಷಣದಲ್ಲಿಯೂ ಕಾಂಗ್ರೆಸ್ ಧುರೀಣರಲ್ಲಿ ನಿರೀಕ್ಷಿಸಬಹುದಾದ ಆತ್ಮವಿಶ್ವಾಸವೂ, ದೇಶದ ಸ್ವಾತಂತ್ರ್ಯದ ಪ್ರೀತಿಯೂ ಕಾಣುತ್ತಿತ್ತು. ಆದರೆ ಸರ್. ಪಿ. ಸೆಟ್ಲೂರರವರ ಅಧ್ಯಕ್ಷ ಭಾಷಣವು ಅಷ್ಟು ಉಚ್ಚ ಭಾವನೆಗಳಿಂದ ತುಂಬಿದುದಾಗಿ ಹೇಳಬರುವಂತಿಲ್ಲ. ಅದರಲ್ಲಿ ಲಿಬರಲ್ ಪಕ್ಷದ ಹಳೇ ಭಾವನೆಯೇ ಹೆಚ್ಚಾಗಿ ತೋರಿಬರುತ್ತಿದೆ. ಅವರು ಹೊಸ ಹುರುಪನ್ನು ಕೊಡಲಾರದಾದರು; ಬರೀ ಅನುತ್ಸಾಹಕ ತತ್ವದರ್ಶನವು ಅಧ್ಯಕ್ಷ ಭಾಷಣದ ಮುಖ್ಯ ಲಕ್ಷಣವಾಗಿತ್ತು. ಸರ್. ತೇಜಬಹದ್ದೂರ್ ಸಪ್ರೂರವರು ರೌಂಡ್ ಟೇಬಲ್ ಕೊನ್ಫರೆನ್ಸಿನ ಮೇಲಿನ ಠರಾವನ್ನು ಸೂಚಿಸಿದರು. ಆ ಠರಾವಿನಲ್ಲಿ ಲಿಬರಲ್ ಧೋರಣಕ್ಕಿಂತಲೂ ಮುಂದಿನ ಹೆಜ್ಜೆಯಾದಾದ ಕೆಲವು ಅಂಶಗಳಿದ್ದುವು. ಲೋರ್ಡ ಇರ್ವಿನ್ ಆಶ್ವಾಸನವು ಡೊಮಿನಿಯನ್ ಸ್ಟೇಟಸೇ ಹಿಂದೂಸ್ಥಾನದ ಗುರಿಯೆಂದು ಒಪ್ಪುತ್ತಿದೆ. ಹಿಂದೀ ಆಶ್ರಿತ ಸಂಸ್ಥಾನಗಳೂ ಹಿಂದೂಸ್ಥಾನವೂ ಸಂಯುಕ್ತ ರಾಜ್ಯಗಳ ಒಂದೇ ರಾಷ್ಟ್ರವೆಂದು ಒಪ್ಪುತ್ತಿದೆ; ಬ್ರಿಟಿಷ ಮಂತ್ರಿ ಮಂಡಲದೊಡನೆ ಸಮಾನತೆಯಿಂದ ಚರ್ಚಿಸಲು ಅಧಿಕರಿಸುತ್ತಿದೆ ಎಂಬ ಈ ಮೂರು ಕಾರಣಗಳನ್ನು ಹಾಕಿ ಸಪ್ರೂ ಠರಾವು ಇರ್ವಿನ್ ಆಶ್ವಾಸನವನ್ನು ಸ್ವೀಕರಿಸುತ್ತಿದೆ. ಈ ಠರಾವು ಹೆಚ್ಚು ಗೌರವಕರವಾಗಿ ಮಾಡಬಹುದಿತ್ತು. ಆದರೆ ಲಿಬರಲ್ ಪಕ್ಷವು ದೇಶದ ವಿಶ್ವಾಸವನ್ನು ಪಡೆದಿಲ್ಲವೆಂಬುದೂ, ಅವರು ಕಾಂಗ್ರೆಸ್ ಧುರೀಣರನ್ನು ನಿರ್ದಾಕ್ಷಿಣ್ಯವಾಗಿ ಬ್ರಿಟಿಷರೊಡನೆ ರಾಜಕೀಯ ಅಭಿವೃದ್ಧಿಗಾಗಿ ಪ್ರಯತ್ನಿಸಲಾರರೆಂಬುದೂ ಈ ಠರಾವಿನ ಬೆಲೆಯನ್ನು ಬಹಳವಾಗಿ ತಗ್ಗಿಸುತ್ತಿದೆ. ಪ್ರಾಯಶಃ ಲಿಬರಲ್ ಪಕ್ಷದ ಅಗ್ರಗಾಮಿ ಧುರೀಣರೆಂದರೆ ಡಾ| ಸಪ್ರೂರವರಾಗಿರುವರು. ಲಿಬರಲ್ ಪಕ್ಷವನ್ನು ಸೈಮನ್ ಕಮಿಶನ್ನಿಗೆ ಸೇರಿಸಿದವರು ಅವರೇ; ನೆಹರು ವರದಿಗೆ ಲಿಬರಲ್ ಪಕ್ಷದ ಕಡೆಯಿಂದ ಬೆಂಬಲವಾಗಿ ನಿಂತವರೂ ಅವರೇ; ಪ್ರಾಯಶಃ ಅವರಲ್ಲದಿದ್ದರೆ ಲಿಬರಲ್ ಪಕ್ಷದ ಠರಾವಾದರೂ ಯಾವ ಸೌಮ್ಯ ರೀತಿಯಲ್ಲಿ ರಚಿಸಲ್ಪಡಬಹುದಿತ್ತೆಂದು ಹೇಳಲಿಕ್ಕಾಗುವುದಿಲ್ಲ. ಈ ಠರಾವಿನ ಮೇಲೆ ಮಾತನಾಡಿದ ಸರ್ ಚಿಮನ್‌ಲಾಲ್ ಸೆಟಲ್ವಾಡರು ಲಿಬರಲ್ ಧೋರಣವನ್ನು ಸ್ಪಷ್ಟೀಕರಿಸುವ ಬದಲು ಅನಾವಶ್ಯಕ ಕಾಂಗ್ರೆಸ್ ಖಂಡನೆಗೆ ಆರಂಭಿಸಿದರು; ಟಿ. ರಂಗಾಚಾರ್ಯರು ದೇಶದ ಪ್ರಸ್ತುತದ ಸ್ಥೈರ್ಯದ ವಿಷಯ ಮಾತನಾಡುವ ಬದಲು ಸ್ವಾತಂತ್ರ್ಯದ ಕಡೆಗೆ ತಮಗಿದ್ದ ಕಂಪಾಯಮಾನವನ್ನು ತೋರಿಸಿದರು. ಈ ಮನಃಸ್ಥಿತಿಯಲ್ಲಿ ದೇಶದ ಈ ಧುರೀಣರು ದೇಶಕ್ಕೆ ನಿಶ್ಚಿತಕ್ಕೆ ಸಾಧ್ಯವಿದ್ದಷ್ಟು ಹೆಚ್ಚು ಲಾಭವನ್ನು ಉಂಟು ಮಾಡಿಕೊಳ್ಳಬಲ್ಲರೆಂದು ವಿಶ್ವಾಸವಾಗುವುದಿಲ್ಲ.

ಎಸ್. ಎಸ್. ಎಲ್. ಸಿ. ಪರೀಕ್ಷೆಯ ತಿದ್ದುಪಡಿಯ ಆವಶ್ಯಕತೆ.

ಈ ವಿಷಯದಲ್ಲಿ ಸರ್. ಪಿ. ಶಿವಸ್ವಾಮಿ ಅಯ್ಯರರು ಮದರಾಸಿನಲ್ಲಿ ಕೂಡಿದ ಅಖಿಲಭಾರತ ಉಪಾಧ್ಯಾಯರ ಪರಿಷತ್ತಿನಲ್ಲಿ ತಮ್ಮ ಕೆಲವೊಂದು ಅಭಿಪ್ರಾಯಗಳನ್ನು ಕೊಟ್ಟರು. ಈಗಿನ ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಹಳೇ ಮೆಟ್ರಿಕ್ಯುಲೇಶನ್ ಪರೀಕ್ಷೆಯಾದವರಿಗಿಂತ ಎಷ್ಟೋ ಕೆಳಗಿನ ತರಗತಿಯವರಾಗಿರುವರೆಂಬುದು ಕೇವಲ ಸ್ಪಷ್ಟವಿದೆ. ಶಿವಸ್ವಾಮಿಯವರು ಇದನ್ನೇ ಚರ್ಚಿಸಿ ಎಸ್. ಎಸ್. ಎಲ್. ಸಿ.ಯ ಸುಧಾರಣೆಯನ್ನು ಸೂಚಿಸಿದರು. ಸಾಮಾನ್ಯ ಬಿ. ಎ. ಪಾಸಾದವರ ಇಂಗ್ಲಿಷ್ ಭಾಷಾಜ್ಞಾನವು ಬಹುಮಟ್ಟಿಗೆ ಕೆಳದರ್ಜೆಯದಾಗಿದೆಂದು ಹೇಳುವರು. ಬಿ. ಎ. ಯಾದವರ ವಾಚನಾನುಭವವು ಕೆಲವು ಕಾದಂಬರಿಗಳಲ್ಲಾಗಲಿ, ಸ್ಥಳೀಕ ಪತ್ರಿಕೆಗಳಲ್ಲಾಗಲಿ ಇರುವುದಕ್ಕಿಂತ ಹೆಚ್ಚಿರುವುದಿಲ್ಲ. ಕೈಬರಹದಲ್ಲಿ ಅಕ್ಷರದೋಷಗಳೂ ವ್ಯಾಕರಣ ದೋಷಗಳೂ ತುಂಬಾ ಇವೆ. ಪರೀಕ್ಷಾ ತರಗತಿಯನ್ನೇರಿಸಲೆಂದರೆ ಕೂಡಲೆ ಸಾರ್ವಜನಿಕ ಚಳವಳಿಯನ್ನು, ಸೆನೇಟಿನಲ್ಲಿಯೂ ವಿರೋಧಿಸುವರು. ಇವೆಲ್ಲ ದೋಷಗಳಿಗೆ ಎಸ್. ಎಸ್. ಎಲ್. ಸಿ. ಪರೀಕ್ಷೆಯೇ ಕಾರಣವೆಂದು ವಿಶ್ವವಿದ್ಯಾಲಯದವರು ಅಭಿಪ್ರಾಯಪಡುವರು. ಎಸ್. ಎಸ್. ಎಲ್. ಸಿ. ಪರೀಕ್ಷೆಯು ಮೊದಲೆ ವಿದ್ಯಾರ್ಥಿಗಳನ್ನು ಅವರ ಸ್ವೇಚ್ಛೆಯ ಐಚ್ಛಿಕ ವಿಷಯ(optional subjects)ಗಳನ್ನು ಆರಿಸಲು ಬಿಡುವುದು. ಆಗ ಅವರಿಗೆ ಅವರ ಮನಸ್ಸಿಗೆ ಒಪ್ಪುವ ವಿಷಯಗಳು ಯಾವುವೆಂದು ತಿಳಿಯುವ ಶಕ್ತಿ ಇಲ್ಲ. ಎಲ್ಲದು ಮುಖ್ಯವಾಗಿ ಶ್ರೀ. ಶಿವಸ್ವಾಮಿ ಅಯ್ಯರರು ಹೇಳಿರುವದು ಎಸ್. ಎಸ್. ಎಲ್. ಸಿ. ಪರೀಕ್ಷೆಯು ವಿದ್ಯಾರ್ಥಿಗಳಿಗೆ ಸರಿಯಾದ ಅಭ್ಯಾಸವನ್ನೂ, ತರಬೇತನ್ನೂ ಕೊಡುವುದಿಲ್ಲವೆಂಬುದು ಒಪ್ಪತಕ್ಕ ಮಾತಾಗಿದೆ. ಇದಕ್ಕೆ ಕಾರಣಗಳು ಹಲವಿರಬಹುದು. ಎಸ್. ಎಸ್. ಎಲ್. ಸಿ.ಯ ತರಗತಿಯು ಹೀನವಾಗುವುದಕ್ಕೆ ಪ್ರಾಥಮಿಕ ವಿದ್ಯಾಭ್ಯಾಸವೂ ಕಾರಣವಾಗಿದೆಯೆಂಬುದು ಶ್ರೀ. ಅಯ್ಯರರ ಮನಸ್ಸಿಗೆ ಹೋಗಿಲ್ಲ. ಹೇಗೆ ಬಿ. ಎ. ವಿದ್ಯಾರ್ಥಿಗಳ ಭಾಷಾಜ್ಞಾನದ ಅಭಾವಗಳಿಗೆ ಎಸ್. ಎಸ್. ಎಲ್. ಸಿ.ಯು ಕಾರಣವೋ, ಹಾಗೆಯೇ ಎಸ್. ಎಸ್. ಎಲ್. ಸಿ.ಯ ಅಭ್ಯಾಸದ ಅಭಾವಕ್ಕೆ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲಾಶಿಕ್ಷಣವು ಕಾರಣವಾಗಿರುತ್ತದೆ. ಈಗಿನ ಬಿ. ಎ.ಗಳು ಸರಿಯಾದ ಇಂಗ್ಲೀಷನ್ನು ಬರೆಯಲಾರರು, ಅವರಿಗಿಂತ ಹಿಂದಿನ ಮೆಟ್ರಿಕ್ ಆದವರು ಚೆನ್ನಾಗಿ ಬರೆಯುತ್ತಾರೆಂಬುದು ನಿಜ. ಆದರೆ ಈಗಿನ ಇಂಟರ್ಮೀಡಿಯಟ್ ಆದವರಿಗಿಂತ ಉತ್ತಮವಾಗಿ ಇಂಗ್ಲೀಷು ಬರೆಯಬಲ್ಲ ಮಾಜಿ ಐದನೇ ಕ್ಲಾಸಿನವರು ಎಷ್ಟೋ ಇರುವರೆಂಬುದನ್ನು ನಾವು ಮರೆಯಬಾರದು. ಅಭ್ಯಾಸಕ್ರಮದಲ್ಲಿ ದೇಶಕಾಲ [illegible] ಪಾಶ್ಚಾತ್ಯರ ಅನುಕರಣೆಯಿಂದ ಆಗಾಗ ಆಗುತ್ತಿರುವ ಬದಲಾವಣೆಗಳೂ, ಸ್ವಾರ್ಥಕ್ಕಾಗಿಯೇ ರಚಿಸಲ್ಪಡುತ್ತಿರುವ ಪಠ್ಯಪುಸ್ತಕಗಳ [illegible] ವರ್ಷಕ್ಕೆ ಬದಲಾಯಿಸುವ ರೀತಿಯಲ್ಲಿ ಕೊಡಲ್ಪಡುವ ಪುಸ್ತಕಗಳ ರಾಶಿಯೂ, ಪ್ರಾಥಮಿಕ ವಿದ್ಯಾಭ್ಯಾಸದ [illegible] ಹಾಳುಮಾಡಿವೆ. ಈಗಿನ [illegible] ನಾಲ್ಕು ತಾಸು ಬೋಧನದ [illegible] ಕೆಲಸ ಮಾಡಿ ಮನೆ ಕಡೆಗೆ [illegible] ವಿದ್ಯಾರ್ಥಿಗಳ ಮನೆ [illegible] ಶಿಕ್ಷಣ ಕ್ರಮದ ಅವಶ್ಯಕತೆಯು [illegible] ಶಾಲೆಗಳ [illegible] ದೋಷಗಳ [illegible] ಕೊಡಬೇಕೆಂದು [illegible] ಹೇಳುವುದಿಲ್ಲ. ಆದರೆ ಪ್ರಾಥಮಿಕ ವಿದ್ಯಾಭ್ಯಾಸವು ಸುಧಾರಿಸಲ್ಪಟ್ಟರೇನೇ [illegible] ಸುಧಾರಣೆಗಳು [illegible] ಎಂಬುದನ್ನು ನಾವು [illegible] ಹೇಳುವೆವು.

~ ~

ನಿಮ್ಮ ಕೂದಲುಗಳನ್ನು
ಸಜೀವವಾಗಿಯೂ
ಸುಂದರವಾಗಿಯೂ
ಇರಿಸಿರಿ.

ಹಿಂದೂಸ್ಥಾನದಂತಹ
ಉಷ್ಣ ದೇಶದಲ್ಲಿ ಕೆಲ ಸಮಯದ
ಮೇಲೆ ಉಷ್ಣವು ಕೂದಲುಗಳನ್ನು ಕಡಿಸುವುದು.
ಕೂದಲು ಒಣಗಿ, ಮುಟ್ಟಿದೊಡನೆ
ಉದುರುವ ಸ್ವಭಾವ
ಉಳ್ಳದ್ದಾಗಿ ಬ್ರಶ್ ಹಾಕುವಾಗ ಬೀಳುವುದು.

ಕೂದಲನ್ನು ಆರೋಗ್ಯದಿಂದಿರಿಸಲು [illegible] ಅತ್ಯಾವಶ್ಯಕ ಕೂದಲಿನ ಸ್ವಾಭಾವಿಕ ತೈಲ [illegible] ಇವಾನ್ಸ್ ಲೈಮ್ಸ್ ಎಂಡ್ ಗ್ಲಿಸರಿನ್ ಟ್ವೈಲೆಟ್ ಕ್ರೀಮು [illegible] ಕೂದಲುಗಳಿಗೆ [illegible] ಉಂಟುಮಾಡುವದು. ಪ್ರತಿ ದಿನ [illegible] ಕೂದಲುಗಳಿಗೆ [illegible] ಚರ್ಮವನ್ನು ಸ್ವಚ್ಛವಾಗಿ [illegible].

EVANS'
LIMES & GLYCERINE

ಇವಾನ್ಸ ಸನ್ಸ್ ಲೆಶ್ಚರ್ ಮತ್ತು ವೆಬ್ ಲಿ.ಟೆಡ್,
ಲಿವರ್‌ಪೂಲ್ ಮತ್ತು ಲಂಡನ್,
ಇವರಿಂದ ತಯಾರಿಸಲ್ಪಟ್ಟಿತು.



ಅಮೃತಾಂಜನ.

[illegible]

ರಿಂಗ್ ವರ್ಮ್ ಮುಲಾಮು — [illegible] ಡಬ್ಬಿಗೆ ಆಣೆ 6, ಟ. ಖ. ಬೇರೆ.

[illegible] — [illegible] ಹಲ್ಲುಗಳನ್ನು ಬೆಳ್ಳಗೆ ಶುಭ್ರವಾಗಿರಿಸಿ, ಅವುಗಳನ್ನು ಬಲ [illegible] ಡಬ್ಬಿಗೆ ಆಣೆ 2, ಟ. ಖ. ಬೇರೆ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದುಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪನಿ,

ಗಿರಗಾಂವ, ಮುಂಬಾಯಿ.

ಏಜಂಟರು — ದಿ ಉಲನ್ ಮಾರ್ಟ್, ಮಂಗಳೂರು.

ಶ್ರೀ ಸರಸ್ವತೀ ಭಂಡಾರ

1.	ಸಚಿತ್ರ ರಾಮಾಯಣ ಕಥಾ ಸಂಗ್ರಹ	1–8–0
2.	ಮದನಮೋಹನ ರಾಜ ಚರಿತ್ರೆ	0–12–0
3.	ಮಾಧವೀ ಕಂಕಣ	2–0–0
4.	ವಿಧ್ಯಾಮಂಜರಿ ಕಥೆಗಳು	2–0–0
5.	ಮಹಾಭಕ್ತ ವಿಜಯ	3–0–0
6.	ಶೃಂಗಾರ ಶುಕಸಪ್ತತೀ ಕಥೆಗಳು	0–12–0
7.	ಮಂಜು ಘೋಷಾ	1–0–0
8.	ವಿಮಲಾ ದೇವಿ	1–12–0
9.	ಸೌಭಾಗ್ಯ ಲತಿಕ	0–8–0
10.	ಧರ್ಮ ಸಾಮ್ರಾಜ್ಯಂ	1–4–0
11.	ರಾಮ ರಾಜ್ಯ	–12–0
12.	ಆನಂದ ಮಠ	1–12–0
13.	ಲಾವಣ್ಯ ಚಿಕಿತ್ಸಕ	0–12–0
14.	ವಚನ ಭಾರತ	1–8–0
15.	ಇಂಡಿಯನ್ ಪಿನಲ್ ಕೋಡ್	2–8–0
16.	ಕ್ರಿಮಿನಲ್ ಪ್ರೊಸಿಜರ್ ಕೋಡ್	3–0–0
17.	ಲ್ಯಾಂಡ್ ರೆವೆನ್ಯು ಕೋಡ್	1–0–0

ಈ ಪುಸ್ತಕಗಳಲ್ಲದೆ ನಮ್ಮಲ್ಲಿ ಇನ್ನೂ ಸಾವಿರಾರು ನವೀನ ಕನ್ನಡ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಲೈಬ್ರರಿಗಳಿಗೆ ಇನಾಮು ಯೋಗ್ಯವಾದ ಅನೇಕ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕಿವೆ.

ವಿಳಾಸ —

ಶ್ರೀ ಸರಸ್ವತೀ ಭಂಡಾರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು, ಅವೆನ್ಯೂ ರೋಡ್, ಬೆಂಗಳೂರು ಸಿಟಿ

ದೂರವೇಕೆ! ಗೋಳಿಕಟ್ಟೆ ಬಜಾರಿನಲ್ಲಿ!!

ಹೊಸತಾಗಿ ತರಿಸಿರುವ ಸ್ವಿಫನ್ಸ್‌ರ ಮತ್ತು ಸುಪ್ರಸಿದ್ಧ ಕಾರ್ಟರ್‌ರವರ ಬ್ಲೂಬ್ಲೇಕ್, ಕೋಪಿಂಗ, ಸ್ಕಾರ್ಲೆಟ್ ಶಾಯಿಭರಣಿಗಳೂ, ಸ್ವಾನ, ಲೋಟಸ್ ಫೌಂಟನ್ ಶಾಯಿಗಳೂ, ಕಲ್ಲರ್ಡ್, ಕೋಪಿಂಗ್ ಸಾದಾ ನಮೂನೆವಾರು ಪೆನ್ಸಿಲುಗಳೂ, ಶಾಯಿ ತೆಗೆಯುವ ಕೋಪಿಂಗ ಪುಸ್ತಕಗಳೂ, ಎಕ್ಸರಸೈಜು, ನೋಟ್‌ಬುಕ್, ವರ್ಕ್, ಊಳಿಗದ ಪುಸ್ತಕಗಳೂ, ರ‍್ಯಾಟಿಂಗ್ ಪ್ಯಾಡ್ಸ್, ನೋಟ್‌ಪೇಪರ, ಫೂಲ್ಸ್‌ಕೇಪ, ಟಿನ್ಸ್, ಬ್ಲ್ಯಾಡಿಂಗ್ ಪೆಸ್ಟೇಟಿಂಗ ಬ್ರೌನ್‌ಪೇಪರ್‌ಗಳೂ, ಬಯಿಲ್ ಪೇಪರ, ನಮೂನೆವಾರು ಕವರುಗಳೂ, ಪಂಚಿಂಗ್ ಮೆಶಿನ್, ಫೈಲು, ಫೈಲ್ ಬೇಗ್ಸ್, ಫೈಲ್ ಲೇಸ, A. Z. ಫೈಲು, ಸ್ಪ್ರಿಂಗ್ ಫೈಲು, ಪೆನ್ ಹೋಲ್ಡರು, ಪೆನ್‌ಗಳೂ, ಯಾವತ್ತು ದೇಶಿ ಮತ್ತು ವಿದೇಶಿ ಲೇಖನ ಸಾಮಾಗ್ರಿಯೂ ಬಂಡಸಾಲೆ ಆಫೀಸುಗಳ ದಿನನಿತ್ಯದ ಉಪಯೋಗದ (Office Requirements) ಲೇಖನಸಾಮಾಗ್ರಿಯೂ, ಮದರಾಸು ಪೆನ್ಸಿಲು ಫೆಕ್ಟರಿಯ ಕೋಪಿಂಗ, ಕಲ್ಲರ್ಡ, ಬ್ಲೇಕ್ ಲೆಡ್ ಸ್ಟಾರ್ ಓಫ್ ಇಂಡಿಯಾ ಬ್ರೆಂಡ ಪೆನ್ಸಿಲುಗಳೂ ಅತಿ ಸುಲಭ ಬೆಲೆಗೆ ಸಿಕ್ಕುವವು.

ವಿಳಾಸ:— **Matti Pundalik Rama Prabhu**,

The Mangalore Stationery Mart,

Golikatta Bazaar, MANGALORE.

ಪಂಜಾಬ್ ಹಿಂದೂ ಮಹಾಸಭೆ

ಲಾಹೋರ್.

[illegible] ಪ್ರಾಂತ್ಯದ [illegible] ಹಿಂದೂ ಮಹಾಸಭೆಯು ಶ್ರೀಯುತ [illegible] ಅಧ್ಯಕ್ಷತೆಯಲ್ಲಿ [illegible] ಜರಗಿತು. [illegible] ಮತ್ತು [illegible] ಮಹಾರಾಜರ [illegible] ಸಂತಾಪ ಸೂಚನೆ, [illegible] ಸೂಚನೆಗಳು ಮುಂದಕ್ಕೆ ಬಂದವು. ಸೈಮನ್ ಕಮಿಶನ್ ರಿಪೋರ್ಟು ಇಂಡಿಯನ್ ಸೆಂಟ್ರಲ್ ಕಮಿಶನ್ ರಿಪೋರ್ಟು, ಪ್ರಾಂತೀಯ ಕಮಿಟಿ ರಿಪೋರ್ಟುಗಳ ವಿಷಯ ಜಾಗ್ರತೆ ಆಲೋಚನೆ ಕೊಡುವುದಕ್ಕಾಗಿ ಒಕ್ಕೂಟ ಸಂಘಗಳನ್ನು ಏರ್ಪಡಿಸಬೇಕೆಂದೂ, ಸಿವಿಲ್ ಸರ್ವಿಸ್, ಪೋಲೀಸ್ ಸರ್ವಿಸ್, [illegible] ಹಿಂದೂಗಳಿಗೆ ವಾಯುವ್ಯ ಗಡಿ ಪ್ರಾಂತ್ಯದಲ್ಲಿ [illegible] ಕೊಡಬೇಕೆಂದೂ, ಈ ಪ್ರಾಂತ್ಯದಲ್ಲಿ ಸ್ವಸ್ಥತೆಗಾಗಿ ಇಂಡಿಯಾ ಸರಕಾರದಿಂದ [illegible] ರೂಪಾಯಿ ಖರ್ಚಾಗುತ್ತಿದ್ದರೂ ಈ ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಹಿಂದೂ ಉದ್ಯೋಗಗಳಲ್ಲೇ ಇಲ್ಲದೆ ಇದ್ದುದು ಸಮಂಜಸವಲ್ಲವೆಂದೂ, ದೇವನಾಗರಿ ಭಾಷೆಯನ್ನು ಕೋರ್ಟುಗಳಲ್ಲಿ ಉಪಯೋಗಿಸುವಂತೆ ಮಾಡಬೇಕೆಂದೂ, ಅಸ್ಪೃಶ್ಯರನ್ನು ಮೇಲಕ್ಕೆತ್ತಲು ಸಾಧಿಸಬೇಕೆಂದೂ ಮುಂತಾಗಿ ಠರಾವುಗಳು ಪಾಸಾದವು.

‘ಝೆನಿಥ್’

ದ್ರಾಕ್ಷಾಸವ.

ಸುಪ್ರಸಿದ್ಧವಾದ ‘ಝೆನಿಥ್’ ದ್ರಾಕ್ಷಾಸವವು ಆಯುರ್ವೇದೀಯ ಶಾಸ್ತ್ರದಿಂದ ತಯಾರಿಸಲ್ಪಟ್ಟಿರುತ್ತದೆ. ಇದರ ಸೇವನೆಯಿಂದ ಕ್ಷಯರೋಗ ಪ್ರಥಮಾವಸ್ಥೆ, ಕೆಮ್ಮು, ಉಬ್ಬಸ, ಎದೆನೋವು, ಶೀತ, ಸಂಧಿಜ್ವರ ಇವುಗಳಿಂದುಂಟಾಗುವ, ಅರುಚಿ, ಅಜೀರ್ಣ, ಮಲಬದ್ಧತೆ, ಜ್ವರಶೇಷ, ಪಿತ್ತವಿಕಾರ, ವಾಂತಿ, ಕಂಠರೋಗ ಇತ್ಯಾದಿಗಳಿಗೆ ಅತ್ಯಂತ ಗುಣಕಾರಿಯಾಗಿ ಪರಿಣಮಿಸುವುದು.

ಸಣ್ಣ ಮಕ್ಕಳಿಗೆ ಉಂಟಾಗುವ ನೆಗಡಿ, ಕೆಮ್ಮು, ಪಿತ್ತವಿಕಾರಗಳು ಕೂಡ ಇದರಿಂದ ಗುಣವಾಗುವುವು. ಇದು ತಗೆದುಕೊಳ್ಳಲು ರುಚಿಕರವಾಗಿಯೂ, ಸಿಹಿಯಾಗಿಯೂ ಇರುವುದು. ನಿಯಮಿತ ವೇಳೆಯಲ್ಲಿ ಇದನ್ನು ಸೇವಿಸಿದ್ದಲ್ಲಿ ಮಲಬದ್ಧತೆಯಾಗದೆ ಹೊಟ್ಟೆಯನ್ನು ಚೆನ್ನಾಗಿಟ್ಟು, ಹಸಿವೆಯನ್ನುಂಟುಮಾಡಿ, ಪಚನಶಕ್ತಿಯನ್ನು ಸುಧಾರಿಸಿ, ಅನ್ನ ಮುಂತಾದ ಆಹಾರವು ರುಚಿಕರಿಸುವುದು. ಮಲಗುವ ಸಮಯ ಈ ‘ಝೆನಿಥ್’ ದ್ರಾಕ್ಷಾಸವದ ರಸಾಯನವನ್ನು ಸೇವಿಸಿದಲ್ಲಿ ಚೆನ್ನಾಗಿ ನಿದ್ರೆಯನ್ನು ಮಾಡುವವನಿಗೆ ಕೆಲಸಮಾಡುವ ಉತ್ಸುಕತೆಯನ್ನು ಉಂಟುಮಾಡುತ್ತದೆ.

ದರ: — ಪೌಂಡು 1ರ ಬಾಟ್ಲಿ 1ಕ್ಕೆ ರೂ. 1–12–0; ಪೌಂಡು 1ರ ಬಾಟ್ಲಿ 1ಕ್ಕೆ ರೂ. 1–4–0; ಪೌಂಡು ½ರ ಬಾಟ್ಲಿ 1ಕ್ಕೆ ರೂ. 0–12–0. ಟಪ್ಪಾಲು ಹಾಶೀಲ, ಪ್ಯಾಕಿಂಗ ಖರ್ಚ ಪ್ರತ್ಯೇಕ.

The Zenith Chemical Works, ದಿ ಝೆನಿಥ್ ಕೆಮಿಕಲ್ ವರ್ಕ್ಸ್,

Arab Building Bombay, No. 2. ಅರಬ ಬಿಲ್ಡಿಂಗ್ ಮುಂಬಯಿ, ನಂಬ್ರ 2.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬೂಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಬೆಳಕಿನ ಸ್ವರ್ಣೋತ್ಸವ.

ಅಮೇರಿಕದ ಸಂಯುಕ್ತ ಸಂಸ್ಥಾನವು ತನ್ನ ಶ್ರೇಷ್ಠತಮ ನವಯಂತ್ರ ಶೋಧಕನನ್ನು ಸನ್ಮಾನಿಸಿದ ಕ್ರಮ.

(ಲೇಖಕರು.– ಶ್ರೀಯುತ ವಾಸುದೇವ ಕಾರಂತರು, ಎಮ್. ಎ. ಎಲ್. ಟಿ.)

ಬೆಳಕಿನ ಸ್ವರ್ಣೋತ್ಸವ! ಯಾವ ಬೆಳಕಿನದು? ನಮ್ಮ ಅನ್ನಕ್ಕೆ ಕಾರಣವಾದ, ಜೀವನಕ್ಕೆ ಧಾರಿಯಾದ, ಸೃಷ್ಟಿಯ ಸರ್ವ ಪ್ರಾಣಿಗಳಿಗೂ ಮೂಲಾಧಾರವಾದ ಸೂರ್ಯನ ಬೆಳಕಿದೆ? ಅಲ್ಲ. ಮಿಲಿಯಾಂತರ ವರ್ಷಗಳಿಂದ ಇದ್ದು ನಮ್ಮ ಕಾಲಡಿಯಲ್ಲಿ ನೆಲವಿದ್ದಂತೆಯೇ ಹಗಲಲ್ಲಿ ಸೂರ್ಯನ ಬೆಳಕಿರುವುದು ಸೃಷ್ಟಿಯ ನಿಯಮವೇ ಆಗಿರುವಾಗ ಅದಕ್ಕೊಂದು ಸ್ವರ್ಣೋತ್ಸವವಾಗಲೆಲ್ಲಿ? ಈಗ ಆದುದು ಕೃತಕ ಬೆಳಕಿನ ಸ್ವರ್ಣೋತ್ಸವ.

ಪೃಥ್ವಿಯಲ್ಲಿ ನಾಗರಿಕತೆಯು ಇನ್ನೂ ತಲೆದೋರಲಾರಂಭಿಸದಿದ್ದಾಗ, ಜನರು ಇತರ ಪ್ರಾಣಿವರ್ಗಕ್ಕಿಂತ ರವಷ್ಟು ಮಾತ್ರವೆ ಬುದ್ಧಿಚಾತುರ್ಯದಲ್ಲಿ ಮುಂದರಿದಿದ್ದಾಗ, ಮನುಷ್ಯನನ್ನು ಪಶುಗಳಿಂದ ಪ್ರತ್ಯೇಕಿಸಿ ಮುಂದೆ ಅವನನ್ನು ಸೃಷ್ಟಿಯ ಶ್ರೇಷ್ಠತಮ ಜೀವನನ್ನಾಗಿ ಮಾಡುವ ಅವನ ಕಲ್ಪನಾಶಕ್ತಿಯು ಇನ್ನು ಆಗ ತಾನೆ ಅಂಕುರಿಸಕಿದ್ದಾಗ ಅದಾವುದೋ ಒಬ್ಬ ಮಾನವ ಪ್ರವೀಣನು ರಾತ್ರಿಯ ಅಂಧಕಾರಕ್ಕೆ ಮದ್ದರೆಯಲು ಯೋಚಿಸಿ ಯೋಚಿಸಿ ಕಟ್ಟಕಡೆಗೆ ಹತ್ತು ಮಿಂಚು ಹುಳುಗಳನ್ನು ಪ್ರಥಮ ಬಾರಿಗೆ ಒಟ್ಟುಗೂಡಿಸಿದಲು ಜನರು ಆ ಬೆಳಕನ್ನು ಕಂಡು ಅದೆಷ್ಟು ನಲಿದಾಡಿರಬಹುದು! ಅವನ ಬುದ್ಧಿಚಾತುರ್ಯವನ್ನೆಷ್ಟು ಹೊಗಳಿರಬಹುದು! ಅಥವಾ ಆಕಸ್ಮಾತ್ತಾಗಿ ಉಂಟಾದೊಂದು ಕಾಳ್ಗಿಚ್ಚಿನ ಬೆಂಕಿಯನ್ನು ಕಂಡು ಇತರ ಪ್ರಾಣಿಗಳಂತೆ ಅದಕ್ಕೆ ಭಯಪಡದೆ ಧೈರ್ಯದಿಂದ ಅದಿಷ್ಟನ್ನು ತಂದು ಪೋಷಿಸಲು ಕಲಿತುಕೊಂಡಾಗ ಅವರಿಗದೆಷ್ಟು ಆನಂದವಾಗಿರಬಹುದು!

ಕತ್ತಲೆಯೆಂದರೆ ಮನುಷ್ಯನಿಗೆ ಎಲ್ಲಿಲ್ಲದ ಭಯ. ಮನೆ ಮಾರಿಲ್ಲದೆ ಕಾಡಿನಲ್ಲಿ ಜೀವಿಸಿಕೊಂಡಿದ್ದಾಗ ಎಲ್ಲ ದುಷ್ಟ ಕಾಡು ಜಂತುಗಳು ಬಂದು ನಿದ್ರೆಯಲ್ಲಿದ್ದಾಗ ತನ್ನನ್ನು ನುಂಗಿಬಿಡುವವೋ ಎಂದು ಭಯ. ಆ ಮೇಲೆ ಸ್ವಲ್ಪ ನಾಗರಿಕತೆಯು ತಲೆದೋರಿ ಜನರು ಚಿಕ್ಕ ಗುಡಿಸಲುಗಳನ್ನು ಕಟ್ಟಿಸಲಿಕ್ಕೂ ಮನೆ ಸುತ್ತಲಿರುವ ಕಾಡನ್ನು ಸವರಲಿಕ್ಕೂ ಕಲಿತಮೇಲೆ ಸರ್ಪ, ಚೇಳು ಮುಂತಾದವುಗಳ ಭಯ, ಕತ್ತಲಲ್ಲಿ ಇತರ ಜನರು ಬಂದು ತನ್ನ ಸ್ವತ್ತನ್ನಪಹರಿಸುವರೋ ಎಂದು ಭಯ. ಆ ಮೇಲೆ ಮನುಷ್ಯನು ಸ್ವಲ್ಪ ಆತ್ಮ ವಿಚಾರಕ್ಕೆ ಕೈಹಾಕಿ ಜನರ ದೇಹವು ಸತ್ತರೂ ಆತ್ಮವು ಇನ್ನೂ ಇಲ್ಲೇ ಅಲೆದಾಡುತ್ತಿರುವದೆಂದು ಊಹಿಸಲಾರಂಭಿಸಿದಾಗ ಕತ್ತಲಲ್ಲಿ ಭೂತಪ್ರೇತಗಳ ಭಯ. ಅಂತೂ ರಾತ್ರಿಯೆಂದರೆ ಅವನಿಗಿದ್ದ ಭೀತಿಯು ಇನ್ನೂ ಬಿಟ್ಟಿಲ್ಲ. ಆದುದರಿಂದ ತನ್ನ ಮನಃಶಾಂತತೆಯನ್ನು ಭಂಗಮಾಡುವ ಈ ಕತ್ತಲೆಯ ಹೆದರಿಕೆಯನ್ನು ಆದಷ್ಟು ನಿವಾರಿಸಲಿಕ್ಕೆಂದು ಇನ್ನೂ ಇನ್ನೂ ಉತ್ತಮ ತರದ ದೀಪಗಳನ್ನು ತಯಾರಿಸಲು ಅವನು ಹಲವು ತರದ ಯತ್ನಗಳನ್ನು ಮಾಡುತ್ತಲೇ ಇದ್ದನು.

ಉರಿಯುವ ಕೊಳ್ಳಿಗಳು ಹೋಗಿ ಎಣ್ಣೆಯ ದೀಪಗಳು ಬಂದವು. ಮುಟ್ಟಿದರೆ ಕೈಯೆಲ್ಲ ಎಣ್ಣೆ, ಮೈಯೆಲ್ಲ ಮಸಿ, ಮನೆಯೆಲ್ಲ ಹೊಗೆ, ಗಾಳಿಗೆ ನೊಂದಿ ಹೋಗುವುದು ಬೇರೆ, ಎಣ್ಣೆ ಚೆಲ್ಲಿಹೋಗುವುದು ಬೇರೆ, ಮನೆಗೆ ಬೆಂಕಿ ಬೀಳುವುದು ಬೇರೆ, ಈ ತೊಂದರೆಗಳನ್ನು ತಪ್ಪಿಸಿಕೊಳ್ಳಲು ಅವನು ಲಾಂದ್ರಗಳನ್ನು ನಿರ್ಮಾಣ ಮಾಡಿದನು. ಮನೆಯಲ್ಲಿ ಮಾತ್ರವಲ್ಲ, ಹೊರಗೆ ಬೀದಿಗಳಲ್ಲೂ ದೀಪವನ್ನಿಟ್ಟನು.

ಆದರೆ ಇದೂ ಸಾಕಾಗಲಿಲ್ಲ. ಕಳ್ಳರು ಬಂದರೆ ಈ ದೀಪಗಳನ್ನು ಹಚ್ಚುವುದರೊಳಗೆ ಅವರೆಲ್ಲೋ ಪಲಾಯನ. ಕಲ್ಲೆಣ್ಣೆಯ ದೀಪದ ಕುರುಡು ಬೆಳಕಿನಲ್ಲಿದ್ದ ಮನೆಯ ಸಂದು ಮೂಲೆಗಳಲ್ಲಿ ಭ್ರಮೆಗೊಂಡ ಮನಸ್ಸಿಗೆ ಭೂತಗಳೂ, ಹಾವೂ ಅವಿತುಕೊಂಡಿರಬಹುದೆಂಬ ಸಂದೇಹಕ್ಕೆ ಇನ್ನೂ ಎಡೆಯಿತ್ತು. ಮಾತ್ರವಲ್ಲ, ಇಷ್ಟರೊಳಗೆ ಮನುಷ್ಯನಿಗೆ ಜ್ಞಾನಸಂಪಾದನೆಗೂ ವಿನೋದಕ್ಕೂ ಹಗಲೆಲ್ಲ ಸಾಕಾಗದೆ ರಾತ್ರಿಯಲ್ಲಿ ಕೂಡ ಶೋಧನಾಲಯಗಳಲ್ಲೂ ನಾಟಕ ಶಾಲೆಗಳಲ್ಲೂ ಇರುವುದು ಹೆಚ್ಚಹೆಚ್ಚಾಗಿ ಅಗತ್ಯವಾಗುತ್ತ ಬಂದಿತ್ತು. ದಿನದಿನಕ್ಕೂ ಏರುತ್ತಲಿರುವ ಮಾನವನ ಹೊಸ ಅವಶ್ಯಕತೆಗಳಿಗಾಗಿ ರಾತ್ರಿ ಕೂಡ ಕಾರ್ಖಾನೆಗಳನ್ನು ನಡಿಸುವುದು ಅಗತ್ಯವಾಗಿತ್ತು. ಆದರೆ ಕುರುಡು ದೀಪಗಳ ಬೆಳಕಿನಲ್ಲಿ ಇದೆಲ್ಲ ಚೆನ್ನಾಗಿ ನಡೆಯುವುದು ಹೇಗೆ ಸಾಧ್ಯ?

ಆದುದರಿಂದ ದೀಪವು ಇನ್ನೂ ಇನ್ನೂ ಉತ್ತಮವಾಗಬೇಕೆಂದು ಕಲ್ಲಿದ್ದಲಿನ ಅನಿಲದ ದೀಪ, "ಗೇಸ್" ದೀಪ, ಸುಣ್ಣದ ದೀಪ, ಕಾರ್ಬೈಡ್ ದೀಪ, ವಿದ್ಯುತ್ ಆರ್ಕ್ ದೀಪ, ಮುಂತಾದ ತರತರದ ದೀಪಗಳು ಪ್ರಚಾರಕ್ಕೆ ಬಂದುವು. ಆದರೆ ಇವ್ಯಾವುವೂ ಮನುಷ್ಯನನ್ನು ಸಮಾಧಾನಗೊಳಿಸಲಾರದೆ ಹೋದುವು. ಕಟ್ಟಕಡೆಗೆ ಈಗ ಎಲ್ಲಾ ದೊಡ್ಡ ಪಟ್ಟಣಗಳಲ್ಲೂ ಉಪಯೋಗದಲ್ಲಿರುವ ಕಾಚ ನಳಿಗೆಯ ವಿದ್ಯುತ್ ದೀಪವು (Incandescent filament lamp) ನಿರ್ಮಾಣವಾಯಿತು.

ಬೆಳಕೆಂದರೀಗ ಇತರ ದೀಪಗಳ ಬೆಳಕು ಪ್ರಯೋಜನವಿಲ್ಲವೆಂದಲ್ಲ. ಆದರೂ ಮಾನವನು ಒಂದು ಉತ್ತಮ ತರದ ಬೆಳಕಿಗಾಗಿ ಹೋರಾಡುತ್ತಿದ್ದಾಗ ಅದು ಹೇಗಿದ್ದರಾಗುತ್ತಿತ್ತೆಂದು ಬೆಳಕಿನ ಧ್ಯೇಯವೊಂದನ್ನು ಕಲ್ಪಿಸಿಕೊಂಡಿದ್ದನೋ, ಅಂತಹ ಧ್ಯೇಯವನ್ನು ಈ ಕಾಚ ನಳಿಗೆಯ ದೀಪದ ಹೋಲಿಕೆಯಂತೆ ಇನ್ನಾವ ದೀಪವೂ ಹೋಲಲಾರದು. ಆದುದರಿಂದ ಬೆಳಕೆಂದರೆ ಇದು ಬೆಳಕು. ಉಳಿದವುಗಳೆಲ್ಲಾ ಇದು ಸಿಕ್ಕುವವರೆಗಿದ್ದ ತಾತ್ಕಾಲಿಕ ಉಪಶಮನಗಳು ಮಾತ್ರ ಎಂದು ಭಾವಿಸಿ ಈ ದೀಪದ ಸ್ವರ್ಣೋತ್ಸವವನ್ನು ಈಗ ಆಚರಿಸಿದುದು.

ಈ ದೀಪವನ್ನು ಹಚ್ಚುವುದಾದರೆ? ಎಷ್ಟು ಸುಲಭ! ಎಷ್ಟು ಶೀಘ್ರ! ಎಷ್ಟು ಆಶ್ಚರ್ಯ! ಒಬ್ಬನು ಅರೆಕ್ಷಣದೊಳಗೆ ಸಹಸ್ರಕೋಟಿ ದೀಪಗಳನ್ನು ಬೇಕಾದರೂ ಹಚ್ಚುವಂತೆ ಮಾಡಬಹುದು. ಇನ್ನು ದೀಪಹಚ್ಚಬೇಕಾದರೆ ಅದಿದ್ದಲ್ಲಿಗೆ ಹೋಗಬೇಕೆಂದಿಲ್ಲ. ನೂರುಮೈಲು ದೂರದಿಂದ ಎಷ್ಟು ದೀಪಗಳನ್ನು ಬೇಕಾದರೂ ಕ್ಷಣಮಾತ್ರದಲ್ಲಿ ಹಚ್ಚುವುದು ಅಥವಾ ನೊಂದಿಸುವುದು ಸಾಧ್ಯ. ದೀಪದ ಬೆಳಕೂ ಬಹಳ ಉತ್ಕೃಷ್ಟತರದ್ದು. ಮನುಷ್ಯನಿಗೆ ಸ್ವಾಭಾವಿಕವಾಗಿ ಬೇಕಾದುದು ನಾವು ಹಗಲಲ್ಲಿ ಕಾಣುತ್ತಿರುವ ಸೂರ್ಯನ ಬೆಳಕಿನಂತಹ, ಸ್ವಚ್ಛವಾದ ಬಿಳಿ ಬೆಳಕನ್ನು ಕೊಡುವ ದೀಪ. ಕಣ್ಣನ್ನು ಹಾಳುಮಾಡುವ ಕೆಂಪು ಅಥವಾ ಹಳದಿ ಬೆಳಕನ್ನು ಕೊಡುವ ಬಣ್ಣದ ದೀಪವಲ್ಲ. ಮಾತ್ರವಲ್ಲ; ವಿದ್ಯುತ್ ದೀಪವನ್ನು ಮಿಂಚುಹುಳದಂತೆ ಚಿಕ್ಕದಾಗಿ ಬೇಕಾದರೂ ತಯಾರಿಸಬಹುದು. ಸಹಸ್ರ ಮೈಲು ದೂರದ ವರೆಗೆ ಕತ್ತಲನ್ನು ಕೊರೆದು ತನ್ನ ಬೆಳಕನ್ನು ಹರಡುವಂತಹ ಪ್ರಚಂಡ ಸೂರ್ಯನನ್ನೇ ಬೇಕಾದರೂ ನಿರ್ಮಿಸಬಹುದು. ಈ ಬೆಳಕು ನಿರ್ಮಾಣವಾದ ಮೇಲೆ ಮಾತ್ರವೇ ಪಟ್ಟಣದ ಬೀದಿಗಳು ರಾತ್ರಿ ಕೂಡ ಹಗಲಿನಂತೆ ಸುರಕ್ಷಿತವಾದುವು. ಕಾರ್ಖಾನೆಗಳಲ್ಲಿ ಇರುಳಲ್ಲೂ ಕೆಲಸಮಾಡುವುದು ಸಾಧ್ಯವಾಯಿತು. ಕತ್ತಲಿನ ಭಯವು ಅರ್ಧಕ್ಕರ್ಧ ಕಡಿಮೆಯಾಯಿತು.

ಆದುದರಿಂದ ಅಮೇರಿಕದಲ್ಲಿ ಇಂತಹ ಅಮೃತ ಬೆಳಕನ್ನು ಕಂಡುಹಿಡಿದ ಸುಸಂದರ್ಭದ ಸ್ಮರಣಾರ್ಥವಾಗಿ ಆನಂದಿಸಬೇಕೆಂದು ಆಸೆ ಹುಟ್ಟಿತು. ಪ್ರೆಸಿಡೆಂಟ್ ಹೂವರರು ಹೇಳಿದಂತೆ "ಇಷ್ಟು ಬೆಳಕನ್ನು ಸಹಸ್ರಾರು ಹೆಚ್ಚುಮಾಡಿದ ಸಂದರ್ಭವು ನಿಜವಾಗಿಯೂ ಉತ್ಸವಕ್ಕೆ ತಕ್ಕುದಾಗಿದೆ. ಏಕೆಂದರೆ ಕತ್ತಲೆಯು ಬಡು ನ್ಯಾಯವಾದ ಮಾನುಷ ಚಟುವಟಿಕೆಯ ಮೇಲೊಂದು ಅನ್ಯಾಯವಾದ ತಡೆ."

ನಮ್ಮಲ್ಲಿನ್ನೂ ವಿದ್ಯುತ್ ಬೆಳಕು ಅಂಥಾ ಪ್ರಚಾರಕ್ಕೆ ಬರಲಿಲ್ಲ. ಆದರೆ ಅಮೇರಿಕಾದಲ್ಲಿ ನೇಟಿವ್‌ಗಳನ್ನುಳಿದು ಅರ್ಧಕ್ಕರ್ಧ ಮನೆಗಳಿಗಿಂತ ಹೆಚ್ಚು ವಿದ್ಯುತ್ ಬೆಳಕನ್ನು ಉಪಯೋಗಿಸುತ್ತಾರೆ. ರಾತ್ರಿ ಕಾಲದಲ್ಲಿ ಕೂಡ ಮೋಟಾರುಬಂಡಿಗಳಿಂದ ಕಿಕ್ಕಿರಿದ ಅವರ ಬೀದಿಗಳಲ್ಲಿ ೧೦-೧೫ ಅಂತಸ್ತಿನ ಸಾಲು ಸಾಲು ಮನೆಗಳಿಂದ ಆಕಾಶದ ಬೆಳಕಿನಲ್ಲಿ ಮೆರೆಯುವ ಅದರ ಕಟ್ಟಡಗಳಲ್ಲೂ ವಿದ್ಯುತ್ ದೀಪವಿಲ್ಲದಿರುತ್ತಿದ್ದರೇನಾಗುತ್ತಿತ್ತೆಂಬುದನ್ನೂ ಆದುದರಿಂದ ಅವರಿಗೆ ಅದರ ಮೇಲೆಷ್ಟು ಪ್ರೀತಿಯುಂಟುವದಕ್ಕೂ ಊಹಿಸುವುದು ಕಷ್ಟವಲ್ಲ. ಆದರೆ ಇದಕ್ಕಿಂತ ಹೆಚ್ಚಾಗಿ ಅಮೇರಿಕದವರು ಬೆಳಕಿನ ಸ್ವರ್ಣೋತ್ಸವವನ್ನು ಆಚರಿಸಲು ಹೊರಟುದಕ್ಕೆ ಇನ್ನೂ ಕೆಲವು ಕಾರಣಗಳಿವೆ.

ಈ ಬೆಳಕನ್ನು ಕಂಡುಹಿಡಿದವನು ತಮ್ಮವನೆ. (ಅವರು ಹೇಳುವಷ್ಟು ಮಟ್ಟಿಗೆ ಮಾತ್ರವಲ್ಲ.) ಎಡಿಸನ್ನರೀಗ ಲೋಕ ವಿಖ್ಯಾತರು. ಅವರಂತಹ ನವಯಂತ್ರಶೋಧಕರಿನ್ನು ವರೆಗೆ ಹುಟ್ಟಲಿಲ್ಲ. ತಮ್ಮ ೮೨ ವರ್ಷ ವಯಸ್ಸಿನೊಳಗಾಗಿ ಅವರಲ್ಲಿ ೧೦೦೦ಕ್ಕಿಂತ ಹೆಚ್ಚು ಕಾದಹಕ್ಕುಗಳಿವೆ. (Patents) ಫೊನೆಗ್ರಾಫನ್ನು ಕೇಳಿ ಆ ಯಂತ್ರದ ಅಮಾನುಷ ಶಕ್ತಿಯನ್ನು ಕಂಡು ನೀವು ಆಶ್ಚರ್ಯಪಟ್ಟಿರಬಹುದು. ಅದನ್ನು ಸಂಪೂರ್ಣವಾಗಿ ನಿರ್ಮಿಸಿದವರು ಎಡಿಸನ್ನರೇ. ಇನ್ನು ಕಿವಿಗಿಂಪಾಗುವಂತೆ ಮಾಡಿದಂತೆಯೇ ಚಲಚ್ಚಿತ್ರಗಳ ನಿರ್ಮಾಣದಿಂದ ನಮಗೆ ನೇತ್ರಾನಂದಗೊಳಿಸಿದವರೂ ಅವರೇ. ಈಗ ಹಲವೆಡೆಗಳಲ್ಲಿ ಪ್ರಚಾರಕ್ಕೆ ಬಂದ ವಿದ್ಯುತ್ ರೈಲಿಗೆ ಪ್ರಥಮ ಬಾರಿಗೆ ದಾರಿ ಹಾಕಿದವರು ಅವರೇ. ೮೨ ವರ್ಷ ಪ್ರಾಯವಾದರೂ ಇನ್ನೂ ಎಡೆಬಿಡದೆ ಕೆಲಸಮಾಡುತ್ತಿರುವರು. ತೀರ ಇತ್ತೀಚೆಗೆ— ರಬ್ಬರನ್ನು ಬೆಳಸುವ ಸ್ವಾತಂತ್ರ್ಯವನ್ನು ಕೈಯೊಳಗಿಟ್ಟುಕೊಂಡು ಅದರ ಬೆಲೆಯನ್ನು ತಗ್ಗಿಸಲು ಬಿಡದೆ ಬಹು ಲಾಭ ತಿನ್ನುತ್ತಿರುವ ಕೆಲವರ ಬಾಯಿಗೆ ಮಣ್ಣುಹಾಕಬೇಕೆಂದು ಅಮೇರಿಕದಲ್ಲೆಲ್ಲೂ ಸಮೃದ್ಧಿಯಾಗಿ ಬೆಳೆಯುವ ಒಂದು ತರದ ಹುಲ್ಲಿಂದ ರಬ್ಬರನ್ನು ಅಗ್ಗಕ್ಕೆ ತಯಾರಿಸುವ ವಿಧಾನವನ್ನು ಕಂಡುಕೊಂಡವರೂ ಎಡಿಸನ್ನರೇ.

ಎಡಿಸನ್ನರು ನಮಗಿದನ್ನೆಲ್ಲ ನಿರ್ಮಾಣ ಮಾಡಿಕೊಟ್ಟುದು ಮಾತ್ರವಲ್ಲ. ತನ್ಮೂಲಕ ಎಲ್ಲೆಲ್ಲಿ ವಿದ್ಯುತ್ತಿನ ಉಪಯೋಗವು ಹೆಚ್ಚಿದೆಯೋ ಅಲ್ಲೆಲ್ಲ ಅದ್ಭುತ ಕಾರ್ಖಾನೆಗಳುಂಟಾಗುವಂತೆಯೂ ಮಿಲಿಯಗಟ್ಟಲೆ ಜನರಿಗೆ ಹೊಸ ತರದ ಕೆಲಸಗಳು ಸಿಕ್ಕುವಂತೆಯೂ ಮಾಡಿದರು. ಒಂದು ಚಲಚ್ಚಿತ್ರದ ನಿರ್ಮಾಣದಿಂದ ಮಾತ್ರವೇ ಎಷ್ಟು ಕೆಲಸವಾಗುತ್ತಿದೆಯೆಂದು ಊಹಿಸಿರಿ. ತಮಗೂ ಲೋಕಕ್ಕೂ ಇಂತಹ ಮಹದುಪಕಾರವನ್ನು ಮಾಡಿದವರು ತಮ್ಮವರೇ ಇರುವಾಗ ಅವರನ್ನು ತಕ್ಕ ರೀತಿಯಲ್ಲಿ ಸನ್ಮಾನಿಸಬೇಕೆಂಬ ಕಾಂಕ್ಷೆಯೇ ಈ ಬೆಳಕಿನ ಸ್ವರ್ಣೋತ್ಸವವನ್ನು ಪ್ರೇರೇಪಿಸಿದ ಬೆಳಕು.

ಸ್ಥಳಸಂಕೋಚದಿಂದ ಆ ಉತ್ಸವವನ್ನು ಆಚರಿಸಿದ ವಿವರವನ್ನೆಲ್ಲ ಇಲ್ಲಿ ಕೊಡುವುದಿಲ್ಲ. ಕಳೆದ ಮೇ ೩ನೆಯ ಆರಂಭವಾಗಿ ಅಕ್ಟೋಬರ ೩೧ರ ವರೆಗೂ ವಿಸ್ತರಿಸಿದ್ದ ಈ ದೀಪಾವಳಿಯು ಅದೆಷ್ಟು ದೊಡ್ಡದಾಗಿದ್ದಿರಬೇಕೆಂಬುದನ್ನು ನೀವೇ ಊಹಿಸಿರಿ. ಆದರೆ ಅಮೇರಿಕದವರು ಒಂದು ಕೆಲಸಕ್ಕೆ ಕೈ ಹಾಕಿದರೆಂದರೆ ಅದೆಷ್ಟು ಚೆನ್ನಾಗಿ ನಡೆಯುತ್ತದೆಂಬುದಕ್ಕೆ ದೃಷ್ಟಾಂತವಾಗಿ ಎರಡು ಮೂರು ಮಾದರಿಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ.

ನಯಾಗರಾ ಜೋಗಿನಲ್ಲಿ ಸ್ವರ್ಣೋತ್ಸವವನ್ನು ಆಚರಿಸಿದ ರಾತ್ರಿ ಆ ಜೋಗನ್ನೂ ಪಟ್ಟಣವನ್ನೂ ಒಟ್ಟು ೧,೪೪೦,೦೦೦ ೦೦೦ ಬತ್ತಿ ದೀಪದ ಬೆಳಕಿನಲ್ಲಿ ಮೀಯಿಸಿದರಂತೆ. (ಒಂದು ಬತ್ತಿ ದೀಪದ ಬೆಳಕೆಂದರೆ ಒಂದು ಸಾಮಾನ್ಯ ಮೇಣದ ಬತ್ತಿಯ ದೀಪವು ಕೊಡುವಷ್ಟು ಬೆಳಕು.)

ಸರಕಾರವು ಈ ಸ್ವರ್ಣೋತ್ಸವಕ್ಕೆ ತನ್ನ ಸಹಾನುಭೂತಿಯನ್ನು ತೋರಿಸಲು ಜೂನ್ ೫ಕ್ಕೆ "ಸ್ಟೆಂಪಲ್ಲಾಗಿ" ಹೊರಡಿಸಿದ ಎಡಿಸನ್ನರ ಚಿತ್ರವಿರುವ ೨ ಸೆಂಟ್ಸ್ ಬೆಲೆಯುಳ್ಳ (ಸುಮಾರು ೧ ಆಣೆ) ಪೋಸ್ಟಲು ಚೀಟುಗಳು ನಾಲ್ಕು ತಿಂಗಳುಗಳೊಳಗಾಗಿ ೩೩೦ ಮಿಲಿಯ ಖರ್ಚಾದವು. ಶಾಸ್ತ್ರಜ್ಞರು ಮಾತ್ರವಲ್ಲ, ಸಾಮಾನ್ಯ ಜನರೂ ಕೂಡ ಎಡಿಸನ್ನರಲ್ಲಿ ಎಷ್ಟು ಆದರವನ್ನಿಟ್ಟಿದ್ದರೆಂಬ ಬಗ್ಗೆ ಇದ್ದ ಈ ಅತಿಸ್ಪಷ್ಟ ಸಾಕ್ಷಿಯ ವಿಚಾರವನ್ನು ಸರಕಾರವು ಬಹಳ ಸಂತೋಷದಿಂದ ಎಡಿಸನ್ನರಿಗೆ ತಿಳಿಸಿತು.

ಆದರೆ ಸ್ವರ್ಣೋತ್ಸವದ ಅತ್ಯುತ್ತಮ ಭಾಗವೆಂದರೆ ಅದರ ಕೊನೆ. ಎಡಿಸನ್ನರ ಆಪ್ತಮಿತ್ರರಾದ ಮೋಟಾರ್ ಕಾರು ಕೀರ್ತಿಯ ಹೆನರಿ ಫೋರ್ಡರೇ ಈ ಭಾಗದ ವ್ಯವಸ್ಥೆಯನ್ನು ವಹಿಸಿಕೊಂಡಿದ್ದರೆಂದ ಮೇಲೆ ಅದು ಹೇಗಾಯಿತೆಂದು ಕೇಳಬೇಕೆ.

ಅಕ್ಟೋಬರ ತಾ ೨೧ನೇ ಸೋಮವಾರ ಬೆಳಗ್ಗೆ ಅಮೇರಿಕದ ಅತೀ ಪ್ರಖ್ಯಾತರಾದ ೫೦೦ ಜನರು ಹೆನ್ರಿ ಫೋರ್ಡರ ಅತಿಥಿಗಳಾಗಿ ಎಡಿಸನ್ನರನ್ನು ಸನ್ಮಾನಿಸಲೋಸುಗ ಗ್ರಿನ್‌ಫೀಲ್ಡ್ ಎಂಬಲ್ಲಿಗೆ ಬಂದರು. ಅವರು ಕಳೆದ ೬೦-೭೦ ವರ್ಷದ ಹಿಂದಿನ

[illegible]

ವೈಶ್ವಾನರಾಸವ.

(ಅಜೀರ್ಣ, ಹಾಂಬಿಡಿಗೆ ಚಿಕಿತ್ಸೆ.)

ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅದ್ಭುತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ ಮಂಗಳೂರು ಅವರಿಗೆ ಮಾತ್ರ.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಉಂಟಿಹಾಸಲುಆಗಲಿ

ವೈದ್ಯವಿದ್ಯ

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನ ಬಜಾರು, ಮದ್ರಾಸು.

ಉಚಿತ! ಉಚಿತ!!

4 ಆಣೆ ಟಪ್ಪಾಲು ಸ್ಟಾಂಪು

ಕಳುಹಿಸಿದರೆ 372 ಪುಟಗಳುಳ್ಳ ಬಹಳ ಉಪಯೋಗವಾದ ಮತ್ತು ಸುಂದರವಾದ

1930ನೇ ಇಸವಿಯ ಡೈರಿ

ಮುಫತ್ತಾಗಿ ಕಳುಹಿಸಲ್ಪಡುವುದು. ತ್ವರೆಮಾಡಿರಿ!!

52—14 ಮದನ ಮಂಜರಿ ಫಾರ್ಮೆಸಿ,
1/94 ಜೈನ ಬಜಾರ್ ಮದರಾಸು.

ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ಮಿರಜಕರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಅಮೃತಸಿಂಧು ಡಿಪೋ,
3c Division, [illegible]

ಆರ್ಕ್‌ಶಫಾ ಅಥವಾ ಆರೋಗ್ಯಬಿಂದು.

ರೋಗದ ಹೆಸರುಗಳು:—

ಕ್ರಯ ರೂ. 4. ಟಪ್ಪಾಲು ಖರ್ಚು 10 ಆಣೆ, ಒಟ್ಟು ರೂ. 4-10-0.

ಸವ್ಯ ವಿಳಾಸ:— ಎಚ್. ಎಮ್. ಮುಲ್ಲಾ,
ಪೋಸ್ಟ್ ಶಾಪೂರ (ಬೆಳಗಾವ)

Grand Clearing Sale!

ಕ್ರಯ ರೂ. 4. ಟಪ್ಪಾಲು ಖರ್ಚು 10 ಆಣೆ, ಒಟ್ಟು ರೂ. 4-10-0. ಇಂಗ್ಲೀಷಿನಲ್ಲಿಯೇ ಬರೆಯಿರಿ

ಪೋಲ್ ಎಂಡ್ ಕೊ,
ಶಾಮಬಜಾರ್ ಸ್ಟ್ರೀಟ್,
ಪಿ. ಒ. ಬಾಗ್ ಬಜಾರ್, ಕಲಕತ್ತಾ.

PAUL & CO,
Sham Bazaar Street,
P. O. Bag Bazaar, Calcutta.

ಕ್ರಿಸ್ತಮಸ್ ಆಚರಣೆಗಳ ಮೂಲ.

ಕ್ರೈಸ್ತಮತಕ್ಕೆ ಸಮ್ಬಂಧವಿಲ್ಲದ ಕೆಲವು ಆಚರಣೆಗಳು.

[illegible] ಆಚರಿಸುವ ಕ್ರಿಸ್ತಮಸ್‌ನಲ್ಲಿ ಕ್ರೈಸ್ತ ಮತವು ಉಂಟಾ [illegible] ಮೊದಲೇ ಆಚರಣೆಯಲ್ಲಿದ್ದ ಪದ್ಧತಿಗಳು ಅಡಕವಾಗಿವೆ. ರೋಮನರು ಸಟರ್ನೇಲಿಯ ಎಂಬ ಹಬ್ಬವನ್ನು ಇದೇ ಸಮಯ ಆಚರಿಸುತ್ತಿದ್ದರು. ನಾರ್ಸ ದೇಶದವರು ಯೂಲ ಎಂಬ ಹಬ್ಬವನ್ನು ಆಚರಿಸುತ್ತಿದ್ದರು. ಪರ್ಸಿಯಾ ದೇಶದವರು ತಮ್ಮ ಸೂರ್ಯದೇವರಾದ ಮಿತ್ರನ ಮಗ ವಿಜಯಾರ್ಕನ ಜನ್ಮದಿನವೆಂದು ಆಚರಿಸುತ್ತಿದ್ದರು. ರೋಮನ್ ಮತ್ತು ಪರ್ಸಿಯನ್ ಪದ್ಧತಿಗಳು ಈಗ ಮರೆತು ಹೋಗಿವೆ. ಆದರೆ ನಾರ್ವೆ ಜನರ ಯುಲ್‌ಟೈಡ ಆಚರಣೆಯಲ್ಲಿದ್ದ ಹಸುರು ಎಂಬುದು ಮಾತ್ರ ಈಗಿನ ಕ್ರಿಸ್ತಮಸ್ ಆಚರಣೆಯಲ್ಲಿ ಸೇರಿದೆ. ಯೇಸುಕ್ರಿಸ್ತನು ಹುಟ್ಟಿದ ದಿನವಾಗಲೀ ತಿಂಗಳಾಗಲಿ ಸರಿಯಾಗಿ ತಿಳಿದಿಲ್ಲವಾದುದರಿಂದ ಅದನ್ನು ನಿರ್ಣಯಿಸುವ ಅಗತ್ಯವು ೪ನೇ ಶತಮಾನದಲ್ಲಿ ಉಂಟಾಯಿತು; ಆಗ ಇನ್ನು ಮುಂದೆ ಪ್ರತಿ ವರುಷದ ದಶಂಬರ ತಿಂಗಳ ೨೫ನೇ ದಿನವನ್ನು ಜನ್ಮದಿನವಾಗಿ ಆಚರಿಸಬೇಕೆಂದೂ ನಿರ್ಣಯಿಸಲಾಯಿತು. ಈ ದಿವಸವನ್ನು ನಿರ್ಣಯಿಸುವಾಗ ಅದೇ ದಿವಸದಲ್ಲಿ ಆಚರಣೆಯಲ್ಲಿದ್ದ ಹಲವು ಜನಾಂಗಗಳ ಹಲವು ಹಬ್ಬಗಳನ್ನು ಈ ಕ್ರಿಸ್ತಮಸ್ ದಿನದೊಂದಿಗೆ ಕೂಡಿಸಬೇಕಾಯಿತು. ಕ್ರೈಸ್ತಮತವಲ್ಲದ ಹಲವು ಮತಗಳು ಯುರೋಪ ಖಂಡದಲ್ಲಿ ಬಿದ್ದುಹೋಗಿ ಕ್ರೈಸ್ತಮತವು ಪ್ರಬಲಕ್ಕೆ ಬಂದರೂ ಅವರಲ್ಲಿ ಆಚರಣೆಯಲ್ಲಿದ್ದ ಹಲವು ಪದ್ಧತಿಗಳು ಮಾತ್ರ ಕ್ರಿಸ್ತಮಸ್ ಆಚರಣೆಯಲ್ಲಿ ಸೇರಿಹೋದವು.

ಕ್ರೈಸ್ತಮತಾಚರಣೆಗೆ ವಿರೋಧವಾದ ಪದ್ಧತಿಗಳನ್ನು ಆಚರಿಸಲು ಸಂತೋಷವಿಲ್ಲದೆ ಇಂಗ್ಲೆಂಡಿನ ಕೆಂಟರ್‌ಬರಿಯ ಆರ್ಚ ಬಿಶೋಪರು ಪೋಪರೊಡನೆ ಇದರ ವಿಷಯ ವಿಚಾರಿಸಿದರು. ಆ ಸಮಯದಲ್ಲಿ ಪೋಪರಾಗಿದ್ದ ಪೋಪ್‌ಗ್ರೇಗರಿಯವರು ಹಳೆ ಪದ್ಧತಿಗಳನ್ನು ಬಿಟ್ಟು ಜನರ ಮನಸ್ಸನ್ನು ನೋಯಿಸುವುದು ಬೇಡವೆಂದು ಬರೆದರು. ಅನಂತರ ಈ ಆಚರಣೆಗಳು ತಡೆಯಿಲ್ಲದೆ ನಡೆದವು. ಕ್ರಿಸ್ತಮಸ್ ಸಮಯ ಮಿಸಲ್‌ಟೋ, ಹೋಲ್ಲಿ ಮತ್ತು ಹಸುರು ಬಳ್ಳಿಗಳನ್ನು ಉಪಯೋಗಿಸುವ ಪದ್ಧತಿಗಳು ಕ್ರೈಸ್ತಮತಕ್ಕಿಂತ ಬಹಳ ಪುರಾತನ ಕಾಲದಿಂದ ಇದ್ದವುಗಳು.

ನಾರ್ವೆ ಮತ್ತು ಉತ್ತರ ಭಾಗದ ಜನರು ದಶಂಬರ ತಾ. ೨೫ರಲ್ಲಿ ಆಚರಿಸುತ್ತಿದ್ದ ಯುಲ್‌ಟೈಡ್ ಎಂಬ ಹಬ್ಬದ ದಿವಸ ಮಿಸಲ್‌ಟೋ ಎಂಬ ಗಿಡದ ಒಂದು ಕೊಂಬೆಯನ್ನು ತಂದು ಬಾಗಿಲಿನ ಮುಂದುಗಡೆಯಲ್ಲಿ ತೂಗಾಡಿಸುತ್ತಿದ್ದರು. ಮನೆಯ ಹತ್ತಿರದಿಂದ ದಾಟಿ ಹೋಗುವವರು ಮನೆಯವರ ಮೇಲಿರುವ ಪ್ರೀತಿಯನ್ನು ತೋರಿಸುವುದಕ್ಕಾಗಿ ಆ ಕೊಂಬೆಗೆ ಚುಂಬನ (Kiss) ಕೊಡುತ್ತಿದ್ದರು. ಈ ಪದ್ಧತಿಯು ಇಂಗ್ಲೆಂಡಿನಲ್ಲಿ ಬೇರೂರಿತು. ಈ ಕೊಂಬೆಯನ್ನು ಇಂಗ್ಲೀಷರ ಪುರೋಹಿತರಾದ ಡ್ರುಯಿಡರೇ ಕಡಿದು ನೆಲಕ್ಕೆ ತಾಗದಂತೆ ತಂದು ತೂಗಾಡಿಸಬೇಕಿತ್ತು.

ಹೋಲ್ಲಿ ಎಂಬುದು ಇಂಗ್ಲೆಂಡಿನಲ್ಲಿಯೂ, ಜರ್ಮನಿಯಲ್ಲಿಯೂ ಕ್ರಿಸ್ತಮಸ್ ಸಮಯ ಮನೆಗಳನ್ನು ಅಲಂಕರಿಸಲಿಕ್ಕೆ ಉಪಯೋಗಿಸುತ್ತಿದ್ದ ಗಿಡವಾಗಿದೆ. ಇದೂ ಕ್ರೈಸ್ತ ಪದ್ಧತಿಯಲ್ಲಿ ಇದನ್ನು ತೂಗಾಡಿಸಿದರೆ ಮಂತ್ರವಾದಿಗಳ ಮಾಟ ಮುಂತಾದ್ದು ತಾಗುವುದಿಲ್ಲವಂತೆ. ಮಾತ್ರವಲ್ಲ ಮುಂದಿನ ವರುಷ ಆ ಮನೆಯವರಿಗೆ ಶುಭವುಂಟಾಗುವದೆಂಬ ಸೂಚನೆಯಂತೆ. ಕ್ರೈಸ್ತ ಮತಕ್ಕೆ ಈ ಜನರು ಸೇರಿದೊಡನೆ ಇದನ್ನು ತೂಗಾಡಿಸಲು ಒಪ್ಪಲಿಲ್ಲ. ನಂತರ ಹಳೆ ಪದ್ಧತಿಯನ್ನು ಆಚರಿಸಲಾರಂಭಿಸಿದರು.

ಕ್ರಿಸ್ತಮಸ್—ಮರ ತಯಾರಿಸುವ ಆಚರಣೆಯು ಜರ್ಮನಿಯವರಿಂದ ಬಂದುದಾಗಿದೆ. ಈ ಪದ್ಧತಿಯನ್ನು ಜರ್ಮನಿಯಲ್ಲಿ ಮೊದಲು ಕೆರೋಲಿನ್ ರಾಣಿಯ ಅರಮನೆಯವರು ಆಚರಿಸಿದರು. ವಿಕ್ಟೋರಿಯ ಚಕ್ರವರ್ತಿನಿಯವರ ಕಾಲದಲ್ಲಿ ಈ ಪದ್ಧತಿಯು ಇಂಗ್ಲೆಂಡಿನಲ್ಲಿ ಆಚರಣೆಗೆ ಬಂತು.

ಕ್ರಿಸ್ತಮಸ್ ಭಾವನೆಗಳು—ಈ ಪದ್ಧತಿಯು ಇಟಲಿ ದೇಶದಿಂದ ಬಂದುದು. ಯುರೋಪ ಖಂಡದ ಉತ್ತರ ಭಾಗದಲ್ಲಿ ಇದೇ ಸಮಯ ಆಚರಿಸುತ್ತಿದ್ದ ಯೂಲಟೈಡ್ ಹಬ್ಬದ ದಿವಸ ಹಾಡುತ್ತಿದ್ದ ಹಾಸ್ಯ, ಕ ಡಿಕತನ, ಕುಣಿದಾಟದ ಹಾಡುಗಳೇ ಆಚರಣೆಯಲ್ಲಿದ್ದವು.

ಸೆಂಟಾಕ್ಲೋಸ್ ಹಾಸ್ಯಗಾರ—ಸೆಂಟಾಕ್ಲೋಸ್ ಎಂಬ ಮುದುಕ ಹಾಸ್ಯಗಾರನ ವೇಶವನ್ನು ಹಾಕಿ ಹಲವು ತರದ ಮಕ್ಕಳ ಆಟಗಳ ಸಾಹಿತ್ಯಗಳನ್ನು ಮನೆಮನೆಗೆ ಕೊಂಡುಬರುವ ಪದ್ಧತಿಯು ಇಂಗ್ಲೆಂಡಿನಲ್ಲಿ ೧೯ನೇ ಶತಮಾನದಲ್ಲಿ ಜಾರಿಗೆ ಬಂತು. ಈ ಪದ್ಧತಿಯು ಹೋಲೆಂಡಿನವರದು. ಈ ಪದ್ಧತಿಯು ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ಆಚರಣೆಗೆ ಬಂದು ನಂತರ ಇಂಗ್ಲೆಂಡಿನಲ್ಲಿ ಜಾರಿಗೆ ಬಂತು. ಮನೆಮನೆಗೆ ಹೋಗಿಯ ಚಿಮಿಣಿ (ನಳಿಗೆ) ಯಲ್ಲಿ ಒಂದು ಹಳೆ ಸ್ಟಾಕಿಂಗನ್ನು ತೂಗಾಡಿಸುವ ಪದ್ಧತಿಯೂ ಅದೇ ಸಮಯದಲ್ಲಿ ಆಚರಣೆಗೆ ಬಂತು.

ಕ್ರಿಸ್ತಮಸ್ ಕಾರ್ಡುಗಳು ಕ್ರಿಸ್ತಮಸ್ ಕಾರ್ಡುಗಳನ್ನು ಕಳುಹಿಸುವ ಪದ್ಧತಿ ವಿಶೇಷವಾದುದು. ಈ ಪದ್ಧತಿಯನ್ನು ಜೋನ್ ಕೆಲ್‌ಕೋಟ್ ಹೋರ್ಸಲೇ ಆರ್. ಎ. ಎಂಬ ಚಿತ್ರಕಾರರು ಸರ್ ಹೆನ್ರಿ ಕೋಲ್ ಎಂಬವರಿಗೆ ೧೮೪೬ನೇ ಇಸವಿಯಲ್ಲಿ ಕೊಟ್ಟರು. [illegible] ನಂತರ ಇದೇ ಚಿತ್ರಕಾರರು ಬೇರೆ ಬೇರೆ ತರದ ಕಾರ್ಡುಗಳನ್ನು ತಯಾರಿಸಿ ಮಾರಾಟಕ್ಕೆ ಇಟ್ಟರು.

ಕ್ರಿಸ್ತಮಸ್ ಎಂಬ ಹೆಸರು ಹೇಗೆ ಬಂತೆಂದು ಕೇಳಬಹುದು. ಇದರ ಅರ್ಥವು ಯಾರಿಗೂ ತಿಳಿಯದು. ಮೈಕಲ್ ಮಾಸ್, ಮಾರ್ಟಿನ್ ಮಾಸ್ ಎಂಬ ಶಬ್ದದಂತೆ ಇದರ ಅರ್ಥವು ತಿಳಿಯುವುದಿಲ್ಲ. ಮಾಸ್ ಎಂಬುದರ ಅರ್ಥವೇ ತಿಳಿಯುವುದಿಲ್ಲ. ಸಾಧಾರಣವಾಗಿ ಕ್ರಿಸ್ತನ ದಿವಸವೆನ್ನುವರು. ಅರ್ಥವು ತಿಳಿಯದೆ ತಿಳಿಯುವುದಕ್ಕೆ ಕ್ರಿಸ್ತಮಸ್ ಅಂದರೆ ಕ್ರಿಸ್ತಮಸ್

ಪುರಾತನ ಉಗಿಬಂಡಿಯೊಂದು ಆ ಕಾಲದ ಕ್ರಮದಂತೆ ಕಲ್ಲಿದ್ದಲಿನ ಬದಲಾಗಿ ಕಟ್ಟಿಗೆ ಉರಿಸುತ್ತ ನಿಧಾನವಾಗಿ ಸ್ಮಿತ್‌ಕ್ರೀಕ್ ಸ್ಟೇಶನಿಗೆ ಬಂದು ನಿಂತಿತು. ಎಡಿಸನ್ನರು ಇನ್ನೂ ತೀರ ಚಿಕ್ಕವರಾಗಿದ್ದಾಗ ಆ ರೈಲಿನಲ್ಲೇ ವರ್ತಮಾನ ಪತ್ರಿಕೆಗಳನ್ನು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು. ಆದರೆ ರೈಲು ಚಲಿಸುತ್ತಿದ್ದಾಗ ತನ್ನ ಸಮಯವನ್ನು ಅದಷ್ಟು ಉತ್ತಮ ರೀತಿಯಲ್ಲಿ ವಿನಿಯೋಗಿಸಲಿರದು ರೈಲಿನ ಕತ್ತಲೆಯ ಮೂಲೆಯೊಂದರಲ್ಲಿ ಕೆಲವು ರಾಸಾಯನಿಕ ವಸ್ತುಗಳನ್ನಿಡಲು ಅನುಮತಿ ಬೇಡಿಕೊಂಡಿದ್ದರು. ರೈಲು ಚಲಿಸುವಾಗ ಅಲ್ಲಿಲ್ಲಿ ಸಿಕ್ಕಿದ ಸ್ವಲ್ಪ ವಿರಾಮ ಕಾಲವನ್ನು ರಾಸಾಯನಿಕ ಪ್ರಯೋಗಗಳಲ್ಲಿ ಕಳೆಯುತ್ತಿದ್ದರು. ಒಮ್ಮೆ ಫಕ್ಕನೆ ರೈಲು ಅಲ್ಲಾಡಿ ಅವರ ಕೈಯಲ್ಲಿದ್ದ ರಂಜಕದ ಸೀಸೆಯು ಕೆಳಗೆ ಬಿದ್ದು ಬಂಡಿಗೆ ಬೆಂಕಿ ಹೊತ್ತಿಸಿತು. ರೈಲಾಧಿಕಾರಿಗೆ ಅದೆಷ್ಟು ಸಿಟ್ಟು ಬಂದಿರಬೇಕೆಂದು ಕೇಳಬೇಕೆ? ಎಡಿಸನ್ನರ ಎರಡು ಕಿವಿಗಳನ್ನು ಹಿಡಿದು ಅವರನ್ನೆತ್ತಿ ರೈಲಿನಿಂದ ಕೆಳಗೆ ನೂಕಿ ಅವರ ಬಾಟಲಿಗಳನ್ನೆಲ್ಲಾ ಒಗೆದು ಹಾರಿಸಿಬಿಟ್ಟಿದ್ದನು. (ಕಿವಿ ಹಿಡಿದ ಧಕ್ಕೆ ಎಡಿಸನ್ನರಿಗೆ ಇಂದಿನ ವರೆಗೆ ಕಿವಿ ಕಷ್ಟವೇ ಆಗಿರುತ್ತದೆ.) ಅದರ ಸ್ಮಾರಕಕ್ಕಾಗಿಯೇ ಅತಿಥಿಗಳು ಸ್ಮಿತ್‌ಕ್ರೀಕ್‌ನಲ್ಲಿ ಇಳಿದರು! ಅಲ್ಲಿಂದ ಗ್ರೀನ್‌ಫೀಲ್ಡಿಗೆ ನಡೆದರು. ಎಡಿಸನ್ನರು ಕಾದ ತಂತಿಯ ವಿದ್ಯುತ್ ದೀಪದ ನಿರ್ಮಾಣಕ್ಕಾಗಿ ಹಲವು ಸಹಸ್ರ ಯತ್ನಗಳನ್ನು ಮಾಡಿದ ಊರೇ ಅಲ್ಲಿತ್ತು. ಮೆನ್ಲೋಪಾರ್ಕಿನ ಅವರ ಪ್ರಯೋಗ ಶಾಲೆ—ಆಫೀಸು, ಪುಸ್ತಕ ಭಾಂಡಾಗಾರ, ಬಡಗಿಯ ಶಾಲೆ, ಯಂತ್ರ ಶಾಲೆ, ಎಲ್ಲವೂ ಗ್ರೀನ್‌ಫೀಲ್ಡಿನಲ್ಲಿ ಮೊದಲಿದ್ದಂತೆಯೇ ಅಲ್ಲಿದ್ದವು. ಹೊರಗೆ ಹೋದರೆ ಆ ಪುರಾತನ ಕಾಲದ ಹಳ್ಳಿ: ಹಳ್ಳಿ ಹೋಟೆಲು, ಚಿಕ್ಕ ಇಗರ್ಜಿ, ಹಳೆ ಟಪ್ಪಾಲು ಕಟ್ಟೆ, ಅಂಗಡಿ, ಸಮಗಾರನ ಕೋಣೆ, ಕಂಬಳಿ ಕಾರ್ಖಾನೆ, ಕುದುರೆಯ ಲಾಳ ಬಡಿಯುವ ಕಮ್ಮಾರ ಶಾಲೆ ಮುಂಚಿನಂತೆಯೇ ಇದ್ದವು. ಊರಲ್ಲಿ ಆ ಸ್ಕೂಲ್ [illegible]

(೭ನೇ ಪುಟದಿಂದ ಮುಂದುವರಿದಿದ್ದು.)

ಎಲ್ಲವೂ ಮುಂಚಿನಂತೆಯೇ ಇದ್ದವು. [illegible] ನನ್ನದು ಆಗ ಇದ್ದ ಹಳ್ಳಿಯೇ ಇದೆಂದು ನೀವು ಭಾವಿಸಿಯಾರು. ಅದು ಮಾತ್ರ ತಪ್ಪು. ಹಾಗಿದ್ದರೆ ಹೇಗೆ [illegible] ಕ್ಯಾದೆಲ್ಲ? ಅವುಗಳೆಲ್ಲ ಮುಂಚಿನ್ನ [illegible] ಇದ್ದ ಸ್ಥಳವೇ ಬೇರೆ. ತಮ್ಮ ಮಿತ್ರರ ಸ್ಮರಣೆಯ [illegible] ದವರಲ್ಲಿ [illegible] ಅವುಗಳನ್ನೆಲ್ಲ ಎಲ್ಲೆಲ್ಲಿದ್ದ ಕ್ರಮದಲ್ಲಿ, ಹಣಕೊಟ್ಟು [illegible] ತಮಗೆ ಬೇಕಾದ [illegible]

[illegible] ಬೆಳೆಯುವಂತೆ [illegible] ಮಾತ್ರ [illegible] ಅವರ ಹೆಸರಲ್ಲಿ [illegible] ಇನ್ನು [illegible] ನೆಲಸಿತ್ತು [illegible] ಎಡಿಸನ್ [illegible] ಹೋಗ್ [illegible] ಎಂಬ [illegible] ತಮ್ಮ [illegible] ಪ್ರಾರಂಭಿಸುವಂತೆ ಮಾಡಿದರು [illegible]

[illegible]

ಅಲೆಂಬಿಕ ದ್ರಾಕ್ಷಾಸವ

[illegible] ದ್ರಾಕ್ಷಾಸವ [illegible] ಗುಣಕಾರಿಯಾಗಿದೆ.

	೧½ ರಾತಲಿನ ಬಾಟ್ಲಿ ೧ಕ್ಕೆ ರೂ.	೧—೧೨—೦.
ಕ್ರಯ:—	೧ ,, ,, ,, ,,	೧— ೪—೦.
	ಅರ್ಧ ,, ,, ,, ,,	೦—೧೨—೦.

ಈ ಔಷಧವು ಎಲ್ಲಾ ಕಡೆಗಳಲ್ಲೂ ದೊರೆಯುತ್ತದೆ. 'ಅಲೆಂಬಿಕ' ಎಂತಿರುವ ಹೆಸರನ್ನು ನೋಡಿ ತೆಗೆದುಕೊಳ್ಳಬೇಕು.

Alambic Chemical Works Co., Ltd., ಅಲೆಂಬಿಕ ಕೆಮಿಕಲ್ ವರ್ಕ್ಸ ಕೊ., ಲಿಮಿಟೆಡ್.
Princess Street, BOMBAY. ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಾಗಲಿ ಮರಾಠಿಯಲ್ಲಾಗಲಿ ಮಾಡಬೇಕು.

ಇಕೋ! ನೋಡಿರಿ!

ಇತ್ತ ಲಕ್ಷ್ಯಕೊಡಿರಿ!

ವಿಜಾಪುರ ಮತ್ತು ಮೈಸೂರು ಪ್ರದರ್ಶನದಲ್ಲಿ ಗೋಲ್ಡ ಮೆಡಲು ಮತ್ತು ಸರ್ಟಿಫಿಕೇಟ ದೊರಕಿಸಿದಂಥ

ರಿಜಿಸ್ಟರ್ಡ **ಪ್ಯಾರಾ ಹೇಯರ್ ಆಯಿಲ್** ರಿಜಿಸ್ಟರ್ಡ

ಶುದ್ಧ ಅಲ್ಹಾದದಾಯಕ.

ಪರಿಮಳಯುಕ್ತ, ಕೇಶರಂಜಕ ಮತ್ತು ಕೇಶವರ್ಧಕವಾದ ಈ ತೈಲವನ್ನು ವನಸ್ಪತಿ ಮತ್ತು ಕುಸುಮಗಳಿಂದ ನಾವು ತಯಾರಿಸಿದ್ದೇವೆ. ಬಿಳೀ ಎಣ್ಣೆ, ಮೇಣ, ಸ್ಪಿರಿಟ್ ಅಥವಾ ರಸಾಯನ ದ್ರವ್ಯ ಇವುಗಳ ಕಿಂಚಿತ್ತಾದರೂ ಅಂಶವು ಇದರಲ್ಲಿ ಮಿಶ್ರವಾಗಿಲ್ಲವೆಂದು ನಾವು ಗ್ಯಾರಂಟಿಯನ್ನು ಕೊಡುತ್ತೇವೆ. ಈ ತೈಲದ ಉಪಯೋಗದಿಂದ ಮಿದುಳು ಉತ್ಸಾಹಕವಾಗಿ ಕೂದಲು ಥರವಾಗಿ ಬೆಳೆಯಹತ್ತುತ್ತವೆ. ಸುಗಂಧವನ್ನು ಸೂಸುವ ಈ ತೈಲಾಭ್ಯಂಜನದಿಂದ ಮನವು ಪ್ರಸನ್ನವಾಗುತ್ತದೆ. ಅಕ್ಷವು ಶಾಂತವಾಗುತ್ತದೆ. ಮತ್ತು ಇದರಲ್ಲಿಯ ವನಸ್ಪತಿ ಗುಣಗಳಿಂದ ಕೇಶಕಲಾಪವು ಕಪ್ಪಾಗಿ ಮಿರಿಮಿರಿ ಮಿಂಚಹತ್ತುತ್ತವೆ. ಬಹಳ ಹೇಳುವದೇಕೆ? ತನ್ನ ಉತ್ಕೃಷ್ಟ ಗುಣಗಳಿಂದ ಈ ತೈಲವು ಜನರ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸದಿರಲಾರದೆಂದು ನಮ್ಮ ದೃಢವಾದ ನಂಬಿಗೆ ಇದೆ.

ಅಪರಿಚಿತ [illegible] ತೈಲಗಳ ವಿಷಯವಾಗಿ [illegible] ಹೋಗಬೇಡಿರಿ!

ಶ್ರೀಮಂತರಿಗೂ ಮತ್ತು ಬಡವರಿಗೂ ಉಪಯೋಗಿಸಲಿಕ್ಕೆ ಬರಬೇಕೆಂಬ ಉದ್ದೇಶದಿಂದ ಇದರ ಬೆಲೆಯನ್ನು ತೀರ ಕಡಿಮೆ ಮಾಡಿದೆ. ಆದಕಾರಣ ಎಲ್ಲರೂ ಇದರ ಲಾಭವನ್ನು ಹೊಂದಬಹುದು.

ನಮೂನೆ ಬಾಟಲಿಗಾಗಿ ಒಂದು ಆಣೆ ತಿಕೀಟನ್ನು ಕಳುಹಿಸಿ. ಒಂದೇ ಸಲ ನೋಡಿರಿ! ಮುಂದೆ ಎಂದಿಗೂ ಬಿಡಲಾರಿರಿ!

ಸಿಗುವ ಸ್ಥಳ—

ಪ್ರೊಪ್ರಾಯಿಟರ,
ಬಿ. ಎಸ್. ಸುಗಂಧಿ,
ಸುಗಂಧಿಮನೆ, ವಿಜಾಪುರ (ಕರ್ನಾಟಕ).

[illegible]

ಕೆ. ಎಸ್. ಕುಡ್ವ,
ದಕ್ಷಿಣ ಕನ್ನಡ ಜಿಲ್ಲಾ ಏಜಂಟ್,
ಮೂಡಬಿದ್ರೆ.

ದಿ ಜನರಲ್ ಹೆಲ್ಪಿಂಗ್ ಕಂಪೆನಿ,
ಲಿಮಿಟೆಡ್, ಅಮೃತಸಾರ.

ತಿಂಗಳೊಂದರ ರೂಪಾಯಿ 0—8—0, 1—0—0, 1—8—0ರಂತೆ 12 ವರ್ಷಗಳ ವರೆಗೆ ಮಾತ್ರ ಪ್ರೀಮಿಯಮ್ ಕಟ್ಟುವ ಪೋಲಿಸಿಗಳ ಆಧಾರದಿಂದ ಜೀವ ವಿಮಾ ಪೋಲಿಸಿದಾರರಿಗೆ ತಾವು ಕಟ್ಟಿದ ಪ್ರೀಮಿಯಮ್‌ಗಳ ಐವತ್ತು ಇಪ್ಪತ್ತರಷ್ಟು ಮದುವೆ ಫಂಡಿನ ವಿಮಾ ಪೋಲಿಸಿದಾರರಿಗೆ ಹದಿನಾರರಷ್ಟು ಹಣದಂತೆ ಧನ ಸಹಾಯ ಒದಗಿಸಿಕೊಡಲಾಗುವುದು. ಅತೀ ಕಡಿಮೆ ಹಣ ಕಟ್ಟಿ ಅತೀ ಹೆಚ್ಚು ಲಾಭ ಪಡೆಯಬಹುದಾದ ಈ ಸುಸಾಧನವನ್ನು ತ್ವರೆಯಾಗಿ ಸ್ವೀಕರಿಸಿ ಧನ್ಯರಾಗಿರಿ!

ಉದಾರ ಶರ್ತಗಳ ಮೇಲೆ ಸಬ್ ಏಜಂಟರು ಬೇಕಾಗಿದ್ದಾರೆ.

ಕೆ. ಎಸ್. ಕುಡ್ವ,
ದಕ್ಷಿಣ ಕನ್ನಡ ಜಿಲ್ಲಾ ಏಜಂಟ್,
ಮೂಡಬಿದ್ರೆ.

WANTED:—Candidates for Telegraph and Station Master's Classes. Full particulars and Railway Fare Certificate on 2 annas stamp.

Apply to:

Imperial Telegraph College,
Nai Sarak, Delhi.

NOTICE.

Sealed tenders in duplicate for the supply of articles of Diet and other Hospital necessaries for one year from 1st April 1930 for the Government Hospital Puttur, S. K., will be received by the undersigned up to 10 A. M. on 6th January 1930.

Full particulars may be obtained from the Hospital during hospital hours.

P. V. S Nayar.
Civil Assistant Surgeon,
Government Hospital,
Puttur.

14th Dec. 1929

3—8

Wanted a Master Tailor.

Required an Anglo Indian or Catholic or Protestant tailor with upto date knowlegde. Bombay returned preferred. Very good prospects. Apply with details:—

Kumble Raghavendra Rao.
Merchant, Udipi.

3—4

ವಿದೇಶ ವರ್ತಮಾನಗಳು.

— ಗೊತ್ತೊಲ್ಲು ಎಂಬಲ್ಲಿ ಭೂಮಿಯನ್ನು ಅಗೆಯುವಾಗ ಹಲವು [illegible] ಶಿಲ್ಪಗಳು ದೊರೆತಿರುವುವು. ಈ ಶಿಲ್ಪಗಳು ಬಹು ಪುರಾತನ ಕಾಲದವುಗಳೆಂದು ಕಂಡುಹಿಡಿಯಲ್ಪಟ್ಟಿದೆ. [illegible] ಎಷ್ಟೋ ದೊಡ್ಡವರಾದ ದೊಡ್ಡ ಸಾಕಾರದ ಮಾನವರ ಅಸ್ಥಿಪಂಜರಗಳು ಶಿಲ್ಪಗಳಲ್ಲಿ ದೊರೆಯುವುವು. ಶ್ರೀ ಅಸ್ಥಿಪಂಜರದ ತಲೆಯು ಬಹಳ ದೊಡ್ಡದಾಗಿದ್ದು ಅವುಗಳಲ್ಲಿ ದವಡೆಯ ಕೋರೆ ಹಲ್ಲುಗಳಿದ್ದುವಂತೆ.

— ವಿಟ್‌ಲೀನ ಒಬ್ಬ ೫೦ ವರುಷ ಪ್ರಾಯದ ಸ್ತ್ರೀ [illegible] ಎಂಬ ಹೆಂಗಸು ಇದು ನಾಲ್ಕನೇ ಮದುವೆಯನ್ನು ಮಾಡಿಕೊಂಡಿರುವಳು. ಆಕೆಯನ್ನು ಮದುವೆಯಾದ ವರನು ಎಪ್ಪತ್ತು ಏಳು ವರುಷ ಪ್ರಾಯದವನು. ಆತನು ಕೆಲಸದಿಂದ ನಿವೃತ್ತನಾದ ಪೈಲಟ್ ಗಾರ್ಡನು.

— ಯುರೋಪವನ್ನೂ ಆಫ್ರಿಕಾವನ್ನೂ ಒಟ್ಟುಗೂಡಿಸಲು ಜಿಬ್ರಾಲ್ಟರ್ ಸಮುದ್ರದಡಿಯಲ್ಲಿ ಇದೇ ಜನವರಿಯಿಂದ ಒಂದು ಸುರಂಗವು ತೋಡಲ್ಪಡುತ್ತಿದೆಯಂತೆ. ಜನರಲ್ ಜಿವೆಸ್ಕಿ ಎಂಬಾತನು ಹಲವು ಇಂಜಿನಿಯರರನ್ನು ಕೂಡಿಕೊಂಡು ಮಾಡ್ರಿಡಿನಿಂದ ತರೀಫಾ ಎಂಬಲ್ಲಿಗೆ ಬಂದು ತಲಪಿರುವನು. ಮೊರೊಕ್ಕೋವಿನ ಅಲ್ಕಾಜರ್ ಸೆಗುವೀರ್ ಎಂಬಲ್ಲಿಂದ ಸುರಂಗತೋಡಲು ಆರಂಭವಾಗುವುದು.

— ಅಗಾಖಾನರವರ ಮದುವೆಯು ಬರೀ ಆರು ನಿಮಿಷಗಳೊಳಗೆ ನಡೆದುಹೋಯಿತಂತೆ. ಹಿಂದೀಯರ ಆರೇಳು ದಿನಗಳ ಮದುವೆಗೂ ಈ ಮದುವೆಗೂ ಅಜಗಜಾಂತರ.

— ಕಮಾಂಡರ್ ಬಾಯರ್ಡ್ ಎಂಬಾತನು ವಿಮಾನದಲ್ಲಿ ಕುಳಿತು ದಕ್ಷಿಣ ಧ್ರುವದ ಸಮೀಪದ ವರೆಗೆ ಹಾರಿ ಹಿಂತಿರುಗಿರುವನು. ಇದು ವರೆಗೆ ಇಷ್ಟು ದೂರದ ವರೆಗೆ ಯಾರೂ ಹಾರಿದುದಿಲ್ಲವಂತೆ.

— ಕಳೆದವಾರ ಹಿಂದೂಸ್ಥಾನದಿಂದ ಹೊರಟ ಟಪ್ಪಾಲು ವಿಮಾನವು ಕಳೆದ ಗುರುವಾರ ಲಂಡನಿಗೆ ತಲಪಿತು. ಈ ವಿಮಾನದಲ್ಲಿ ಒಂದು ಸಾವಿರ ರಾತಲು ಭಾರದ ಟಪ್ಪಾಲಿದ್ದಿತು. ಕ್ರಿಸ್ಮಸಿಗೆ ಅನುಕೂಲವಾಗಿ ಲಂಡನಿಗೆ ತಲಪಬೇಕೆಂದು ವಿಮಾನದ ಚಾಲಕನೂ ಪ್ರಯಾಣಿಕರೂ ಎಷ್ಟು ಪ್ರಯತ್ನಿಸಿದಾಗ್ಯೂ, ಪರ್ಶಿಯದಲ್ಲಿ ಬಿರುಗಾಳಿಯು ತಡೆಗಟ್ಟಿದುದರಿಂದ ಅವರಿಗೆ ವಿಳಂಬವುಂಟಾಯಿತು.

ಪೆಲೆಸ್ತೀನದ ಗಲಭೆಗಳ ಕುರಿತಾಗಿ ವಿಚಾರಣೆ ನಡೆಸಲು ನೇಮಕವಾದ ಕಮಿಟಿಯ ಕಾರ್ಯಗಳು ಕೊನೆಗೊಂಡಿರುತ್ತವೆ. ಪೆಲೆಸ್ತೀನದ ಜನರಲ್ಲಿ ಎಲ್ಲ ಪಕ್ಷದವರೂ ತಮ್ಮೊಡನೆ ಸಹಕರಿಸಿ ತಮಗೆ [illegible] ಕಮಿಟಿಯವರು ಪೆಲೆಸ್ತೀನದವರಿಗೆ ಅಭಿವಂದನೆಗಳನ್ನು ಸಮರ್ಪಿಸಿರುವರು.

ಅರ್ಜೆಂಟೈನ್ ರಿಪಬ್ಲಿಕಿನ ಪ್ರೆಸಿಡೆಂಟರನ್ನು ಕೊಲ್ಲಬೇಕೆಂಬ ಉದ್ದೇಶದಿಂದ ಯಾವನೋ ಒಬ್ಬನು ಕ್ರಿಸ್ಮಸ್‌ನ ಮೊದಲನೆಯ ದಿನ ಆತನ ಕಡೆಗೆ ಐದು ಗುಂಡುಗಳನ್ನು ಹಾರಿಸಿದನು. ಆದರೆ ಅದೃಷ್ಟವಶಾತ್ ಪ್ರೆಸಿಡೆಂಟನು ಅವುಗಳೆಲ್ಲವನ್ನು ತಪ್ಪಿಸಿಕೊಂಡನು. ಬ್ರಿಟಿಷ ಸರಕಾರದವರೂ, ಅರಸರೂ, ಪ್ರೆಸಿಡೆಂಟನಿಗೆ ಅಭಿನಂದನೆಯ ವಾರ್ತೆಯನ್ನು ಕಳುಹಿಸಿರುವರು.

— ಜನವರಿ ಆರನೇ ತಾರೀಕಿನ ದಿನ ಜಿನೀವಾದಲ್ಲಿ ನಡೆಯುವ ಕಲ್ಲಿದ್ದಲಿನ ಪರಿಷತ್ತಿಗೆ ಕಲ್ಲಿದ್ದಲು ದೊರಕುವ ದೇಶಗಳಾದ ಬ್ರಿಟನು, ಜರ್ಮನಿ, ಆಸ್ಟ್ರೇಲಿಯಾ, ಬೆಲ್ಜಿಯಮ್, ಸ್ಪೈನ್, ಫ್ರಾನ್ಸ್, ಹೊಲ್ಲೆಂಡ್, ಪೋಲೆಂಡ್ ಮೊದಲಾದ ದೇಶಗಳಿಂದ ಮಾಲಕರೂ ಮಜೂರರೂ ಪ್ರತಿನಿಧಿಗಳು ಬರುವರು. ಕಲ್ಲಿದ್ದಲಿನ ಗಣಿಗಳಲ್ಲಿನ ಕೆಲಸದ ಸಮಯ, ಕೆಲಸಗಾರರಿಗೆ ಕೊಡಬೇಕಾದ ಸಂಬಳ, ಈ ವಿಷಯವಾಗಿ ಈ ಪರಿಷತ್ತಿನಲ್ಲಿ ಚರ್ಚೆಯು ನಡೆಯುವುದು.

— ಇಟಲಿ ಹಡಗವಾದ '[illegible]' ಎಂಬುದು ಬಿರುಗಾಳಿಯ ದೆಸೆಯಿಂದ ಮೆಡಿಟರೇನಿಯನ್ ಸಮುದ್ರದಲ್ಲಿ ಮುಳುಗುವುದರಲ್ಲಿರುವಾಗ 'ವ್ಯಾಸರಾಯ್ ಓಫ್ ಇಂಡಿಯಾ' ಎಂಬ ಹಡಗವು ಅದರ ಸಹಾಯಕ್ಕೆ ಬಂದು ಮುಂದಿನ ಪ್ರಯಾಣಿಕರ ಪ್ರಾಣರಕ್ಷಣೆಯನ್ನು ಮಾಡಿರುತ್ತದೆ.

— ಅಫಘಾನಿಸ್ಥಾನದ ಕಡೆಯಿಂದ ಪೆರಿಸಿನಲ್ಲಿ ಮತ್ತು ಲಂಡನಿನಲ್ಲಿ ಪ್ರತಿನಿಧಿಗಳಾದ ಅಹಮದ ಅಲಿಖಾನ ಮತ್ತು ಶಹಾವಲಿಖಾನ ಇವರು ಕಳೆದ [illegible] ಮಾರ್ಸೆಲ್ಸಿಗೆ ಬಂದಿದ್ದರು. ಅಫಘಾನಿಸ್ತಾನದ ಅಭಿವೃದ್ಧಿಯಲ್ಲಿ ಫ್ರೆಂಚರ ಸಹಾಯವು ಅತ್ಯಗತ್ಯವೆಂದು ಅಹಮದ ಅಲಿಖಾನರ ಅಭಿಪ್ರಾಯವಾಗಿದೆ.

— ಆಫ್ರಿಕದ ಮಾಊ ಜಾತಿಯವರಾದ ದುಕಾಟಿ ಮತ್ತು ಮುನೋನಾ ಪಂಗಡದವರು ಪರಸ್ಪರ ಕಾದಾಡಿ ಒಬ್ಬನು ಸತ್ತುಹೋದನು. ಇಬ್ಬರಿಗೆ ವಿರೋಧ ಹುಟ್ಟಿಕೊಂಡಿರುತ್ತದೆ. ಪೋಲೀಸರು ಸಕಾಲದಲ್ಲಿ ಬಂದೊದಗದಿದ್ದರೆ ಹೆಚ್ಚಿನ ಕೊಲೆಗಳುಂಟಾಗುತ್ತಿದ್ದುವು. [illegible] ಇದೇ ತರದ ಕಾದಾಟವು ಉಂಟಾಗಬಹುದೆಂದು ಪೋಲೀಸರು ನೆನಸುವರು.

— ಕಾಬೂಲಿನಲ್ಲಿ ಶಿನ್ವಾರಿಗಳ ತೊಂದರೆಯು ಇನ್ನೂ ಕೊನೆಗೊಂಡಿಲ್ಲವಂತೆ. ಕಾಬೂಲ ಸರಕಾರಕ್ಕೆ ವಿರೋಧವಾಗಿ ಕೆಲವು ಮಾಲಿಕರು ಬಹಿರಂಗವಾಗಿ ಚಳವಳವನ್ನೆಬ್ಬಿಸಿರುವರು. ಸುಲೇಮಾನ್ ಖೇಲ್ ಮತ್ತು ಗಿಲ್ಜಾ ದೇಶದಲ್ಲಿ ಈ ಗಲಭೆಯನ್ನುಂಟುಮಾಡಲು ಅವರು ಪ್ರಯತ್ನದಲ್ಲಿರುವರು.

— ರಶ್ಯಿಯಾ ಮತ್ತು ತುರ್ಕಸ್ಥಾನಗಳೊಳಗೆ ಇನ್ನು ಮುಂದೆ ಸ್ನೇಹವಿರಲು ರಶ್ಯಿಯಾ ಮತ್ತು ತುರ್ಕಸ್ಥಾನಗಳ ಪ್ರತಿನಿಧಿಗಳು ಅಂಗೋರಾ ಎಂಬಲ್ಲಿ ಸ್ನೇಹಪತ್ರಕ್ಕೆ ಸಹಿಹಾಕಿದರು.

— ಸೇಮುವಾ ದ್ವೀಪದಲ್ಲಿ ಪೋಲೀಸರೊಳಗೂ ಮೂಲ ನಿವಾಸಿಗಳೊಳಗೂ ಜಗಳವಾಗಿ ಒಬ್ಬ ಬಿಳೀ ಪೋಲೀಸನೂ ಇಬ್ಬರು ಮೂಲ ನಿವಾಸಿಗಳೂ ಸತ್ತುಹೋದರು. ಇಬ್ಬರು ಬಿಳೀ ಪೋಲೀಸರೂ ೩೦ ಮೂಲ ನಿವಾಸಿಗಳೂ ಜಖಮು ಹೊಂದಿರುತ್ತಾರೆ.

— ಕಳೆದ ವರ್ಷ ಯುವರಾಜರವರು ಆಫ್ರಿಕ ಸಂಚಾರಕ್ಕೆ ಹೋಗಿದ್ದಾಗ ಚಕ್ರವರ್ತಿಯವರ ಅಸ್ವಸ್ಥ ದೆಸೆಯಿಂದ ಬೇಗನೇ ಹಿಂತಿರುಗಿದ್ದರು. ಈಗ ಆ ಸಂಚಾರವನ್ನು ಪೂರ್ತಿಗೊಳಿಸುವ ಬಗ್ಗೆ ಈ ದಿನ ಅವರು ಪಶ್ಚಿಮ ಆಫ್ರಿಕಕ್ಕೆ ಹೊರಟು ಹೋದರು. ಅವರು ಎಷ್ಟು ದಿವಸ ಆಫ್ರಿಕದಲ್ಲಿ ಕಳೆಯುವರೆಂಬುದು ಸರಿಯಾಗಿ ತಿಳಿದು ಬಾರದಿದ್ದರೂ ಏಪ್ರಿಲ್ ತಿಂಗಳಿನಲ್ಲಿ ಇಂಗ್ಲೆಂಡಿಗೆ ಹಿಂತಿರುಗುವರೆಂದು ನೆನಸಲ್ಪಟ್ಟಿದೆ.

— ಕಳೆದ ಆದಿತ್ಯವಾರ ಇಂಗ್ಲೆಂಡಿನಲ್ಲಿ ಎಂಭತ್ತು ಮೈಲು ವೇಗದ ಬಿರುಗಾಳಿಯು ಬೀಸಿ, ಇದರಿಂದ ಒಂದು ಮನೆಯು ಕುಸಿದು ಬಿದ್ದು ಒಬ್ಬ ವಿಧವೆಯೂ ಅವಳ ಮಗಳೂ ಸತ್ತುಹೋದರು.

— ಯುನೈಟೆಡ್ ಸ್ಟೇಟ್ಸಿನ [illegible] ಎಂಬ ಬಂದರಕ್ಕೆ [illegible] ಎಂಬ ಹಡಗವು ಮರದ ಪೀಪಾಯಿಗಳನ್ನು ಹೇರಿಕೊಂಡು ಬಂದಿತ್ತು. ಅದು ಇನ್ನೂ ಬಂದರದಲ್ಲಿ ಇರುವಷ್ಟರಲ್ಲಿ ಬಂದರವನ್ನು ಕಾಯುವ [illegible] ಗಾರ್ಡರು, ಮರದ ಪೀಪಾಯಿಗಳನ್ನು [illegible] ನಾಲ್ಕನೆಯ ದಿನ [illegible] ಸಂಶಯ [illegible] ಎಂಬ ಹಡಗದಲ್ಲಿ [illegible] ಬಂದರದಲ್ಲಿ [illegible] ಗಾರ್ಡನ [illegible] ಹಡಗಕ್ಕೆ ಬೆಂಕಿಕೊಟ್ಟು ತಪ್ಪಿಸಿಕೊಂಡು ಓಡಿ ಹೋದರು.

ಒಳದೇಶ ವರ್ತಮಾನಗಳು.

— ಬರ್ದ್ವಾನದಿಂದ ಐವತ್ತು ಮೈಲು ದೂರದಲ್ಲಿರುವ ಚಂದ್ರ ನಗರಕ್ಕೆ ಕಲಕತ್ತೆಯ ಯುವಕನಾದ ಬಿ. ಸಿ. ಘೋಷನೆಂಬಾತನು ಒಂಭತ್ತು ತಾಸುಗಳೊಳಗೆ ನಡೆದು ಹೋಗಿರುವನು. ಇದು ವರೆಗೆ ಇಷ್ಟು ವೇಗದಿಂದ ಯಾರೂ ನಡೆದಿರಲಿಲ್ಲವಂತೆ.

— ಮುಸಲ್ಮಾನರು ಅಜ್ಮೀರದ ಶ್ರೀ ಹರಬಿಲಾಸರ ಬಾಲ್ಯ ವಿವಾಹ ನಿಷೇಧ ಮಸೂದೆಯ ವಿರೋಧವಾಗಿ ನ್ಯಾಯಕೋರ್ಟಿನಲ್ಲಿ ದಾವಾ ಹಾಕುವರೆಂದು ನೆನಸಿರುವರು. ಪ್ರೆಸಿಡೆಂಟ ಪಟೇಲರ ಮೇಲೆ ಅವರ ಕ್ರೋಧವೇ ಕೇಂದ್ರೀಕರಿಸಲ್ಪಟ್ಟಿರುತ್ತದೆ.

— ಕಳೆದ ವರುಷ [illegible] ಮಾರಲ್ಪಟ್ಟ ಖಾದಿಯ ಬೆಲೆಯು ಒಟ್ಟು ೧೧,೩೭ ಲಕ್ಷ ರೂಪಾಯಿಗಳು. ಖಾದಿ [illegible] ಮೂವತ್ತು ಸಾವಿರ ಮಂದಿಗಳಿಗೆ ಉದ್ಯೋಗ ದೊರೆಯಿತು. [illegible] ಸಾವಿರ ನೇಕಾರರಿಗೆ ಕೆಲಸವಾಯಿತು. ಖಾದಿ ಸಂಘದ ಕೈಕೆಳಗಿನ ಮತ್ತು [illegible] ನಿಲಯಗಳ ಹೊರತು ಇನ್ನೂ ಇತರ ವ್ಯಕ್ತಿಗಳು ಖಾದಿ ಮಾರುವ [illegible].

— ರಾಯಬರೇಲಿಯ ಸಮೀಪ ಒಬ್ಬ ಮುನ್ಸಿಪಾಲಿಟಿಯ [illegible] ಟಪ್ಪಾಲು ಕೇಳಿದುದಕ್ಕೆ ಟಪ್ಪಾಲು ಚೀಲವನ್ನು ಎಳೆದು [illegible] ಅವನಿಗೆ ಹತ್ತು ವರುಷಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿರುತ್ತದೆ.

— ಕಲಕತ್ತೆಯ ಕೊರೆಟೋಲ್ಲ ಬಳಿ(?) [illegible] ಎಂಬ ಅಕ್ಷಯ ಮೇಲೆ ಮೊಕದ್ದಮೆಯಾಗಿರುತ್ತದೆ. ಸೊಸೆಯು ಎಂಬ ಹೆಸರಿನ ಹದಿನಾಲ್ಕು ವರುಷ ಪ್ರಾಯದ ತನ್ನ ಸೊಸೆಯನ್ನು ಆಕೆಯು ಕೊಂದು ಹಾಕಲು ಪ್ರಯತ್ನಿಸಿದಳಂತೆ. ಆಕೆಯು ತನ್ನ ಸೊಸೆಯನ್ನು ಎರಡನೆ ಅಂತಸ್ತಿನಿಂದ ಮೂವತ್ತು ಅಡಿ ಕೆಳಗಿರುವ ನೆಲದ ಮೇಲೆ ನೂಕಿದಳು. ಇದರಿಂದ ಸೊಸೆಗೆ ವಿಶೇಷ ಜಖಮುಂಟಾಯಿತು.

— ಬಂಗಾಳದ ಬಂಕೂರಾ, ಮಿದನಾಪುರ, ಬರ್ದ್ವಾನ ಮೊದಲಾದ ಕಡೆಗಳಿಂದ ಕೆಲಸಕ್ಕೆ ಕಲಕತ್ತೆಗೆ ಬರುವ ಕಾರ್ಮಿಕರಲ್ಲಿ ಹೆಚ್ಚಿನವರಲ್ಲಿ ಕುಷ್ಠರೋಗವಿದೆಯಂತೆ. ಅವರಿಗೆ ತಕ್ಕದಾದ ಚಿಕಿತ್ಸೆ ಇಲ್ಲದಿರುವುದೂ ಅವರ ಸಂಖ್ಯೆಯು ವಿಶೇಷವಾಗಿರುವುದೂ ಇತರರಿಗೂ ಹಾನಿಕರವೆಂದು ಕುಷ್ಠರೋಗ ಸಂಘದವರು ಕಂಡುಹಿಡಿದಿರುವರು.

— ವ್ಯಾಸರಾಯರವರ ರೈಲಿನ ಮಾರ್ಗದಲ್ಲಿ ಬಾಂಬು ಒಡೆದುದರ ಸಂಬಂಧದಲ್ಲಿ ದಿಲ್ಲಿಯಲ್ಲಿರುವ ಇಬ್ಬರು ಬಂಗಾಳಿಗಳ ಮನೆಗಳನ್ನು ಶೋಧಿಸಲಾಯಿತು. ಆದರೆ ಇದರ ವಿಷಯವಾಗಿ ಏನೂ ತಿಳಿದುಬಂದುದಿಲ್ಲ.

— ಶಿವಪುರದ ಸಮೀಪ ಎರಡು ರೈಲು ಬಂಡಿಗಳು ಒಂದಕ್ಕೊಂದು ತಾಗಿ, ಮೂವರು ಪ್ರಯಾಣಿಕರು ಗಾಯಪಟ್ಟಿರುವರು. ಸಾಮಾನನ್ನು ಸಾಗಿಸುವ ಐದು ರೈಲು ಬಂಡಿಗಳು ಹುಡಿಯಾಗಿವೆ.

— ಬಂಗಾಳದಲ್ಲಿ ಪ್ರಕಟಿಸಲ್ಪಟ್ಟ "[illegible]" ಎಂಬ ಪುಸ್ತಕದಲ್ಲಿ ರಾಜದ್ರೋಹವಾದ ಕೆಲವು ವಿಷಯಗಳಿವೆಯೆಂದು, ಬಂಗಾಳ ಸರಕಾರದವರು ಆ ಪುಸ್ತಕವನ್ನು ನಿಷೇಧಿಸಿರುವರು.

— ಬಂಗಾಳದಲ್ಲಿ ಹೊಸದಾಗಿ ನೇಮಿಸಲ್ಪಟ್ಟ ಸೀತಾರಾಮ [illegible] ಯವರು ಪ್ರಾಂತದ ಸೀಮೆಯ ಸರಕಾರದವರ [illegible] ಗಾಗಿ ಅವರು ಮತ್ತು ಭಟ್ಟರು ಬಂಗಾಳ ಪ್ರಾಂತದಲ್ಲಿ ಸಂಚರಿಸಿದರು. ಸೀತಾರಾಮ ಶಾಸ್ತ್ರಿಯವರು ಈಗ ಮದರಾಸ ಪ್ರಾಂತ್ಯವನ್ನು ನೋಡದಲ್ಲದೆ ಮುಂದಿನ ಆಜ್ಞಾಪತ್ರಗಳನ್ನು ಕಾದಿರುವರು.

— ಆಲ್ಬರ್ಟ್ ಸೋಲೋಮನ್ ಎಂಬವನ ಭಾರತ ಸಭೆಯ ಕೆಲಸಗಾರರು ಕೈದುಮಾಡಲ್ಪಟ್ಟಿರುವರು. ಇದು ವರೆಗೆ ಲಾಹೋರಿನಲ್ಲಿ ಕೈದುಮಾಡಲ್ಪಟ್ಟವರ ಸಂಖ್ಯೆಯು ಒಂಭತ್ತು ಆಯಿತು.

— ಕಮಾಂಡರ್ ಕೆನ್‌ವರ್ದಿಯವರು ಸಧ್ಯದಲ್ಲಿಯೇ ಹಿಂದೂಸ್ಥಾನವನ್ನು ಸಂದರ್ಶಿಸಲಿರುವರು.

— ಜಿ. ಐ. ಪಿ. ರೈಲುವೇ ಕಂಪೆನಿಯವರು ಮುಂಬಯಿ ಮತ್ತು ಪೂನಾಗಳೊಳಗೆ ಒಂದು ಫಾಸ್ಟ್ ಎಕ್ಸ್‌ಪ್ರೆಸ್ ಟ್ರೈನನ್ನು ತೆರೆಯುವರು. ಈಗ ರೈಲು ಪ್ರಯಾಣಕ್ಕೆ ೩೭ ತಾಸುಗಳು ಬೇಕಾದರೆ ಇನ್ನು ಮುಂದೆ ೩೨ ತಾಸುಗಳು ಮಾತ್ರವೇ ಬೇಕಾಗುವುವು. ಜನವರಿ [illegible] ತಾರೀಕಿನಿಂದ ಈ ಹೊಸ ಏರ್ಪಾಡು ಪ್ರಾರಂಭವಾಗುವುದು.

— [illegible] ಕಡೆಯಲ್ಲಿ [illegible] ಹಿಂದೂ [illegible] ದಿನ ಒಂದು ಅಪಘಾತವು ಉಂಟಾಯಿತು. [illegible] ಒಬ್ಬ [illegible] ವಿದ್ಯಾರ್ಥಿಗಳಿಗೆ ವಿಶೇಷ ಜಖಮು ಉಂಟಾಯಿತು.

— [illegible] ನ್ಯಾಯ [illegible] ಬೆಳೆದು [illegible].

— [illegible] ಅಯ್ಯಂಗಾರ್ [illegible] ಸಿ. ಆರ್. [illegible] ಅಧ್ಯಕ್ಷತೆಯಲ್ಲಿ ಕಳೆದ [illegible] ಮತ್ತು [illegible] ಧಾರವಾಡದಲ್ಲಿ ಜರಗಿತು. [illegible] ಪ್ರತಿನಿಧಿಗಳು ಬಂದಿದ್ದರು. [illegible] ಅಧಿವೇಶನವನ್ನು [illegible] ಜರಗಿಸಬೇಕೆಂದು ನಿರ್ಣಯಿಸಲಾಯಿತು.

— ಹಿಂದೂಮಹಾಸಭೆಯ ಬಂಗಾಳ ಶಾಖೆಯವರು ಕಳೆದ ವರುಷದ ತಮ್ಮ ಕಾರ್ಯಗಳನ್ನು ಅಚ್ಚಿನ ರೂಪದಲ್ಲಿ ಪ್ರಕಟಿಸಿರುವರು. ಈ ಸಭೆಯ ಕೆಲಸಗಾರರಲ್ಲಿ ಹಲವರಿಗೆ ಶಿಕ್ಷೆಗಳು ವಿಧಿಸಲ್ಪಟ್ಟರೂ ಕೆಲಸಗಾರರು ಹಿಂಜರಿಯಲಿಲ್ಲ. ಸಭೆಯ ಕಾರ್ಯಕ್ರಮದ ಶುದ್ಧಿ ಸಂಘಟನ, ವಿಧವಾ ಪುನರ್ವಿವಾಹ, ಅಸ್ಪೃಶ್ಯತಾ ನಿವಾರಣೆ, ಶಾರೀರಿಕ ಶಿಕ್ಷಣ ಮತ್ತು ಇತರ ಸಾಮಾಜಿಕ ಅಭಿವೃದ್ಧಿಯ ಕಾರ್ಯಗಳು ಅಲ್ಲಿ ಚೆನ್ನಾಗಿ ನಡೆದಿರುತ್ತವೆ. ಕಳೆದ ವರುಷ ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ವಿಶೇಷ ಪ್ರಯತ್ನವು ನಡೆಯಿತು. ಈ ಚಳವಳಕ್ಕೆ ಸಹಕಾರಿಯಾಗುವಂತೆ ಪಂಡಿತ ಮದನ ಮೋಹನ ಮಾಲವೀಯರವರ ಮುಂತಾದವರು, ಅವರು [illegible] ದೇವಾಲಯವನ್ನು ಪ್ರವೇಶಿಸುವಂತೆ ಸತ್ಯಾಗ್ರಹ ಚಳವಳಿ [illegible] ಕೈಕೊಳ್ಳಲ್ಪಟ್ಟವು. ಬಂಗಾಳದಲ್ಲಿ ಕಳೆದ ವರುಷ ಸುಮಾರು ನಾಲ್ಕು ನೂರು ಮಂದಿಗಳಿಗೆ ಶುದ್ಧಿ ವಿಧಿಯಂತೆ ಪುನರ್ವಿವಾಹವು ನಡೆಯಿತು.

[illegible]

[illegible] ಇಂಗ್ಲಿಷ್ [illegible] ಹಿಂದೂಸ್ಥಾನದಲ್ಲಿ [illegible] ಅವರು [illegible] ಮೋತೀಲಾಲ ನೆಹರೂರವರ [illegible] ಪುತ್ರನಾದುದರಿಂದ ಅವರಿಗೆ ಅತ್ಯುತ್ತಮ ತರದ ವಿದ್ಯಾಭ್ಯಾಸವು ಕೊಡಲ್ಪಟ್ಟಿತು. ಅವರಿಗೆ ಹದಿನೈದು ವರುಷ [illegible] ವರೆಗೆ ಮನೆಯಲ್ಲಿಯೇ ವಿದ್ಯೆಯು ಕಲಿಸಲ್ಪಟ್ಟಿತು. ಕಲಿಸುವ ಅಧ್ಯಾಪಕರಾದರೋ ಬಹು ಬುದ್ಧಿವಂತರಾದವರು. ಈ ಅಧ್ಯಾಪಕರಲ್ಲಿ ಪ್ರಸಿದ್ಧ ಚಿತ್ರ ಲೇಖಕರಾದ ಮಿ. ಎಫ್. ಟಿ. ಬ್ರೂಕ್ಸ್ ಎಂಬವರೊಬ್ಬರಾಗಿರುವರು.

೧೯೦೫ರಲ್ಲಿ ಅವರು ವಿಲಾಯತಿಗೆ ಹೊರಟು ಹೋಗಿ ಅಲ್ಲಿನ ಹೆರ್ರೊ ಎಂಬಲ್ಲಿನ ಪ್ರಸಿದ್ಧ ಶಾಲೆಗೆ ಸೇರಿದರು. ಅಲ್ಲಿಂದ ಅವರು ಕೇಂಬ್ರಿಜಿನ ಟ್ರಿನಿಟಿ ಕಾಲೇಜಿನಲ್ಲಿ ಕಲಿತರು. ಲಂಡನಿನಲ್ಲಿ ವಕೀಲತನವನ್ನು ಕಲಿತು ೧೯೧೨ರಲ್ಲಿ ಉತ್ತೀರ್ಣರಾದರು.

ಇಂಗ್ಲಾಂಡದಲ್ಲಿರುವಾಗ ಜವಾಹಿರಲಾಲರಿಗೆ ಹಿಂದೀಯ ಕಾರ್ಯಕಲಾಪಗಳ ಕುರಿತಾಗಿ ತುಂಬ ಅಭಿರುಚಿಯಿದ್ದಿತು. ೧೯೧೨ರಿಂದ ೧೯೨೦ರ ವರೆಗೆ ಅಲಹಾಬಾದದ ಹೈಕೋರ್ಟಿನಲ್ಲಿ ಅವರು ವಕೀಲಿ ವೃತ್ತಿಯನ್ನು ಮಾಡಿದರು. ೧೯೨೦ನೇ ಇಸವಿಯ ಸಪ್ಟಂಬರ ತಿಂಗಳಿನಲ್ಲಿ ಅಸಹಕಾರ ಚಳವಳಿಯು ಪ್ರಾರಂಭವಾದೊಡನೆ ವಕೀಲಿ ವೃತ್ತಿಗೆ ಅವರು ತಿಲಾಂಜಲಿಯನ್ನಿತ್ತರು.

ವಕೀಲಿ ವೃತ್ತಿಯಲ್ಲಿರುವಾಗಲಾದರೂ ಜವಾಹಿರಲಾಲರಿಗೆ ರಾಷ್ಟ್ರೀಯ ಕಾರ್ಯಗಳಲ್ಲಿ ಉತ್ಸುಕತೆ ಹೆಚ್ಚು. ೧೯೧೬ನೇ ಇಸವಿಯಲ್ಲಿ ಅವರು ಶ್ರೀ. ಗೋಖಲೆಯವರ ಅಪೇಕ್ಷೆಯಂತೆ ನಾಲ್ವತ್ತು ಸಾವಿರ ರೂಪಾಯಿಗಳನ್ನು ಒಟ್ಟುಗೂಡಿಸಿದ್ದರು. ಜನೋಪಯೋಗದ ಬಗ್ಗೆ ವಿನಿಯೋಗಿಸಲು ಈ ಹಣವು ಕೂಡಹಾಕಲ್ಪಟ್ಟಿತು. ೧೯೧೮ರಲ್ಲಿ ಅವರು ಡಾ| ಅನ್ನಿಬೆಸೆಂಟಮ್ಮನವರ ಹೋಮ್‌ರೂಲ್ ಚಳವಳಿಕ್ಕೂ ತಿಲಕರವರ ಹೋಮ್‌ರೂಲ್ ಲೀಗಿಗೂ ಸೇರಿದರು. ೧೯೧೯ನೇ ಇಸವಿಯಲ್ಲಿ ಅವರ ತಂದೆಯವರು ಹೊರಡಿಸಿದ "ಇಂಡಿಪೆಂಡೆಂಟ್" ಎಂಬ ಆಂಗ್ಲ ದೈನಿಕ ಪತ್ರಿಕೆಗೆ ಮುಖ್ಯ ಲೇಖಕರಾಗಿದ್ದರು.

ಅವರು ಅಸಹಕಾರಿ ಚಳವಳದಲ್ಲಿ ವಿಶೇಷ ಭಾಗಿಗಳಾಗಿದ್ದುದರಿಂದ ೧೯೨೧ನೇ ಇಸವಿಯಲ್ಲಿ ಆರು ತಿಂಗಳುಗಳ ಕಾರಾವಾಸವು ವಿಧಿಸಲ್ಪಟ್ಟಿತು. ಮೂರು ತಿಂಗಳುಗಳ ತರುವಾಯ ಬಿಡುಗಡೆ ಹೊಂದಿದರೂ ಕೆಲವೇ ವಾರಗಳ ತರುವಾಯ ಪುನಃ ಕೈದು ಮಾಡಲ್ಪಟ್ಟರು. ಮತ್ತು ಒಂದು ವರುಷ ಒಂಭತ್ತು ತಿಂಗಳುಗಳ ಶಿಕ್ಷೆಗೆ ಗುರಿಯಾದರು. ಆದರೆ ಒಂಭತ್ತು ತಿಂಗಳುಗಳ ತರುವಾಯ ವಿಮುಕ್ತರಾದರು. ೧೯೨೩ನೇ ಇಸವಿಯಲ್ಲಿ ನಭಾರಾಜ್ಯದಲ್ಲಿ, ಆ ರಾಜ್ಯವನ್ನು ಬಿಟ್ಟುಹೋಗಬೇಕೆಂದು ಕೊಡಲ್ಪಟ್ಟ ಹುಕುಮನ್ನು ಉಲ್ಲಂಘಿಸಿದುದಕ್ಕೆ ಆರು ತಿಂಗಳುಗಳ ಶಿಕ್ಷೆ ವಿಧಿಸಲ್ಪಟ್ಟಿತು. ಒಳಸಂಚಿನ ವಿಷಯವಾಗಿ ಎರಡು ವರ್ಷಗಳ ಶಿಕ್ಷೆ ದೊರೆಯಿತು. ಆದರೆ ಈ ಎರಡೂ ಶಿಕ್ಷೆಗಳು ಮನ್ನಾ ಮಾಡಲ್ಪಟ್ಟು ಅವರು ಬೇಗನೇ ಬಿಡುಗಡೆ ಹೊಂದಿದರು.

೧೯೨೩ನೇ ಇಸವಿಯಲ್ಲಿ ಅವರು ಕಾಂಗ್ರೆಸಿನ ಜನರಲ್ ಸೆಕ್ರೆಟರಿಯಾಗಿ ಆರಿಸಲ್ಪಟ್ಟ ತರುವಾಯ ಈ ಅಖಿಲ ರಾಜಕೀಯ ಚಳವಳದಲ್ಲಿ ವಿಶೇಷ ಭಾಗಿಗಳಾಗಿರುವರು. ಕಳೆದ ಆರು ವರುಷಗಳಿಂದ ಅವರು ಹಲವು ರಾಜಕೀಯ, ಮತ್ತು ಉದ್ಯೋಗಿಕ ಪರಿಷತ್ತುಗಳಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

೧೯೨೬-೨೭ನೇ ಇಸವಿಯ ಅಧಿಕಾಂಶವನ್ನು ಅವರು ಯುರೋಪಿನಲ್ಲಿ ಕಳೆದರು. ಹಿಂದೂಸ್ಥಾನದ ಸ್ವಾತಂತ್ರ್ಯದ ಆವಶ್ಯಕತೆಯ ವಿಷಯವಾದ ಸಂಗತಿಯನ್ನೇ ಅವರು ಮುಂದಕ್ಕೆ ತಂದರು. ಆ ವಿಷಯ ಭಾಷಣಗಳನ್ನು ಕೊಡುತ್ತಲೂ ಲೇಖನಗಳನ್ನು ಪ್ರಕಟಿಸುತ್ತಲೂ ನಡೆದರು. ಸೋವಿಯಟ್ ರಷ್ಯಾ ಸರಕಾರದ ವಿಷಯವಾಗಿ ೧೯೨೭ನೇ ಇಸವಿಯಲ್ಲಿ ಬಹು ಉಪಯುಕ್ತ ಲೇಖನಗಳನ್ನು ಅವರು ಹಿಂದೂಸ್ಥಾನದ ಹಲವು ಮುಖ್ಯ ಮುಖ್ಯ ಪತ್ರಿಕೆಗಳಲ್ಲೆಲ್ಲ ಪ್ರಕಟಿಸಿದರು. ೧೯೨೭ನೇ ಇಸವಿಯಲ್ಲಿ ಮದರಾಸಿನಲ್ಲಿ ನಡೆದ ರಾಷ್ಟ್ರೀಯ ಮಹಾ ಸಭೆಯ ಅಧಿವೇಶನದಲ್ಲಿ ಹಿಂದೂಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯವೇ ಬೇಕಾಗಿರುವದೆಂದು ಅವರು ಠರಾವನ್ನು ಮುಂದಕ್ಕೆ ತಂದು ಆ ಕುರಿತು ಇದುವರೆಗೂ ಕೆಲಸಮಾಡುವವರಿದ್ದಾರೆ.

[illegible]

[illegible] ಹಳೇಬೀಡು [illegible] ಬೇಲೂರಿನಿಂದ ೧೦ ಮೈಲು ದೂರದಲ್ಲಿ [illegible] ೧೮ ಮೈಲು ಮುಂದೆ ಬೇಲೂರಿಗೆ ಹೋಗುವ ದಾರಿಯಲ್ಲಿ ಇದೆ. [illegible]ದಿಂದಲೂ ಹೋಗಬಹುದು. ಆದರೆ ಬೇಲೂರು ದಾಟಿ ಹೋಗಬೇಕು. ಈ ಊರಿನಲ್ಲಿ ೧. ಹೊಯ್ಸಳೇಶ್ವರ. ೨. ಕೇದಾರೇಶ್ವರ. ಎಂಬ ಎರಡು ದೇವಸ್ಥಾನಗಳೂ ಒಂದು ಪಾರ್ಶ್ವನಾಥ ಬಸದಿಯೂ ಇವೆ. ಎರಡೂ ದೇವಸ್ಥಾನಗಳೂ ಶಿವಾಲಯಗಳು. ಇವುಗಳಲ್ಲಿ ಹೊಯ್ಸಳೇಶ್ವರ ದೇವಸ್ಥಾನವು ಪುರಾತನ ಕಾಲದ್ದಾಗಿದೆ. ಈ ಕಟ್ಟಡದ ಕೆಲಸವು ೧೧೦೬-೧೧೦೦ರ ವರೆಗೆ ಆಳಿದ ಹೊಯ್ಸಳ ಅರಸನಾದ ವಿನಯಾದಿತ್ಯನ ಕಾಲದಲ್ಲಿ ಆರಂಭವಾಗಿ ೧೧೪೧ರಲ್ಲಿ ಹೊಯ್ಸಳ ೧ನೇ ನರಸಿಂಹನು ಕಟ್ಟಿ ಮುಗಿಸಿದನೆಂದು ತೋರುತ್ತದೆ. ಇದರ ಅಧಿಷ್ಠಾನವು ಐದು ಅಡಿ ಎತ್ತರವಾಗಿದೆ, ಉತ್ತರದಿಂದ ದಕ್ಷಿಣಕ್ಕೆ ೧೬೦ ಅಡಿ ಉದ್ದವಾಗಿದೆ. ಪೂರ್ವದಿಂದ ೧೨೨ ಅಡಿ ಅಗಲವಾಗಿದೆ. ಇದರಲ್ಲಿ ಒಂದರ ಹತ್ತಿರ ಇನ್ನೊಂದು ಹೀಗೆ ಎರಡು ಗರ್ಭಗೃಹಗಳು ಇವೆ. ಪ್ರತಿ ಒಂದು ಗರ್ಭಗೃಹದ ಮುಂದುಗಡೆಯಲ್ಲಿ ಒಂದೊಂದು ನಂದಿಮಂಟಪವಿದೆ. ಗರ್ಭಗೃಹದ ಹೊರವಲಯದ ಗೋಡೆಗಳಲ್ಲಿ ಬುಡದಿಂದ ಮಾಡಿನ ವರೆಗೆ ಬೇಲೂರಿನಲ್ಲಿರುವ ದೇವಸ್ಥಾನಗಳಂತೆಯೇ ಕೆತ್ತನೆಯ ಕೆಲಸಗಳಿವೆ. ಅಧಿಷ್ಠಾನದಲ್ಲಿ ಮೊದಲು ಆನೆಗಳ ಸಾಲು ಇದೆ. ಇದರ ಮೇಲೆ ಶಾರ್ದೂಲಗಳ ಸಾಲು ಇದೆ. ಇದರ ಮೇಲೆ ಗೋಲುಗಳಿವೆ. ಇದರ ಮೇಲೆ ಕುದುರೆ ಸವಾರರ ಸಾಲು ಇದೆ. ಈ ಸಾಲಿನ ಮೇಲೆ ಗೋಲು ಇದೆ. ಇದರ ಮೇಲೆ ರಾಮಾಯಣವನ್ನು ಉದಹರಿಸುವ ಚಿತ್ರಗಳಿವೆ. ಇದರ ಮೇಲುಗಡೆಯಲ್ಲಿ ಸ್ವರ್ಗಸಮ್ಬಂಧವಾದ ಮೃಗಗಳೂ ಪಕ್ಷಿಗಳೂ ಇವೆ. ಪೂರ್ವ ದಿಕ್ಕಿನಲ್ಲಿ ಮನುಷ್ಯಾಕಾರದ ಪ್ರತಿಮೆಗಳು ಇವೆ. ಇವುಗಳ ಮೇಲಿನ ಎರಡು ಸಾಲುಗಳಲ್ಲಿ ಕಾರ್ನಿಸುಗಳು ಇವೆ. ಎರಡರ ಮಧ್ಯದಲ್ಲಿ ಪ್ರತಿಮೆಗಳು ಇವೆ. ಅದರ ಮೇಲುಗಡೆಯಲ್ಲಿ ಶಿಲೆಯಲ್ಲಿ ಕೊರೆದು ಮಾಡಿದ ಕಿಟಕಿಗಳು ಇವೆ. ಆದರೆ ಈ ಕಿಟಕಿಗಳು ಬೇಲೂರಿನಷ್ಟು ಅಂದವಾಗಿಲ್ಲ. ದೇವಸ್ಥಾನಗಳ ಮಧ್ಯದಲ್ಲಿ ಎರಡು ಗರ್ಭಗೃಹಗಳ ನಡುವೆ ಕೊರೆದು ಮಾಡಿದ ಕಿಟಕಿಗಳ ಬದಲಾಗಿ ೫|| ಅಡಿ ಎತ್ತರವಾದ ಹಿಂದೂ ಶಾಸ್ತ್ರ ಸಮ್ಬಂಧವಾದ ಶಿಲಾ ಪ್ರತಿಮೆಗಳು ಇವೆ. ಪಶ್ಚಿಮ ದಿಕ್ಕಿನಲ್ಲಿ ೬೦೦ ಅಡಿ ಉದ್ದಕ್ಕೆ ಅದೇ ರೀತಿಯ ಪ್ರತಿಮೆಗಳಿವೆ. ಹಿಂದೂಶಾಸ್ತ್ರ ಸಮ್ಬಂಧವಾದ ಪ್ರತಿ ಒಂದು ದೇವತೆಯ ಪ್ರತಿಮೆಗಳೂ ಇದರಲ್ಲಿ ಇವೆ ಎನ್ನುವುದರಲ್ಲಿ ಸಂದೇಹವಿಲ್ಲ.

ಬುಡದಲ್ಲಿರುವ ಆನೆಗಳ ಸಾಲಿನಲ್ಲಿ ೨೦೦೦ ಆನೆಗಳ ಚಿತ್ರಗಳಿವೆ. ಈ ಸಾಲು ೭೧೦ ಅಡಿ ಉದ್ದವಾಗಿದೆ. ರಾಮಾಯಣದ ಚಿತ್ರಗಳು ೭೦೦ ಅಡಿ ಉದ್ದವಾಗಿವೆ.

ದೇವಸ್ಥಾನಕ್ಕೆ ೪ ಬಾಗಿಲುಗಳು ಇವೆ. ಎರಡು ಪೂರ್ವ ದಿಕ್ಕಿನಲ್ಲಿವೆ. ಒಂದು ದಕ್ಷಿಣ ದಿಕ್ಕಿನಲ್ಲಿ ಒಂದು ಉತ್ತರ ದಿಕ್ಕಿನಲ್ಲಿದೆ. ಇವುಗಳಲ್ಲಿ ಕೆತ್ತನೆಯ ಕೆಲಸಗಳು ಬಹಳ ವಿಶೇಷವಾಗಿವೆ. ದೊಡ್ಡದಾದ ನಂದಿ ಮಂಟಪದ ಶಿಲಾ ಬಿಂಬಗಳನ್ನು ಕಲ್ಲಿನಲ್ಲಿ ಹಾಕಿ ತಯಾರಿಸಿದಂತೆ ಕಾಣುತ್ತದೆ. ಮುಖ ಕಾಣುವಷ್ಟು ನಯವಾಗಿವೆ.

ದೇವೋಜಿ, ಕೇತಿಮೋಜನ ಮಗನಾದ ಮಾಸಣ್ಣ, ಮಾಯಣ್ಣ, ಮತ್ತು ತಾನಗುಂದೂರು ಹರೀಶಾ ಎಂಬ ಶಿಲ್ಪಿಗಳು, ಈ ದೇವಸ್ಥಾನವನ್ನು ಕಟ್ಟಿದವರಾಗಿರುತ್ತಾರೆ.

ಕೇದಾರೇಶ್ವರ ದೇವಸ್ಥಾನವು ಸಣ್ಣದಾಗಿದೆ. ಈ ದೇವಸ್ಥಾನವನ್ನು ೧೨೧೯ರಲ್ಲಿ ವೀರಬಲ್ಲಾಳ ಅಥವಾ ೨ನೇ ಬಲ್ಲಾಳ ಅರಸನೂ ಅವನ ಕಿರಿಯ ರಾಣಿಯಾದ ಅಭಿನವಕೇತಳಾದೇವಿಯೂ ಅವರ ಆಳ್ವಿಕೆಯ ಕಡೆಯ ಭಾಗದಲ್ಲಿ ಕಟ್ಟಿಸಿದರೆಂದು ತೋರುತ್ತದೆ. ಈ ದೇವಸ್ಥಾನವನ್ನು ಕಟ್ಟಿದವನು ದೇವೋಜಿ ಎಂಬ ಶಿಲ್ಪಿಯು. ಇದಕ್ಕೆ ಶಂಕು ಆಕೃತಿಯ ಮಾಡು ಇದೆ. ಹಿಂದೂಸ್ಥಾನದಲ್ಲಿ ಎಷ್ಟು ಉತ್ತಮವಾದ ಶಿಲ್ಪ ಕೆಲಸವನ್ನು ಮಾಡುವ ಶಿಲ್ಪಿಗಳಿದ್ದರೆಂದು ಈ ದೇವಸ್ಥಾನದ ಕೆಲಸದಿಂದ ತಿಳಿಯುವುದು.

ಪಾರ್ಶ್ವನಾಥ ಬಸ್ತಿಯನ್ನು ೧೧೩೩ರಲ್ಲಿ ವಿಷ್ಣುವರ್ಧನನ ಕಾಲದಲ್ಲಿ ಕಟ್ಟಿಸಿದ್ದಾಗಿದೆ. ಇದನ್ನು ಹೊಯ್ಸಳ ಕ್ರಮದಲ್ಲಿಯೇ ಕಟ್ಟಿರುವರು. ಇದರ ಮುಂದುಗಡೆ ಇರುವ ಮಂಟಪದಲ್ಲಿ ಬಹಳ ನಯವಾದ ಎರಡು ಕಂಬಗಳಿವೆ.

ಶುಂಠಿಯ ವ್ಯವಸಾಯ.

ಶುಂಠಿಯು ಹೆಚ್ಚಾಗಿ ಪರದೇಶಗಳಿಗೆ ಮಲಬಾರು, ತಿರುವಾಂಕೂರು ಕೊಚ್ಚಿ ದೇಶಗಳಿಂದ ಹೋಗುತ್ತದೆ. ಆದರೆ ಉತ್ತರ ಅಮೇರಿಕದ ಜಮೈಕಾ ದ್ವೀಪದಲ್ಲಿ ಬೆಳಸಿ ತಯಾರಿಸಿದ ಶುಂಠಿಯಷ್ಟು ನಮ್ಮ ಕರಾವಳಿಯ ಶುಂಠಿಯು ಒಳ್ಳೇದಿರುವುದಿಲ್ಲ. ಮಾತ್ರವಲ್ಲ ಅಷ್ಟು ಬೆಲೆಯೂ ಸಿಕ್ಕುವುದಿಲ್ಲ.

ಶುಂಠಿ ಬೆಳೆಸುವ ಮಣ್ಣು ಮತ್ತು ಹವಾ ಕಾಲ.- ಶುಂಠಿಯು ಹೆಚ್ಚು ಮಳೆ ಬೀಳುವ ದೇಶಗಳಲ್ಲಿಯೂ ಅದು ಬೆಳೆಯುವ ಕಾಲದಲ್ಲಿ ಒಳ್ಳೇ ಶೆಖೆಯೂ ಇರುವ ದೇಶಗಳಲ್ಲಿ ಬೆಳೆಯುತ್ತದೆ. ಈ ವಿಷಯದಲ್ಲಿ ನೋಡಿದರೆ ಪಶ್ಚಿಮ ಕರಾವಳಿಯು ಇದರ ಬೆಳವಣಿಗೆಗೆ ಯೋಗ್ಯ ಸ್ಥಳವಾಗಿದೆ. ಶುಂಠಿಯು ಬಹಳ ಬೇಗನೇ ಮಣ್ಣಿನ ಸಾರವನ್ನೆಲ್ಲಾ ಎಳೆದು ಬಿಡುತ್ತದೆ. ಇದರಿಂದ ಈ ಬೆಳೆ ಬೆಳೆಸುವ ಮಣ್ಣಿಗೆ ಬೇಕಾದಷ್ಟು ಗೊಬ್ಬರವನ್ನು ಹಾಕಬೇಕಾಗುತ್ತದೆ. ನೀರು ಹೆಚ್ಚಾಗಿರುವ ಮಣ್ಣಿನಲ್ಲಿಯಾಗಲೀ ಹೊಯಿಗೆ ಮಣ್ಣಿನಲ್ಲಿಯಾಗಲೀ ಶುಂಠಿಯು ಒಳ್ಳೇಯದಾಗಿ ಬೆಳೆಯುವುದಿಲ್ಲ. ಇದಕ್ಕೆ ಒಳ್ಳೇ ಹೂಮಣ್ಣು ಬೇಕಾಗಿದೆ. ಶುಂಠಿಯನ್ನು ಬೆಳೆಸುವ ಸ್ಥಳದಲ್ಲಿ ನೀರು ಹರಿದು ಹೋಗುವಂತೆ ಮಾಡಬೇಕು. ಇಲ್ಲವಾದರೆ ಗಿಡವು ಕೊಳೆತುಹೋಗುವುದು.

ಗೊಬ್ಬರ ಹಾಕುವ ಕ್ರಮ:—ಪಶ್ಚಿಮ ಕರಾವಳಿಯಲ್ಲಿ ಶುಂಠಿಯ ಬೀಜಗಳನ್ನು ನಡುವಾಗ ಹಸಿಯ ಸೊಪ್ಪು, ದನದ ಸಗಣಿ ಮತ್ತು ಮೂತ್ರವನ್ನು ಹಾಕುತ್ತಾರೆ. ಇದರಿಂದ ಗಿಡವು ಸರಿಯಾಗಿ ಬೆಳೆದರೂ ನೆಲದಡಿಯಲ್ಲಿರುವ ಶುಂಠಿಗೆ ಒಂದು ಹುಳವು ಹಿಡಿದು ಸರಿಯಾಗಿ ಬೆಳೆಯುವುದಿಲ್ಲ. ಒಣಗಿಸಿದ ಶುಂಠಿಯೂ ಬೇಗನೇ ಹಾಳಾಗುತ್ತದೆ. ಶುಂಠಿಯು ಹೆಚ್ಚಾಗಿ ಮಣ್ಣಿನಿಂದ ಸುಣ್ಣವನ್ನೂ ರಂಜಕ ಧಾತುಕವನ್ನು ಎಳೆಕೊಳ್ಳುತ್ತದೆ. ಆದುದರಿಂದ ಈ ಎರಡುವಸ್ತುಗಳು ಹೆಚ್ಚಾಗಿರುವ ಗೊಬ್ಬರವನ್ನು ಇದರ ಬುಡಕ್ಕೆ ಹಾಕಿದರೆ ಸರಿಯಾಗಿ ಬೆಳೆಯುವುದು. ತಿರುವಾಂಕೂರು ಬೇಸಾಯ ಇಲಾಖೆಯವರು ಒಂದು ಎಕ್ರೆ ಸ್ಥಳಕ್ಕೆ ೬೦೦ ರಾತಲು ಸುಣ್ಣದ ಹುಡಿಯನ್ನು ಬೆರಸಿ ಹೂಡಬೇಕು. ನಂತರ ೨೦೦೦ ರಾತಲು ಹಿಂಡಿ, ೬೦೦ ರಾತಲು ಮೂಳೆ ಗೊಬ್ಬರ ೬೦೦ ರಾತಲು ಬೂದಿ ಇವುಗಳನ್ನು ಸರಿಯಾಗಿ ಬೆರಸಿ ಎರಡು ಪಾಲು ಮಾಡಿಟ್ಟು ಒಂದು ಪಾಲನ್ನು ನಟ್ಟ ನಾಲ್ಕು ವಾರಗಳ ನಂತರವೂ ಇನ್ನೊಂದು ಪಾಲನ್ನು ಇದನ್ನು ಹಾಕಿದ ಎರಡು ತಿಂಗಳನಂತರವೂ ಹಾಕಿದರೆ ಹುಳವು ಹಿಡಿಯದೆ ಸರಿಯಾಗಿ ಬೆಳೆಯುವುದು. ಒಣಗಿಸಿದ ಮೇಲೆಯೂ ಹಾಳಾಗುವುದಿಲ್ಲವೆಂದು ಜಮೈಕಾ ಬೇಸಾಯ ಸೊಸೈಟಿಯವರು ಸುಣ್ಣದ ಹುಡಿಯ ಬದಲಾಗಿ ೧೦೦ದಷ್ಟು ರಂಜಕ, ಅಮೋನಿಯಾ, ಮತ್ತು ಪೊಟೆಶ್ ಧಾತುಗಳನ್ನು ಬೆರಸಿ ತಯಾರಿಸಿ ಒಂದು ಎಕರೆಗೆ ಒಂದು ಟನ್ನಿನ ಪ್ರಕಾರ ಹಾಕಿದರೆ ಉತ್ತಮ ಶುಂಠಿಯಾಗುತ್ತದೆಂದೂ ಶೋಧಿಸಿರುವರು. ಆದುದರಿಂದ ಪಶ್ಚಿಮ ಕರಾವಳಿಯಲ್ಲಿ ಈ ಬೆಳೆ ಬೆಳಸುವವರು ಈ ಕ್ರಮವನ್ನು ಅನುಸರಿಸಿದರೆ ಶುಂಠಿಯು ಒಳ್ಳೇಯದಾಗಿ ಹೆಚ್ಚು ಲಾಭವು ಸಿಕ್ಕುವುದು. ಅಗೆದು ತೆಗೆಯುವಾಗ ಶುಂಠಿಗೆ ಸೋಂಕಾದರೆ ಒಣಶುಂಠಿಗೆ ದೋಷ ಬರುತ್ತದೆ.

ಒಳ್ಳೆ ಒಣ ಶುಂಠಿ ತಯಾರಿಸುವುದು:—ಈಗ ಒಳ್ಳೆ ಒಣ ಶುಂಠಿ ತಯಾರಿಸುವಾಗ ಅದರ ಸಿಪ್ಪೆ ತೆಗೆಯದೆ ತಯಾರಿಸುತ್ತಾರೆ. ಸಿಪ್ಪೆ ತೆಗೆದ ಶುಂಠಿಗೆ ಹೆಚ್ಚು ಬೆಲೆಯು ದೊರೆಯುವದಾದರೂ ಸಿಪ್ಪೆ ತೆಗೆಯಲಿಕ್ಕೆ ಖರ್ಚು ತಗಲುವುದು. ಈ ಸಿಪ್ಪೆಯಲ್ಲಿ ಶೇಕಡಾ ೪, ೫ರ ಪ್ರಕಾರ ಎಣ್ಣೆಯು ಇದೆ. ಈ ಸಿಪ್ಪೆಯನ್ನು ಒಣಗಿಸಿ ಪರದೇಶಗಳಿಗೆ ಕಳುಹಿಸಿದರೆ ಪ್ರತ್ಯೇಕ ಹಣವು ದೊರೆಯುವುದು. ಅಗೆದು ತೆಗೆದೊಡನೆ ಅವುಗಳಿಗೆ ಇರುವ ಬೇರನ್ನೆಲ್ಲಾ ತೆಗೆದು ಚೆನ್ನಾಗಿ ತೊಳೆಯಬೇಕು. ನಂತರ ರಾತ್ರಿಹಾಕಿಟ್ಟರೆ ಕೊಳೆಯುವಿಕೆಯು ಆರಂಭವಾಗುತ್ತದೆ. ತೊಳೆದ ಕೂಡಲೆ ನೀರಿನಲ್ಲಿ ಹಾಕಿ ಕತ್ತಿಯಿಂದ ಸಿಪ್ಪೆ ತೆಗೆಯಬೇಕು. ಕೈಯಿಂದಾಗಲೀ, ಪಾತ್ರಗಳ ಚೂರಿನಿಂದಾಗಲೀ, ಸ್ಪಂಜಿನಿಂದಾಗಲೀ ಸಿಪ್ಪೆ ತೆಗೆದರೆ ಗಡ್ಡೆಯಲ್ಲಿಯೂ ಸಿಪ್ಪೆಯಲ್ಲಿಯೂ ಇರುವ ಪರಿಮಳ ದ್ರವ್ಯವು ಹಾಳಾಗಿ ಶಿಪ್ಪೆಯು ವ್ಯರ್ಥವಾಗುವುದು. ಸಿಪ್ಪೆ ತೆಗೆದ ನಂತರ ತೊಳೆಯುವ ನೀರಿಗೆ ಸಾಧಾರಣ ೬೦ ಗೆಲನಿಗೆ ಅರ್ಧ ಪ್ಯಾಂಟ್ ಲಿಂಬೆ ರಸವನ್ನು ಕೂಡಿಸಿ ತೊಳೆದರೆ ಶುಂಠಿಯು ಬಹಳ ಬೆಳ್ಳಗಾಗುವುದು. ನಂತರ ಸಿಮೆಂಟು ಹಾಕಿದ ನೆಲದ ಮೇಲೆ ಒಂದು ವಾರ ಒಣಗಿಸುವಾಗ ಬಿಳೇ ಶುಂಠಿಯು ತಯಾರಾಗುವುದು. ಇಂಥಾ ಶುಂಠಿಗೆ ಪರದೇಶಗಳಲ್ಲಿ ಟನ್ನಿಗೆ ೧೨೦ ಪೌಂಡಿನಿಂದ ೧೫೦ ಪೌಂಡುಗಳ ವರೆಗೆ ಕ್ರಯವು ಸಿಕ್ಕುವುದು.

ಅವಿವೇಕದ ಪರಿಣಾಮ.

ಕಥೆ.

(ಶ್ರೀಯುತ ಹಾರಾಡಿ ಲಕ್ಷ್ಮಣ ಶೈ)

[ಇದು ಕಲ್ಪಿತ ಕಥೆಯಾದುದರಿಂದ ಇದರೊಳಗಣ ಸರ್ವ ವ್ಯಕ್ತಿಗಳ ನಾಮಗಳೂ ಸ್ಥಳನಾಮಗಳೂ ಕಲ್ಪಿತವಾದವುಗಳೇ ಎಂಬುದು ಪಾಠಕ ಮಹಾಶಯರಿಗೆ ತಿಳಿದಿರಲಿ.]

— ೧ —

ಮೀನಾಕ್ಷಿ ಬಾಯಿಯು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಪ್ರಥಮ ಸ್ಥಾನವನ್ನು ಪಡೆದಿರುವಳೆಂಬ ವೃತ್ತಾಂತವು ಮಂಗಳೂರಿನ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿತವಾದೊಡನೆಯೇ ಮಂಗಳೂರು ಪೇಟೆಯಲ್ಲೆಲ್ಲ ಈ ವಾರ್ತೆಯು ಹರಡಿತು. ಸರ್ವರೂ ಇದೇ ವಿಷಯ ಮಾತನಾಡಲಾರಂಭಿಸಿದರು. ಎಲ್ಲಿ ಹೋದರೂ ಇದೇ ವಿಷಯ. ಕಾಫಿ ಹೋಟೇಲುಗಳಲ್ಲೂ ಕೋರ್ಟು ಆಫೀಸುಗಳಲ್ಲೂ ಇದೇ ವಿಷಯದಲ್ಲಿ ತರ್ಕವಿತರ್ಕಗಳು ನಡೆಯಲು ತೊಡಗಿದವು. ಕೆಲವರಿಗೆ ಈ ವಾರ್ತೆಯಿಂದ ಸಂತೋಷವಾಯಿತು. ಹಲವರಿಗೆ ಇದರಿಂದ ಅಸಂತೋಷವುಂಟಾಯಿತು. ಒಬ್ಬ ಅಬಲೆಯು ಪ್ರಥಮ ಸ್ಥಾನವನ್ನು ಪಡೆಯುವುದೆಂದರೇನು? ಎಂಬುದು ಹಲವರ ಪ್ರಶ್ನೆ. ಮೀನಾಕ್ಷಿ ಬಾಯಿಯು ಪ್ರಥಮ ಸ್ಥಾನವನ್ನು ಹೊಂದಿದ್ದರಿಂದ ಯುವಕ ವಿದ್ಯಾರ್ಥಿಗಳ ಸಮೂಹದಲ್ಲೆಲ್ಲ ಅಸಂತೋಷದ ಚಿಹ್ನೆಗಳು ತಲೆದೋರಲಾರಂಭಿಸಿದುವು. ಆರು ಈ ತನಕ ಸ್ತ್ರೀ ವಿದ್ಯಾಭ್ಯಾಸ, ಸ್ತ್ರೀ ಸ್ವಾತಂತ್ರ್ಯ, ವರಶುಲ್ಕ ತಿರಸ್ಕಾರ ಇತ್ಯಾದಿಗಳ ಕುರಿತು ತರ್ಕಕೂಟಗಳಲ್ಲಿ ಭಾಷಣಗಳನ್ನು ಕೊಡುತ್ತಿದ್ದರೋ ಅಂಥವರೆ ಇಂದು ಸ್ತ್ರೀ ವಿದ್ಯಾಭ್ಯಾಸಕ್ಕೂ ಸ್ತ್ರೀ ಸ್ವಾತಂತ್ರ್ಯಕ್ಕೂ ವಿರೋಧವಾಗಿ ಭಾಷಣಗಳನ್ನು ಕೊಡಲು ತೊಡಗಿದರು. ವರಶುಲ್ಕವನ್ನು ಅಗತ್ಯವಾಗಿ ಹೆಚ್ಚಿಸಬೇಕೆಂದರು. ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಕೊಟ್ಟರೆ ದೇಶವು ನಿಮ್ನ ಸ್ಥಾನಕ್ಕಿಳಿಯುವುದು ಎಂಬದಾಗಿ ಒತ್ತಿ ಒತ್ತಿ ನುಡಿದರು!! ಈ ವಿಷಯದಲ್ಲಿ ವೃತ್ತ ಪತ್ರಗಳಲ್ಲೆಲ್ಲ ನೂರಾರು ಲೇಖನಗಳನ್ನು ಬರೆದರು!!!

ಮುಂಚಿನ ವರ್ಷವೂ ಅಲ್ಲಿಯ ಅವುದೋ ಒಂದು ಹೈಸ್ಕೂಲಿನಲ್ಲಿ ಕಲಿಯುತ್ತಿದ್ದ ಸತ್ಯಭಾಮಾ ಬಾಯಿಯೂ ಪುರಂಧರರನ್ನೆಲ್ಲಾ ಹಿಂದಕ್ಕೆ ಹಾಕಿ "ಮೆಟ್ರಿಕ್ಯುಲೇಶನ್" ಪರೀಕ್ಷೆಯಲ್ಲಿ ದ್ವಿತೀಯ ಸ್ಥಾನವನ್ನು ಹೊಂದಿದ್ದರಿಂದಲೇ ಯುವಕ ವಿದ್ಯಾರ್ಥಿಗಳ ಸಮೂಹವು ಅತೀ ಸಂತಪ್ತವಾಗಿತ್ತು. ಅದರ ಮೇಲೂ ಇನ್ನೊಂದು ವಿಪತ್ತು. ಮೀನಾಕ್ಷಿ ಬಾಯಿಗೆ ಈ ವರ್ಷ ಪ್ರಥಮ ಸ್ಥಾನವು ದೊರಕಿತು. ವಿದ್ಯಾರ್ಥಿಗಳ ಸಮೂಹವು ಪರೀಕ್ಷಾಕರ್ತರನ್ನು ದೂರುವುದಕ್ಕೂ ಹಿಂಜರಿಯಲಿಲ್ಲ. ಬಾಲೆಯ ನಾಮವನ್ನು ನೋಡಿಯೇ ಹೆಚ್ಚಿಗೆ ಮಾರ್ಕುಗಳನ್ನು ಕೊಟ್ಟರೆಂಬದಾಗಿ ನುಡಿಯುವುದಕ್ಕೂ ಕೆಲವು ವಿದ್ಯಾರ್ಥಿಗಳು ಬೆದರಲಿಲ್ಲ. ಯುವಕ ವಿದ್ಯಾರ್ಥಿಗಳ ಸಮೂಹಕ್ಕೆ ಇಷ್ಟರಲ್ಲಿಯೂ ಸಮಾಧಾನವಾಗಲಿಲ್ಲ. ಅಲ್ಲಲ್ಲಿ ಸಭೆಗಳನ್ನು ಜರಗಿಸಿದರು! ಅನೇಕ ಠರಾವುಗಳನ್ನು ಮಾಡಿದರು!! ಅಬಲೆಯರನ್ನು ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಯನ್ನೀಯಬಾರದೆಂಬದಾಗಿಯೂ ಒಮ್ಮೆ ಹಾಗೆ ಮಾಡಲು ಸಾಧ್ಯವಾಗದಿದ್ದರೆ ಸ್ತ್ರೀಯರಿಗೋಸ್ಕರ ಪ್ರತ್ಯೇಕ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ನಿಯಮಿಸಬೇಕೆಂಬದಾಗಿಯೂ ನಿರ್ಣಯಗಳನ್ನು ಮಾಡಿದರು!!! ಈ ನಿರ್ಣಯಗಳ ನಕಲುಗಳು 'ಯುನಿವರ್ಸಿಟಿ'ಗೂ ಪ್ರೇಷಿತವಾಯಿತು. ಆದರೆ ವಿವೇಕಸಂಪನ್ನವಾದ ಯುನಿವರ್ಸಿಟಿಯು ಈ ನಿರ್ಣಯಗಳಿಗೆ ಲಕ್ಷ್ಯವನ್ನೇ ಕೊಡಲಿಲ್ಲ. ವಿದ್ಯಾರ್ಥಿಗಳ ಸಮೂಹವು ಕ್ರೋಧದಿಂದಲೂ ನಾಚಿಕೆಯಿಂದಲೂ ತಲೆಯನ್ನು ತಗ್ಗಿಸಬೇಕಾಯಿತಲ್ಲದೆ ಮತ್ತೇನನ್ನೂ ಮಾಡಲಾಗಲಿಲ್ಲ.

ಅತ್ತ ಅಬಲೆಯೊಬ್ಬಳು ಪ್ರಥಮ ಸ್ಥಾನವನ್ನು ಪಡೆದಿರುವಳೆಂಬ ವಾರ್ತೆಯನ್ನು ಕೇಳಿ ಮಹಿಳಾ ಸಮೂಹದಲ್ಲಿ ಹಿಡಿಯಲಾರದಷ್ಟು ಆನಂದದ ಕುರುಹುಗಳು ತೋರಿದುವು. ಮೀನಾಕ್ಷಿ ಬಾಯಿಯು ಬೇರೆ ಬೇರೆ ಸ್ಥಾನಗಳಿಂದ ನಿಮಂತ್ರಿತಳಾದಳು. ಇನ್ನು ಕೆಲವೆಡೆಯಿಂದ ಅವಳಿಗೆ ಮಾನಪತ್ರಗಳು ಹೊರೆಹೊರೆಯಾಗಿ ಬರೆದುವು. ಆಗ ಬಂದ ಉಚಿತ ಉಡುಗರೆಗಳಿಗೆ ಲೆಕ್ಕ ಮಿತಿಯಿಲ್ಲ! ಮಾತೃಭೂಮಿಯ ಉದ್ಧಾರಕ್ಕಾಗಿ ಹೋರಾಡುವ ಕೆಲವು ದೇಶವತ್ಸಲರಿಂದಲೂ ಆಕೆಗೆ ಅತ್ತಿತ್ತ 'Congratulatory Letters' (ಅಭಿನಂದನ ಪತ್ರ)ಗಳು ಬಾರದಿರಲಿಲ್ಲ. ಮಾಸಿಕ ಪತ್ರಗಳ ಸಂಪಾದಕರೂ, ಸಾಪ್ತಾಹಿಕ ಪತ್ರಗಳ ಅಧಿಕಾರಿಗಳೂ, ತ್ರೈಮಾಸಿಕಗಳ ಸಂಪಾದಕರೂ ಮೀನಾಕ್ಷಿ ಬಾಯಿಯ ಕುರಿತು ಸುಚಿಂತಾಪೂರ್ಣ ಲೇಖನಗಳನ್ನು ಬರೆದು ತಮ್ಮ ತಮ್ಮ ಪತ್ರಪತ್ರಿಕೆಗಳ ಪುಟಗಳನ್ನು ತುಂಬಿಸಿಬಿಟ್ಟರು. ವಿವಿಧ ಸ್ಥಾನಗಳಲ್ಲಿರುವ ನಾರೀ ಸಮಿತಿಯವರಿಂದ ಪುಷ್ಪವೃಷ್ಟಿಯಂತೆ 'ಸರ್ಟಿಫಿಕೇಟು'ಗಳ ವೃಷ್ಟಿಯು ಆಕೆಯ ಮೇಲೆ ಒಂದು ಸುರಿಯಲಾರಂಭಿಸಿತು. ಮಹಿಳಾ ಸಭೆಯವರೂ ಆಕೆಯ ಸಮ್ಮಾನಾರ್ಥವಾಗಿ 'ಸ್ತ್ರೀ ಸ್ವಾತಂತ್ರ್ಯ' ಎಂಬ ನಾಟಕವೊಂದನ್ನು ಚಂದವಾಗಿ ಅಭಿನಯಿಸಿ ತೋರಿಸಿದರು. ಒಟ್ಟಾರೆ ಸಂತೋಷದ ಕುರುಹುಗಳಾಗಿ ಏನೆಲ್ಲಾ ಮಾಡಬೇಕೋ ಅದನ್ನೆಲ್ಲಾ ಲಲನಾಮಣಿಗಳು ಮಾಡಿತೋರಿಸಲು ಹಿಂದೆಮುಂದೆ ನೋಡಲಿಲ್ಲ. ಹೀಗಾಗಿ ಮೀನಾಕ್ಷಿ ಬಾಯಿಯ ನಾಮವು ದೇಶದ ಸಂದುಗೊಂದುಗಳಲ್ಲಿಯೂ ಪ್ರಸಾರವಾದಂತಾಯಿತು.

— ೨ —

ಮೀನಾಕ್ಷಿ ಬಾಯಿಯ ವಿಷಯದಲ್ಲಿ ಇಷ್ಟೆಲ್ಲಾ ಗದ್ದಲವಾಗುವುದೆಂಬದಾಗಿ ಅವಳ ತಂದೆಯಾದ ಮೋಹನರಾಯರಾಗಲೀ ತಾಯಿಯಾದ ಯಶೋಧಾಬಾಯಿಯವರಾಗಲೀ ಸ್ವಪ್ನದಲ್ಲಿಯೂ ಕೂಡ ಭಾವಿಸಿರಲಿಲ್ಲ! ಪುತ್ರಿಗೆ ಬಂದಿರುವ ಅಕ್ಷರಗಳು ಒಂದರೆ ಸಾಕೆಂಬದಾಗಿ ಎಣಿಸಿ, ಅವರಿಬ್ಬರೂ ಮೀನಾಕ್ಷಿ ಬಾಯಿಯನ್ನು ಮಂಗಳೂರಿನ ಮಹಿಳಾ ವಿದ್ಯಾಭವನಕ್ಕೆ ಕಳುಹಿಸಿಕೊಟ್ಟರು. ಆ ವೇಳೆ ಆಕೆಯು ವಿದ್ಯಾಭವನದಲ್ಲಿ ಬೋಧಿಸಲ್ಪಟ್ಟ ವಿಷಯಗಳೆಲ್ಲವನ್ನೂ ಮನಸ್ಸುಕೊಟ್ಟು ಅಭ್ಯಾಸಮಾಡಿದುದರಿಂದ ತಂದೆತಾಯಿಗಳಿಬ್ಬರೂ ಆಕೆಯನ್ನು ಅದೇ ವಿದ್ಯಾಭವನದಲ್ಲಿ ಶಿಕ್ಷಣಕ್ಕಾಗಿ ಕಳುಹಿಸಿಕೊಡುವುದಕ್ಕೆ ಮನಸ್ಸುಂಟಾಯಿತು. ಮೀನಾಕ್ಷಿ ಬಾಯಿಯು ಏಳನೇ ಕ್ಲಾಸಿನಲ್ಲಿ ಚೆನ್ನಾಗಿ ಕಲಿತು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದುದರಿಂದಂತೂ ಮೋಹನರಾಯರಿಗೆ ಆಕೆಯನ್ನು ಮನೆಯಲ್ಲಿ ಕುಳ್ಳಿರಿಸುವುದಕ್ಕಿಂತ ಮೆಟ್ರಿಕ್ಯುಲೇಶನ್ ತರಗತಿಯ ವರೆಗೆ ಕಲಿಸಬೇಕೆಂಬ ಕುತೂಹಲವುಂಟಾಯಿತು. ಆದರೆ ಯಶೋಧಾಬಾಯಿಯವರಿಗೆ ಮಾತ್ರ ಪುತ್ರಿಯನ್ನು ಇನ್ನು ಮುಂದೆ ವಿದ್ಯಾಭವನಕ್ಕೆ ಕಳುಹಿಸುವ ಇಚ್ಛೆಯಿರಲಿಲ್ಲ. ಇನ್ನು ಮುಂದೆ ಪುತ್ರಿಯನ್ನು ವಿದ್ಯಾಲಯಕ್ಕೆ ಕಳುಹಿಸಿಕೊಡಬಾರದಾಗಿ ಆಕೆಯು ತನ್ನ ಪತಿಗೆ ಒತ್ತಾಯಪಡಿಸಿದಳು. ಮೋಹನರಾಯರು ಮಾತ್ರ ತನ್ನ ಪತ್ನಿಯ ಮಾತಿಗೆ ಕಿವಿಗೊಡದೆ ಪುತ್ರಿಯನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಕಳುಹಿಸಿಯೇ ಬಿಟ್ಟರು. ಮೀನಾಕ್ಷಿ ಬಾಯಿಗೆ ಆ ವಿದ್ಯಾಲಯದಲ್ಲಿ ಒಂದಿಷ್ಟು ಸಂಗೀತದ ಅಭ್ಯಾಸವೂ, ನರ್ತನದ ಅಭ್ಯಾಸವೂ ಲಭಿಸಿತು. [illegible] ನೃತ್ಯ, [illegible] ನೃತ್ಯ, ನೃತ್ಯನೃತ್ಯ ಮುಂತಾದ ನರ್ತನಗಳಲ್ಲಿ ಆಕೆಗೆ ಯಥೇಷ್ಟ ಅಭ್ಯಾಸವು ದೊರೆಯಿತು.

ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉಚ್ಚಸ್ಥಾನವನ್ನು ಹೊಂದಿರುವಳೆಂಬುದನ್ನು ಕೇಳಿ, ಮೋಹನರಾಯರು ಮೀನಾಕ್ಷಿ ಬಾಯಿಯನ್ನು 'ಇಂಟರ್‌ಮಿಡಿಯಟ್' ತರಗತಿಗೂ ಸೇರಿಸಿಬಿಡಬೇಕೆಂಬುದಾಗಿ ನಿರ್ಣಯಿಸಿದರು. ಯಶೋಧಾಬಾಯಿಯವರಿಗೆ ಇದರಲ್ಲಿ ಮನಸ್ಸಿಲ್ಲ. ಮೀನಾಕ್ಷಿಯನ್ನು ಇನ್ನು ಎಷ್ಟುಮಾತ್ರಕ್ಕೂ ವಿದ್ಯಾಲಯಕ್ಕೆ ಕಳುಹಿಸಿಕೊಡಬಾರದೆಂಬದಾಗಿಯೂ, ಆಕೆಗೆ ವಿವಾಹವಾಗಬೇಕೆಂಬದಾಗಿಯೂ ಬಗೆಬಗೆಯಿಂದ ಹೇಳಿಕೊಂಡದ್ದರಿಂದ ಮೋಹನರಾಯರು ಅಗತ್ಯವಾಗಿ ಒಪ್ಪಲೇಬೇಕಾಯಿತು. ಆ ವೇಳೆ ಅವರು ಮೀನಾಕ್ಷಿಯ ವಿವಾಹಕ್ಕೆ ನಿಶ್ಚಯವನ್ನು ಮಾಡತೊಡಗಿದರು. ತನ್ನ ಪುತ್ರಿಯು ವಿದ್ಯಾಪರೀಕ್ಷೆಯಲ್ಲಿ ಉಚ್ಚಸ್ಥಾನವನ್ನು ಪಡೆದು ದೇಶದಲ್ಲೆಲ್ಲ ಕೀರ್ತಿಯನ್ನು ಪಡೆದುದರಿಂದ ಆಕೆಯೊಡನೆ ವಿವಾಹವಾಗಲಿಚ್ಛೆಯುಳ್ಳ ತರುಣರು ಆಕೆಯ ಮನಸ್ಸಿಗೊಪ್ಪಿದವರಾಗಿರಬೇಕು. ಅಂಥ ತರುಣರ ವಿದ್ಯಾಬುದ್ಧಿಗಳನ್ನು ತನ್ನ ಪುತ್ರಿಯೇ ಪರೀಕ್ಷಿಸಿ ತನಗೆ ಬೇಕಾದವರನ್ನು ಆರಿಸಿಕೊಳ್ಳುವಳಲ್ಲದೆ ತಾನು ಆರನ್ನು ಒತ್ತಾಯದಿಂದ ಆಕೆಯ ಕೊರಳಿಗೆ ಕಟ್ಟುವಂತಿಲ್ಲವೆಂಬದಾಗಿಯೂ ಪ್ರಚಾರಗೊಳಿಸಲು ಮೋಹನರಾಯರು ಹಿಂಜರಿಯಲಿಲ್ಲ.

ಇದೀಗ ನಾಲ್ಕು ದಿಕ್ಕುಗಳಲ್ಲಿಯೂ ಹಬ್ಬಿತು. ಯುವಕ ವಿದ್ಯಾರ್ಥಿಗಳು ಇನ್ನೊಮ್ಮೆ ಸಭೆಯನ್ನು ಜರಗಿಸದಿರಲಿಲ್ಲ. ಸಭೆಯಲ್ಲಿ ಅನೇಕ ಸಮಯದ ವರೆಗೆ ಚರ್ಚೆಯಾಗಿ 'ಸರಕಾರಿ ಕಾಲೇಜಿನ ಚಂದ್ರಶೇಖರ ರಾಯನನ್ನು ಮೀನಾಕ್ಷಿಯೊಡನೆ ಪರೀಕ್ಷೆಗೆ ಕಳುಹಿಸಿಕೊಡುವುದಾಗಿ ನಿರ್ಣಯವಾಯಿತು. ಚಂದ್ರಶೇಖರರಾಯನು ಮೊದಲು ಅದಕ್ಕೆ ಒಪ್ಪಲಿಲ್ಲ. ಆದರೆ ವಿದ್ಯಾರ್ಥಿಗಳೆಲ್ಲರೂ ಆತನು ಹೋದರೆ ಕಾರ್ಯವು ಖಂಡಿತವಾಗಿಯೂ ಕೈಗೂಡುವದೆಂಬದಾಗಿ ಧೈರ್ಯವನ್ನು ಕೊಟ್ಟುದರಿಂದ ಆತನು ಹೇಗೂ ಒಪ್ಪಿಗೆಯನ್ನು ಕೊಡಬೇಕಾಯಿತು. ಚಂದ್ರಶೇಖರನು ಮೀನಾಕ್ಷಿಯನ್ನು ಅಗತ್ಯವಾಗಿ ವಿವಾಹಮಾಡಿಕೊಳ್ಳಬೇಕೆಂಬುದರ ಸೂಚನೆಯು [illegible] ಕಾರಣವು ಬೇರಾವುದಲ್ಲ. ಆಕೆಯು 'ಮೆಟ್ರಿಕ್ಯುಲೇಶನ್' ಪರೀಕ್ಷೆಯಲ್ಲಿ ಯುವಕ ವಿದ್ಯಾರ್ಥಿಗಳನ್ನೆಲ್ಲಾ ಹಿಂದಕ್ಕೆ ಹಾಕಿ ಉಚ್ಚಸ್ಥಾನವನ್ನು ಪಡೆದಳಲ್ಲವೇ? ಅದುದರಿಂದ ಆಕೆಯನ್ನು ಚಂದ್ರಶೇಖರನು ವಿವಾಹ ಮಾಡಿಕೊಂಡು, ಆಕೆಯು [illegible] ಯೋಗ್ಯಳಾದವಳೆಂಬದಾಗಿ ತೋರಿಸಬೇಕಾಗಿಯೂ ಆಕೆಯನ್ನು ಕೇವಲ ದಾಸಿಯಂತೆ ನಡೆಯಿಸಬೇಕಾಗಿಯೂ ಯುವಕ ವಿದ್ಯಾರ್ಥಿಗಳೆಲ್ಲರ ಉತ್ಕಟ ಇಚ್ಛೆಯಾಗಿತ್ತು. ಚಂದ್ರಶೇಖರನು ಇದಕ್ಕೆಲ್ಲಾ ಒಪ್ಪಿಗೆಯಿತ್ತನು. ಆ ವೇಳೆ 'ತ್ರೀ ಚಿಯರ್ಸ್ ಟು ಚಂದ್ರಶೇಖರ' ಎಂಬ ಜಯಜಯಕಾರದಿಂದ ಯುವಕ ವಿದ್ಯಾರ್ಥಿಗಳ ಸಭೆಯು ಮುಕ್ತಾಯವಾಯಿತು. ಚಂದ್ರಶೇಖರನ ವಿವಾಹ ಕಾಲದಲ್ಲಿ [illegible] ನಡೆಯಬೇಕು. [illegible] ವಿಷಯದಲ್ಲಿ ಯುವಕ ವಿದ್ಯಾರ್ಥಿಗಳು ಚರ್ಚಿಸದಿರಲಿಲ್ಲ. ಆದರೆ ಒಂದೇ [illegible] ಮೀನಾಕ್ಷಿಯನ್ನು ವಿವಾಹ ಮಾಡಿಕೊಳ್ಳಲಿಕ್ಕೆ ಹೋದ ಚಂದ್ರಶೇಖರನು ಮೀನಾಕ್ಷಿಯು ನಡೆಸಿದ ವಿದ್ಯಾಬುದ್ಧಿ ಪರೀಕ್ಷೆಯಲ್ಲಿ [illegible] ತನ್ನ [illegible] ಮುಂಗಳನ್ನು [illegible] ತಿಳಿದು ಬಂದಿತು.

[illegible] ತರಗತಿಗಳಲ್ಲಿ ತೇರ್ಗಡೆ ಹೊಂದಿದ ತರುಣರ [illegible] ಮೀನಾಕ್ಷಿಯು ನಡೆಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾಗದೆ ಹಿಂದಕ್ಕೆ ಹೋಗಬೇಕಾಯಿತು. ಆದರೆ [illegible] ಆಕೆಯು ಪರೀಕ್ಷೆ ಮಾಡುತ್ತ [illegible] ವಿವಾಹ [illegible] ಮೋಹನರಾಯರು ತನ್ನ ವಿವಾಹ [illegible] ಪರೀಕ್ಷೆಯಲ್ಲಿ [illegible] ತನ್ನ [illegible] ತರುಣನನ್ನು [illegible] ಮೀನಾಕ್ಷಿಗೆ ವಿವಾಹ ಮಾಡುವೆನು ಎಂಬುದಾಗಿ ಪ್ರಚಾರ ಮಾಡಿದರು.

— ೩ —

ಶಂಕರರಾಯನು [illegible] ಮೀನಾಕ್ಷಿ [illegible] ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ [illegible] ಕಲಿಯುತ್ತಿದ್ದನು. ಆತನಿಗೆ ಆತನ ಚಿಕ್ಕ ತಾಯಿಯೊಬ್ಬಳಲ್ಲದೆ [illegible] ಇರಲಿಲ್ಲ. ಆತನ ತಂದೆಯು ಒಬ್ಬ ಶ್ರೀಮಂತ [illegible] ನಾಗಿದ್ದನು. ತಂದೆಯು ಯಥೇಷ್ಟ ದ್ರವ್ಯವನ್ನು [illegible] ಸಂಪಾದಿಸಿಟ್ಟು ಸ್ವರ್ಗಸ್ಥನಾಗಿದ್ದನು. ಅದುದರಿಂದ ಶಂಕರರಾಯನನ್ನು ಶ್ರೀಮಂತನೆನ್ನುವುದರಲ್ಲಿ [illegible] ತಪ್ಪಿಲ್ಲ.

ಶಂಕರರಾಯನಿಗೆ ಆಗ ತಾನೇ ವಿವಾಹದ ವಯಸ್ಸು ಆಗಿತ್ತು. ಆತನ ಚಿಕ್ಕತಾಯಿಗೂ [illegible] ಸೊಸೆಯ ಮುಖಕಮಲವನ್ನು ನೋಡಬೇಕೆಂಬ ಆತುರವಿದೆ. ಅದುದರಿಂದ ಆಕೆಯೂ ಶಂಕರರಾಯನಿಗೆ ಬೇಗನೆ ವಿವಾಹವನ್ನು ಮಾಡಿಕೊಳ್ಳಬೇಕಾಗಿ ಒತ್ತಾಯ ಪಡಿಸುತ್ತಿದ್ದಳು. ಹಲವೆಡೆಗಳಿಂದ ಬಾಲಿಕೆಯರ ಜಾತಕಗಳು ಶಂಕರರಾಯನಿಗೆ [illegible] ಬಂದಿದ್ದುವು. ಆದರೂ ಬಂದ ಜಾತಕಗಳ ಪೈಕಿ ಒಂದೇ ಒಂದು ಬಾಲಿಕೆಯಾದರೂ ಆತನ ಮನಸ್ಸಿಗೊಪ್ಪಲಿಲ್ಲ. ವಿವಾಹ

(೨೦ನೇ ಪುಟಕ್ಕೆ [illegible])

[illegible]

[illegible] ಅಮೆರಿಕದಿಂದ [illegible] ಕೇವಲ ರೂ. 5 [illegible]

[illegible] ಕ್ರಯ ರೂಪಾಯಿ 5 ಮಾತ್ರ. ಪೆಕಿಂಗ್ ಮತ್ತು ಅಂಚೆವೆಚ್ಚ ಆಣೆ 8.

ಉತ್ತಮ ಏಯರ್ ಗನ್.

ಅಮೇರಿಕದಿಂದ ಇತ್ತೀಚೆಗೆ ತರಿಸಲ್ಪಟ್ಟದು. ನಮ್ಮಲ್ಲಿ ಉತ್ತಮ ಎಯರ್ ಗನ್ನುಗಳಿವೆ. ಅವು ಗಟ್ಟಿಯಾಗಿ [illegible] ಸಮಯ ಬಾಳಿ, ಒಡೆಯುವಾಗ ದೊಡ್ಡ ಶಬ್ದವನ್ನುಯುಮಾಡುವವು. ಪ್ರತಿ ಗುಂಡಿನೊಂದಿಗೆ 1000 ಚರೆಗಳು ಉಚಿತ. ಒಂದು ಗುಂಡಿನದಕ್ಕೆ ರೂ. 6—0—0; 350 ಚರೆಗಳಿಗೆ ರೂ. 8—0—0; ರೂ. 9—0—0; 500 ಚರೆಗಳಿಗೆ ರೂ. 10; ರೂ. 11; ಒಂದು ಸಾವಿರ ಚರೆಗಳಿಗೆ ರೂ. 15. ಪೆಕಿಂಗ್ ಮತ್ತು ಅಂಚೆವೆಚ್ಚ ರೂ. 2.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಕೆಮೂರ್ ಬ್ರದರ್ಸ್ ಎಂಡ್ ಕಂಪೆನಿ,
ಪೋಸ್ಟು ಬಾಕ್ಸ್ ನಂಬ್ರ 6795, ಬಿ. ಬಿ.
ಕಲ್ಕತ್ತಾ.

ಗೀತಾ ಜಯಂತಿಯ ಅಭಿನಂದನೋತ್ಸವದ ಸಲುವಾಗಿ ಒಂದು ತಿಂಗಳು ವರೆಗೆ ಮಾತ್ರ ಈ ರಿಯಾಯಿತಿ!

ಶ್ರೀಮನ್ಮಹಾರಾಜರವರ, ಶ್ರೀಯುವರಾಜರವರ, ಶ್ರೀಮನ್ಮಹಾರಾಣಿ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಇವರುಗಳ ಕೃಪಾಪೋಷಣೆಯನ್ನು ಪಡೆದು, ಕರ್ಣಾಟಕಸ್ಥರ ಉದಾರಾಶ್ರಯದಿಂದ ಕೂಡಿ ಪ್ರಕಟಿಸುತ್ತಿರುವ

ಸಚಿತ್ರ ಕನ್ನಡ ಸುಂದರ ಮಾಸಪತ್ರಿಕೆ. **"ಶ್ರೀ ಕೃಷ್ಣ"** ೧೫ನೆಯ ವರ್ಷಾರಂಭ:— ಸೆಪ್ಟಂಬರ ೧೯೩೯.

ಸಂಪಾದಕ:— ಶ್ರೀ ಬಿ. ಆರ್. ಚಕ್ರವರ್ತಿ.

ವಾರ್ಷಿಕ ಚಂದಾ:—		
ಪೋಷಕರಿಗೆ	ರೂ. ೧೦—೦—೦	ಅಂಚೆ ಹಾಸಲು ಉಚಿತ!
ಅಧ್ಯಾಪಕರಿಗೆ	ರೂ. ೫—೦—೦	
ಇತರರಿಗೆ	ರೂ. ೨—೪—೦	

ಇದರಲ್ಲಿ ಪರಿಪುಷ್ಟವಾದ ವಿದ್ಯೆ, ನೀತಿ, ಮತ, ಕೃಷಿ, ಕೈಗಾರಿಕೆ, ಸಹಕಾರ, ಅರ್ಥಸಾಧಕ, ಭಗವದ್ವಿಲಾಸ, ಇತ್ಯಾದಿ ಪ್ರಾಪಂಚಿಕ ಪಾರಮಾರ್ಥಿಕ ಸಂಪತ್ತಿಗಳು ವೃದ್ಧಿಯಾಗುವುದಕ್ಕೆ ಸಾಧನವಾದ ಉತ್ತಮ ಲೇಖನಗಳು ಸಚಿತ್ರವಾಗಿ ವಿವರಿಸಲಾಗುವುವು. [illegible] ಭಾರತ ಯೋಗಕ್ಷೇಮ [illegible] ಭಗವದ್ಗೀತಾ [illegible] ಶ್ರೀ ವಿಷ್ಣುಸಹಸ್ರನಾಮ [illegible] ಸನಾತನಧರ್ಮ [illegible] "ಶ್ರೀ ಕೃಷ್ಣ"ನಿಗೆ [illegible] ಶ್ರೀಮನ್ಮಹಾರಾಜರವರ [illegible] ಯೋಗ್ಯವಾದ "ರತ್ನ" ಒಂದನ್ನು **ಕೈಗಾಣಿಕೆಯಾಗಿ ಉಚಿತವಾಗಿ ರವಾನಿಸಿ ಕೊಡುವೆವು.** [illegible] ಕಾಣಿಕೆ ಗ್ರಂಥವು ಸ್ವಲ್ಪವೇ ಇದೆ. [illegible] ಕಾಣಿಕೆ ಗ್ರಂಥ ರವಾನಿಸಲಾಗುವುದಿಲ್ಲ. [illegible]

ಮ್ಯಾನೇಜರ್, "ಶ್ರೀ ಕೃಷ್ಣ" ಕಾರ್ಯಾಲಯ, ಮೈಸೂರು.

The Zandu Pharmaceutical Works, Ltd., Bombay, 14.
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಅಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. [illegible] ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೋವು, ಸ್ವರಭಂಗ [illegible] ರಕ್ತಕ್ಷೀಣತೆ, ಪುಷ್ಟಿಹೀನತೆ [illegible] ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

ಕ್ರಯ 1 ಪಾನು ಸೀಸೆ ರೂ. 2—8—0, ½ ಪಾ. ರೂ 1—5—0, ¼ ಪಾ. ರೂ 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— **ದಾಮೋದರ್ ಅಂಡ್ ಕಂಪೆನಿ,** 1/90 ಸೈನಿಯಪ್ಪ ನಾಯಕನ ಬೀದಿ, ಪಿ. ಟಿ. ಮದ್ರಾಸು

ತೀರ್ಥಹಳ್ಳಿ ಏಜಂಟರು:— **ಮೆಸರ್ಸ್ ಪಂಡಿತ ಮತ್ತು ಕಂಪೆನಿ.**

ಮಂಗಳೂರು ಏಜಂಟರು:— **ದಿ ಊಲನ್ ಮಾರ್ಟ್.**

ಸಿರ್ಸಿ ಏಜಂಟರು:— **ಎಸ್. ಎಲ್. ಧಾಕಪ್ಪಾ ಎಂಡ್ ಬ್ರದರ್ಸ್.**

ಸಬ್ ಏಜಂಟರು:— **ಯು. ಜನಾರ್ಧನರಾವ್, ಪುತ್ತೂರು, ದ. ಕನ್ನಡ.**

ವಿವರ ತಿಳಿಯಲು ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

[illegible] ಭಾರತ [illegible]
[illegible] ಮದರಾಸು.

ಹಿಂದೂಸ್ಥಾನದ ಎಲ್ಲಾ ಸಂಸ್ಥಾನಗಳಲ್ಲಿ ಕೆಲಸ ನಡಿಸುತ್ತಿರುವ ಗೋವೈದ್ಯರ [illegible] ಮಹಾಸಭೆಯು ಮದರಾಸು [illegible] ವೆಟರಿನರಿ ಕಾಲೇಜು ಹಾಲಿನಲ್ಲಿ ಸೇರಿತು. [illegible] ಮಂತ್ರಿಯವರಾದ [illegible] ಮೊದಲಿಯಾರರು ಈ ಸಭೆಯನ್ನು ತೆರೆದರು. ಮದರಾಸು ವೆಟರಿನರಿ ಸರ್ವಿಸಿನ ಡೈರೆಕ್ಟರಾದ ಮಿ॥ ಪಿಟಿಸೇಂಡರ್ಸ್ಸರವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. "ಹಿಂದೂಸ್ಥಾನದಲ್ಲಿ ಜಾನುವಾರುಗಳನ್ನು ಹಾಲಿಗಾಗಿಯೂ ಬೇಸಾಯಕಕ್ಕಾಗಿಯೂ ಸಾಕುವುದರಿಂದ ಅವುಗಳ ಅಭಿವೃದ್ಧಿಯೇ ಜನಾಂಗದ ಅಭಿವೃದ್ಧಿಯಾಗಿರುವುದರಿಂದ, ಜಾನುವಾರುಗಳಿಗೆ ರೋಗಗಳು ಬಾರದಂತೆ ತಡೆಗಟ್ಟುವದೂ, ರೋಗಗಳು ಬಂದಾಗ ತಕ್ಕದಾದ ನಿವಾರಣೋಪಾಯಗಳನ್ನು ಮಾಡುವದು; ಈ ಇಲಾಖೆಯಲ್ಲಿ ಕೆಲಸ ನಡಿಸುತ್ತಿರುವ ಉದ್ಯೋಗಸ್ಥರ ಸ್ಥಿತಿಯನ್ನು ಅಭಿವೃದ್ಧಿಪಡಿಸುವುದು; ಈ ಉದ್ದೇಶಗಳನ್ನಿಟ್ಟುಕೊಂಡು ಈ ಮಹಾಸಭೆಯು ವರ್ಷಕ್ಕೊಂದಾವರ್ತಿ ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಸೇರುತ್ತದೆ. ಈ ಸಂಘದ ಉದ್ದೇಶವನ್ನು ಸಾರ್ಥಕಗೊಳಿಸುವುದಕ್ಕಾಗಿ ಇಂಡಿಯನ್ ವೆಟರಿನರಿ ಜರ್ನಲನ್ನು ಪ್ರಕಟಿಸಿದುದರಿಂದ ಹಿಂದೂಸ್ಥಾನಕ್ಕೆ ಹೆಚ್ಚು ಪ್ರಯೋಜನವಾದುದು ಮಾತ್ರವಲ್ಲ, ಒಸ್ಟ್ರೇಲಿಯಾ, ಜಪಾನ, ಚೈನಾ, ಜರ್ಮನಿ, ಫ್ರಾನ್ಸ, ಇಂಗ್ಲೆಂಡ ಮತ್ತು ಅಮೇರಿಕ ಈ ಕಡೆಗಳಲ್ಲಿಯೂ ಸಹ ಇದಕ್ಕೆ ಪೋಷಕರು ಇರುವುದು ಶುಭ ಸೂಚನೆಯಾಗಿದೆ. ರಿಂಡರ್‌ಪೆಸ್ಟ್ ಎಂಬ ಭಯಂಕರ ರೋಗದಿಂದ ಹೆಚ್ಚು ಜಾನುವಾರುಗಳು ಸಾಯುತ್ತಿರುವುದರಿಂದ ಈ ವರುಷ ಮದರಾಸು ಸಂಸ್ಥಾನದ [illegible] ಜಾನುವಾರುಗಳಿಗೆ ಟೀಕೆ ಹಾಕಿಯದೆ. ವೆಟರಿನರಿ ಆಸ್ಪತ್ರೆಗಳನ್ನು ಅದನ್ನು ಹೆಚ್ಚಿಸುವುದಕ್ಕಾಗಿ ಮದರಾಸು ಸರಕಾರವು ಸಾಧಿಸುತ್ತಿರುವುದು ಸಂತೋಷಕರವಾಗಿದೆ" ಎಂದು ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಕೈಲಾಸಪತಿ ಅಯ್ಯರರು ನಿವೇದಿಸಿದರು.

"ಹಿಂದೂಸ್ಥಾನದಲ್ಲಿ ಪುರಾತನ ಕಾಲದಲ್ಲಿ ಜಾನುವಾರು ರೋಗಗಳಿಗೆ ಮದ್ದುಗಳನ್ನು ಹುಡುಕಿದ್ದರು. ಈಗ ಅವುಗಳ ವಿಷಯ ಈಗಿನ ರೀತಿಯಲ್ಲಿ ಕಲಿತ ವೈದ್ಯರು ಶೋಧನೆ ಮಾಡಿ ಅಂಥಾ ಮದ್ದುಗಳನ್ನು ಪ್ರಚಾರಕ್ಕೆ ತರುವಂತೆ ಮಾಡುವುದೂ ಜಾನುವಾರುಗಳನ್ನು ಉತ್ತಮ ರೀತಿಯಲ್ಲಿ ಅಭಿವೃದ್ಧಿಯ ವಿಧಗಳನ್ನು ಬೇಸಾಯಗಾರರಿಗೆ ಹೇಳಿಕೊಡುವದು, ಹಾಲಿನ ಅಭಿವೃದ್ಧಿಯು ಹೆಚ್ಚಾಗುವಂತೆ ಮಾಡುವ ರೀತಿಯನ್ನು ಜನರಿಗೆ ಕಲಿಸಿಕೊಡುವುದೂ ನಿಮ್ಮ ಇಲಾಖೆಗೆ ಬೇರೆ ಬೇರೆ ಸಂಸ್ಥಾನಗಳಲ್ಲಿ ಇರುವ ಸಂಬಳದ ದರ, ಭತ್ತೆ ಕ್ರಮ ಇವುಗಳ ವಿಷಯ ಆಲೋಚಿಸಿ ನಿಮ್ಮ ನಿಮ್ಮ ಸಂಸ್ಥಾನಗಳ ಸರಕಾರದ ಮುಂದೆ ಇಡುವುದು ನಿಮ್ಮ ಕೆಲಸವಾಗಿದೆ. ಇದರಲ್ಲಿ ಸರಕಾರದ ಸಹಾನುಭೂತಿಯು ನಿಮ್ಮ ಕಡೆಗೆ ಇರುವುದು" ಎಂದು ರೆವೆನ್ಯೂ ಮೆಂಬರ್ ಮಂತ್ರಿಯವರು ಹೇಳಿದರು.

ಹಿಂದೂದೇಶದ ಹವೆಗೂ ದನಕರುಗಳ ಸ್ಥಿತಿಗೂ ಯುರೋಪ ಖಂಡದ ದನಕರುಗಳ ಸ್ಥಿತಿಗೂ ಬಹಳ ವ್ಯತ್ಯಾಸವಿರುವುದರಿಂದ, ಇಲ್ಲಿಯ ದನಕರುಗಳ ಸ್ಥಿತಿಗೆ ಅನುಸಾರವಾಗಿಯೇ ಔಷಧಗಳನ್ನೂ ಸಾಕುವ ಕ್ರಮಗಳನ್ನೂ ಅನುಸರಿಸಬೇಕೆಂದೂ, ಹಾಲು ಬೆಣ್ಣೆ ತಯಾರಿಸುವ ವಿದ್ಯೆಯನ್ನು ಬೇಸಾಯಗಾರರಿಗೆ ಚೆನ್ನಾಗಿ ಕಲಿಸಿ ಬೇಸಾಯಗಾರರು ಸುಖದಿಂದ ಇರುವಂತೆ ಸಾಧಿಸಬೇಕೆಂದೂ ಸಭಾಧ್ಯಕ್ಷರು ಹೇಳಿದರು.

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸ್ವಾತಂತ್ರ್ಯವು ಕಾಂಗ್ರೆಸ್ಸಿನ ಧ್ಯೇಯವಾಯಿತು

ಅಧ್ಯಕ್ಷರಿಗೆ ಸ್ವಾಗತ ಸಂಭ್ರಮ

ಯುವಕ ಅಧ್ಯಕ್ಷರ ತೇಜಸ್ವೀ ಭಾಷಣ

"ಸದುದ್ದೇಶವೂ ಸಿಹಿಮಾತುಗಳೂ ಕಠಿಣವಾದ ವಸ್ತುಸ್ಥಿತಿಯ ಸ್ಥಾನವನ್ನು ಹೊಂದಲಾರವು"

ಪಂಡಿತ ಮಾಲವೀಯರ ಸೌಮ್ಯ ಬುದ್ಧಿವಾದವು ಫಲಕಾರಿಯಾಗಲಿಲ್ಲ.

ಕೌನ್ಸಿಲ್ ಬಹಿಷ್ಕಾರವು ಠರಾಯಿಸಲ್ಪಟ್ಟಿತು,

ಮಹಾತ್ಮಾಜೀಯವರ ಪರಾಜಯ.

ರಿಸ್ಪೋನ್ಸಿವ್—ಕಾಂಗ್ರೆಸ್—ಸ್ವತಂತ್ರ,—ಕಾಂಗ್ರೆಸ್ಸಿನಲ್ಲಿ ಈ ಮೂರು ಪಕ್ಷಗಳು ತಲೆದೋರಿದವು.

ಈ ವರುಷದ ಕಾಂಗ್ರೆಸು ಬಹಳ ವಿಜೃಂಭಣೆಯಿಂದ ನೆರವೇರಿತು. ಸಾವಿರಾರು ಪ್ರೇಕ್ಷಕರು ಲಜಪತರಾಯಿ ನಗರಕ್ಕೆ ಯಾತ್ರೆ ಬೆಳೆಸಿದ್ದರು. ಹತ್ತುಸಾವಿರ ಜನರು ಕಾಂಗ್ರೆಸು ಅಧ್ಯಕ್ಷರಾದ ಜವಾಹಿರಲಾಲ ನೆಹರುರಿಗೆ ಮೆರವಣಿಗೆಯ ಮೂಲಕ ಸ್ವಾಗತವಿತ್ತರು. ಕಾಂಗ್ರೆಸು ಮಂಟಪದಲ್ಲಿ ಕ್ರಾಂತಿಕಾರಕ ವೀರೋಕ್ತಿಗಳು ಅಲ್ಲಲ್ಲಿ ಬರೆಯಲ್ಪಟ್ಟು ಮಂಟಪವೂ ಚೆನ್ನಾಗಿ ತಯಾರಿಸಲ್ಪಟ್ಟಿದ್ದಿತು. ಕಾಂಗ್ರೆಸ್ಸಿನಲ್ಲಿ ಉಕ್ಕಿಬರುತ್ತಿದ್ದ ತೀವ್ರ ಸ್ವಾತಂತ್ರ್ಯಾಭಿಲಾಷೆಯ ಸಂಯಮದ ಸೂತ್ರವು ಮಹಾತ್ಮಾ ಗಾಂಧಿಗಳವರ ಕೈಯಲ್ಲಿದ್ದಿತು. ಅಧಿಕಾಭಿಪ್ರಾಯವು ಸರಕಾರದ ದಾಕ್ಷಿಣ್ಯವೇ ಇರದ ಸ್ವಾತಂತ್ರ್ಯವೇ ಬೇಕೆಂದಿದ್ದಿತು. ಮಾಲವೀಯ, ಕೇಳಕರ, ಪ್ರಕಾಶಂ ಮೊದಲಾದವರ ಸೌಮ್ಯ ಬೋಧೆಯು ಕಾರ್ಯಕಾರಿಯಾಗಲಿಲ್ಲ. ಬಂಗಾಳದ ಸುಭಾಸ್ ಚಂದ್ರಬೋಸರ ಮೂಲಕ ಕಾಂಗ್ರೆಸ್ಸಿನಲ್ಲಿ ವೈಯಕ್ತಿಕ ಕಲಹಗಳ ಹೆದರಿಕೆಯು ಇತ್ತು. ಅದು ತತ್ಕಾಲಕ್ಕೆ ನಿವಾರಿತವಾದರೂ ಅನ್ಯಾನ್ಯ ಅಭಿಪ್ರಾಯ ಭೇದಗಳ ಜನರು ಕಾಂಗ್ರೆಸ್ಸಿನ ಒಳಗಿನ ವಿರೋಧಪಕ್ಷ ರಚಿಸಲಿಕ್ಕೆ ಬಂಗಾಳದ ಈ ಕಲಹದ ಶೇಷಾಂಶವು ಸಹಕಾರಿಯಾಯಿತು. ಮಹಾತ್ಮಾ ಗಾಂಧಿಯವರ ಮುಖ್ಯ ಠರಾವು ಮಂಜೂರಾದರೂ ಎರಡು ಠರಾವುಗಳಲ್ಲಿ ಅವರಿಗೆ ಪರಾಜಯವಿತ್ತು.

ಅಧ್ಯಕ್ಷರಿಗೆ ಸ್ವಾಗತ.

ಮೈಲು ಉದ್ದದ ಮೆರವಣಿಗೆ.

ಈ ವರುಷದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಪಂಡಿತ ಜವಾಹಿರಲಾಲ್ ನೆಹರೂರವರನ್ನು ಸ್ವಾಗತೀಕರಿಸುವುದಕ್ಕಾಗಿ ಲಾಹೋರ ಪಟ್ಟಣವನ್ನು ಬಹಳ ಅಂದವಾಗಿ ಅಲಂಕರಿಸಿದ್ದರು. ಲಾಹೋರ್ ರೈಲುವೇ ಸ್ಟೇಶನಿನಿಂದ ಅಧ್ಯಕ್ಷರು ಇಳುಕೊಳ್ಳಲಿಕ್ಕೆ ತಯಾರಿಸಿದ್ದ ಅನರ್ಕಾಳಿಯಲ್ಲಿರುವ ಲಾಲಾ ಲಜಪತರಾಯರ ಮನೆಯು ಒಂದು ಮೈಲು ದೂರವಿತ್ತು. ಈ ದಾರಿಯಲ್ಲಿರುವ ಅಂಗಡಿ ಬೀದಿಗಳನ್ನೂ ಮನೆಗಳನ್ನೂ ಬಹಳ ಅಂದವಾಗಿ ಧ್ವಜ ಪತಾಕೆಗಳಿಂದ ಅಲಂಕರಿಸಿದ್ದರು. ಮಾರ್ಗದ ಬದಿಗಳಲ್ಲಿಯೂ ಮಾಳಿಗೆಗಳಲ್ಲಿಯೂ, ಬೋಳು ಮಾಳಿಗೆಗಳ ಮೇಲೆಯೂ ಜನಸ್ತೋಮವು ತುಂಬಿತ್ತು. ಒಟ್ಟಾರೆ ಈ ದಾರಿಯಲ್ಲಿ ನೆರೆದಿದ್ದ ಜನರು ಒಂದು ಲಕ್ಷಕ್ಕಿಂತಲೂ ಹೆಚ್ಚಿಗೆ ಇದ್ದರು ಎಂಬುದರಲ್ಲಿ ಸಂದೇಹವಿಲ್ಲ. ಲಾಹೋರಿನ ನಿವಾಸಿಕರು ಈ ತರದ ಉತ್ಸಾಹವನ್ನು ತೋರಿಸಿದುದು ಇದೇ ಮೊದಲನೇ ಬಾರಿ ಎನ್ನಬಹುದು.

ರೈಲುವೇ ಸ್ಟೇಶನ್—ಲಾಹೋರ್ ರೈಲುವೇ ಸ್ಟೇಶನಿನಲ್ಲಿ ಜನಸ್ತೋಮವು ಬಹಳ ಹೆಚ್ಚಾಗಿತ್ತು. ಸ್ಟೇಶನ ಪ್ಲೇಟಫೋರ್ಮಿನಲ್ಲಿಯೂ ಹೊರವಲಯದಲ್ಲಿಯೂ ಸ್ವಲ್ಪವಾದರೂ ಎಡೆ ಇರಲಿಲ್ಲ. ಅಧ್ಯಕ್ಷರಿರುವ ರೈಲುಗಾಡಿಯು ಬಂದೊಡನೆ ಗಲಾಟೆಯಾದೀತೆಂದು ಸ್ವಾಗತ ಕಮಿಟಿಯ ಜನರಲ್ ಸೆಕ್ರೆಟರಿಯವರಾದ ಡೋಕ್ಟರ್ ಗೋಪಿಚಂದರಲ್ಲಿ ಸ್ವಲ್ಪ ಸಂಶಯ ಹುಟ್ಟಿತು. ಇದಕ್ಕಾಗಿ ಅಮೃತಸರದಿಂದ ಅಧ್ಯಕ್ಷರಾದ ಜವಾಹಿರಲಾಲರು ಬರುವ ರೈಲುಗಾಡಿಯನ್ನು ಲಾಹೋರಿನಿಂದ ಮೂರು ಮೈಲು ದೂರವಿರುವ ಮೊಗಲ್‌ಪುರಾ ರೈಲುವೇ ಸ್ಟೇಶನಿನಲ್ಲಿಯೇ ನಿಲ್ಲಿಸಬೇಕೆಂದು ನಿರ್ಣಯಿಸಿದ್ದರು. ಆದರೆ ಸ್ವಾಗತಾಧ್ಯಕ್ಷರಾದ ಡೋಕ್ಟರ್ ಕಿಚ್ಲುರವರೂ ಸರದಾರ ಮಂಗಳಸಿಂಗರೂ ಅಂಥ ಗಲಾಟೆಯು ಸ್ವಲ್ಪಮಾತ್ರಕ್ಕೂ ಆಗಲಿಕ್ಕಿಲ್ಲವೆಂದು ಧೈರ್ಯ ಹೇಳಿ ರೈಲುಗಾಡಿಯನ್ನು ಲಾಹೋರ್ ಸ್ಟೇಶನಿಗೆ ತರಿಸಿದರು. ಈ ಗಾಡಿಯಲ್ಲಿ ಪಂಡಿತ ಜವಾಹಿರಲಾಲ ನೆಹರುರವರೂ, ಶ್ರೀಮತಿ ಸರೋಜಿನಿ ನಾಯ್ಡುರವರೂ, ಅವರ ಕುಮಾರಿಯವರೂ, ಶ್ರೀಯುತ ಶ್ರೀನಿವಾಸ ಅಯ್ಯಂಗಾರರೂ ಇದ್ದರು. ಗಾಡಿಯು ನಿಂತೊಡನೆ "ಇಂಕ್ವಿಲಾಬ್ ಜಿಂದಾಬಾದ್" [illegible] ಮಹಾತ್ಮಾ ಗಾಂಧೀಕೀ ಜೈ, ಜವಾಹಿರಲಾಲ್ ನೆಹರೂಕೀ ಜೈ" ಎಂಬ ಜಯಘೋಷವಾಯಿತು. ರಾಷ್ಟ್ರೀಯ ಸ್ವಯಂಸೇವಕರು ರಾಷ್ಟ್ರೀಯ ಹಾಡನ್ನು ಬೇಂಡಿನಲ್ಲಿ ಬಾರಿಸಿದರು. ಪ್ಲೇಟಫೋರ್ಮಿನಲ್ಲಿ ಜನರು ತುಂಬಿದ್ದರಿಂದ ಸ್ವಾಗತಾಧ್ಯಕ್ಷರಾದ ಡೋಕ್ಟರ್ ಕಿಚಲುರವರಿಗೆ ಅಧ್ಯಕ್ಷರಿರುವ ಗಾಡಿಯೊಳಗೆ ಪ್ರವೇಶಿಸಲು ಹತ್ತು ಮಿನಿಟುಗಳ ಸಮಯವು ಬೇಕಾಯಿತು. ಡಾ। ಕಿಚಲುರವರು ಗಾಡಿಯೊಳಗೆ ಪ್ರವೇಶಿಸಿದೊಡನೆ ಪಂಡಿತ ಜವಾಹಿರಲಾಲರು ಮುಂದಕ್ಕೆ ಬಂದು ಅವರನ್ನು ಅಪ್ಪಿಕೊಂಡರು. ಅಧ್ಯಕ್ಷರನ್ನು ಪ್ಲೇಟಫೋರ್ಮಿನಿಂದ ದಾರಿ ಬಿಡಿಸಿಕೊಂಡು ಹೊರಗೆ ಹೋಗುವದು ಬಹಳ ಕಷ್ಟವಾಯಿತು. ಹೊರಗಡೆಯಲ್ಲಿ ಹತ್ತುಸಾವಿರಕ್ಕೆ ಮಿಕ್ಕಿದ ಜನರು ಕೂಡಿದ್ದರು. ಜವಾಹಿರಲಾಲರು ಹೊರಗೆ ಬಂದೊಡನೆ ಬಿಳೀ ಕುದುರೆಯನ್ನೇರಿದರು. ಮೆರವಣಿಗೆಯ ಮುಂದುಗಡೆಯಲ್ಲಿ ರಾಷ್ಟ್ರೀಯ ಬೇಂಡಿನವರು, ಅವರ ಹಿಂದುಗಡೆಯಲ್ಲಿ ಅಮೃತಸರ ಸ್ಕೌಟ್ ದಳದವರು, ಅವರ ಹಿಂದೆ ಮಹಿಳಾ ಸ್ವಯಂಸೇವಕರು, ಅವರ ಹಿಂದೆ ಕಾಂಗ್ರೆಸ್ ಮುಂದಾಳುಗಳು. ಜವಾಹಿರಲಾಲರ ಹಿಂದುಗಡೆಯಲ್ಲಿ ಕುದುರೆಯ ಮೇಲೆ ಕುಳಿತ ಮತ್ತು ಕಾಲಾಳುಗಳಾದ ಸ್ವಯಂಸೇವಕರು, ಇವರ ಹಿಂದೆ ವಿದ್ಯಾರ್ಥಿಗಳೂ ಪುರಜನರೂ ಇದ್ದರು. ಇವರ ಹಿಂದೆ ಖಾದಿ ಉಡುಪನ್ನು ಧರಿಸಿದ್ದ ನಾಮಧಾರ ಸಿಖ್ ಸವಾರರು ಬರುತ್ತಿದ್ದರು. ಜವಾಹಿರಲಾಲರು ಮುಂದರಿಸಿ ಹೋಗುತ್ತಿರುವಾಗ ಬೋಳು ಮಾಳಿಗೆಯಲ್ಲಿಯೂ ಮಾರ್ಗದ ಒದಿಯಲ್ಲಿಯೂ ನೆರೆದಿದ್ದ ಜನರು ಜವಾಹಿರಲಾಲಕೀ ಜೈ ಎಂಬ ಜಯಘೋಷವನ್ನು ಮಾಡುತ್ತಲೇ ಇದ್ದರು. ಅನರ್ಕಾಳಿ ಬೀದಿಗೆ ಬರುವಾಗ ಹಣದ ಮಳೆಯನ್ನು ಅವರ ಮೇಲೆ ಸುರಿಸಿದರು. ಯಿಲ್ಲಭಲಾ ಶಿಖ ಕಂಪೆನಿಯ ಮಾಳಿಗೆಯಲ್ಲಿ ನಿಂತು ಪಂಡಿತ ಮೋತಿಲಾಲರೂ ಅವರ ಪತ್ನಿಯವರೂ, ಕುಮಾರಿಯವರೂ, ಶ್ರೀಮತಿ ಸರೋಜಿನಿ ನಾಯ್ಡುರವರೂ ಮೆರವಣಿಗೆಯನ್ನು ನೋಡುತ್ತ ನಿಂತಿದ್ದರು. ಮಗನ ಕುದುರೆಯು ಹತ್ತಿರ ಬಂದೊಡನೆ ಕೈತುಂಬಾ ರೂಪಾಯಿಯನ್ನು ಮಗನ ಮೇಲೆ ಸುರಿಸಿದರು. ಜವಾಹಿರಲಾಲರು ಕುದುರೆಯನ್ನು ನಿಲ್ಲಿಸಿ ತಾಯಿ ತಂದೆಯವರಿಗೂ, ಸರೋಜಿನಿ ದೇವಿಯವರಿಗೂ ನಮಸ್ಕಾರವನ್ನು ಮಾಡಿದರು. ಮೋತಿಲಾಲರು ನಗಾಡುತ್ತ ಕೈಸನ್ನೆಯಿಂದ ಮುಂದರಿಸಿರಿ ಎಂದು ತೋರಿಸಿದರು. ಮುಂದಕ್ಕೆ ಹೋಗುವಾಗ ಪಟ್ಟವಸ್ತ್ರದ ವ್ಯಾಪಾರಿಗಳ ಅಂಗಡಿಗಳನ್ನು ಪಟ್ಟೆವಸ್ತ್ರದಿಂದಲೇ ಅಲಂಕರಿಸಿದ್ದರು. ಈ ವೇಳೆಗೆ ಬರುವಾಗ ಕತ್ತಲೆಯಾಗುತ್ತ ಬರುತ್ತಿತ್ತು. ಇಲ್ಲಿ ವಿದ್ಯುಚ್ಛಕ್ತಿಯ ವ್ಯಾಪಾರಸ್ಥರು ನಾನಾ ಚಮತ್ಕಾರಗಳನ್ನು ತೋರಿಸಿದ್ದರು. ಕ್ವೀನ ಇಲೆಕ್ಟ್ರಿಕ್ ಕಂಪೆನಿಯವರು ಮಣ್ಣಿನಿಂದ ಒಂದು ಹೆಂಗುಸಿನ ಮೆಯನ್ನು ಮಾಡಿಟ್ಟು ವಿದ್ಯುಚ್ಛಕ್ತಿಯ ಬಲದಿಂದ ಕೈರಾಟೆಯಿಂದ ನೂಲು ಮಾಡಿಸುತ್ತಿದ್ದರು. ಇನ್ನೊಂದು ಕಡೆಯಲ್ಲಿ ಕೈರಾಟೆಯಲ್ಲಿ ನೂಲು ತೆಗೆಯುತ್ತಿರುವ ಮಹಾತ್ಮಾ ಗಾಂಧಿಯವರ ಅನವರ್ಣ್ಯನ ಪ್ರತಿಮೆಯನ್ನು ಮಾಡಿಟ್ಟಿದ್ದರು. ಶ್ರೀಕೃಷ್ಣನು ಇದನ್ನು ಕಾಯುತ್ತಿದ್ದ ಪ್ರತಿಮೆಯೂ ಅದರ ಹತ್ತಿರವೇ ಇತ್ತು. ಇನ್ನೊಂದು ಕಡೆಯಲ್ಲಿ ಟಗ್ ಒಫ್ ವೊರ್ ನಡೆಯುತ್ತಿತ್ತು. ಹಗ್ಗದ ಒಂದು ತುದಿಯನ್ನು ಮಹಾತ್ಮಾ ಗಾಂಧಿಯವರು ಹಿಡಿದಿದ್ದರು. ಇಲ್ಲಿ ಡೊಮಿನಿಯನ್ ಸ್ಟೇಟಸು ರಾಜಭಾರ ಎಂದು ಬರೆದಿತ್ತು. ಹಗ್ಗದ ಇನ್ನೊಂದು ತುದಿಯನ್ನು ಪಂಡಿತ ಜವಾಹಿರಲಾಲ್, ಸುಭಾಸ್ ಚಂದ್ರಬೋಸ್, ಶ್ರೀನಿವಾಸ ಅಯ್ಯಂಗಾರ, ಡೋಕ್ಟರ ಕಿಚಲು ಇವರು ಹಿಡಿದಿದ್ದರು. ಇಲ್ಲಿ ಸ್ವತಂತ್ರಾಧಿಕಾರ ಎಂದು ಬರೆದಿತ್ತು. ದಾರಿಯಲ್ಲಿ ಕಟ್ಟಿದ ಕಮಾನುಗಳಲ್ಲಿ ಅನೇಕ ಸೂತ್ರಗಳನ್ನು ಬರೆದು ತೂಗಾಡಿಸಿದ್ದರು. ಕೆಲವರು ರಾಷ್ಟ್ರೀಯ ಧ್ವಜವನ್ನು ಹಿಡಿದು, ಯೂನಿಯನ್ ಜೇಕನ್ನು ಕೆಳಗಿಳಿಸಿರಿ ಎಂದು ಜಯಘೋಷವನ್ನು ಮಾಡುತ್ತಲೇ ಇದ್ದರು. ಲಜಪತ್‌ರಾಯರ ಮನೆಗೆ ಮುಟ್ಟಲಿಕ್ಕೆ ಎರಡು ಗಂಟೆ ಸಮಯವು ಬೇಕಾಯಿತು. ಮೆರವಣಿಗೆಯು ಒಂದು ಮೈಲು ಉದ್ದವಾಗಿತ್ತು.

ಮನೆಗೆ ಮುಟ್ಟಿದೊಡನೆ ಜವಾಹಿರಲಾಲರು ಕಾಲುಗಂಟೆ ವಿಶ್ರಾಂತಿಯನ್ನು ತೆಗೆದುಕೊಂಡರು. ಈ ರೀತಿಯಲ್ಲಿ ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಒಂದಾದ ಮೆರವಣಿಗೆಯು ಯಾವ ತರದ ಗಲಾಟೆಯೂ ಪೋಲಿಸ ಸಹಾಯವೂ ಇಲ್ಲದೆ ಮುಗಿಯಿತು. ಎಲ್ಲಾ ತರದ ಬಂದೋಬಸ್ತಿನ ಕೆಲಸವನ್ನು ರಾಷ್ಟ್ರೀಯ ಸ್ವಯಂಸೇವಕರೇ ಮಾಡುತ್ತಿದ್ದರು. ಒಂದುವೇಳೆ ಗಲಾಟೆಯಾಗುವದಿದ್ದರೆ ಅಂಥಾ ಸಮಯದಲ್ಲಿ ಬಂದೋಬಸ್ತಿಗೆ ಪೋಲಿಸ್ ರಿಜರ್ವನ್ನು ಅಲ್ಲಲ್ಲಿರುವ ಪೋಲಿಸ್ ಸ್ಟೇಶ[illegible] ತಯಾರಿಸಿದ್ದರು. ಮೆರವಣಿಗೆಯ ಮುಂಚಿನ ಮಳೆಯು ಇತ್ತು. ಮೆರವಣಿಗೆಯ ದಿವಸ ಮಧ್ಯ[illegible] ಗಂಟೆಯ ಸಮಯಕ್ಕೆ ಸ್ವಲ್ಪ ಮೋಡವಿತ್ತು. ಮುಗಿಯುವ ವರೆಗೆ ಮಳೆಯು ಬರಲಿಲ್ಲ.

ಕಾಂಗ್ರೆಸ್ [illegible]ಮಂ[illegible]

ರಾ[illegible]

ಪಟ್ಟಣದ

ತರ[illegible]

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸನಗರ

MAGICAL PILES BALM

ಅತ್ಯುತ್ತಮ ಉದಂಬರಿಗಳು.



ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

LIBERAL DISCOUNT TO TRADE

-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell ad, Bombay. No 14.

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ವಾಸಿಯಾಯಿತು.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ಫೋನ್ 3486.

ಏಜಂಟರು—ವಾ ಕಂಪೆನಿ, (ದಿ ಉಲನ್ ಸ್ಟೋರ್) ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು!

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಮ್ಯಾನೇಜರ್,

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಸಾಲದ ಸಂದಾಯ

ಪಾವತಿಗೆ ರಿಯಾಯಿತಿ—ಬಡ್ಡಿಯ ದರಕ್ಕೆ ಅಡ್ಡಿ

ಸಾಯುವುದಕ್ಕೆ ಸಿದ್ಧವಾಗುವಂತೆ, ಬೇಸಾಯಗಳಿಗೆ ಭಾರವಾಗಿ ಯಮದಂಡ ದಂತೆ ಭಯಂಕರ ಬಾಧಿಸುತ್ತಿರುವ ಸಾಲಗಳನ್ನು ಇಳಿಸಲೂ – ಅಧಿಕ ಬಡ್ಡಿಯಿಂದ ವಿಮೋಚನೆ ಹೊಂದಲೂ

ಮದರಾಸು ಮಂತ್ರಿಮಂಡಲದ ಮಸೂದೆ.

ವಿದ್ಯಾರ್ಥಿಗಳಿಗೆ ಶ್ರೀಮತಿ ಸರೋಜಿನಿ ದೇವಿಯವರ ಬೋಧನೆ

[illegible] ಬೆಳೆಗಳಿಯದಾಗಿರುವ ಕೃಷಿ [illegible] ಬಂದಿದೆ. ಇದನ್ನು [illegible] ಪಾವತ್ತು ಜನಗಳ ಸಂಕಷ್ಟ [illegible] ಇರುವ ಕಾರಣ, ಈ ಕೃಷಿಯ [illegible] ಸಂಗೋಳಿಸುವುದು ಅತ್ಯಾವಶ್ಯಕ [illegible] ಬೇಸಾಯಗಾರರ ಆ ಪುನರುಜ್ಜೀ[illegible] ವನ ಮಾಡಬಹುದೆಂದು ನಮ್ಮ [illegible]ಮಂಡಲವು ಚೆನ್ನಾಗಿ ವಿಮರ್ಶಿಸಿಯದೆ. [illegible]ಯಿಂದಲೂ ಒಪ್ಪದಂತಹ ಬಡ್ಡಿ ಹೊ[illegible] ಬೇಸಾಯದ ಸಾಲವು ಇನ್ನೂ ದೊಡ್ಡವಾಗಿ ಬೆಳೆಯುತ್ತಲೇ ಇದೆ; ಕೃಷಿಯ ಉತ್ಪನ್ನಗಳ ಬೆಲೆ ಕಡಿಮೆಯಾಗುತ್ತ ಬಂದಿದೆ. ಅವನ ದುಃಖಭಾರಕ್ಕೆಲ್ಲ ಅವನ ಸಾಲದ ಭಾರವೇ ಕಾರಣವಾಗಿದೆ. ಪ್ರಜೆಗಳಿಗೆ ಜವಾಬ್ದಾರವಾಗಿರುವ ಯಾವ ಸರಕಾರವೇ ಆದರೂ, ಇಂತಹ ಪರಿಸ್ಥಿತಿಯಿಂದ ಬೇಸಾಯಗಾರರನ್ನು ಹೇಗೂ ಮಾಡಿ ವಿಮೋಚನೆಗೊಳಿಸಲೇ ಬೇಕಾಗಿದೆ. ವಂಶಪರಂಪರೆಯಾಗಿ ಒಂದು ವೃತ್ತಿಯಲ್ಲಿ ನಿಪುಣನಾಗಿ ಬಂದಿರುವ ಕೃಷಿಕನು ನಿರುದ್ಯೋಗಿಯಾಗುವಂತೆಯೂ, ಅವನ ಜಮೀನು ಪಾಳು ಬೀಳುವಂತೆ ಮಾಡುವುದೂ, ಅನುಭವವಿಲ್ಲದವರ ಕೈಗೆ ಈ ಹೊಲಗಳೆಲ್ಲ ಸೇರುವಂತೆ ಬಿಡುವುದೂ ಅನ್ಯಾಯ. ಪಂಚಾಯಿತಿ ಮತ್ತಿತರ ಲೆಕ್ಕಸಂತೋಷದಂಥ ಸಾಪೇಕ್ಷಿತವಾದ ಸುಧಾರಣೆ ಯಾವುದೂ ಆಗಲಿಲ್ಲದ ಕಾರಣ, ಈಗ ಕಡ್ಡಾಯವಾಗಿಯೇ ಸರಕಾರವು ಪ್ರಯತ್ನ ಮಾಡಲೇಬೇಕಾಗಿ ಬಂದಿದೆ.

ಅಸಲಿನಷ್ಟು ಪಾವತಿಯಾದ ಬಳಿಕ, ಇನ್ನು ಸಾಲವಿರಬಾರದು, ರದ್ದಾಗಬೇಕು. 1937ನೆ ಇಸವಿ ಅಕ್ಟೋಬರಿನಿಂದ (1ನೇ ತಾರೀಖು) ಬಡ್ಡಿಯ ದರವು ಸೇಕಡಾ 6ಕ್ಕೆ ಸಲಿಗೆ ಮೀರಬಾರದು. ಅಧಿಕದರ ಬಡ್ಡಿ ಹಾಕಿದ್ದಲ್ಲಿ, ಅಸಲಿನ ದುಬಾರಿಯನ್ನು ಪಾವತಿ ಆದ ಬಳಿಕ, ಸಾಲವುಳಿಯಬಾರದು. ಬೇಸಾಯಿಯಲ್ಲದವರಿಗೆ ಈ ಮಸೂದೆಯಲ್ಲಿ ಕಾಣಿಸಲಾದ ಪ್ರಯೋಜನಗಳು ದೊರೆಯಬಾರದು. ಸರಕಾರಕ್ಕೂ ಲೋಕಲ್ ಬೋರ್ಡುಗಳಿಗೂ (ಸ್ಥಳೀಯ ಸಂಸ್ಥೆ) ಕೋಪರೇಟಿವ್ ಮತ್ತಿತರ ಕೆಲ ಬೇಂಕುಗಳಿಗೂ ಈ ಮಸೂದೆಯು ಅನ್ವಯಿಸುವುದಿಲ್ಲ. ಹಿಂದಿನ ಗೇಣಿಯನ್ನು ಕೆಲ ರಿಯಾಯಿತಿಯಿಂದ ರದ್ದಾಗಿಸಿ, ಚಾಲ್ತಿ ಗೇಣಿಯು ಪಾವತಿಯಾಗಬೇಕೆಂದೂ ಮಸೂದೆಯಲ್ಲಿದೆ. ಈ ರೀತಿಯಾಗಿ ಒಂದು ಮಸೂದೆ ಸದ್ಯದಲ್ಲೇ ಆಗುವುದೆಂದು ತಿಳಿದ ಕೆಲವರು, ತಮಗೆ ಸಾಲಕೊಡಬೇಕಾಗಿದ್ದ ಬೇಸಾಯಗಳ ಮೇಲೆ ಇಷ್ಟರಲ್ಲಿ ವ್ಯಾಜ್ಯಮಾಡಿ ಅವರ ಮೇಲೆ ನಾನಾ ಒತ್ತಾಯಗಳನ್ನು ಮಾಡುತ್ತಿರುವರೆಂದು ತಿಳಿದು ಬಂದಿರುವ ಕಾರಣ, ಕಳೆದ ಒಕ್ಟೋಬರ ತಾ. 1ರ ನಂತರ ದಾಖಲಾದ ವ್ಯಾಜ್ಯಗಳಲ್ಲಿ ಪ್ರತಿವಾದಿಗಳಾಗಿರುವವರಿಗೆಲ್ಲ ಈ ಮಸೂದೆಯಲ್ಲಿನ ರಿಯಾಯಿತಿಗಳು ದೊರೆವಂತೆ ಈಗಲೆ ಸೂಚನೆ ಕೊಡಲಾಗಿದೆ.

ಮಸೂದೆಯಲ್ಲಿ ಏನಿದೆ?

ರೈತರ ಸಾಲ ಎಂಬುದು ಗೆದ್ದಲು ಹುತ್ತದಂತೆ ನಮ್ಮ ಪ್ರಾಂತ್ಯದ ಮೇಲೆ ಬೆಳೆದಿದೆ. ರೈತರ ಸಾಲದ ಮೊತ್ತವನ್ನು ಇಳಿಸುವ ಪ್ರಯತ್ನವೊಂದು, ಹಾಗೆ ಇಳಿಸಿದ ಭಾರವನ್ನು ಕ್ರಮೇಣ, ಹಗುರ ಮಾಡಿಕೊಳ್ಳಲು ಬೇಕಾದ ಸಲಕರಣೆಗಳನ್ನು ಒದಗಿಸಿಕೊಡುತ್ತ, ಇಂದಿನಲ್ಲಿ ವಿಶ್ವಾಸ, ನಾಳಿನಲ್ಲಿ ಭರವಸೆ ಇವೆರಡೂ ರೈತನಲ್ಲಿ ಉಂಟಾಗುವ ಹಾಗೆ ಮಾಡಬೇಕಾಗಿರುವ ಸಾಧನವೊಂದು ಹೀಗೆ ಎರಡು ವಿಧದಲ್ಲಿ ಏನು ಮಾಡಲು ಸಾಧ್ಯವಿದೆ ಎಂಬುದನ್ನು ಮಂತ್ರಿಮಂಡಲವು ಬಲು ಚೆನ್ನಾಗಿ ಪರ್ಯಾಲೋಚನೆ ಮಾಡಿಯದೆ.

ಮೊದಲನೆ ವಿಷಯವಾಗಿ ಅಗತ್ಯವಾಗಿರುವ ಉಪಾಯವನ್ನು ಈಗ ಮಾಡಿಕೊಟ್ಟಿದೆ. ಆದರೆ ಸಾಲ ಇಳಿಸಿದುದೇ ಒಂದು ಮಹಾ ಪ್ರಯೋಜನವಾಗದಾದ ಕಾರಣ, ಹೇಗೂ, ಮಾಡಿ, ಸದ್ಯದಲ್ಲೆ ಇಳಿದ ಸಾಲವನ್ನಾದರೂ ಕಷ್ಟವಿಲ್ಲದೆ ತೀರುವ ಹಾಗೆ ರಿಯಾಯಿತಿಗಳುಳ್ಳ ಮತ್ತೊಂದು ಕಾನೂನನ್ನು ಸದ್ಯದಲ್ಲೆ ಈ ಮಂತ್ರಿಮಂಡಲವು ರಚಿಸಬಹುದಾಗಿ ನಂಬಬಹುದಾಗಿದೆ.

ಇವೆರಡೂ ಸಲಕರಣೆಗಳನ್ನು ಒಂದಾಗಿ ಒಂದೇ ಮಸೂದೆಯಲ್ಲಿ ಮಾಡಿಕೊಡಬಹುದಾಗಿತ್ತು. ಇದಕ್ಕಾಗಿ ಬಹಳ ಸಮಯ ಕಳೆಯುತಿತ್ತು. ಅಷ್ಟರಲ್ಲಿ ಜನರಲ್ಲಿ ಮನಸ್ಸಿಗೆ ತಾಳ್ಮೆ ಉಳಿದೀತೇ ಎಂಬ ಸಂದೇಹವನ್ನು ಮಂತ್ರಿಗಳು ತಿಳಿದು ಇಷ್ಟನ್ನಾದರೂ ಈಗ ಪ್ರಕಟಿಸಿರುವರು. ಕಳೆದ ಅಧಿವೇಶನದಲ್ಲಿ ಎಸೆಂಬ್ಲಿಗೆ ತಿಳಿಸಿದ್ದ ಸಾಲದ ಪಾವತಿಗೆ ತಡೆಯೊಡ್ಡುವ ಮಸೂದೆಯನ್ನು ಆಗಲೇ ಮಂಜೂರು ಮಾಡಿದ್ದರೆ ಇದಕ್ಕೆಲ್ಲ ಸಮಯ ದೊರೆಯುತಿತ್ತು. ಹಾಗೆ ಮಾಡಲಾಗದ ಕಾರಣ, ಅತಿ ಬಾಧಕಕರವಾದ ಮಸೂದೆಯೊಂದು ಅಡಚಣೆ ಇಲ್ಲದೆ ಹಾಗೆ ಕಾನೂನುಗಳನ್ನು ಮಂಜೂರು ಮಾಡುವ ಅನಿವಾರ್ಯವಾಯಿತೆಂದು ಈಗ ಪ್ರಕಟ ಮಾಡಲಾಗಿದೆ. ಆದರೂ ಈ ಮಸೂದೆಗೆ ಕಳೆದ ಒಕ್ಟೋಬರ ತಾ.1ರಿಂದ ಹಿಂದಣ ಪ್ರಾರಂಭ ತಾರೀಕನ್ನು ಕೊಟ್ಟುದರಿಂದ, ಆಗಲೆ ಸಾಲ ವಸೂಲಿಗಾಗಿ ಮಾಡಿದ ವ್ಯಾಜ್ಯಗಳೆಲ್ಲ ತಡೆದಿದೆ; ಇದೂ ರೈತ ಸಾಲಗಾರರಿಗೆ ಒಂದು ಯೋಗ್ಯ ರಿಯಾಯಿತಿಯಾಗಿದೆ.

ಸುಮಾರು 60 ಲಕ್ಷ ರೈತರ ಕುಟುಂಬಗಳಿಗೆ ಅನ್ವಯಿಸಬೇಕಾಗಿರುವ ಈ ಕಾನೂನನ್ನು ಆ ಬಡ ಅಶಿಕ್ಷಿತ ಜನಗಳ ಹಿತಕ್ಕಾಗಿ ಮಾಡುವುದಾದರೆ, ಅದು ಸುಲಭದಲ್ಲಿ ತಿಳಿಯುವಂತೆ, ಸ್ಪಷ್ಟವಾಗುವಂತೆ, ಕೂಡಲೆ ಜ್ಯಾರಿಗೆ ಬರುವಂತೆ ಒಬ್ಬಣೆ ಇರಬೇಕಷ್ಟೆ. ಈ ಕಾನೂನು ಸುಲಭ, ಸ್ಪಷ್ಟ, ಕೂಡಲೆ ಜ್ಯಾರಿಗೆ ಬರುವಂತೆಯೆ ಇವೆ. ಪ್ರತಿಯೊಬ್ಬ ಲೇಣದಾರನೂ ದೇಣದಾರನೂ ಇದನ್ನು ಓದಿದಲ್ಲಿ ತನ್ನ ಜವಾಬ್ದಾರಿಯನ್ನು ತಾನೇ ತಿಳಿದುಕೊಂಡು ಅಗತ್ಯವುಳ್ಳ ಅನುಭವ ಗಳಿಸಿಕೊಂಡು ಕಾನೂನಿನಂತೆ ನಡೆಯಬಹುದಾಗಿದೆ.

ಐದು ವಿಭಾಗಗಳು

ರೈತರ ಸಾಲಗಳ ಮೇಲೆ ಬಾಕಿ ಇರುವ ಒಕ್ಟೋಬರ ತಾ. 1ರಲ್ಲಿ ಎಲ್ಲ ಬಡ್ಡಿಯು ಮಜಾ ಆಗುವುದು. ಒಂಭತ್ತರ ಸಲ ಬಡ್ಡಿ ಇರುವಲ್ಲಿ, ಅಸಲಿನ ದುಬಾರಿಯಷ್ಟನ್ನು ಅಸಲು ಬಡ್ಡಿ ಯಷ್ಟಾಗುವಂತೆ ದೇಣೇದಾರನು ತೆತ್ತಿರುವನಾದರೆ, ಆ ಸಾಲವನ್ನೆ ಮಜಾ ಮಾಡಲಾಗುವುದು, ಹೆಚ್ಚಿಗೆ ಕೊಟ್ಟಿದ್ದರೆ ಅದೂ ಮಜಾ. ಒಂಭತ್ತಕ್ಕೆ ಮಿಕ್ಕಿ ಬಡ್ಡಿಯಿರುವಲ್ಲಿ, ಒಟ್ಟು ಪಾವತಿ ಮಾಡಿದುದು, ಅಸಲಿನ ದುಬಾರಿಗಿಂತ ಕಡಿಮೆಯಾದಲ್ಲಿ, ಅದೆಷ್ಟಕ್ಕೆ ಕಡಿಮೆಯೋ ಅದನ್ನು ತೆತ್ತಲ್ಲಿ ಎಲ್ಲ ಸಾಲವೂ ಮಜಾ ಆಗುವುದು. ಹಾಗೆ ತೆರಬೇಕಾದ ಅಂಶವು ಮಾತ್ರ, ಅಸಲಿಗಿಂತ ಕಡಿಮೆಯಾಗಿದ್ದಿರಬೇಕು. ಎರಡು ವರ್ಷಕ್ಕಿಂತ ಹೆಚ್ಚಿಗೆ ಗೇಣಿ ಬಾಕಿಯುಳ್ಳದನ್ನು ಮಜಾ ಮಾಡಲಾದೀತು; ಆದರೆ ಒಕ್ಕಲು ಚಾಲ್ತಿ ಗೇಣಿಯನ್ನು ತೆರತಕ್ಕದು. ರೈತರ ಎಲ್ಲ ಸಾಲಗಳಿಗೆ ಕಳೆದ ಒಕ್ಟೋಬರ ತಾ. 1ರಿಂದ ಬಡ್ಡಿಯ ದರವು 6 ಇರತಕ್ಕದು.

ಪ್ರಯೋಜನವೇನು?

ಈ ಮಸೂದೆಯು ಕಾನೂನಾದರೆ,—ಸಾಲದ ಹೊರೆಯು ಅರ್ಧಕ್ಕೆ, ಕಡಮೆಯೆಂದರೆ ಕಾಲಂಶದಷ್ಟಾದರೂ ಇಳಿಯುವುದು. ಬಡ್ಡಿಯ ದರವು ಎಷ್ಟು ಹೆಚ್ಚಾಗಿತ್ತೋ, ಅಷ್ಟೇ ದಾವಾ ಕಾಯಿದೆಯಲ್ಲಿ ಸಿಗುವ ಪ್ರಯೋಜನವೂ ಹೆಚ್ಚಾಗುವುದು. ಹೀಗಾಗಿ 12¼ ಅಥವಾ ಹೆಚ್ಚು ಬಡ್ಡಿ ಇದ್ದಲ್ಲಿ ದೊರೆವ ಪ್ರಯೋಜನವೂ ಹೆಚ್ಚಾಗಿವೆ, ರೈತರಿಗೆ 12¼, ತಪ್ಪಿದರೆ 18¾, ದುಬಾರಿ ಬಡ್ಡಿಗೆ 'ಬ' ಇತ್ಯಾದಿ ಇದ್ದುದೆಲ್ಲ ಅಷ್ಟಕ್ಕೆ ಮಜಾ ಹೊಂದುವುದು. ಈ ರೀತಿಯಾಗಿ ಕಾನೂನಾಗದಿದ್ದಲ್ಲಿ, ಎಷ್ಟೋ ಸೀತಿಯಿಂದಲೂ ಬಡ್ಡಿ ಇಳಿಸುವವರೇ ಇಲ್ಲ. ಬಡ ರೈತರಿಗೆ ಸಾಲ ಕೊಡುವುದು ಯಾವ ನಂಬಿಕೆ ಆಧಾರಗಳ ಮೇಲೆ? ಆದುದರಿಂದಲೇ ಈ ಬಡ್ಡಿಯನ್ನು ಅವರು ತೆರಲೇಬೇಕು ಎನ್ನುವರು. ಈಗ? ಮೂಲಕ್ಕೇನೂ ಮೋಸವು ಈ ಮಸೂದೆಯಿಂದಾಗುವದಿಲ್ಲ; ಅಷ್ಟೆ ಮೊಬಲಗಿನ ವರೆಗೆ ಬಡ್ಡಿಗೂ ಮೋಸವಿಲ್ಲ. ಇತ್ತ ದವಸಗಳ ಬೆಲೆ ಇಳಿದಿರುವಾಗ, ಇದು ರೈತರಿಗೆ ತುಂಬ ಹಿತಕರವಾದೀತು.

ಕೃಷಿ – ಕೈಗಾರಿಕೆ

ಕೈಗಾರಿಕೆಗಳ ಉತ್ಪನ್ನಗಳ ಬೆಲೆ ಇಳಿದುದಕ್ಕಿಂತಲೂ ಹೆಚ್ಚಾಗಿ, ಕೃಷಿಯ ಉತ್ಪನ್ನಗಳ ಬೆಲೆ ಇಳಿದುದು ಧಾರಾಳವಾಗಿದೆ. ದುಡಿಮೆ ಸಂಬಳಗಳು ಕಡಮೆಯಾದುದು ಧಾನ್ಯಗಳ ಬೆಲೆ ಕಡಮೆಯಾದುದಕ್ಕಿಂತಲೂ ಕಡಮೆಯೇ. ಕೃಷಿಯನ್ನು ಅವಲಂಬಿಸಿದೆ ಇದೀ ಪ್ರಾಂತ್ಯದ ಸಂಪನ್ನತೆಯಿದೆ. ಹೀಗಿರುವ ಕಾರಣ ಸಮಸ್ತರು ಈ ಮಸೂದೆಗೆ ಬೆಂಬಲಕೊಟ್ಟು, ಇದೊಂದು ಮಂಜೂರಾಗುವಂತೆ ನೋಡಲೇ ಬೇಕಾಗಿದೆ. ಈಗಿನ ಮಂತ್ರಿಮಂಡಲದ ಗೌರವವು ಇದರಿಂದ ಹೆಚ್ಚಿನ ಹಾಗಾಗುವುದು.

ವಿನಾಯಿತಿಗಳು

ಕೃಷಿ ತೋಟಗಾರಿಕೆಯಾಗುವ ಜಮೀನು ಇದ್ದು, ಅದರಲ್ಲಿ ಯಾವುದೊಂದು ಒಗೆಯ ಪ್ರತಿಫಲ ಪಡೆವ ಧನಿ, ಒಕ್ಕಲು, ಗೇಣೆ ಚೀಟಿದಾರ, ಇತ್ಯಾದಿಗಳಿಗೆ ಮಾತ್ರ ಈ ಮಸೂದೆಯಲ್ಲಿ ಕೊಡಲಾದ ರಿಯಾಯಿತಿಗಳು ಸಿಗುವುವು. ಕಳೆದ ಮೂರು ವರ್ಷಗಳೊಳಗೆ ಇನ್ಕಂಟೇಕ್ಸ್ ವಿಧಿಸಲಾದವನು; ಮುನ್ಸಿಪಾಲಿಟಿಯಲ್ಲಿ ಅರ್ಧ ವರ್ಷಕ್ಕೆ 8 ಅಥವಾ ಹೆಚ್ಚು ವೃತ್ತಿ ತೆರಿಗೆ ಕೊಡುವವನು, ವರ್ಷಕ್ಕೆ 600 ರೂಪಾಯಿಗೆ ಕಡಮೆಯಿರದ ಬಾಡಿಗೆ ಬರುವ ಕಟ್ಟಡಗಳುಳ್ಳವನು; ಇವರಿಗೆ ಈ ರಿಯಾಯಿತಿಗಳಿಲ್ಲ. ಲೇವನ್ನು ಬಾಕಿ ಇರುವಲ್ಲಿ ತೀರ್ಮಾನ ಬಾಕಿಯುರುವಲ್ಲಿ ಈ ರಿಯಾಯಿತಿಗಳಿಲ್ಲ. ಇಂಪೀರಿಯಲ್ ಬೇಂಕ್ ಕಂಪೆನಿಗಳಿಗೂ, ಬೇಂಕುಗಳಿಗೂ ತೆರಬೇಕಾಗಿರುವ ಸಾಲಕ್ಕೂ ಇದು ಒಗಾವಾಗಬಾರದು; ಆದರೆ ಅಂತಹ ಬೇಂಕಿಗೆ 500 ರಿಂದಿಯಾದರೂ ಪಾಲುಗಾರರಿರತಕ್ಕದು.

ಅವಿಭಕ್ತ ಕುಟುಂಬದಲ್ಲಿ

ಯಾವನೊಬ್ಬ ರೈತನಾಗಿರುವವನ ಸಾಲಕ್ಕೂ ಇದೇ ರಿಯಾಯಿತಿಯಿದೆ; ರೈತನಲ್ಲದವನಿಗಿಲ್ಲ. ಅವಿಭಕ್ತ ಕುಟುಂಬವನ್ನು ಒಂದೇ ಎಂಬಾಗಿ ಭಾವಿಸಲಾಗಿದೆ. ಮುಂದೆ ಇಂತಹ ಸಾಲಗಳಿಗೆ ಬಡ್ಡಿಯ ದರವು 6ಕ್ಕೆ ಮೀರಬಾರದೆಂದಿದೆ. ಅಗತ್ಯ ಕಂಡಂತೆ ಈ ದರದಲ್ಲಿ ಬದಲಾವಣೆ ಮಾಡಲು ಸರಕಾರಕ್ಕೆ ಅಧಿಕಾರ ಇಟ್ಟುಕೊಳ್ಳಲಾಗಿದೆ.

ರಿಯಾಯಿತಿಗಳ ಉದಾಹರಣೆಗಳು

1. ಈ ಕಾನೂನು ಜ್ಯಾರಿಗೆ ಬರುವಾಗ 1845ನೆ ಮತ್ತು ಇತರ ಹಿಂದಣ ಫಸಲಿಗೆ ತೆರಬೇಕಾದ ಗೇಣಿಯು 500 ರೂಪಾಯಿ ಬಾಕಿಯುಳ್ಳಿದೆ ಎಂದೂ, 1846, 1847 ಫಸಲಿಗಳ ಬಗ್ಗೆ ಗೇಣಿ ರೂಪಾಯಿ 200 ಬಾಕಿಯುಳ್ಳಿದೆ ಎಂದೂ ಎಣಿಸುವ. ಇನ್ನು ಹದಿನೈದು ತಿಂಗಳುಗಳಲ್ಲಿ ಒಕ್ಕಲು ಧನಿಗೆ ರೂ. 200ನ್ನು ತೆತ್ತರೆ, ಅವನು ಹಿಂದೆ ಬಾಕಿಯಿದ್ದು ತೆರಬೇಕಾಗಿದ್ದ 500 ರೂಪಾಯಿಗಳನ್ನೂ ತೆತ್ತಾಯಿತೆಂದೂ ತೆಗೆದುಕೊಂಡು ಆ ಮೊಬಲಗಿನ ಸಾಲದಿಂದ ಅವನನ್ನು ಕೂಡಲೆ ವಿನಾಯಿತಿಪಡಿಸಲಾಗುವುದು.

2. ಹಾಗೆ ಬಾಕಿಯಿರುವ 500 ಮತ್ತು 200 ರೂಪಾಯಿಗಳಲ್ಲಿ ಒಕ್ಕಲು ರೂಪಾಯಿ ನೂರನ್ನು ಮಾತ್ರ ಇದೇ ಮುಂದಣ 15 ತಿಂಗಳೊಳಗೆ ಕೊಟ್ಟನೆಂತಾದರೆ, 1845 ಮತ್ತು ಹಿಂದಣ ಫಸಲಿನ ಬಗ್ಗೆ ಅವನು ತೆರಬೇಕಾಗಿದ್ದ 500ರಲ್ಲಿ ಅವನು 250ನ್ನು (ಅರೆವಾಸಿಯನ್ನು) ಮಾತ್ರ ಪಾವತಿ ಮಾಡಿದಂತೆ ಎಣಿಸಲಾದೀತು.

[illegible] 1846, 1847 ಫಸಲಿಗಳ ಬಗ್ಗೆ ತೆರಬೇಕಾಗಿದ್ದ ತೀರ್ವೆಯನ್ನು ತರುವಾಯ [illegible] ತೆತ್ತರೆ, 1845 ಮತ್ತು ಅದರ ಹಿಂದಣ ಫಸಲಿಗಳ ತೀರ್ವೆ ಎಷ್ಟು ಬಾಕಿಯುಂಟೋ ಅದನ್ನು ಮಜಾ ಪಡಿಸಲಾಗುವುದು. ಆದರೆ, ಅವನು ಎಷ್ಟು ಮೊಬಲಗನ್ನು ಈ 15 ತಿಂಗಳಲ್ಲಿ ತೆರುವನೋ, ಅಷ್ಟೆ ಅಂಶಕ್ಕೆ ಮಾತ್ರ ಹಿಂದಣ ಬಾಕಿ (ದಾವಾ ಕಾಯಿದೆಯಲ್ಲಿ) ವಸೂಲಾದಂತೆ ಎಣಿಸಲಾದೀತು.

ಇದೇ ಕಳೆದ ಒಕ್ಟೋಬರ ತಾ. 1 ಅಥವಾ ನಂತರ ಹಿಂದಣ ಯಾವುದೊಂದು ಗೇಣಿ ಇತ್ಯಾದಿಗಳ ಸಾಲದ ವಸೂಲಾತಿಗಾಗಿ ಡಿಕ್ರಿಯಾಗಿ ಯಾವನೊಬ್ಬ ಆಸ್ತಿ ಕೊಟ್ಟ ಅಪ್ಪಣೆ ಪ್ರಕಾರ ಏಲಂ ಆದಲ್ಲಿ,—ಅದು ರದ್ದಾಗುವುದು. ರೈತನು ಈ ಕಾನೂನಿನ ಉಪಕಾರ ಪಡೆಯಲು ಅರ್ಹನೆಂದು ಮಾತ್ರ ರುಜುಪಡಿಸಬೇಕು. ಮತ್ತು ಅಂತಹ ಆಸ್ತಿಯ ಮಾರಾಟವನ್ನು ರದ್ದು ಮಾಡುವಾಗ, ಧನಿ (ಸಾಲಗಾರ) ಒಕ್ಕಲು, ಆಸ್ತಿ ಏಲಮಿಗೆ ಪಡೆದವ ಮತ್ತು ಆ ಆಸ್ತಿಯಲ್ಲಿ ಏನೊಂದು ಹಕ್ಕು ಇರುವಾತ, ಇವರನ್ನೆಲ್ಲ ಕೋರ್ಟಿಗೆ ಕರೆಯಿಸಿ, ಅವರ ತಿಳುವಳಿಕೆಗೆ ತಂದೇ ಈ ಏಲಮನ್ನು ರದ್ದು ಮಾಡಬೇಕು.

ರಾಷ್ಟ್ರಪ್ರೇಮದ 'ವೃತ್ತಿ'

ಡಾ॥ ಜೊನ್ಸನ್ ನೆಂಬ ಪ್ರಸಿದ್ಧ ಇಂಗ್ಲೆಂಡಿನ ಸಾಹಿತ್ಯಕಾರರಿಗೆ "ಉತ್ತಮ ವೃತ್ತಿಯೇ ರಾಷ್ಟ್ರಸೇವೆ" ಎಂದೊಂದು ಸಲ ಹೇಳಿದುದು ಇನ್ನೂ ಒಂದು ಸೂತ್ರವಾಗಿ ಉಳಿದಿದೆ. ಈ ವಿಷಯವನ್ನೆ ಸ್ವಲ್ಪ ಎತ್ತಿ, ಶ್ರೀ ಸರೋಜಿನಿ ದೇವಿಯವರು,—ವಿದ್ಯಾರ್ಥಿಗಳಿಗೆ ಭಾಷಣ ಮಾಡುವಾಗ, ರಾಷ್ಟ್ರಸೇವಕರೆಂಬವರು ಸ್ವಾರ್ಥವನ್ನು ದಯವಿಟ್ಟು ಹೆಚ್ಚಿಸುವುದಕ್ಕಾಗಿ, ಈ ದೇಶಪ್ರೇಮ ತೋರಿಸಬಾರದು ಎಂದು ಎಚ್ಚರಿಸಿರುವರು. ರಾಷ್ಟ್ರೀಯ ಚಳವಳವು ತಲೆದೋರಿದಂದಿನಿಂದ ದುಸ್ತು ಬದಲಾಯಿಸಿದ ನಾನಾ ರಾಷ್ಟ್ರಭಕ್ತರು ನಮ್ಮಲ್ಲಿ ಉದಯಿಸಿದರು. ಖಾದಿ ಎಂದರೇ ಇವರಿಗೆ ಜೀವವಾಗಿದ್ದು, ಇತರ ರಾಷ್ಟ್ರೀಯ ಚಳವಳದ ತತ್ವಗಳೂ ಇವರ ಗಣನೆಗೇ ಆಗ ಬಾರದಿದ್ದುವು. ಖಾದಿ ಉಟ್ಟರಾಯಿತು, ರಾಷ್ಟ್ರಭಕ್ತ ಎಂಬಷ್ಟೆ ಇವರ ಅಭಿಪ್ರಾಯವಾಗಿತ್ತು. ಇನ್ನೊಂದು ಬಗೆಯ ರಾಷ್ಟ್ರಭಕ್ತರು, ಆಗಾಗ, ಅನುಷ್ಠಾನಕ್ಕೆ ತಕ್ಕಂತೆ, ಕೈ ನೂಲಿನ ಕೈಮಗ್ಗದ ಬಟ್ಟೆ ಧರಿಸಿಕೊಂಡು ರಾಷ್ಟ್ರಭಕ್ತಿಯನ್ನು ಪ್ರದರ್ಶಿಸಿದರು. ರಾಷ್ಟ್ರದ ವಿಚಾರಗಳು ಇವರಲ್ಲಿರಲಿಲ್ಲ, ಅಗತ್ಯವೆಂದು ಇವರಿಗೂ ತೋರಿದ್ದಿಲ್ಲ. ಇನ್ನು ಕೆಲವರು ಸಿನೆಮಾ ನಟರಂತೆ ಇದ್ದರು. ಇಂತಹ ಬಗೆಯ ಶಾಸನೋಲ್ಲಂಘನವನ್ನು ಇಂತಹ ಸುಮುಹೂರ್ತದಲ್ಲಿ ಕೈಕೊಂಡು ಹೀಗೆ ಮಾಡಲಾದೀತು ಎಂದು ಮೊದಲೇ ನೋಟೀಸು ಚೆನ್ನಾಗಿ ಪ್ರಕಟಿಸಿ, ಇದೆಲ್ಲ ದೇಶಸೇವೆಗೆಂದು, ಜೈಲಿನಲ್ಲಿ ತಮ್ಮದೊಂದು ಸ್ಥಾನವನ್ನು ಕಾದಿರಿಸಿ, ತಾವು ಮಾಡಿದ್ದ ಪ್ರತಿಯೊಂದು ದೇಶಪ್ರೇಮದ ಕೃತಿಯನ್ನು ಧಾರಾಳವಾಗಿ ಪ್ರಕಟಿಸುತ್ತ ಬಂದರು. ಆದರೆ, ಈ ವರ್ಗಗಳಿಗೆ ಸೇರಿದ್ದ ರಾಷ್ಟ್ರಭಕ್ತರು ಅಗತ್ಯ ಸಂದರ್ಭದಲ್ಲಿ ಮಾಯವಾಗುವುದಿತ್ತು; ಯಾವ ಕಾರ್ಯಕ್ಷೇತ್ರಕ್ಕೂ ತೆರಳುತಿದ್ದರು; ಹೊರತೋರುವುದೇ ಸುಖವೆಂದು ವಿಧ್ವಮಾನಗಳು ಪರಿವರ್ತನೆ ಹೊಂದಿದಾಗ ಮಾತ್ರ ಇವರು ಪುನಃ ಉದಯವಾಗುತಿದ್ದರು,—ಗ್ರಹಗಳ ಅಸ್ತ ಉದಯಗಳಂತೆ! ಕೆಲವರಂತೂ ಸೆಕ್ರೆಟರಿಗಳನ್ನು ಇಟ್ಟುಕೊಂಡಿರುವರು. ನಾಯಕತ್ವವಿರಬೇಕಾದರೆ, ಸೆಕ್ರೆಟರಿಯೂ ಅಗತ್ಯ ಸಲಕರಣೆ. ಆದರೆ ಎಷ್ಟೋ ಸಲ, ನಾಯಕನ ಬೆಂಬಲಕ್ಕೆ ಈ ಸೆಕ್ರೆಟರಿಯೊಬ್ಬನೇ ಇಲ್ಲದೆ ಮತ್ತಾರೂ ದೊರೆಯದೆ, ಸೆಕ್ರೆಟರಿಯು ನಾಯಕನಾಗಿ ಮಾತ್ರ ಈ ಮಹಾಪುರುಷನು ಉಳಿಯಬೇಕಾಗುವುದು. ತಪ್ಪದವರೇ ಇಲ್ಲ—ಸೆಕ್ರೆಟರಿಯೇ ಎಲ್ಲಾ ಬಲ ಹೀಗಾಗಿ, ಮುಂದಿಟ್ಟ ಕಾಲನ್ನು ಹಿಂದಿಟ್ಟರೆ ಸೆಕ್ರೆಟರಿಯೇ ಮುಂದುಬೇಕು. ಈಗೆಲ್ಲ ರಾಷ್ಟ್ರಭಕ್ತ ನಾಯಕತ್ವದ ಪರಿಣಾಮವು ಗ.ವುದೂ ಉಂಟು. ಇದನ್ನೆಲ್ಲ ವಿಚಾರಿಸಿ ಇದ್ದ ನಾಯಕರನ್ನು ಸಾಕು, ರಾಷ್ಟ್ರಭಕ್ತಿಯೆಂಬುದು ಒಂದು ವೃತ್ತಿಯಲ್ಲ, ಒಂದು ಧರ್ಮ, ಅಗತ್ಯ ಜನ್ಮಕರ್ತವ್ಯ, ದುಸ್ತು ಮಾತ್ರವಲ್ಲ ಇತರ ವಿಚಾರಗಳನ್ನೂ ಅಂಗೀಕರಿಸಬೇಕಾಗಿದೆ, ಅದನ್ನು ಬಹಳ ಪ್ರಕಟಮಾಡದೆ ನಡೆದುಕೊಳ್ಳಬೇಕಾಗಿದೆ ಎಂಬಿತ್ಯಾದಿ ಬೋಧನೆಯನ್ನು ಶ್ರೀಮತಿಯವರು ಹಿಂದೂ ಯುನಿವರ್ಸಿಟಿಯವರಿಗೆ ಬೋಧಿಸಿರುವರು.

ಸಂಸ್ಕೃತಕ್ಕೆ ಕೊಡಬೇಕೆಂದು ... ಪ್ರತಿಯೊಂದು ಶಾಲೆಯ ... ಪ್ಯಾಸವು ಒಂದಾಗಲಿ ... ಯಾಗಿ ಮಾಡಲ್ಪಡಬೇಕೆಂದು ... ರುವರು. ಸಂಸ್ಕೃತವನ್ನು ಕಲಿ ... ಜ್ಞಾನವು ಅಭಿವೃದ್ಧಿಯಾಗುವು ದಲ್ಲದೆ, ... ತಮ್ಮ ಮಾತೃಭಾಷೆಯ ಸೌಂದರ್ಯವನ್ನು ತಿಳಿದುಕೊಳ್ಳಲು ಸುಲಭವಾಗುವುದು. ಭಾರತದ ನಾಗರಿಕತೆಯ ಮತ್ತು ಪ್ರಗತಿಯ ಮೂಲಾಧಾರವೇ ಸಂಸ್ಕೃತವಾಗಿರುವುದು. ಇಂದು ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ವಿಜ್ಞಾನಕ್ಕೆ ಹೆಚ್ಚಿನ ಗಮನವು ಕೊಡಲ್ಪಟ್ಟು ಭೌತಿಕದಯಾಪರವಾದ ವಿಷಯಗಳನ್ನು ಹಿಂದೆಳೆಯುತ್ತಿರುವುದು ತೀರ ಖೇದಾರ್ಹವಾಗಿದೆ. ಯಾವುದಾದರೂ ಯೋಗ್ಯ ವಿದ್ಯಾವ್ಯವಸ್ಥೆಯಲ್ಲಿ ಸಂಸ್ಕೃತಕ್ಕೆ ಸ್ಥಾನವಿದ್ದೇ ತೀರಬೇಕು ಎಂಬುದಾಗಿಯೂ ಅವರು ಅಭಿಪ್ರಾಯಪಟ್ಟಿರುವರು.

ಮನುಷ್ಯನು ೨೪ ತಾಸುಗಳಲ್ಲಿ ಹೀರಿಕೊಳ್ಳುವ ಗಾಳಿಯಲ್ಲಿ ೧೭ ಔನ್ಸಿನಷ್ಟು ವಿಷಗಾಳಿಯಿರುತ್ತದಂತೆ.

ಅದೆಂತಹ ಬಲವೋ!

ಎಳ್ಳನ್ನು ಮುಷ್ಟಿಯಲ್ಲಿ ಹಿಡಿದು ಎಣ್ಣೆಯನ್ನು ಹಿಂಡಿ ಅನ್ನಕ್ಕೆ ಹಾಕಿಕೊಳ್ಳುವ ವಾಡಿಕೆ ನಮ್ಮ ಅಜ್ಜನವರ ಪೂರ್ವ ಕಾಲದವರು ಹೇಳುವುದುಂಟು. ಅದು ಸತ್ಯವೋ ಅಸತ್ಯವೋ ಎಂಬುದನ್ನು ನಾವು ನೋಡದಿದ್ದರೂ, ವ್ಯಾಯಾಮವನ್ನು ಮಾಡುತ್ತಿದ್ದ ಪೂರ್ವಿಕರು ಮಾತ್ರ ಶಕ್ತಿವಂತರಾಗಿದ್ದರೆಂಬುದನ್ನು ಒಪ್ಪಿಕೊಳ್ಳುತ್ತೇವೆ.

ಆದರೆ, ನಮ್ಮಲ್ಲಿ ಅನೇಕರಿಗೆ ಆಶಕ್ತಿಯೂ ಆ ಬಲವೂ ಪಟುತ್ವವೂ ಇರುವುದಿಲ್ಲ. ನಮಗೆ ವ್ಯಾಯಾಮ ಮಾಡಲಿಕ್ಕೆ ಅವಕಾಶವಿಲ್ಲವೆಂತ ತಿಳಿದು ಸುಮ್ಮನೆ ಈ ನೀರಸವಾದ ಜೀವನವನ್ನು ಕಳೆಯಬಾರದು. ನಾವು ಉತ್ತಮ ಆರೋಗ್ಯವಂತರಾಗಿಯೂ, ತೇಜಸ್ವಿಗಳಾಗಿಯೂ, ಕಳೆಕಾಂತಿಯುಳ್ಳವರಾಗಿಯೂ ಇರಬೇಕು. ಅದಕ್ಕಾಗಿ 'ಅಮೃತ'ವನ್ನು ಸೇವಿಸಬೇಕು. ಅಮೃತವನ್ನು ಸೇವಿಸಿದರೆ ಜೀವಿತ ಸೌಖ್ಯವನ್ನು ಅನುಭವಿಸಲಿಕ್ಕೆ ಬೇಕಾದ ಉತ್ಸಾಹವನ್ನೂ ಬಲವನ್ನೂ ಉಂಟುಮಾಡುತ್ತದೆ.

ಅಮೃತವು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ—ರಾಯಪೇಟೆ—ಮದ್ರಾಸು.

ಮಂಗಳೂರು ಪ್ರವರ್ತಕರು: ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

... is a sure cure for Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited.

Price Rs. 2. Postage extra.

TAHIR DIN,
Anarkali, LAHORE.



ಆರೋಗ್ಯಕ್ಕೆ
ರಾಜಮಾರ್ಗ

ಯಾವ ಕೆಲಸಕ್ಕಾದರೂ
ರಾಜಮಾರ್ಗವನ್ನು
ಅನುಸರಿಸುವುದೇ ಉತ್ತಮ.
ಆದರಿಂದ ಸೌಖ್ಯ, ಆನಂದ
ಇವುಗಳು ದೊರೆಯುವುವು.
ರಕ್ತಾಭಿವೃದ್ಧಿಗೆ,
ನರಗಳ ಬಲಕ್ಕೆ,
ವೀರ್ಯವೃದ್ಧಿಗೆ,
ಎಲುಬುಗಳು ಗಟ್ಟಿಯಾಗುವುದಕ್ಕೆ
ಶಾಂತಿಗೆ,
ಜೀವ ಸತ್ವಗಳಿಗೆ,
ನವಯೌವನಕ್ಕೆ,
ರಾಜಮಾರ್ಗವೆಂದರೆ

ಜೀವಾಮೃತ

ಆಯುರ್ವೇದಾಶ್ರಮಂ,
... ಗೋವಿಂದಪ್ಪನಾಯಕ್ ವೀಧಿ,
ಜಿ. ಟಿ. ಮದ್ರಾಸು.

ದ. ಕ. ಜಿಲ್ಲಾ ಏಜಂಟರು:
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು.

Ready for sale!

SHARADA DIARY 1938

ARE ISSUED IN THREE SIZES

Big size 0-8-0. Small size 0-4-0.

ಶಾರದಾ ಪೊಕೆಟ್ ಡೈರಿ 1938
ಮಾರಾಟಕ್ಕೆ ಸಿದ್ಧವಿವೆ.

Interleaved big size DIARIES useful for Banks & Lawyers

ARE AVAILABLE AT 1-2-0 PER COPY

Sharada Press, Mangalore, S. Kanara.

HOUNSA

ಹಂಸಾ ಸ್ನೋ ಮತ್ತು
ಬ್ರಿಲ್ಲಿಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋವಿಂದಪ್ಪ ಬಜಾರ್, ಮಂಗಳೂರು.

Use the soaps
KNOWN ALL OVER
WISICO'S,
MINAR
&
TAJAMAHAL 'Red'
Bar Soaps.

POPULAR IN THE MARKET

Sole Distributer:-
P. G. KAMATH,
Kashmir House,
Marnamikatte, MANGALORE.

ಮದನಕಾಮೇಶ್ವರಿ ಲೇಹ್ಯ.



ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ. ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ.
P. O. Peridepi (ನೆಲ್ಲೂರು ಡಿ.)

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭವತಿಯರಾಗಿರುವ ಯಾವಿರಾದ ಸ್ತ್ರೀಯರ ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದರೆ, ಹುಚ್ಚಿಯಾದವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯಬಾರದು. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎದೆಬಡಿತ ಅಪಸ್ಮಾರ, ಹುಚ್ಚುತನ ಮೊದಲಾದ ಕಾಟಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒದ್ದಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ. ವ್ಯಕ್ತಿ ರೋಗಿಯು ಶಾಂತಿಯನ್ನೂ ಸ್ವಾಸ್ಥ್ಯವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ.

C. L. [illegible]wala,
Palace Road, BARODA.

ನಮಗೆ ತಾಯಂದಿರರೆಷ್ಟು ಮಂದಿ?

ಸ್ವಾಮಿ ವಿವೇಕಾನಂದರು ತಮ್ಮ ಶಿಷ್ಯರಿಗೆ ಕೊಟ್ಟ ಸಲಹೆಗಳ ಆಧಾರದಿಂದ

(ಲೇಖಕ:— ಬಿ. ರಾಘವೇಂದ್ರರಾವ್, ಕುಂಗಳೂರು.)

[illegible] ಭಾರತವನ್ನು [illegible] ಯುಸಲು. [illegible] ವಿವೇಕಾನಂದರ ಧ್ಯಾನದ [illegible] ಅತ್ಯಂತ ಸಮಾನನಾಗಿ [illegible] ವಿವೇಕಾನಂದರು ಭಾರತೀಯರಾಗಿ [illegible] ಭಾರತೀಯರಾಗಿ ಬೆಳೆದು, 'ಭಾರತೀಯತೆಯ' ಕೀರ್ತಿಯನ್ನು ವಿಶ್ವದ ದಶದಿಕ್ಕುಗಳಲ್ಲಿಯೂ ಪಸರಿಸಿದರು. ಅವರ ಲೋಕ ಕೀರ್ತಿಯು ಸರ್ವಂಟು ವಿಶ್ವವ್ಯಾಪಿಯಾದ್ದು! ಕೇವಲ ಕಾವಿಸ್ಥೆಯುಳ್ಳದ್ದ, ಅನ್ಯಜನಾಂಗದವರ ದಬ್ಬಾಳಿಕೆಯಿಂದ ಅಚೇತನವನ್ನು ಹೊಂದುತ್ತಲಿರುವ, ಹಿಂದೂ ಧರ್ಮಕ್ಕೆ ಮಿಗಿಲಾದ ಧರ್ಮವು ವಿಶ್ವದ ಸೃಷ್ಟಿಯ ಜ್ಞಾನ ಭಂಡಾರದಲ್ಲಿ ಇದುವರೆಗೆ ಕಂಡು ಹಿಡಿಯಲ್ಪಡಲಿಲ್ಲವೆಂದು ಸಾರಿ ಮೆರೆದ ವೀರ ಪುರುಷರು ಇವರು. ಮಾನವನು ಸಂಸಾರವೆಂಬ ಈ ಶರಧಿಯನ್ನು ದಾಟುವಾಗ ಸುಖ, ದುಃಖ ಕಷ್ಟ, ಸಾಧ್ಯವೆಂಬ ತೆರೆಗಳನ್ನು ಪಾರಾಗದಾಗದು. ಈ ಎರಡೂ ತೆರೆಗಳು ಮಾನವನ ಜನ್ಮದಲ್ಲಿ ಅಂಕುರಿಸದಿರದು. ಒಮ್ಮೆ ಸುಖಿಯಾದವನು ಇನ್ನೊಮ್ಮೆ ದುಃಖಿಯಾಗುವನು. ಒಮ್ಮೆ ಕಷ್ಟ ಸಹಿಷ್ಣತೆಯಿಂದ ಬಳಲಿ ಬೆಂಡಾಗುವವನು ಇನ್ನೊಮ್ಮೆ ಸಾಹಸಿಯಾಗಿ ಬೆಳಗುವನು. ಅಲ್ಲದೆ ಸಾಹಸಮಲ್ಲನಾಗಿ, ಹುಟ್ಟಿದಂದಿನಿಂದ ಸಾಯುವ ತನಕ ಜಯಮಾಲೆಗಳನ್ನೇ ಧರಿಸಿ ಮೆರೆದವರಿಲ್ಲ. ಹಾಗೆ ಮೆರೆಯುವ ಭಾಗ್ಯವು ದೊರಕಿದವನನ್ನು ದೇವತೆಗಳ ಸಾಲಿನಲ್ಲಿ ಸೇರಿಸಬಹುದು. ಅಂಥವರು ವಿರಳರು. ಸ್ವಾಮಿ ವಿವೇಕಾನಂದರು ವಿಶ್ವಕಲ್ಯಾಣಕ್ಕಾಗಿ ಅನುದಿನ ಎಡೆಬಿಡದೆ ಕಷ್ಟಪಟ್ಟಿರುವರು. ಆದರೆ ಅವರು ಪಟ್ಟ ಕಷ್ಟವು ನಮ್ಮಂತೆಯೇ ನೋಡುವವರಿಗೆ ಕಷ್ಟವಾಗಿ ತೋರಿದೆಯಲ್ಲದೆ ಅವರು ಅದನ್ನು ಕಷ್ಟವೆಂದು ಭಾವಿಸಿಲ್ಲ. ಹಾಗಾದುದರಿಂದಲೇ ಅವರಿಗೆ ಅವರು ಸಾಧಿಸಿದ ಪ್ರತಿಯೊಂದು ಕಾರ್ಯದಲ್ಲಿಯೂ ಯಶಸ್ಸು ದೊರಕಿರುವುದು. ಅಪಜಯವೆಂದರೇನೆಂದು ಅವರಿಗೆ ತಿಳಿದಿರಲಿಲ್ಲ. ಎಲ್ಲೆಲ್ಲಿಯೂ ಜಯಮಾಲೆಗಳೇ ಅವರ ಕೊರಳಲ್ಲಿ ಮೆರೆಯುತ್ತಿದ್ದುವು. ಕರ್ಮಯೋಗನೆಂದರೇನೆಂದು ಕರ್ಮಗಳನ್ನು ಮಾಡಿ ಅರುಹಿದವರು ಇವರೇ. ಹಿಂದೂ ಧರ್ಮದ ರಸಪೂರ್ಣವಾದ ಸಾರವನ್ನು ಪಾಶ್ಚಾತ್ಯರು ಸವಿಸಿಂತು [illegible] ಕೊಂಡ ಅಮೇರಿಕಾ ದೇಶದ ಸರ್ವ ಕಡೆಗಳಲ್ಲಿಯೂ ಸರ್ವರಿಗೂ ರುಚಿಸುವಂತೆ [illegible] ವರು ಇವರೇ. ಅಂದಿನಿಂದ ಇಂದಿನ ವರೆಗೂ ಅಮೇರಿಕಾ ದೇಶದವರು ಹಿಂದೂ ಧರ್ಮದ ಸಾರವನ್ನು ಸಂತೋಷದಿಂದ ಹೀರುತ್ತಲೇ ಇರುವರು. ಅಮೇರಿಕಾ ದೇಶದಲ್ಲಿ ಸಂದೇಶಗಳ ತೃಪ್ತಿ ದಣಿತದಿಂದ ಆನಂದಗೊಂಡವರು ಮೊದಲನೇಯವರಾಗಿ ಇವರೊಬ್ಬರೇ. ಹಿಂದೂ ಧರ್ಮದ ಪಾರಮಾರ್ಥಿಕ ವಿಚಾರಗಳೇ ಸರ್ವತ್ರ ಸರ್ವ ಶ್ರೇಷ್ಠವೆಂದರುಹಿದವರು ಪಾಶ್ಚಾತ್ಯರಿಗೆ ಮೊದಲಿಗರು ಇವರೇ. ಅಮೇರಿಕಾ ದೇಶದಲ್ಲಿಯೂ, ಇಂಗ್ಲೆಂಡಿನಲ್ಲಿಯೂ ಇವರ ಹಿಂದೂ ಧರ್ಮದ ಪ್ರಚಾರದಿಂದಾಗಿ ಕ್ರಿಸ್ತೀಯತೆಯು ಅಲ್ಲೋಲಕಲ್ಲೋಲವಾದುದನ್ನರಿತು ಇವರು ಜರ್ಮನಿಗೆ ತೆರಳಿದಾಗ ಅಲ್ಲಿಯ ಸರಕಾರದ ನಿರ್ಬಂಧವು, ಇವರ ಲೋಕೋತ್ತರವಾದ ಸಂದೇಶಗಳಿಗೆ ಮುಕ್ತಿದಾಯಕವಾಗಿ ಪರಿಣಮಿಸದಿದ್ದರೂ, ಸ್ವಾರ್ಥಪರರಾಗಿ ಮತೀಯತೆಯನ್ನು ಬೋಧಿಸದವರಿಂದ ಇವರಿಗೆ ಸುಸ್ವಾಗತವು ದೊರಕಿ ಅಲ್ಲಲ್ಲಿ ಅವರವರ ಮನೆಗಳಲ್ಲಿ ಇವರ ಅಮೃತವಾಣಿಗೆ ಹಾದಿ ದೊರೆಯುವ ಹಾಗಾಗಿತ್ತು. ಇವರು ತಮ್ಮ 39ನೆಯ ವಯಸ್ಸಿನಲ್ಲಿ ದಿವಂಗತರಾದರು. ಪೂರ್ಣಾಯುವಾದ ಇತರ ಯಾವ ಮಾನವನೂ ತನ್ನ ಆಯುಃಮಾನದಲ್ಲಿ ಎಷ್ಟು ಶ್ರಮ ವಹಿಸಿದರೂ ಮಾಡಲು ಅಸಾಧ್ಯವಾಗುವಷ್ಟು ಲೋಕಸೇವೆಯ ಶ್ರಮವನ್ನು ವಹಿಸಿರುವದು ಇವರ ಈ ಅಲ್ಪ ಆಯುಃಮಾನದಲ್ಲಿನ ಅವರ ಆ ಶ್ರೇಷ್ಠ ದೇಹ. ಅವರು ಪೂರ್ಣಾಯುಃರಾಗಿರುತಿದ್ದರೆ ಇಂದು ಅವರು ಮುದುಕರಾಗಿ ನಮ್ಮೊಡನೆ ತರುಣ ಉತ್ಸಾಹಿಗಳಂತೆ ನಲಿದಾಡಿ ಭಾರತೋದ್ಧಾರದ ಕಾರ್ಯವನ್ನು ಸಂಪೂರ್ಣವಾಗಿ ನಿರ್ವಹಿಸಿ ಮಾಡಿಸುವ ಕಾರ್ಯದಲ್ಲಿ ನಿರತರಾಗಿದ್ದು, ನಾವು ಅದೊಂದು ತರಹದ ನರವಶತೆಯಲ್ಲಿ ಲೀನರಾಗ ನಮ್ಮಾಭ್ಯುದಯದ ಅರ್ಕೋದಯವು ಕಳೆದೋಗುತ್ತಿತ್ತು. ಹಾ! ಭಾರತದ ದುರ್ಭಾಗ್ಯವೇ! ಅಲ್ಲ! ಅಲ್ಲ!! ಸೌಭಾಗ್ಯವಂತನನ್ನು ಕಳಕೊಂಡ ನಮ್ಮ ದುರ್ಭಾಗ್ಯವೇ?

ನಾವು ದುರ್ಭಾಗಿಗಳೇ? ಮಾತೆಯೇ! ನೀನೆಷ್ಟು ಮಂದಿ ಸೌಭಾಗ್ಯವಂತರ ತಾಯಿಯಾಗಲಿಲ್ಲ! ನಮ್ಮಂತಹ ದುರ್ಭಾಗ್ಯಶಾಲಿಗಳಿಂದಲೇ ನಿನ್ನ ಇಂದಿನ ಪಾಡು ಇಷ್ಟರ ತನಕ ಬಂದಿದೆ. ನಾವು ದುರ್ಭಾಗಿಗಳೇ ಯಾವ ವಿಧದಲ್ಲಿಯೂ ನಿನ್ನ ಚರಣ ಕಿಂಕರರಾಗಲು ನಮಗೆ ಎಡೆಯಿಲ್ಲದಾಗಿದೆ. ಅಂತಹ ತೇಜೋಮಯವಾದೊಂದು ಮೂರ್ತಿಯು ಅದೃಶ್ಯವಾಗಿದೆ. ಆದರೂ ಅವರ ಸಂದೇಶದ ಮೂರ್ತಿಮಯ ಭಾವನೆಗಳು ನಮ್ಮಲ್ಲಿ ನೆಲೆ ನಿಂತರೆ ಸಾಕು ......! ಶ್ರೀ ಸ್ವಾಮಿ ವಿವೇಕಾನಂದರ ಪ್ರಾಣಪಕ್ಷಿಯಿಂದ ವಿರಹಿತವಾದ ಅವರ ಆ ದೇಹವನ್ನು ನೋಡಿದ ಲಕ್ಷೋಪಲಕ್ಷ ಭಾರತೀಯರು ಅಂದು ಮಾಡಿದ ದೇಶಸೇವೆಯ ಪ್ರತಿಜ್ಞೆಯ ಕಿರಣವು ಉಜ್ವಲಿತವಾದರೆ ಸಾಕು.

ಸ್ವಾಮಿ ವಿವೇಕಾನಂದರದು ದೇಶಸೇವೆಯು, ಯಾಕೆ? ಲೋಕಸೇವೆಯ ಪ್ರೀತಿಯಿಂದ ಶ್ರಮವಹಿಸಿ ನಲಿದಾಡಿದ ದೇಹ. ಇವರು ಅಮೇರಿಕಾದಿಂದ ಇಂಗ್ಲೆಂಡಿಗೆ ಹೋಗಿ ಅಲ್ಲಿಂದ ಜರ್ಮನಿ ಮುಂತಾದೆಡೆಗಳಿಗೆ ಪ್ರಯಾಣ ಬೆಳಸಿ ಅಲ್ಲಿಂದ ರೋಮ್ ಪಟ್ಟಣದ ಕ್ರಿಸ್ತಾಲಯವನ್ನು [illegible] ತನ್ನ ಪಾಶ್ಚಾತ್ಯ ಶಿಷ್ಯ ವರ್ಗದವರೊಡಗೂಡಿ. ಹಡಗನ್ನು ಹತ್ತಿ, ಕೆಲವು ದಿನಗಳನ್ನು [illegible] ಒಬ್ಬಾತನ [illegible] ತ್ವವನ್ನರಿದ ಹಿಂದೂ ಧರ್ಮದ ಪ್ರಚಾರಕೆಯ [illegible] ಅವರನ್ನು ಒಮ್ಮೆ [illegible] ಎಂದು [illegible] ಹಿಂದೂ ದೇಶಕ್ಕೆ ಅದೇ ಹಡಗದಲ್ಲಿ ಪ್ರಯಾಣ [illegible] ಒಬ್ಬ ಇಟಲೀ ಮಿಶನರಿಯು [illegible] ಸಂದರ್ಭವನ್ನೊಂದು ಒದಗಿಸಿಕೊಂಡನು. ಸುಭಾಷಿತರಾದ ವಿವೇಕಾನಂದರಿಗೆ ಇಂತಹ ದುಷ್ಟ ಸಂಗತಿಗಳು ಹೊಸದಾಗಿರಲಿಲ್ಲ. ಅವರು ಜ್ಞಾನದೇವತೆಯ ಅವತಾರರು, ಸರಳ ವ್ಯಕ್ತಿಗಳಿಗೆ ಸರಳ ರೀತಿಯಿಂದಲೇ ಉತ್ತರಿಸಿದರು. ಅಸಂಬದ್ಧ ವಾಕ್ಯಗಳನ್ನು ಸಂಪಾದಿಸಿದರು. ಕಷ್ಟದಿಂದ ಒದಗಿಸಿಕೊಂಡ ಈ ಸುಸಂದರ್ಭವು ತನ್ನ ಕೈಯಿಂದ ಪೂರ್ಣತೆಯನ್ನು ಹೊಂದುವದೆಂಬ ಹೆದ್ದಾಸೆಗೆ ಒಳಗಾದರು. ಆ ಇಟಲೀ ಮಿಶನರಿಗಳು ಪಾಪ! [illegible] ಅವರಿಗೆ ಹುಚ್ಚು ಹಿಡಿದ [illegible] ವಾಕ್ಯಗಳಿಂದ ಭಾರತವನ್ನು ಭಾರತೀಯರನ್ನು ಹೀಯಾಳಿಸುವದು. ಆ ದಾರಿಯಿಂದ ಕೃತಾರ್ಥರಾಗುತ್ತೇವೆಂಬ ಹೆಮ್ಮೆಯಿಂದ ನೀಚತನದ ಹುಚ್ಚು ಶಬ್ದಗಳನ್ನು ಸೇರಿಸಿ ಅದೊಂದು ಹೊಸ ತರದ ವಾಕ್ಯಗಳನ್ನು ಉಸುರಲು ಹೊರಟರು.

ಹೆತ್ತು ಸಲಹಿದ ತಾಯಿಯನ್ನು ತನ್ನನ್ನು ಹೊತ್ತ ಶ್ರೀ ಮಾತೆಯನ್ನು, ಆ ಶ್ರೀ ಮಾತೆಯ ಗರ್ಭದಲ್ಲವತರಿಸಿದ ಶ್ರೇಷ್ಠ ಮತವೆಂಬ ತಾಯಿಯನ್ನೂ, ಹತ್ತು ತಿಂಗಳುಗಳ ಮೊಲೆಯುಣ್ಣಿಸಿ ತಾಯಿಯು ಕೈಬಿಟ್ಟ ಬಳಿಕ, ಸಾಯುವ ತನಕ ಹಾಲಿತ್ತು ಸಲಹುವ ಗೋಮಾತೆಯ ಭಕ್ಷಕನಾದ ಆ ಇಟಲಿ ಮಿಶನರಿಯು ಹೀಯಾಳಿಸುವದನ್ನು ಕೇಳಿದ ಶ್ರೀ ಸ್ವಾಮಿ ವಿವೇಕಾನಂದರ ಶಾಂತ ಭಾವ ಆ ಪ್ರಫುಲ್ಲ ಮೋರೆಯು ಬಿಸಿ ರಕ್ತದ ಉತ್ಕಟತೆಯಿಂದ ಕಂಪೇರಿತು. ಈ ಕೆಂಬಣ್ಣವೇರಿದ ಶ್ರೀ ವಿವೇಕಾನಂದರ ವದನವನ್ನು ಕಂಡ ಇಟಲಿ ಮಿಶನರಿಗಳು ತನ್ನ ಇಂಗಿತವು ಈಡೇರಿತೆಂದು ಹಿಗ್ಗಿದರು. ಹಿಗ್ಗಿದವರಿಗೆ ಸುಖದ ಸುಗ್ಗಿಯು ದೊರಕಿತಂತಾಯಿತು. ಅಜ್ಞಾನಾಂಧಕಾರದಿಂದ ಮುಳುಗಿ ಕೇಳುತ್ತಲಿರುವ ಅವರ ಆ ಮನೋಭೀಷ್ಟದ ಸಿದ್ಧತೆಯಿಂದಾಗಿ ಬಾಯಿಂದ ಹೊರಸೂಸುವ ಪ್ರತೀ ಮಾತುಗಳೂ ಭಾರತೀಯರ ಹೀಯಾಳಿಕೆಯ ವಿಶ್ವವ್ಯಾಪಕದ ಕಡನೆಯ ಸೋಪಾನವನ್ನವಲೋಕಿಸಿತು. ಕೆಂಪು ಸಮುದ್ರದಲ್ಲಿ ಓಡುತ್ತಿರುವ ಆ ಹಡಗದಲ್ಲಿ ಯಾರು ಯಾರು ಇರುವರೆಂಬುವದನ್ನಾಗಲೀ, ತಾನು ಎಲ್ಲಿರುತ್ತೇನೆಂಬ ಭಾವನೆಯನ್ನಾಗಲೀ ಆಗ ಸ್ವಾಮಿ ವಿವೇಕಾನಂದರಿಗೆ ಗೊತ್ತಾಗಲಿಲ್ಲವೆಂದು ಅವರ ಆತ್ಮಕಥೆಯಲ್ಲಿ ಬರೆದಿರುತ್ತದೆ. ಭಾರತವನ್ನು ಭಾರತೀಯರನ್ನು, ಭಾರತ ಧರ್ಮವನ್ನು, ಹೀಯಾಳಿಸುವದನ್ನು ಕೇಳಲಾರದಾದರು, ಸ್ವಾಮಿ ವಿವೇಕಾನಂದರು. ಇದನ್ನು ಕೇಳಿದ ಅವರಿಗೆ ಎಲ್ಲಿಂದಿಲ್ಲದ ರೋಷಾವೇಶವು ಹೊರಹೊಮ್ಮಿತು. ಹಿಡಿದರು ಗಟ್ಟಿಯಾಗಿ ಒಂದು ಕೈಯಿಂದ ಆ ಇಟಲಿ ಕ್ರಿಸ್ತ ಮಿಶನರಿಗಳ ಗಡ್ಡವನ್ನು ಹಿಡಿದರು ಇನ್ನೊಂದು ಕೈಯಿಂದ ಅವರ ಕಾಲುಗಳನ್ನು. (ಇನ್ನೆರಡು ಕೈಗಳಿರುತ್ತಿದ್ದರೆ ಅವನ್ನೆ ಏನಾಗುತಿತ್ತೆಂದು ವಾಚಕರೇ ಊಹಿಸಬಹುದು.) ಮಾತೃ ನಿಂದೆಯಿಂದ ರೋಷಾವೇಶಗೈದ ವಿವೇಕಾನಂದರು ಆ ಸಮಯ ಜಗತ್ತನ್ನೇ ಭಸ್ಮೀಕರಿಸಲು ಹೊರಟ ರುದ್ರನೋಪಾದಿಯಲ್ಲಿ ತೋರುತ್ತಿದ್ದರೆಂದು ಅವರ ಪಾಶ್ಚಾತ್ಯ ಶಿಷ್ಯರೊಬ್ಬರು ಇದನ್ನು ನೋಡಿ ವರ್ಣಿಸಿರುವರು.—ಎತ್ತಿದರು ಆ ಇಟಲೀ ಮಿಶನರಿಯನ್ನು ಉಸುರಿದರು.... ಏನು! ನನ್ನ ಮಾತೆಯನ್ನು, ಭಾರತವನ್ನು, ಭಾರತ ಧರ್ಮವನ್ನು ಹೀಯಾಳಿಸುವೆಯಾ? ನೋಡುವರು ಪ್ರಾಯಶ್ಚಿತ್ತ.....ವೆಂದು. ಅವನ್ನು ಸಮುದ್ರದಲ್ಲಿ ನೆತ್ತುಹಾಕಲು ನಡೆದಾಗ, ವಿವೇಕಾನಂದರ ಪಾಶ್ಚಾತ್ಯ ಶಿಷ್ಯರೊಬ್ಬರು ಆ ಇಟಲೀ ಮಿಶನರಿಗಳ ಆರ್ತನಾದವನ್ನು ಕೇಳಿ ಸಹಾಯಕ್ಕೆ ಬಾರದಿರುತ್ತಿದ್ದರೆ ಇಟಲೀ ಮಿಶನರಿಗಳ ಅವಸ್ಥೆಯು ಅಲ್ಲಿಂದಲ್ಲಿಗೇ ಮುಗಿಯುತಿತ್ತು.

ಇನ್ನು ಮುಂದೆ ಈ ತರದಲ್ಲಿ ಹೀಯಾಳಿಸುವ ಅಭ್ಯಾಸವನ್ನು ಬಿಟ್ಟುಬಿಡುವಂತೆ ಹಿತೋಪದೇಶವನ್ನು ಕೊಡುವವರಾದರು. ಸ್ವಾಮಿ ವಿವೇಕಾನಂದರು ಆ ಇಟಲೀ ಮಿಶನರಿಗಳಿಗೆ:-

ವಾಚಕರೇ ಸಿಟ್ಟು ಯಾವ ಸಮಯದಲ್ಲಿಯೂ, ಒಳ್ಳೆತನ್ನು ಮಾಡುವುದಿಲ್ಲವೆಂಬುದು ನಿಜವಾದರೂ, ಹೆತ್ತು ಹೊತ್ತು ಹಾಲಿತ್ತು, ಜಾತೀಯತೆಯ ಶ್ರೇಷ್ಠ ಜ್ಞಾನ ಮಾರ್ಗವನ್ನು ಕಲಿಸಿದ ಈ ನಾಲ್ಕು ಜನ ತನ್ನ ತಾಯಂದಿರರನ್ನು, ಯಾರಾದರೂ ಹೀಯಾಳಿಸುವಾಗಲೂ ಅವರಿಗೆ ಕಷ್ಟ ಕೊಡುವಾಗಲೂ ಅವರ ಮಾನಭಂಗ ಮಾಡುವಾಗಲೂ, ತಾಳ್ಮೆ ಗ್ರಾಹಿಸುವ ಮಾನವನಲ್ಲಿ ಮಾನವತ್ವವಿದ್ದ ಹಾಗಾಯಿತೆ? ಪುರುಷನಲ್ಲಿ ಪುರುಷತ್ವವಿರುವಂತಾಗುವದೇ? ಸ್ತ್ರೀಯಲ್ಲಿ ತಾಯಿತನವಿರುವದಂತಾಗುವದೇ? ಇಂತಹ ಸಮಯಗಳಲ್ಲಿ ಸುಮ್ಮನಿರುವವನು ಹೇಡಿಯು. ಮಾತೃಭಕ್ತಿಯು ಆತನಲ್ಲಿ ದಿಕ್ಕಿಲ್ಲದಂತಾಗುವುದು

ಶ್ರೀ ಸ್ವಾಮಿ ವಿವೇಕಾನಂದರು ಅಮೇರಿಕಾದಿಂದ ಮರಳಿ ಬಂದಕೂಡಲೆ ಗಂಗಾನದಿಯ ದಡದ ಬೇಲೂರಿನಲ್ಲಿ ಮಠ ಕಟ್ಟಿಸಿ, ಅಲ್ಲಿ ಹಿಂದೂ ಧರ್ಮದ ಪ್ರಚಾರಕರ ಬಗ್ಗೆ ಶಿಷ್ಯ[illegible] ಶಿಷ್ಯ[illegible] ನನ್ನು ಕರೆದು, ಕೂಡಲೇ ಹೋಗಿ ಹಿಂದೂ ಧರ್ಮದ ಕುರಿತು ಭಾಷಣ ಕೊಡಬೇಕಾಗಿ ಹೇಳಿದರು. ಆಗ್ಗೆ ಆ ಶಿಷ್ಯನು ತಾನು ಈ ವರೆಗೆ ಹಾಗೆ ಭಾಷಣ ಕೊಡಲಿಲ್ಲವೆಂದೂ ಅದು ತನಗೆ ಅಶಕ್ತವಾಗಿ ತೋರುವದೆಂತಲೂ ಭಿನ್ನವಿಸಿಕೊಂಡರು. ಆಗ್ಗೆ ವಿವೇಕಾನಂದರು ಆ ಶಿಷ್ಯನಿಗೆ 'ನಿಮಗೆ ನಾಚಿಕೆ ಏಕಾಗುವದಿಲ್ಲ? ಅನ್ಯ ದೇಶದವರು ಬಂದು ಶ್ರೇಷ್ಠ ಮತವಾದ ನಮ್ಮ ಹಿಂದೂ ಧರ್ಮವನ್ನು ಹೀಯಾಳಿಸುತ್ತಿರುವದನ್ನು ಕೇಳುವ ನೀವು ಹೊತ್ತ ಮಾತೆಯ ದ್ರೋಹಿಗಳಾಗುವದಿಲ್ಲವೇನು? ನಿಮ್ಮ ಹೆತ್ತ ತಾಯಿ, ಜನನಿ ಜನ್ಮದಾತೆಯನ್ನು, ನಿಮ್ಮೆದುರು ಹೀಯಾಳಿಸುವಾಗಲೂ, ನೀವು ನೋಡುತ್ತಿರುವ ನಿಮ್ಮ ಹೇಡಿತನಕ್ಕೆ ಏನನ್ನಬೇಕು, ಹೋಗಿರಿ! ಪೀಠದಲ್ಲಿ ನಿಂತು ಬಾಯಿಗೆ ಬಂದದನ್ನು ಉಸುರಿರಿ! ಗೊತ್ತಿರಲಿ! ಗೊತ್ತಿಲ್ಲದಿರಲಿ! ಏನೇನು ಕಲೆಯಲ್ಲಿ ಬರುವುದೋ ಅದನ್ನು ಬಾಯಿಂದ ನುಡಿಯಿರಿ. ನೀವು ಹೇಳಿದುದೇ ತಥಾಸ್ತು ವಾಕ್ಯಗಳಾಗುವುವೆಂದು ದಬ್ಬಿ ಹೊರಡಿಸಿದರು. ಅವರನ್ನು.

ಭಾಷಣಾನಂತರ ಶಿಷ್ಯರ ವಾಕ್ಯಗಳು ಅಮೃತವಾಣಿಯಾಗಿಯೇ ಪರಿಣಮಿಸಿದ್ದವೆಂದು ಅನಂತರ ಆ ಶಿಷ್ಯನಿಗೆ ಗೊತ್ತಾಯಿತು ಅದು ಸ್ವಾಮಿ ವಿವೇಕಾನಂದರ ವರಪ್ರದಾನದ ಮಹಿಮೆ.

ಸ್ವಾರ್ಥದಿಂದ, ಜಾತೀಯತೆ ಎಂಬ ನೆವನದಿಂದ ಶಾಲೆಗಳನ್ನು ಆಸ್ಪತ್ರೆಗಳನ್ನು ಕಟ್ಟಿಕೊಂಡು ಭಾರತದುದ್ಧಾರ ಮಾಡುತ್ತೇನೆಂದು ಸುಳಿಗೆಯನ್ನು ಮಾಡುತ್ತಾ, ಹೊಟ್ಟೆ ಪಾಡಿಗಾಗಿ ಸ್ವಧರ್ಮವನ್ನು ತೊರೆದು ಸಂಬಳಕ್ಕಾಗಿ, ಉದರಪೋಷಣೆಯ ನಿಮಿತ್ತದಿಂದ ಸತ್ಯವೇದವನ್ನು ಸಾರುತ್ತೇವೆಂದು ಬಾಯಿಮಾತ ಮಾಡಿದುದನ್ನು ಗಿಳಿಯೋಪಾದಿ ಉಚ್ಚರಿಸಿ ಭಾಷಣ ಮಾಡುತ್ತಾ ದೇವಾಲಯಗಳೆಂಬ ನೆವನದಿಂದ ತೆರಿಗೆಯನ್ನು ಜನರಿಂದ ಸುಲಿದು ಭಕ್ತರ ಆಸ್ತಿಪಾಸ್ತಿಗಳೆಲ್ಲವನ್ನು ಕ್ರಯಕ್ಕೆ ಕೊಂಡು ಲಾಭಾಂಶವನ್ನು ಪರದೇಶಗಳಿಗೆ ಸಾಗಿಸುತ್ತಿರುವ ವಂಚಕ ವ್ಯಾಪಾರಿಗಳು ಹಿಂದೂ ಧರ್ಮವನ್ನಾಗಲೀ, ಹಿಂದೂದೇಶವನ್ನಾಗಲೀ, ಹಿಂದೂ ಜನರನ್ನಾಗಲೀ ನಿಂದಿಸುವುದನ್ನು ಸ್ವಾಮಿ ವಿವೇಕಾನಂದರು ಸಹಿಸುತ್ತಿರಲಿಲ್ಲ.

ಆದರೆ ಅವರನ್ನು ಯಾರಾದರೂ ದೂರಿದರೆ ಅವರು ಉದ್ರೇಕಗೊಳ್ಳುತ್ತಿರಲಿಲ್ಲ. ಅಮೇರಿಕಾ ದೇಶಕ್ಕೆ ಹೋಗುವ ವೇಳೆಯಲ್ಲಿ ಅವರೊಮ್ಮೆ ರೈಲಿನಲ್ಲಿ ಪ್ರಯಾಣ ಗೈಯ್ಯುತ್ತಿರುವಾಗ್ಗೆ ಅದೇ ಗಾಡಿಯಲ್ಲಿ ಕುಳಿತ ಇಬ್ಬರು ಆಂಗ್ಲೇಯರು, ಹಿಂದೂದೇಶದ ವೈರಾಗಿಗಳ ಕಾವಿ ವಸ್ತ್ರದ ಉಡುಗೆಯಲ್ಲಿದ್ದ ಇವರನ್ನು ನೋಡಿ ಇವರಿಗೆ ಇಂಗ್ಲೀಷ ಭಾಷಾ ಜ್ಞಾನವಿಲ್ಲವೆಂದೂ ಹಿಂದೂ ಸನ್ಯಾಸಿಗಳೆಂಬವರು ಎಕ್ಕರೆಂಬುವುದಾಗಿ ಟೀಕಿಸಿ ಮಾತನಾಡುತ್ತಿದ್ದುದನ್ನು ಇವರು ಕೇಳಿಯೂ ಕೇಳದಂತಿದ್ದರು. ಮುಂದಿನ ಸ್ಟೇಶನಿನಲ್ಲಿ ಇವರಿಳಿದು ಅಲ್ಲಿಯ ಸ್ಟೇಷನ್ ಮಾಸ್ಟರರೊಡನೆ ಮಾತನಾಡುವ ಇಂಗ್ಲಿಷ್ ಭಾಷೆಯ ಸರಳತನದ ಚತುರತೆಯನ್ನು, ಈ ಆಂಗ್ಲೇಯರಿಬ್ಬರು ಕೇಳಿ, ನಾಚಿಗೆ ಕೆಟ್ಟುಕೊಂಡು, ತಮ್ಮದು ತಪ್ಪಾಯಿತೆಂದು ಕ್ಷಮೆ ಕೇಳಿಕೊಂಡರು. ಅದಕ್ಕೆ ಸ್ವಾಮಿಜಿಯವರು ನಿಮ್ಮಂತಹ ಹುಚ್ಚರನ್ನು ನೋಡುವುದು ಇದು ಮೊದಲನೇಯದಲ್ಲವೆಂದು ಉತ್ತರಕೊಟ್ಟು ತಮ್ಮ ಕೆಲಸವನ್ನು ನೋಡಿಕೊಳ್ಳುವವರಾದರು.

ಈ ವಿಷಯಗಳಿಂದ ಸ್ವಾಮಿ ವಿವೇಕಾನಂದರ ಪರಿಚಯವು ಪೂರ್ಣವಾಗುತ್ತದೆಂದು ಈ ಲೇಖನವನ್ನು ಬರೆದುದಲ್ಲ. ಅದು ಅವರ ಸಂಪೂರ್ಣ ಆತ್ಮಕಥೆಯನ್ನೋದಿದರೆ ತಿಳಿಯುದು. ರಾಮಾಯಣ ಮಹಾ ಭಾರತಗಳೇ ಮುಂತಾದ ಪುರಾಣಗಳನ್ನು ಓದುವುದಕ್ಕಿಂತಲೂ ಮಿಗಿಲಾದ ಪರಮಶಾಂತಿ ಆನಂದವು ಅವರ ಆತ್ಮಚರಿತ್ರೆಯನ್ನೋದುವದರಿಂದ ಉಂಟಾಗುವುದು. ಈ ಅಲ್ಪಲೇಖಕನಿಗದರ ವರ್ಣನೆಯು ಅಸಾಧ್ಯವು. ಭಾರತೀಯರಾದ ನಾವು, ನಮ್ಮ ಮಾತೆಯ

([illegible]ನೇ ಪುಟವನ್ನು ನೋಡುವುದು)

[illegible]

ಸರಕಾರಿ ನೌಕರರ [illegible] ಕುರಿತು, [illegible] ಮಹೇಂದ್ರ [illegible] ಎಂಬವರು, ಈ [illegible] ಒಂದು ಲೇಖನವನ್ನು ಮೋಡರ್ನ ರಿವ್ಯೂ ಪತ್ರಿಕೆಯಲ್ಲಿ ಬರೆದಿರುವರು.

[illegible] ಕಾಂಗ್ರೆಸ್ ಸಿದ್ಧಾಂತವಾಗಿ [illegible] ಆದರೆ ಈ ಕುರಿತು ಅನೇಕ ಕಡೆಗ [illegible] ಬಗೆಯ ಟೀಕೆಗಳು ಹೊರಟಿವೆ. [illegible] ಕೃತ ಕಾಂಗ್ರೆಸ್ ಸರಕಾರ [illegible] ಆದರ್ಶವಾಗಿವೆ, ಆದರೆ [illegible] ಸಾಂಪತ್ತಿಕ ನೀತಿಯ ಆಧಾರ [illegible] ಅವುಗಳಿಂದ ಹಾಳು ಪರಿಣಾಮಗ [illegible] ಗುವವೆಂದೂ, ಗದರಿಕೆಗಳು ಹೊರ [illegible] ಆದರೆ ತಮ್ಮ ಸ್ವಾರ್ಥಸಾಧನೆಯ ದೃಷ್ಟಿಯಿಂದಲೆ, ಈಗಿನ ಕ್ರಮಗಳಿಂದ ಹಿತಗಳನ್ನು ಕಳೆದುಕೊಳ್ಳುವ ವರ್ಗದಿಂದ ಮಾತ್ರ ಈ ತರದ ಟೀಕೆಯು ಬಂದಿರುತ್ತದೆ- ಅದಕ್ಕೆ ಅಷ್ಟು ಮಹತ್ವವನ್ನು ಕೊಡಬೇಕಾಗಿಲ್ಲ.

ಈ ಟೀಕೆಗಳು ಲೋಭತನದ ಮತ್ತು ಸ್ವಾರ್ಥದ ಚಿಹ್ನೆಗಳಾಗಿವೆ. ಸಂಬಳ ಕಡಿತದಿಂದ ಕೆಲಸವು ಸರಿಯಾಗಿ ನಡೆಯದು ಎಂದು ಅವರ ಅಂಬೋಣ. ಹೀಗೆ ಅವರು ಅನೇಕ ಮಹಾ ತಪ್ಪುಗಳನ್ನು ಹೊರಡಿಸಿದುದು ಬರೀ ಸ್ವಾರ್ಥಸಾಧನೆಯ ದೃಷ್ಟಿಯಿಂದ. ಆದರೆ ಕಾಂಗ್ರೆಸ್ ಆ ಕುರಿತು ತಮ್ಮ ಸಿದ್ಧಾಂತವನ್ನು ರೂಢಿಗೆ ತಾರದೆ ನಿಲ್ಲದು.

ಸರಕಾರದ ಖಜಾನೆಗಳನ್ನು ತುಂಬಿಸುವ ಪ್ರಜೆಗಳ ಸಾಂಪತ್ತಿಕ ಯೋಗ್ಯತೆಗೂ, ಸರಕಾರಿ ನೋಕರರ ಪಗಾರಕ್ಕೂ ಜೋಡಣೆ ಇರಬೇಕಾದುದು, ಹಳೆ ನ್ಯಾಯವು. ಸರಕಾರಿ ಹಣದ ಹೆಚ್ಚಿನಂಶವು ಬರಿ ಆಡಳಿತ ವ್ಯವಸ್ಥೆಗೆ ವ್ಯಯಿಸಲ್ಪಡದೆ, ಕಂದಾಯದಾರರಿಗೆ ಹೆಚ್ಚಿನ ಫಲ ದೊರಕುವ ರೀತಿಯಲ್ಲಿ ಅದು ವಿನಿಯೋಗಿಸಲ್ಪಡಬೇಕು. ಈ ನೀತಿಯು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಅನುಸರಿಸಲ್ಪಡುತ್ತದೆ. ಸರಕಾರಿ ಉದ್ಯೋಗಸ್ಥರಿಗೂ ಇತರ ಖಾಸಗಿ ಉದ್ಯೋಗಸ್ಥರಿಗೂ ಅಜಗಜಾಂತರ ವ್ಯತ್ಯಾಸವಿರುವುದು ಉತ್ತಮವಲ್ಲ. ಈ ತರದಲ್ಲಿ ರಚನೆಯಾದ ಶ್ರೀಮಂತ ವರ್ಗವು ರಾಜಕೀಯ ಪ್ರಗತಿಗೆ ಒಂದು ಮಹಾ ತಡೆಯಾಗುವುದು. ತರುಣರ ಶಕ್ತಿಉತ್ಸಾಹಗಳನ್ನು ಸಾಹಸದ ಕಾರ್ಯಸಾಧನೆಗಳಿಂದ ಸುರಕ್ಷಿತವಾದ ಸರಕಾರಿ ಉದ್ಯೋಗದ ಕಡೆ ಹರಿಯುವುದು. ಇತರ ದೇಶಗಳ ಸರಕಾರಿ ನೋಕರರ ಪಗಾರಗಳನ್ನು ನೋಡಿದರೆ, ಅಲ್ಲಿ ಮೇಲಿನ ಈ ಸೂತ್ರವು ಆಚರಿಸಲ್ಪಟ್ಟಿರುವುದು ಕಾಣುತ್ತದೆ. ಆದರೆ ಹಿಂದೂದೇಶದಲ್ಲಿ ಮಾತ್ರ ಇದರ ನಿರ್ಲಕ್ಷ್ಯವಾಗಿರುತ್ತದೆ. ಹಿಂದೂದೇಶದ ಒಬ್ಬನ ಸರಾಸರಿ ಆದಾಯವನ್ನೂ, ಇತರ ದೇಶಗಳ ಸರಕಾರಿ ನೋಕರರ ಪಗಾರಗಳನ್ನು ಗಮನಿಸಿದರೆ, ಸರಕಾರಿ ನೋಕರನೊಬ್ಬನು ತಿಂಗಳಿಗೆ ಹೆಚ್ಚೆಂದರೆ ರೂ. ೫೦೦ನ್ನು ಸ್ವೀಕರಿಸಬೇಕೆಂಬುದಾಗಿರುವ ಕಾಂಗ್ರೆಸ್ಸಿನ ನಿರ್ಣಯವು ಸರಿಯಾದುದೆಂದು ಹೇಳಬಹುದು.

ಇಂಡಿಯಾ ಮತ್ತು ಜಪಾನು

ಇಂಡಿಯಾ ಮತ್ತು ಜಪಾನು ದೇಶಗಳ ಸರಕಾರಿ ನೋಕರರ ಪಗಾರಗಳನ್ನು ಸರಿಹೋಲಿಸಿ ನೋಡೋಣ. ರಾಜಕೀಯ, ಸಾಂಪತ್ತಿಕ ಮತ್ತು ಇತರ ಎಲ್ಲಾ ವಿಚಾರಗಳಲ್ಲಿ ಜಪಾನು ಹಿಂದೂದೇಶಕ್ಕಿಂತ ಶ್ರೇಷ್ಠ ಸ್ಥಾನದಲ್ಲಿರುವುದು. ಜಪಾನಿನ ಈಗಿನ ಸ್ಥಿತಿಯನ್ನು ಪರಿಶೀಲಿಸಿದರೆ ಅದು ಹಿಂದೂದೇಶಕ್ಕಿಂತ ಹೆಚ್ಚು ಸಮೃದ್ಧಿಯಾದ ದೇಶವೆಂದೂ, ಹಿಂದೂದೇಶಕ್ಕಿಂತ ಹೆಚ್ಚಿನ ಪಗಾರ ಅಲ್ಲಿನ ಸರಕಾರಿ ನೋಕರರಿಗೆ ಕೊಡಬಹುದೆಂದೂ, ಕಂಡುಬರುವುದು.

[illegible]ರಲ್ಲಿ ಜಪಾನಿನ ಜನಸಂಖ್ಯೆಯು [illegible], ಕೃಷಿ, ಕೈಗಾರಿಕೆ ಇತ್ಯಾದಿಗಳಿಂದ [illegible] ಉತ್ಪತ್ತಿಯು [illegible],೦೦೦ ಯೆನ್ನುಗಳು, ಅಂದರೆ ಇಂದಿನ ಪ್ರತಿಯೊಬ್ಬನ [illegible] ಉತ್ಪತ್ತಿಯು [illegible] ಯೆನ್ನುಗಳು, [illegible] ರೂಪಾಯಿಗಳು [illegible]

ಅದೆ ವರ್ಷದಲ್ಲಿ ಹಿಂದೂದೇಶದಲ್ಲಿ ಪ್ರತಿಯೊಬ್ಬನ ಸರಾಸರಿ ಉತ್ಪತ್ತಿಯು ರೂ. [illegible] ಈ ಲೆಕ್ಕವು, ಧಾರಣೆಗಳು ಏಳುವ ಮೊದಲೇ ತೆಗೆದುದಾಗಿರುತ್ತದೆ. ಅಂದರೆ ಈಗಿನ ಸರಾಸರಿಯು ಇನ್ನಷ್ಟು ಕಡಿಮೆಯಾಗಿರಬೇಕು. ಜಪಾನಿನ ಪ್ರತಿ ಒಬ್ಬನ ಸರಾಸರಿ ಉತ್ಪತ್ತಿಯು ಹಿಂದೂದೇಶದವನಿಗಿಂತ ಶೇ. [illegible] ಸಲ ಹೆಚ್ಚಾಗಿರುತ್ತದೆ.

ಅದೆ ರೀತಿಯಲ್ಲಿ ಹಿಂದೂದೇಶದ ಕೂಲಿಯ ಮಜೂರರಿಗೂ, ಜಪಾನಿನ ಕೂಲಿ ಮಜೂರರಿಗೂ ಅಜಗಜಾಂತರ ವ್ಯತ್ಯಾಸವಿರುವುದು.

ಕಾರಖಾನೆ, ಛಾಪಖಾನೆ ಇತ್ಯಾದಿ ಎಲ್ಲಾ ಕಡೆಗಳಲ್ಲಿ ಜಪಾನೀಯ ಕೆಲಸಗಾರರಿಗೆ ಹಿಂದೂದೇಶದ ಕೆಲಸಗಾರರಿಗಿಂತ ಹೆಚ್ಚಿನ ಪಗಾರ ದೊರಕುತ್ತಿದೆ.

[illegible]ರಲ್ಲಿ ಜಪಾನಿನ ವಾರ್ಷಿಕ ವರದಿಯ ಪ್ರಕಾರ ಸರಕಾರದ ಅಂದಾಜು ಬಜೆಟಿನ ಪ್ರಕಾರ ಜಮೆ ರೂ. [illegible]. ಅದೆ ವರ್ಷದಲ್ಲಿ ಹಿಂದೂದೇಶದ ಸರಕಾರದ ಅಂದಾಜು ಬಜೆಟಿನ ಪ್ರಕಾರ ಜಮೆ ರೂ. [illegible],೦೦೦. ಈ ಎರಡು ಅಂಕೆಗಳನ್ನು ಸರಿಹೋಲಿಸಿ ನೋಡಿದರೆ, ಜಪಾನು ಸರಕಾರದ ಬಜೆಟಿನ ಜಮೆಯು ಇಂಡಿಯಾ ಸರಕಾರಕ್ಕಿಂತ ಶೇ. [illegible] ಸಲ ಅಧಿಕವಾಗಿರುವುದೆಂದು ತಿಳಿದುಬರುವುದು. ಅಂದರೆ ಜಪಾನಿನ ಸರಕಾರಿ ನೋಕರರು ಹಿಂದೂದೇಶದ ಸರಕಾರಿ ನೋಕರರಿಗಿಂತ ಹೆಚ್ಚಿನ ಪಗಾರಗಳನ್ನು ಪಡೆಯುವುದು ಸಂಭವನೀಯವು. ಆದರೆ,

ಜಪಾನಿನಲ್ಲಿ	ತಿಂಗಳೊಂದಕ್ಕೆ
ಪ್ರಧಾನ ಮಂತ್ರಿಗಳಿಗೆ	[illegible]
ಇತರ ಮಂತ್ರಿಗಳಿಗೆ	[illegible]
ಸರಕಾರಿ ಕಾರ್ಯದರ್ಶಿಗಳಿಗೆ	[illegible]
ಕೊರಿಯಾ ದೇಶದ ಗ[ವ]ರ್ನರ್ ಜನರಲ್	[illegible]
ಪ್ರಿವಿ ಕೌನ್ಸಿಲಿನ ಪ್ರೆಸಿಡೆಂಟ್	[illegible]

ಪಗಾರಗಳು ದೊರಕುತ್ತಿವೆ.

ಹಿಂದೂದೇಶದಲ್ಲಿ,

ಮೊದಲು ಪ್ರಾಂತ್ಯಗಳ ವಿಚಾರ ನೋಡೋಣ. ಪಂಜಾಬಿನ ಜನಸಂಖ್ಯೆಯು [illegible] ಜಪಾನಿನ ಅಧೀನದಲ್ಲಿರುವ ಕೊರಿಯಾ ಪ್ರಾಂತ್ಯದ ಜನಸಂಖ್ಯೆ [illegible] ಆದರೂ, ಪಂಜಾಬಿನ ಗವರ್ನರರಿಗೆ ದೊರಕುವ ಪಗಾರ [illegible]. ಪಂಜಾಬಿನ ಜನಸಂಖ್ಯೆಯು ಕೊರಿಯಾ ಪ್ರಾಂತ್ಯಕ್ಕಿಂತ ಶೇ. [illegible] ಸಲ ಅಧಿಕವಾಗಿದ್ದರೂ, ಪಂಜಾಬಿನ ಗವರ್ನರರ ಪಗಾರ ಕೊರಿಯಾ ಪ್ರಾಂತ್ಯದ ಗವರ್ನರರಿಗಿಂತ ಶೇ. [illegible] ಸಲ ಅಧಿಕವಾಗಿರುತ್ತದೆ.

ಜಪಾನಿನಷ್ಟು ಜನಸಂಖ್ಯೆಯುಳ್ಳ ಪ್ರಾಂತ್ಯವು ಹಿಂದೂದೇಶದಲ್ಲಿರುವುದಿಲ್ಲ. ಆದರೆ ಬಂಗಾಳದ ಜನಸಂಖ್ಯೆಯು ಜಪಾನಿನ ಜನಸಂಖ್ಯೆಯ ಅರ್ಧವಾಗಿರುತ್ತದೆ. ಜನಸಂಖ್ಯೆಯ ಪ್ರಕಾರ ಪ್ರಧಾನ ಮಂತ್ರಿಯರ ಪಗಾರ ನಿರ್ಣಯಿಸುವುದಾದರೆ ಜಪಾನಿನ ಪ್ರಧಾನ ಮಂತ್ರಿಗಳಿಗೆ, ಬಂಗಾಳದ ಪ್ರಧಾನ ಮಂತ್ರಿಗಳ ಪಗಾರದ ಎರಡು ಪಾಲಷ್ಟು ಆಗಬೇಕು. ಆದರೆ ಬಂಗಾಳದ ನಾನ್ ಕಾಂಗ್ರೆಸ್ ಪ್ರಧಾನಮಂತ್ರಿಗಳಿಗೆ ರೂ. [illegible]ಗಳು ಸಲ್ಲುತ್ತಿವೆ. ಜಪಾನಿನ ಪ್ರಧಾನ ಮಂತ್ರಿಯರ ನಾಲ್ಕು ಪಾಲಷ್ಟು. ಸರಕಾರಿ ಕಾರ್ಯದರ್ಶಿಗಳ ವಿಚಾರದಲ್ಲಿ, ಹಿಂದೂದೇಶದ ಪ್ರಾಂತೀಯ ಸರಕಾರಗಳ I. C. S. ಕಾರ್ಯದರ್ಶಿಗಳಿಗೆ, ಗಡಿನಾಡಿನಿಂದ ಬಂಗಾಳದ ವರೆಗೆ [illegible]ರಿಂದ [illegible] ಪಗಾರ ದೊರಕುತ್ತದೆ. ಅಂದರೆ ಜಪಾನೀಯ ಸರಕಾರಿ ಕಾರ್ಯದರ್ಶಿಗಳಿಗಿಂತ [illegible] ಪಾಲಷ್ಟು. ಈಗ ಸಿವಿಲ್ ಸಿಬಂದಿಯ ಕುರಿತು.

ಜಪಾನಿನ ಸಿವಿಲ್ ಸಿಬಂದಿಯಲ್ಲಿ ನಾಲ್ಕು ವರ್ಗಗಳಿವೆ. ೧. ಶಿನಿನ್ ವರ್ಗ (ನೇಮಕ ಚಕ್ರವರ್ತಿಯಿಂದ) ೨. ಚೋಕನಿನ್ ವರ್ಗ, ೩. ಸೋನಿನ್ ವರ್ಗ, ೪. ಹಾನಿನ್ ವರ್ಗ. ಈ ವಿಭಜನೆಯು ಯೋಗ್ಯತಾನುಸಾರ, ವಿದ್ಯೆ ಇತ್ಯಾದಿಗಳ ಪ್ರಕಾರ ಮಾಡಲಾಗಿದೆ. [illegible]ರಲ್ಲಿ ಶಿನಿನ್ ಮತ್ತು ಚೋಕನಿನ್ ವರ್ಗಗಳ ತಿಂಗಳ ಒಂದರ ಸರಾಸರಿ ಪಗಾರ ರೂ. [illegible], ಸೋನಿನ್ ವರ್ಗದವರದ್ದು ರೂ. [illegible], ಹಾನಿನ್ ವರ್ಗದವರು ರೂ. [illegible]. ಹಿಂದೂದೇಶದ ಜಿಲ್ಲಾ ಕಲೆಕ್ಟರರೊಬ್ಬರು ತಿಂಗಳ ರೂ. [illegible] ಪಡೆಯುತ್ತಿರುವಾಗ, ಜಪಾನಿನಲ್ಲಿ ಅದೇ ವರ್ಗದ ಅಧಿಕಾರಿಗಳಿಗೆ ಸಲ್ಲುತ್ತಿರುವುದು ರೂ. [illegible], ಅಂದರೆ ಶೇ. [illegible] ಸಲ ಅಧಿಕ.

ಅಲ್ಲದೆ ಹಿಂದೂದೇಶದ ಒಂದು ಪ್ರಾಂತ್ಯದಲ್ಲಿ ಜಪಾನಿಗಿಂತ ಹೆಚ್ಚಿನ ಮುಖ್ಯ ಉದ್ಯೋಗಸ್ಥರಿದ್ದಾರೆ, ಇದರಿಂದ ಜಪಾನಿನ ಸರಕಾರಿ ನೌಕರರಿಗೆ ಹಿಂದೂದೇಶದವರಿಗಿಂತ ಅತಿ ಕಡಿಮೆ ಪಗಾರ ದೊರಕುತ್ತಿದೆ ಎಂದು ತಿಳಿದುಬರುತ್ತದೆ, ಮತ್ತು ಕಾಂಗ್ರೆಸ್ಸಿನ ಈಗ ನಿಯಮಿಸಿರುವ ರೂ. ೫೦೦ ಮಿತಿಯು ಸರಿಯಾದುದೆಂದು ತಿಳಿದುಬರುತ್ತದೆ. ಇದರಿಂದ ಜಪಾನಿನ ಸರಕಾರಿ ಕೆಲಸಕ್ಕೆ ಏನಾದರೂ ಕೊರತೆ ಬಂದಿರುತ್ತದೆಯೆ? ಅಲ್ಲಿ [illegible] ದೆ? ಇಲ್ಲ, ಜಪಾನೀಯ ಸರಕಾರವು ಶ್ರೇಯಸ್ಕರ ರೀತಿಯಲ್ಲಿ ರಾಜ್ಯಾಡಳಿತವನ್ನು ನಡೆಯಿಸುತ್ತದೆ. ಹಾಗಾದರೆ ಹಿಂದೂದೇಶದಲ್ಲಿ ಸರಕಾರಿ ನೌಕರರ ಪಗಾರಗಳಿಗೆ ಕಾಂಗ್ರೆಸ್ಸಿನ ನಿರ್ಣಯಕ್ಕನುಸಾರವಾಗಿ ಕಡಿತ ಮಾಡಿದರೆ, ಅದರಿಂದ ಯಾವ ದುಷ್ಪರಿಣಾಮಗಳುಂಟಾಗುವವು.

ಹಿಂದೂದೇಶ ಮತ್ತು ಪೋಲೆಂಡು.

ಪೋಲೆಂಡಿನ ಜನಸಂಖ್ಯೆಯು, [illegible] ಇದು ಮೊದಲಿನ ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಿಂತ ಸ್ವಲ್ಪ ಕಡಿಮೆಯಾಗಿರುತ್ತದೆ. ಅಲ್ಲಿನ ಜನಸಂಖ್ಯೆಯು [illegible]. ಪೋಲೆಂಡು, ಬಿಹಾರ ಮತ್ತು ಒರಿಸ್ಸಾಗಿಂತ ಹೆಚ್ಚು ಸಮೃದ್ಧಿಯಾಗಿರುವುದು. ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಳು, ಹಿಂದೂದೇಶದ ಬಂಗಾಳ ಮತ್ತು ಮುಂಬಯಿ ತರದ ಪ್ರಾಂತ್ಯಗಳಿಗಿಂತ ಕಡಿಮೆ ಸಮೃದ್ಧಿಯವು. [illegible]ರಲ್ಲಿ ಪೋಲೆಂಡಿನ ಸರಕಾರಿ ಖಜಾನೆಗೆ ಜಮೆಯು, ರೂ. [illegible] ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಳ ಜಮೆಯು, ರೂ. [illegible],೦೦೦. ಅಂದರೆ ಪೋಲೆಂಡಿನ ಜಮೆಯು ಬಿಹಾರ ಮತ್ತು ಒರಿಸ್ಸಾಗಿಂತ ಶೇ. [illegible] ಅಧಿಕವಾಗಿರುತ್ತದೆ, [illegible] ಪಾಲು ಹೆಚ್ಚು.

ಇದರಿಂದ ಪೋಲೆಂಡು ತನ್ನ ಸರಕಾರಿ ನೌಕರರಿಗೆ ನಮ್ಮ ಬಡ ಬಿಹಾರ ಪ್ರಾಂತ್ಯಗಿಂತ ಹೆಚ್ಚಿನ ಪಗಾರಗಳನ್ನು ಕೊಡಬಹುದು. ಆದರೆ ಪೋಲೆಂಡಿನ ಪಗಾರದ ಪಟ್ಟಿಯು, ಬಿಹಾರ ಮತ್ತು ಒರಿಸ್ಸಾಗಿಂತ ಕಡಿಮೆಯಾಗಿರುತ್ತದೆ. ಪೋಲೆಂಡಿನ ಮಹಾ ಉದ್ಯೋಗಸ್ಥರಿಗೆ ತಿಂಗಳೊಂದಕ್ಕೆ ರೂ. [illegible] ದೊರಕುತ್ತಿರುವಾಗ ಬಿಹಾರಿನ ಗವರ್ನರರಿಗೆ ತಿಂಗಳಿಗೆ ರೂ. [illegible] ಸಲ್ಲುತ್ತಿದೆ. ಅಂದರೆ ಬಿಹಾರ ಸರಕಾರದ ಮುಖ್ಯಾಧಿಕಾರಿಯು ಪೋಲೆಂಡ ಸರಕಾರದ ಮುಖ್ಯಾಧಿಕಾರಿಗಿಂತ ಶೇ. [illegible] ಸಲ ಅಧಿಕ ಪಗಾರ ಸಲ್ಲುತ್ತಿದೆ. ಬಿಹಾರಿನ ಓರ್ವ ಜಿಲ್ಲಾ ಕಲೆಕ್ಟರನ ಸಂಬಳವು ಪೋಲೆಂಡಿನ ಮುಖ್ಯಾಧಿಕಾರಿಗಳಿಗಿಂತ ಅಧಿಕವಾಗಿರುತ್ತದೆ. ಕಾರಣ ಬಿಹಾರಿನಲ್ಲಿ ಜಿಲ್ಲಾ ಕಲೆಕ್ಟರರಿಗೆ [illegible] ತನಕ ಪಗಾರ ದೊರಕುತ್ತದೆ.

ಪೋಲೆಂಡಿನಲ್ಲಿ ತಿಂಗಳು ಒಂದರ ರೂ. ೫೦೦ಕ್ಕಿಂತ ಮೇಲಿನ ಪಗಾರ ದೊರಕುತ್ತಿರುವ [illegible] ಉದ್ಯೋಗಸ್ಥರಿದ್ದಾರೆ, ಬಿಹಾರಿನಲ್ಲಿ ಇಂಪೀರಿಯಲ್ ಸರ್ವಿಸಿನ [illegible] ಮಂದಿ [illegible] ತಿಂಗಳೊಂದಕ್ಕೆ ರೂ. [illegible]ಕ್ಕಿಂತ ಹೆಚ್ಚು ಪಗಾರ ಪಡೆಯುವ [illegible] ಉದ್ಯೋಗಸ್ಥರಿರುವರು.

ಹಿಂದೂದೇಶ ಮತ್ತು ಸಂಯುಕ್ತ ಅಮೇರಿಕಾ

ಹಿಂದೂದೇಶದ ಪಗಾರದ ಪಟ್ಟಿಯು ಜಪಾನು ಮತ್ತು ಪೋಲೆಂಡಿನ ಪಟ್ಟಿಗಳಿಗಿಂತ ಅತ್ಯಧಿಕವಾದುದಲ್ಲದೆ, ಅದು ಸಂಯುಕ್ತ ಅಮೇರಿಕಾಕ್ಕಿಂತ ಅಧಿಕವಾದುದು. ಹಿಂದೂದೇಶವನ್ನು ಸಂಯುಕ್ತ ಅಮೇರಿಕಾದೊಡನೆ ಹೋಲಿಸುತ್ತಿರುವಾಗ, ನಾವು ಒಂದು ವಿಚಾರವನ್ನು ಗಮನದಲ್ಲಿಡತಕ್ಕದು. ಸಂಯುಕ್ತ ಅಮೇರಿಕಾವು ಜಗತ್ತಿನ ಅತ್ಯಂತ ಸಮೃದ್ಧಿ ಮತ್ತು ಶ್ರೀಮಂತ ದೇಶವು. ಸಂಯುಕ್ತ ಅಮೇರಿಕಾದ ಪ್ರತಿಯೊಬ್ಬನ ಉತ್ಪತ್ತಿಯು ರೂ. [illegible]. ಹಿಂದೂದೇಶದ ಸರಾಸರಿಗಿಂತ [illegible] ಪಾಲುಗಳಷ್ಟು ಹೆಚ್ಚು. ಅಲ್ಲಿನ ಕೂಲಿಗಾರರಿಗೆ ಹಿಂದೂದೇಶದ ಕೂಲಿಗಾರರಿಗಿಂತ [illegible] ಪಾಲಷ್ಟು ಹೆಚ್ಚು ಉತ್ಪತ್ತಿಯಿದೆ. ಇದ್ದರಿಂದ ಪ್ರಜೆಗಳ ಆದಾಯವು ಕಡಿಮೆಯಾಗಿರುವ ಹಿಂದೂದೇಶದಲ್ಲಿ ಸರಕಾರಿ ನೋಕರರ ಸಂಬಳವು ಅಲ್ಲಿಗಿಂತ ಅಧಿಕವಾಗಿರಬಹುದೆ? ಅಲ್ಲದೆ ಪ್ರಜೆಗಳ ಹಿತದ ದೃಷ್ಟಿಯಲ್ಲಿ ಸರಕಾರಿ ನೋಕರರ ಪಗಾರದ ಈಗಿನ ಪಟ್ಟಿಯು ನ್ಯಾಯವಾದುದೆ?

ಸಂಯುಕ್ತ ಅಮೇರಿಕಾದ ಜನಸಂಖ್ಯೆಯು ಹಿಂದೂದೇಶಕ್ಕಿಂತಲೂ ಸಣ್ಣದು, ಆದರೂ ಹಿಂದೂದೇಶದ ಸರಕಾರದ ವಾರ್ಷಿಕ ಆಯವು ಸಂಯುಕ್ತ ಅಮೇರಿಕಾಕ್ಕಿಂತ ಕಡಿಮೆ. ಸಂಯುಕ್ತ ಅಮೇರಿಕಾದ ಆಯವು ಇಂಡಿಯಾ ಸರಕಾರದ ಆಯಕ್ಕಿಂತ [illegible] ಪಾಲು ಹೆಚ್ಚಾಗಿರುವುದು. ಆದ್ದರಿಂದ ಸಂಯುಕ್ತ ಅಮೇರಿಕಾದ ಸರಕಾರಿ ನೋಕರರಿಗೆ ಹಿಂದೂದೇಶದವರಿಗಿಂತ ಅಧಿಕ ಪಗಾರಗಳು ದೊರಕುತ್ತವೆಂದು ಭಾವಿಸಲಾಗಬಹುದು.

ಆದರೆ, ಸಂಯುಕ್ತ ಅಮೇರಿಕಾದ ಅಧ್ಯಕ್ಷರು ಅಂತರಾಷ್ಟ್ರೀಯ ಗೌರವದಲ್ಲಿ ಹಿಂದೂದೇಶದ ಗವರ್ನರ್ ಜನರಲ್ಲರಿಗಿಂತ ಉಚ್ಚ ವರ್ಗದವರಾಗಿದ್ದರೂ, ಹಿಂದೂದೇಶದ ವೈಸ್ರಾಯರು ತಿಂಗಳಿಗೆ ರೂ. [illegible] ಪ್ರಕಾರ ಸಂಬಳ ಪಡೆಯುತ್ತಿರುವಾಗ, ಅಲ್ಲಿನ ಪ್ರೆಸಿಡೆಂಟರಿಗೆ ರೂ. [illegible] ಮಾತ್ರ ದೊರಕುತ್ತದೆ. ಮೇಲಿನದು ವೈಸ್ರಾಯರ ಸಂಬಳ ಮಾತ್ರ. ಅವರ ಭತ್ತೆ ಇತ್ಯಾದಿಗಳನ್ನು ಕೂಡಿಸಿದರೆ, ಅದು ಅವರ ಸಂಬಳದ ಮೊತ್ತವನ್ನು ಮೀರಿಸುವುದು. ಹಿಂದೂದೇಶದ ಆಯವು ಸಂಯುಕ್ತ ಅಮೇರಿಕಾಕ್ಕಿಂತ [illegible] ಪಾಲಷ್ಟು ಕಡಿಮೆಯಾಗಿರುವುದಾದರೂ, ಇಂಡಿಯಾ ವೈಸ್ರಾಯರಿಗೆ ಅಮೇರಿಕಾದ ಅಧ್ಯಕ್ಷರಿಗಿಂತ ಅಧಿಕವಾದ ಪಗಾರ ಸಲ್ಲುತ್ತಿದೆ.

ಶ್ರೀಮಂತ ಅಮೇರಿಕಾದ ಅಧ್ಯಕ್ಷರ ಸಹಾಯಕರಾದ ಮಂತ್ರಿಮಂಡಳದ ಸದಸ್ಯರ ಪಗಾರ ತಿಂಗಳಿಗೆ ರೂ. [illegible] ಹಿಂದೂದೇಶದ ವೈಸ್ರಾಯರ ಕಾರ್ಯಕಾರಿ ಮಂಡಳದ ಸದಸ್ಯರ ಪಗಾರ ತಿಂಗಳಿಗೆ [illegible]. ಅಲ್ಲಿನ ಒಂದು ಪ್ರಾಂತ್ಯದ ಗವರ್ನರರ ಪಗಾರ ತಿಂಗಳಿಗೆ ರೂ. [illegible]. ಹಿಂದೂದೇಶದ ಪ್ರಾಂತ್ಯಗಳು, ಅಲ್ಲಿನವುಗಳಿಗಿಂತ ಬಡವಾಗಿದ್ದರೂ, ಪ್ರಾಂತ್ಯದ ಗವರ್ನರರಿಗೆ ಅಲ್ಲಿಗಿಂತ ಅಧಿಕ ತರದ ಪಗಾರಗಳು ಸಲ್ಲುತ್ತಿವೆ. ಡಿಲ್ಲಿಯ ಕಮಿಶನರರಿಗೆ ತಿಂಗಳಿಗೆ ರೂ. [illegible] ದೊರಕುತ್ತಿರುವಾಗ, ಡಿಲ್ಲಿಯ ತರದ ಒಂದು ಜಿಲ್ಲೆಯ ಗವರ್ನರರಿಗೆ ಅಲ್ಲಿ ರೂ. [illegible] ಮಾತ್ರ ದೊರಕುತ್ತದೆ. ದರಿದ್ರ ಹಿಂದೂದೇಶದಲ್ಲಿನ ಸರಕಾರಿ ನೋಕರರ ಪಗಾರಗಳು ಜಗತ್ತಿನ ಅತ್ಯಂತ ಶ್ರೀಮಂತ ದೇಶವೆನಿಸಿದ ಸಂಯುಕ್ತ ಅಮೇರಿಕಾದ ಸರಕಾರಿ ನೋಕರರ ಪಗಾರಗಿಂತ ಅಧಿಕವಾಗಿರುತ್ತದೆ. ಶ್ರೀಮಂತ ಅಮೇರಿಕಾವು ತನ್ನ ಆಯವನ್ನು ಸರಕಾರಿ ನೋಕರರ ಮೇಲೆ ಉಪಯೋಗಿಸುವುದಿಲ್ಲ. ಅಲ್ಲಿನ ಸರಕಾರಿ ನೋಕರರ ಸಂಬಳಗಳಿಗೂ, ಸರಕಾರದ ಆಯಕ್ಕೂ ಪ್ರಜೆಗಳ ಆದಾಯಕ್ಕೂ ಸರಿಯಾದ ಜೋಡಣೆಯು ಇರುವುದು ಸಂಯುಕ್ತ ಅಮೇರಿಕಾದ ಕ್ರಮವನ್ನೆ ಕಾಂಗ್ರೆಸ್ಸು ಹಿಂದೂದೇಶದಲ್ಲಿ ಆಚರಿಸಬೇಕೆಂದಿದೆ.

ಸ್ವಾಸ್ಥ್ಯದ ಅತ್ಯುತ್ತಮ ಪಾನೀಯ

ಸುಪ್ರಸಿದ್ಧ ಆಂಗ್ಲ ಸಾಹಿತಿಗಳೂ ಮಹಾಕವಿಗಳೂ ಆದ ಶೆಲ್ಲೀ ರವರು ಟೀಯು ಆನಂದ ಮತ್ತು ಆರೋಗ್ಯದ ಬೀಡೆಂದು ಹೇಳಿರುವರು. ಅದಕ್ಕೆ ಹೆಚ್ಚಿನ ಹೊಗಳಿಕೆಯೇನಿದೆ. ಇಂಗ್ಲೆಂಡಿನ ಟೀ ಕುಡಿಯುವವರಲ್ಲಿ ಅಗ್ರಗಣ್ಯರಲ್ಲೊಬ್ಬರ ಈ ಹೇಳಿಕೆಗಿಂತ ಬೇರೆ ಹೊಗಳಿಕೆ ಬೇಕೆ.

ಡಾ॥ ಜಾನ್‌ಸನ್ ರವರು ಪೂರ್ಣ ಟೀ ಪ್ರೇಮಿಗಳಾಗಿದ್ದರು. ಟೀ ಪಾನೀಯದಿಂದ ಅವರು ಸಂಧ್ಯಾಕಾಲದಲ್ಲಿ ಮನೋರಂಜನೆಯನ್ನು ಪಡೆಯುತಿದ್ದರು. ಮಧ್ಯರಾತ್ರಿಯಲ್ಲಿ ಮಾನಸಿಕ ವಿಶ್ರಾಂತಿಯನ್ನು ಹೊಂದುತಿದ್ದರು. ಬೆಳಗಾಗಿ ಟೀ ಕುಡಿಯಲು ಉತ್ಸುಕತೆಯಿಂದ ಎದುರು ನೋಡುತಿದ್ದರು. ಮಾನಸಿಕ ಉಲ್ಲಾಸಕ್ಕೂ, ದೇಹಶ್ರಮ ಪರಿಹಾರಕ್ಕೂ ಟೀಗಿಂತ ಉತ್ತಮವಾದ ಪಾನೀಯವು ಇನ್ನೊಂದಿಲ್ಲ. ಈ ಕಾರಣಗಳಿಂದ ಟೀಗೆ ಕೊಟ್ಟಿರುವ ಪ್ರಾಶಸ್ತ್ಯವು ಅತಿಯಲ್ಲ. ಆ ಪ್ರಾಶಸ್ತ್ಯಕ್ಕೆ ಅದು ಅರ್ಹವಾಗಿಯೇ ಇದೆ. ಯಾವ ವಾತಾವರಣದಲ್ಲೇ ಆಗಲಿ ಯಾವ ಕಾಲದಲ್ಲೇ ಆಗಲಿ ಟೀ ಪಾನೀಯವು ಅತ್ಯುತ್ತಮವಾದುದು. ಸಹಿಸಲಸಾಧ್ಯವಾದ ಬಿಸಿಲಿನ ಬೇಗೆಯುಳ್ಳ ಆಫ್ರಿಕದ ಅರಣ್ಯದಲ್ಲಿಯೂ ಅತಿ ಶೀತವುಳ್ಳದ್ದಾದ ಉತ್ತರ ಧ್ರುವ ಪ್ರದೇಶದಲ್ಲಿಯೂ ಟೀಯು ಸರ್ವಶ್ರೇಷ್ಠವಾದ ಪಾನೀಯವೆಂಬುದು ಅನುಭವಸಿದ್ಧವಾದ ಮಾತು. ಈ ಪ್ರದೇಶಗಳಲ್ಲಿ ದೇಹಬಲವೂ ಮಾನಸಿಕ ಬಲವೂ ಕುಂದದೆ ಇರಲು ಟೀಯೇ ಸರ್ವೋತ್ತಮ ಸಾಧನ.

ಟೀಯನ್ನು ಶಾಸ್ತ್ರೋಕ್ತವಾಗಿ ತಯಾರಿಸಿ ಕುಡಿದರೆ ಅತ್ಯಂತ ರುಚಿಕರವಾಗಿರುವುದು. ಟೀಯಲ್ಲಿರುವ ಅಸಾಧಾರಣ ಗುಣಗಳಿಂದ ಅದರ ಮೇಲೆ ಎಲ್ಲರಿಗೂ ಪ್ರೀತಿ ಇದೆ. ನೀರೊಂದನ್ನು ಬಿಟ್ಟು ಇತರ ಪಾನೀಯಗಳ ವಿಮರ್ಶೆ ಮಾಡಿದರೆ ಸೃಷ್ಟಿಯಲ್ಲಿ ಟೀಗೇ ಪರಮ ಶ್ರೇಷ್ಠ ಮನ್ನಣೆಯು ಇದೆ.

ಮಾನವ ಕೋಟಿಯ ಬಹುಭಾಗದವರು ಇತರ ಪಾನೀಯಗಳಿಗಿಂತ ಟೀಗೇನೇ ಹೆಚ್ಚು ಗಮನ ಕೊಡುವರು. ಬ್ರಿಟಿಷ ಸಾಮ್ರಾಜ್ಯದ ಆದ್ಯಂತದಲ್ಲೂ, ಚೈನಾ, ಜಪಾನ್ ಮತ್ತು ರಷ್ಯಾದಲ್ಲೂ ಟೀಯು ರಾಷ್ಟ್ರೀಯ ಪಾನವೆಂದು ಎಣಿಸಲ್ಪಟ್ಟಿದೆ.

ಇತ್ತೀಚಿನ ಅಧಿಕಾರಯುತ ಅಂಕಗಳನ್ನು ನೋಡಿದರೆ ಚೈನಾ ಒಂದನ್ನು ಬಿಟ್ಟು ಪ್ರಪಂಚದ ಇತರ ಜನಾಂಗಗಳವರು ಕಳೆದ ಐದು ವರ್ಷಗಳಲ್ಲಿ ೯೪೦ ಮಿಲಿಯ ಪೌಂಡುಗಳಷ್ಟು ಟೀಯನ್ನು ಉಪಯೋಗಿಸಿರುವರೆಂದು ತಿಳಿದುಬರುವುದು.

ಭರತಖಂಡದಲ್ಲಿ ಅತ್ಯುತ್ತಮವಾದ ಟೀ ಬೆಳೆಯುತ್ತಿದೆ. ಈಗೀಗ ಟೀ ಕುಡಿಯುವ ಅಭ್ಯಾಸವು ಈ ದೇಶದಲ್ಲೂ ಪ್ರಬಲವಾಗುತ್ತಿದೆ. ಭೂಭಾಗದ ಜನಾಂಗಗಳಲ್ಲಿ ಮತ್ತಾವ ಪಾನೀಯವೂ ಇಷ್ಟು ಪ್ರಜಾನುರಾಗವನ್ನು ಸಂಪಾದಿಸಿಲ್ಲ. ಶೀಘ್ರದಲ್ಲೇ ವೃದ್ಧಿಯು. ಈ ಸರ್ವೋತ್ತಮ ಪಾನೀಯವು ಈ ದೇಶದಲ್ಲಿ ಖ್ಯಾತಿ ಹೊಂದಿ ಇಲ್ಲಿನ ಜನರ ಅನುರಾಗವನ್ನು ಸಂಪಾದಿಸುವುದೆಂಬುದು ಸ್ವತಃ ಸಿದ್ಧವಾದ ವಿಷಯ.

ಇಂಡಿಯಾದ ಟೀ ಯಿಂದ



ಶಾಶ್ವತ ಶಕ್ತಿಯನ್ನು ಪಡೆಯಿರಿ

ಉರಿಯುವ ಬೇಸಿಗೆಯಲ್ಲಿ ಭಾರತೀಯ ಟೀಯು ದಣುವಾರಿಸಿ ತಂಪನ್ನುಂಟುಮಾಡುವುದು. ಬೆಳಿಗ್ಗೆ ಎದ್ದ ಒಡನೆ ಕುಡಿದರೆ ಟೀಯು ನಿದ್ರೆಯ ಮೊಬ್ಬನ್ನು ಓಡಿಸುವುದು. ದಿನವೆಲ್ಲಾ ಕಷ್ಟಪಟ್ಟು ದುಡಿದ ನಂತರ ಸಂಜೆಯಲ್ಲಿ ಒಂದು ಬಟ್ಟಲು ಟೀ ಕುಡಿದರೆ ಸೊಕ್ಕಿ ಸೊರಗಿರುವ ಇಂದ್ರಿಯಗಳಲ್ಲಿ ಲವಲವಿಕೆಯನ್ನುಂಟುಮಾಡುವುದು. ಎಡೆಬಿಡದ ಉಪಯೋಗದಿಂದ ಇದು ಶಾಶ್ವತ ಶಕ್ತಿಯನ್ನು ಕೊಟ್ಟಿದೆ ನೀವೂ ಆ ಫಲಗಳನ್ನು ಪಡೆಯಿರಿ.

ಇಂದಿನಿಂದಲೇ ದಿನಂಪ್ರತಿ ಭಾರತೀಯ ಟೀ ಕುಡಿಯಲಾರಂಭಿಸಿರಿ. ಅದರಿಂದ ಹೊಂದಬಹುದಾದ ಎಲ್ಲ ಉಪಕಾರಗಳನ್ನು ಹೊಂದಿರಿ.

ಟೀ ತಯಾರಿಸುವ ವಿಧಾನ

[illegible]

ಭಾರತೀಯ ಟೀಯು ಭಾರತವರ್ಷದ ಆನಂದ ಮತ್ತು ಹೆಮ್ಮೆಯ ಬೀಡು

I K 11

ಪ್ರಕಟಣೆ.

ನಂಬ್ರ 3783 L. A./6-10-37ನೇ ಗವರ್ನಮೆಂಟ್ ಹುಕ್ಕುಂ ಪ್ರಕಾರ ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ— ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನ ಕಂಟ್ರಾಕ್ಟುದಾರರಾಗಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸುವರೆ ಇಚ್ಛಿಸುವ (ಈಗಿನ ಕಂಟ್ರಾಕ್ಟುದಾರರು ಕೂಡ) ಉಮೇದ್ವಾರರು ಅದರ ಬಗ್ಗೆ ನಿಯಮಿಸಲ್ಪಟ್ಟ ಫಾರ್ಮಿನಲ್ಲಿ ಅರ್ಜಿಯನ್ನು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರವರಿಗೆ ಕಳುಹಿಸತಕ್ಕದ್ದು.

ಪ್ರತಿಯೊಬ್ಬ ಉಮೇದ್ವಾರ ಕಂಟ್ರಾಕ್ಟುದಾರನು ತನ್ನ ಅರ್ಜಿಯೊಂದಿಗೆ ರೂಪಾಯಿ 15/- ರಿಜಿಸ್ಟ್ರೇಶನ್ ಫೀಸನ್ನು ತೆರಬೇಕು. ಅರ್ಜಿ ಫಾರ್ಮುಗಳು ಮಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರವರ ಆಫೀಸಿನಲ್ಲಿ ಆಫೀಸು ದಿನಗಳಲ್ಲಿ ಕೇಳಿದಾಗ್ಗೆ ಸಿಗುವವು.

ಡಿ. ಬಿ. ಇಂಜಿನಿಯರ ಆಫೀಸು ಮಂಗಳೂರು, 2—12-37.

K. K. Nambiar,
ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರ್,
ದಕ್ಷಿಣ ಕನ್ನಡ ಜಿಲ್ಲೆ.

ಜಪಾನೀಯರು ಶಾಂಗಾಯ್ ಪಟ್ಟಣದ ಒಡೆಯರಾಗಿದ್ದರೂ, ಅಂತರ್ರಾಷ್ಟ್ರೀಯ ಪ್ರದೇಶವ [illegible] ವಶಪಡಿಸಿಕೊಳ್ಳಲು ಅವರಿಗೆ ಸುಲಭಸಾಧ್ಯವಾಗದು. ಅಂತರ್ರಾಷ್ಟ್ರೀಯ ಪ್ರದೇಶಗಳಲ್ಲಿ ಕಳೆದ ನಾಲ್ಕೈದು ವಾರಗಳಲ್ಲಿ ನಡೆದ ಘಟನೆಗಳನ್ನು ನೋಡಿದರೆ, ಅನ್ಯರ ಪ್ರದೇಶಗಳಲ್ಲಿ ಜಪಾನೀಯರ ಕೈ ನಡೆಯುವುದಿಲ್ಲವೆಂಬುದು ಖಚಿತವಾಗುತ್ತದೆ. ಅನ್ಯರ ಪ್ರದೇಶದಲ್ಲಿ ಧಾರಾಳ ಮಂದಿ ಚೀನೀಯರೂ ಇರುವುದರಿಂದ, ಪರಿಸ್ಥಿತಿಯು ಇನ್ನೂ ಕೆಟ್ಟಿರುವುದು.

ಅಮೇರಿಕಾಕ್ಕೆ ಜಪಾನಿನ ಶಾಂತಸಾಗರದ ಮಹತ್ವಾಕಾಂಕ್ಷೆಯ ಕುರಿತು ಸಂದೇಹ

...ಗಳುಂಟಾಗಿರುವುದರಿಂದ, ಅವರು, ತನ್ನ ಸಂಗಾಮು ಮತ್ತು ನಾವಲ್ ಸ್ಥಳಗಳನ್ನು ಭದ್ರಪಡಿಸಲು ಒಂದು ಯೋಜನೆಯನ್ನು ಕೈಕೊಂಡಿರುವರು. ಸಿಂಗಾಪುರವು ಶಾಂತಸಾಗರದಲ್ಲಿ ಬ್ರಿಟಿಷರಿಗೆ ಹೇಗೆ ಮಹತ್ವದ್ದೋ, ಹಾಗೆಯೇ ಹವಾಯಿಯು ಅಮೇರಿಕಾಕ್ಕೆ. ಸಿಂಗಾಪುರದಲ್ಲಿ ನಡೆದಯೋಪಾದಿ ಭದ್ರತಾಯೋಜನೆಯು ಅಮೇರಿಕಾವು ಹವಾಯಿಯಲ್ಲಿ ನಡೆಯಿಸುವುದೆಂದು ಅಂದರೆ ಜಪಾನು, ಶಾಂತಸಾಗರದ ತನ್ನ ಮಹತ್ವಾಕಾಂಕ್ಷೆಯು ಸಾಧಿಸಬೇಕಾದರೆ ಮುಂದಕ್ಕೆ ಎರಡಾವರ್ತಿ ಆಲೋಚಿಸಬೇಕಾಗುವುದಂತೆ.

[illegible] ನಡೆಯಬೇಕು.

[illegible] ಏಕೀಕರಣವಾಗಿ, ಅದೊಂದು ಬೇರೆ ಪ್ರಾಂತ್ಯವಾಗಿ ರಚನೆಯಾಗಬೇಕು.

[illegible] ಬದನೆ ವಿವಿಧ ಧರ್ಮಗಳ [illegible] ವಾರ ವೃಷಭೂರಿನ ವಿದ್ವಾನ್ [illegible] ಅಧ್ಯಕ್ಷ [illegible], ಎಲ್ಲಾ ಶಾಲೆಗಳಲ್ಲಿ, ಮಠಗಳಲ್ಲಿ, ದೇವಾಲಯಗಳಲ್ಲಿ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ಧರ್ಮಬೋಧೆಯು ನಡೆಯುವಂತೆ ಒಂದು ಯೋಜನೆಯನ್ನು ಕಲ್ಪಿಸಬೇಕಾಗಿ, ಸರಕಾರದೊಡನೆಯೂ, ಸಂಬಂಧಪಟ್ಟ ಇತರರೊಡನೆ ಕೇಳಿಕೊಳ್ಳಬೇಕಾಗಿ ಒಂದು ಠರಾವು ಸರ್ವಾನುಮತದಿಂದ ಮಂಜೂರಾಗಿರುತ್ತದೆ.

ಈ ವರುಷತ್ತು ವರ್ಷಂಪ್ರತಿ ಧರ್ಮಸ್ಥಳದಲ್ಲಿ ನಡೆಯುವ ಲಕ್ಷದೀಪೋತ್ಸವದ ನೇತೃತ್ವದಲ್ಲಿ ಒಂದು ಭವ್ಯವಾದ, ಅಲಂಕೃತವಾದ ಚಪ್ಪರದಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ದೊಡ್ಡ ಜನವರ್ಗವು ಕೂಡಿ ಬಂದಿತ್ತು.

ಶ್ರೀಮತಿ ವಿಮಲಾ ದೇವಿಯರ ಪ್ರಾರ್ಥನೆಯೊಡನೆಯೂ, ಭುಜಬಲ ಶಾಸ್ತ್ರಿಯವರ ಮಂಗಲಾಚರಣೆಯಿಂದಲೂ, ಪರಿಷತ್ತು ಪ್ರಾರಂಭವಾಯಿತು. ನಂತರ ಸ್ವಾಗತಾಧ್ಯಕ್ಷರು, ಮ. ರಾ. ರಾ. ಡಿ. ಮಂಜಯ್ಯ ಹೆಗ್ಗಡೆಯವರು ಸ್ವಾಗತಾ ಬಿನ್ನಹವನ್ನು ಓದಿದರು. 'ಆತ್ಮ ಮತ್ತು ಆತ್ಮ 'ವತ್ಸ' ಎಂಬುದು ಪರಿಷತ್ತಿನ ವಿಷಯದ ಕುರಿತು ಅಧ್ಯಕ್ಷರು, ಅರ್ಥಗಾಂಭೀರ್ಯದಿಂದ ಕೂಡಿದ ಸರಸಮಯ ಭಾಷಣವನ್ನು ಮಾಡಿದರು.

ನಂತರ ವಿವಿಧ ತತ್ವಶಾಸ್ತ್ರಜ್ಞರ ಭಾಷಣಗಳು ನಡೆದುವು.

ಅಧಿವೇಶನದ ಸಮಯ ನಡುನಡುವೆ ಗಾಯನವು ಇದ್ದಿತು.

ಅದ್ವೈತ ಪರವಾಗಿ ಉಡುಪಿ ವೆಂಕಟರಮಣ ಭಟ್ಟರು, 'ಪೂರ್ವ ಮೀಮಾಂಸದ ಪರವಾಗಿ, ಶ್ರೀ ದೇವುಡು ನರಸಿಂಹ ಶಾಸ್ತ್ರಿಯವರೂ, ಶ್ರೀ ವೀರಶೈವ ತತ್ವಜ್ಞಾನದೃಷ್ಟಿಯಿಂದಲೂ ಮಂಗಳೂರಿನ ಬಾಲಹರಿದಾಸರು, ರಾಮದಾಸರ 'ಸಮರ್ಥ ಸಾಂಪ್ರದಾಯ' ದೃಷ್ಟಿಯಿಂದಲೂ, ಪರಿಷತ್ತಿನ ವಿಷಯದ ಮೇಲೆ ಭಾಷಣವಿತ್ತರು.

ತತ್ವಜ್ಞಾನವು ಸಮಾಜಕ್ಕೆ ಅತ್ಯವಶ್ಯಕವಾದುದೂ, ಸತ್ಯ, ದಯಾ, ಸೌಚ್ಯ, ಎಂಬ ಮೂರು ಗುಣಗಳು ಬೆಳೆಯಬೇಕೆಂದೂ, ಸತ್ಯವೆಂದರೆ ಸತ್ಯವನ್ನಾಡುವುದಲ್ಲದೆ ಇತರರಿಗೆ ಒಳ್ಳೇದನ್ನು ಮಾಡುವುದು, ದಯೆಯೆಂದರೆ, ಅಹಿಂಸೆ, ಸೌಚ್ಯವೆಂದರೆ ಪರಿಶುದ್ಧತೆ ಎಂಬುದಾಗಿ ವಿವರಿಸಿ, ಪರಿಷತ್ತಿನ ಅಧ್ಯಕ್ಷರು, ತನ್ನ ಭಾಷಣವನ್ನು ಮುಗಿಸಿದರು.

ನಂತರ ಆರಂಭದಲ್ಲಿ ಸೂಚಿಸಿದ ಠರಾವು ಮುಂದೆ ಬಂದು, ಮಂಜೂರಾಯಿತು.

ಶ್ರೀ ಮಂಜಯ್ಯ ಹೆಗ್ಗಡೆಯವರ ಧನ್ಯವಾದಗಳೊಂದಿಗೆ ಪರಿಷತ್ತು ಮುಕ್ತಾಯವಾಯಿತು.

ಕಳೆದ ಬುಧವಾರ ದಿವಸ ಧರ್ಮಸ್ಥಳ ಲಕ್ಷದೀಪೋತ್ಸವದ ನೇತೃತ್ವದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು, ಶ್ರೀಗಳಾದ ಆರ್. ಎಸ್. ಹುಕ್ಕೇರಿಕರ, ಕಾರ್ಯದರ್ಶಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ, ಇವರ ಅಧ್ಯಕ್ಷತನದಲ್ಲಿ ಜರಗಿ ಕರ್ನಾಟಕವು ಒಂದು ಬೇರೆ ಪ್ರಾಂತ್ಯವಾಗಿ ರಚನೆಯಾಗಬೇಕಾಗಿ ಠರಾವು ಮಾಡಲಾಯಿತು.

ಶ್ರೀ ಹುಕ್ಕೇರಿಕರರು ರಾಷ್ಟ್ರೀಯ ಧ್ವಜವನ್ನು ಅನಾವರಿಸಿದ ನಂತರ, ಶ್ರೀ ಮಂಜಯ್ಯ ಹೆಗ್ಗಡೆಯವರ ಪುತ್ರಿ ಶ್ರೀಮತಿ ವಿಮಲಾ ದೇವಿಯವರ ವಂದೆಮಾತರಂ ಹಾಡಿನೊಂದಿಗೆ ಪರಿಷತ್ತು ಪ್ರಾರಂಭವಾಯಿತು.

ಸ್ವಾಗತ ಸಭಾಧ್ಯಕ್ಷ ಶ್ರೀ ಮಂಜಯ್ಯ ಹೆಗ್ಗಡೆಯವರು, ತಮ್ಮ ಸ್ವಾಗತ ಭಾಷಣದಲ್ಲಿ [illegible] ಕರ್ನಾಟಕ ಪ್ರಾಂತ್ಯದ ಅವಶ್ಯ[illegible] ಸ್ವತಂತ್ರ [illegible] ಪ್ರಾಂತ್ಯ [illegible]ಕೆಂದರು. ಈ ಕುರಿತು, ಸಮಸ್ತ ಕರ್ನಾಟಕವು ಎಚ್ಚತ್ತು ಚಳವಳ ನಡೆಯಿಸಬೇಕಾಗಿ ಕೋರಿದರು.

ಕರ್ನಾಟಕ ಪ್ರಾಂತ್ಯ ರಚನೆಗಾಗಿ ನಡೆದ ಚಳವಳದ ಚರಿತ್ರೆಯನ್ನು ವಿವರಿಸಿ, ಕರ್ನಾಟಕ ಪ್ರಾಂತ್ಯ ರಚನೆ ಒಂದು ರಾಜಕೀಯ ಅವಶ್ಯವು, ಸ್ವಸಾಮರ್ಥ್ಯಯಾಗುವ ಯೋಗ್ಯತೆಯು ಕರ್ನಾಟಕ ಪ್ರಾಂತ್ಯಕ್ಕಿದೆ, ಸತ್ಯಾಗ್ರಹ ಚಳವಳದಲ್ಲಿ ಕರ್ನಾಟಕದ ಪರಿಶ್ರಮಗಳು, ಇತ್ಯಾದಿಗಳನ್ನು ವಿವರಿಸಿ, ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹುಕ್ಕೇರಿಕರರು ಭಾಷಣವಿತ್ತರು.

ನಂತರ ಪ್ರೇಕ್ಷಕ ವರ್ಗದಿಂದ ಅನೇಕರು ಕರ್ನಾಟಕ ಪ್ರಾಂತ್ಯರಚನೆಯ ಕುರಿತು ಭಾಷಣವಿತ್ತರು.

ಹುಬ್ಬಳ್ಳಿಯ ಶ್ರೀಗಳಾದ ಉತ್ತಂಗಿ ಚೆನ್ನಪ್ಪನವರು ಕನ್ನಡ ಸಾಹಿತ್ಯದ ಬೆಳವಣಿಗೆಯ ಕುರಿತೂ, ಶ್ರೀ ಭುಜಬಲ ಶಾಸ್ತ್ರಿಯರು ಕರ್ನಾಟಕ ಶಿಲ್ಪಿಗಳ ಕುರಿತೂ, ಹೊಸ್ಪೇಟೆಯ ರಾಮರಾಯರು ವಿದ್ಯೆ ಮತ್ತು ಹಿಂದಿ ಎಂಬ ವಿಷಯದ ಕುರಿತೂ, ಶ್ರೀ ಕಿಲ್ಲೆಯವರು, ರಾಜಕೀಯ ದೃಷ್ಟಿಯಲ್ಲಿ ಕರ್ನಾಟಕ ಪ್ರಾಂತ್ಯದ ಅವಶ್ಯದ ಕುರಿತೂ, ದೇವುಡು ನರಸಿಂಹ ಶಾಸ್ತ್ರಿಯವರು ಕನ್ನಡ ಸಂಸ್ಕೃತಿಯ ಕುರಿತು ಸುರಸವಾದ ಭಾಷಣಗಳನ್ನಿತ್ತರು.

ಕರ್ನಾಟಕ ಪ್ರಾಂತ್ಯದ ರಚನೆಯ ವಿಷಯವನ್ನು ಮುಂಬಯಿ ಮತ್ತು ಮದ್ರಾಸು ಸರಕಾರಗಳು ಬೇಗನೆ ಕೈಗೊಳ್ಳಬೇಕೆಂದು ಕೋರಿ ಠರಾವಾಗಿ, ಪರಿಷತ್ತು ಮುಕ್ತಾಯವಾಯಿತು.

ನೇಕಾರರ ಮುಷ್ಕರ

ತಮಗೆ ಸಿಗುವ ಮಜೂರಿಯು ಕಡಿಮೆ ಎಂಬುದಾಗಿ ವಾದಿಸಿ ಸುಮಾರು 8 ಸಾವಿರ ನೇಯಿಗೆಯವರು ಮುಷ್ಕರವನ್ನು ನಡೆಸಿರುವ ಸಂಗತಿಯು ಮಹಾಜನರಿಗೆ ಗೊತ್ತಿದೆ. ಈಗ 14 ದಿವಸಗಳು ಕಳೆದವು. ಎಷ್ಟು ಧೈರ್ಯದಿಂದ ನೇಯಿಗೆಯವರು ಮುಷ್ಕರವನ್ನು ಮುಂದರಿಸಿದರೂ ಇಷ್ಟರೊಳಗೇ ಅವರಿಗೆ ನಾನಾ ಕಷ್ಟಗಳನ್ನನುಭವಿಸಬೇಕಾಗಿರಬಹುದು ಎಂಬುದನ್ನು ನಾವೇ ಊಹಿಸಬಹುದಾಗುತ್ತದೆ.

ನೇಕಾರರು ಕೆಲಸವನ್ನು ನಿಲ್ಲಿಸುತ್ತಾ ಇದ್ದು ಮಜೂರಿ ಹೆಚ್ಚಿಸುವ ಕುರಿತು ಮಾಲಿಕರ ಕಡೆ ಕೇಳಿಕೊಂಡು, ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಿದ್ದರೆ ಮೂರು ನಾಲ್ಕು ತಿಂಗಳುಗಳಲ್ಲಿ ಮುಷ್ಕರವನ್ನು ಪ್ರಾರಂಭಿಸುವುದಾಗಿ ನೋಟೀಸು ಕೊಟ್ಟು ತನ್ನದೇ ಸಾರ್ವಜನಿಕ ಸಂಸ್ಥೆಗಳ ಮೂಲಕವಾಗಲೀ ಜನಸೇವೆಯನ್ನು ಮಾಡಲು ಸಿದ್ಧರಿರುವ ಗೃಹಸ್ಥರ ಮುಖಾಂತರವಾಗಲೀ ಮಾಲಿಕರ ಕಡೆ ಸಂಧಾನ ನಡೆಸಿ, ಮಜೂರಿಯನ್ನು ಹೆಚ್ಚಿಸುವ ಪ್ರಯತ್ನ ಮಾಡುವುದು ಒಳ್ಳೇಯದಿತ್ತು. ಆಗ ಈಗಿನ ಕಷ್ಟಗಳನ್ನು ಸಹಿಸುವ ಅವಶ್ಯಕತೆಯೂ ಇರಲಿಲ್ಲ. ಆದರೂ ಎಲ್ಲರ ಮನೋವೃತ್ತಿಯು ಒಂದೇ ರೀತಿ ಇರಲಾರದು. ಸಿಕ್ಕುತ್ತಿದ್ದ ಮಜೂರಿಯನ್ನು ಕಡಿಮೆ ಮಾಡಿದಾಗ ಮಜೂರರು ತಾಳ್ಮೆಯಿಂದ ಇರಲಾಗದೆ ಹೊರಟು ಬರುವುದು ಅಸ್ವಾಭಾವಿಕವಲ್ಲವೆಂದೂ ಹೇಳಬಹುದಾದರೂ ನ್ಯಾಯವಲ್ಲವೆಂದು ಹೇಳಲಾಗುವುದಿಲ್ಲ.

ತಾ. 5ನೇ ಆದಿತ್ಯವಾರ ಪ್ರಾಂತಿಕ ಕಮಿಟಿಯ ಕಾರ್ಯದರ್ಶಿ ರಾ. ಹುಕ್ಕೇರಿಕರರೊಟ್ಟಿಗೆ ನಾನು ನೇಕಾರರ ಸಭೆಗೆ ಹೋಗಿ ಅವರ ಕಡೆ ವಿಚಾರಿಸಿದಾಗ ಬಟ್ಟೆಯ ಬೆಲೆಯು ಈಗ 6 ವರ್ಷಗಳಿಂದ ಕಡಿಮೆಯಾಗಿರುವುದಾದರೂ ನೂಲಿನ ಬೆಲೆಯೂ ಕಡಿಮೆಯಾಗಿರುವುದರಿಂದ ಮಜೂರಿಯನ್ನು ಕಡಿಮೆ ಮಾಡುವ ಅವಶ್ಯವಿಲ್ಲವಾಗಿ ತಿಳಿಸಿದರು. ನೇಕಾರರು ಕೇಳುವ ಮಜೂರಿಯು ನ್ಯಾಯವಾದ್ದೋ ಎಂಬುದಾಗಿ ಒಮ್ಮೆಗೇ ಹೇಳುವುದು ಸಾಧ್ಯವಲ್ಲ; ಆದುದರಿಂದ ಈ ಕೆಳಗಿನ ಸೂಚನೆಯನ್ನು ಅವರ ಮುಂದೆ ಇಡಲಾಯಿತು.

1. [illegible] ನೇಯಿಗೆ [illegible] ಮಾಲಿಕರ [illegible]

NACET BLADES

ನಸೆಟ್ಟನ್ನು ಪಡೆಕೊಂಡು ಕಡಿಮೆ ಬೆಲೆಯ ಖಾತ್ರಿ ಬ್ಲೇಡುಗಳನ್ನು ಪಡೆಯಿರಿ. ಅವುಗಳ ಕಡಿಮೆ ಬೆಲೆ ಮತ್ತು ವಿಶೇಷ ಗುಣಗಳಿಂದಾಗಿ, ಅವುಗಳು ಜನಪ್ರಿಯವಾಗಿವೆ. ಬ್ಲೇಡುಗಳಿಗೆ ಬಾಳ್ವಿಕೆ ಬಹಳ. ಮೂರು ಗೂಟದ ರೇಜರುಗಳಲ್ಲಿ ಉಪಯೋಗಿಸಬಹುದು.

8 ಆಣೆಗಳಿಗೆ ಬ್ಲೇಡುಗಳು 10

INV

ಹರಿಪುರ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ.

ಚುನಾವಣೆಯ ವೇಳಾಪತ್ರಿಕೆಯನ್ನು ನಾವು ಈಗಾಗಲೇ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದ್ದು ಅವುಗಳ ಪ್ರತಿಗಳನ್ನು ಜಿ. ಕಾ. ಕಮಿಟಿಗಳಿಗೂ ಕಳುಹಿಸಿಕೊಟ್ಟಿದ್ದೇವೆ. ಈ ಚುನಾವಣೆಗೆ ಭಾಗಿಯಾಗಬಯಸುವವರು ಈ ಕೆಳಗಿನ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟು ಕೆಲಸ ನಡೆಸಬೇಕು.

ನಾಮಪತ್ರಗಳು ಆಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ದೊರೆಯುತ್ತದೆ. ಚುನಾವಣೆಗೆ ನಿಲ್ಲಬಿಚ್ಛಿಸುವವರು ಜಿ. ಕಾ. ಕಮಿಟಿಯ ಕಚೇರಿಯಿಂದ [illegible] ನಾಮಪತ್ರಗಳನ್ನು ಪಡೆಯಬೇಕು. ಮತ್ತು [illegible] ನಾಮಪತ್ರಗಳನ್ನು ತುಂಬಿ ಒಂದು ಪ್ರತಿಯನ್ನು ಆಯಾ ಜಿಲ್ಲೆಯ [illegible] ಪ್ರತಿಯನ್ನು [illegible] ಹುಬ್ಬಳ್ಳಿಯ [illegible] ಕಾಂಗ್ರೆಸ್ ಕಮಿಟಿ (ಧಾರವಾಡ) ಯ ಕಚೇರಿಗೂ ಕಳುಹಿಸಬೇಕು.

ಈ ಸಂದರ್ಭದಲ್ಲಿ ಪಾ. ಕಾ. ಕಮಿಟಿಯ ಕಾರ್ಯಕಾರೀ ಮಂಡಳಿಯದರು. ಹೆಚ್ಚು [illegible] ಪ್ರತಿನಿಧಿಗಳು 4, ನೇಕಾರರ ಪ್ರತಿನಿಧಿಗಳು 4, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರತಿನಿಧಿ 1 ಹೀಗೆ 9 ಮಂದಿಯಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸತಕ್ಕದ್ದು.

2. ಈ ಕಮಿಟಿಯವರು 1930 ಮತ್ತು 1937ರಲ್ಲಿ ಇರುತ್ತಿದ್ದ ಬೇರೆ ಬೇರೆ ತರದ ಬಟ್ಟೆಯ ಬೆಲೆ, ಅದಕ್ಕೆ ಬೇಕಾಗುವ ನೂಲಿನ ಬೆಲೆ, ಈ ಎರಡು ವರ್ಷಗಳಲ್ಲಿ ಬೇರೆ ಬೇರೆ ತರದ ಬಟ್ಟೆಗಳ ನೇಯಿಗೆಗೆ ಕೊಡುತ್ತಿದ್ದ ಮಜೂರಿ ಇವುಗಳ ಲೆಕ್ಕವನ್ನು ಸಂಗ್ರಹಿಸಿ, ಅದರ ಆಧಾರದ ಮೇಲೆ ಮಜೂರಿಯನ್ನು ನಿಶ್ಚಯಿಸತಕ್ಕದ್ದು.

ಈ ಸೂಚನೆಯನ್ನು ನೇಕಾರರು ಒಪ್ಪಿಕೊಂಡರು. ನೇಯಿಗೆ ಫ್ಯಾಕ್ಟರಿ ಮಾಲಿಕರ ಸಂಘದ ಅಧ್ಯಕ್ಷರಿಗೆ ಸೂಚನೆಯನ್ನು ಕಳುಹಿಸಿ, ಅದನ್ನು ಸಂಘದ ಮುಂದಿಟ್ಟು ಅವರ ಅಭಿಪ್ರಾಯವನ್ನು ತಿಳಿಸಬೇಕಾಗಿ ವಿನಂತಿಸಿಕೊಂಡಿದ್ದೇನೆ. ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ.

ಈ ಕಮಿಟಿಯನ್ನು ಏರ್ಪಡಿಸುವ ಅವಶ್ಯಕತೆಯು ಒದಗಬಾರದೆಂದೇ ಎಂಬಂತೆ ತೋರುತ್ತದೆ. ರಾಜಿಯ ಪ್ರಸ್ತಾಪವು ನಡೆಯುತ್ತಿದೆಯಾಗಿ ತಿಳಿಯುತ್ತೇನೆ. ಮಹಾಜನರು ಈ ವಿಷಯದಲ್ಲಿ ಉದಾಸೀನ ಭಾವವನ್ನು ತಾಳದೆ ನ್ಯಾಯವನ್ನು ತಿಳಕೊಳ್ಳುವರೆ ಕುತೂಹಲಪಟ್ಟರೆ ವಿವಾದವು ಬೇಗನೆ ಮುಗಿಯುವುದು. ಮಾಲಿಕರು ನ್ಯಾಯವಾದ ಯಾವ ಸೂಚನೆಗಳನ್ನೂ ಮಾಡಿದರೆ ಸ್ವೀಕರಿಸುವರೆ ಯಾವಾಗಲೂ ಸಿದ್ಧತೆಯೇ ಇದೆ. ಆದುದರಿಂದ ಮಾಲಿಕರು ನೇಕಾರರು ಕೇಳುವ ಮಜೂರಿಯು ನ್ಯಾಯವಾದುದೋ ಎಂಬುದಾಗಿ ನಿಷ್ಪಕ್ಷಪಾತ ದೃಷ್ಟಿಯಿಂದ ಆಲೋಚಿಸಿ ಮುಷ್ಕರವನ್ನು ಇನ್ನೂ ಮುಂದರಿಸುವ ಅವಶ್ಯಕತೆಯು ಬಾರದಂತೆ ಮಾಡಬೇಕಾಗಿ ವಿನಂತಿ.

ಯಂ. ಉಮೇಶರಾವ್, ಅಧ್ಯಕ್ಷ,
ಜಿಲ್ಲಾ ಕಾಂಗ್ರೆಸ್ ಕಮಿಟಿ.

ಮಗಳನ್ನು ಮಾಡಿದ್ದು ಅವು ಶೀಘ್ರದಲ್ಲಿಯೇ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುವವು. ಮತ್ತು ನಾಮಪತ್ರಿಗಾಗಿ ಜಿಲ್ಲಾ ಕಾಂ. ಕಮಿಟಿಯ ಕಚೇರಿಯಲ್ಲಿ ನೋಡಲು ದೊರೆಯುವುವು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿಯ ನೋಟೀಸ ಬೋರ್ಡಿನ ಮೇಲೆ ಈ ಚುನಾವಣೆಯ ವಿಷಯವಾಗಿ ಮಾಡಿದ ನಿಯಮಗಳನ್ನೂ, ವೇಳಾಪತ್ರಿಕೆಯನ್ನೂ ಹಚ್ಚುವ ವ್ಯವಸ್ಥೆ ಮಾಡಿದೆ.

ಆರ್. ಶ್ರೀ ಹುಕ್ಕೇರಿಕರ, ಗೌ. ಕಾರ್ಯದರ್ಶಿ,
ಕ. ಪ್ರಾಂ. ಕಾಂ. ಕಮಿಟಿ. ಧಾರವಾಡ,

ಹರಿಪುರ ಕಾ. ಪ್ರತಿನಿಧಿಗಳ ಚುನಾವಣೆ

[illegible] A [illegible] ವಿಭಾಗ.

1 [illegible] ತಾಲೂಕು [illegible] ಸರ್ಕಲ್, ರಿವಿನ್ಯೂ ಗ್ರಾಮ ನಂ. 1–52.

2 [illegible] ಸರ್ಕಲ್, ರೆವಿನ್ಯೂ ಗ್ರಾಮ ನಂಬ್ರ 53–103.

3 [illegible] ತಾಲೂಕು–[illegible] ಸರ್ಕಲ್ ರೆವಿನ್ಯೂ ಗ್ರಾಮ ನಂಬ್ರ 1–33

4. [illegible] ಸರ್ಕಲ್, ರೆವಿನ್ಯೂ ಗ್ರಾಮ ನಂಬ್ರ 34–35 ಮತ್ತು 46–63.

5. [illegible] ಸರ್ಕಲ್, ರೆವಿನ್ಯೂ ಗ್ರಾಮ ನಂ. 40–45 ಮತ್ತು 64–86

6 [illegible] ಸರ್ಕಲ್, ರೆವಿನ್ಯೂ ಗ್ರಾಮ ನಂಬ್ರ 87–114.

7 [illegible] ತಾಲೂಕು [illegible] ಸರ್ಕಲ್, ರೆವಿನ್ಯೂ ಗ್ರಾಮ ನಂಬ್ರ 1–28.

8 [illegible] ಸರ್ಕಲ್ ರೆವಿನ್ಯೂ ಗ್ರಾಮ ನಂಬ್ರ 29–45

9 [illegible] ಸರ್ಕಲ್ ರೆವಿನ್ಯೂ ಗ್ರಾಮ ನಂಬ್ರ 46–105

10 [illegible] ತಾಲೂಕು [illegible] ಸರ್ಕಲ್ ರೆವಿನ್ಯೂ ಗ್ರಾಮ ನಂಬ್ರ 1–81.

11 [illegible] ಸರ್ಕಲ್ ರೆವಿನ್ಯೂ ಗ್ರಾಮ ನಂಬ್ರ 49–172

12 [illegible] ಸರ್ಕಲ್. ರೆವಿನ್ಯೂ ಗ್ರಾಮ ನಂಬ್ರ 89–172.

13. [illegible] ತಾಲೂಕು–[illegible] ಸರ್ಕಲ್, ರೆವಿನ್ಯೂ ಗ್ರಾಮ ನಂಬ್ರ 1—59.

14. [illegible] ಸರ್ಕಲ್, ರೆವಿನ್ಯೂ ಗ್ರಾಮ ನಂಬ್ರ 60–80.

15. [illegible] ಸರ್ಕಲ್ ರೆವಿನ್ಯೂ ಗ್ರಾಮ ನಂ. 81–115.

16. [illegible] ತಾಲೂಕು–[illegible], [illegible] ಸರ್ಕಲ್, ರೆವಿನ್ಯೂ ಗ್ರಾಮ ನಂಬ್ರ 1–33, 73–100 ಮತ್ತು 135–151.

17. [illegible] ಸರ್ಕಲ್ ರೆವಿನ್ಯೂ ಗ್ರಾಮ ನಂಬ್ರ 34–72, 101–134, 152–164.

ಮತದಾರ ಸಂಘಗಳು:–

B. ಪಟ್ಟಣ ವಿಭಾಗ

1. ಮಂಗಳೂರು ಟೌನು ವಾರ್ಡ ನಂಬ್ರ– 4, 5, 6, 7, 8 ಮತ್ತು 9.
2. " " 1, 2, 3, 13, 14, 15.
3. " " 10, 11 ಮತ್ತು 12.
4. " " 16–26
5. ಉಡುಪಿ ತಾಲೂಕು–ಉಡುಪಿ ಟೌನು–ಮ್ಯುನ್ಸಿಪಲ್ ವಾರ್ಡ ನಂಬ್ರ 1–6
6. " " " 7–12

ಎಂ. ಉಮೇಶ ರಾವ್, ಅಧ್ಯಕ್ಷ,
ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು.

[illegible]ತ್ತು ಮಾಸಗಳಿಗೆ ಲಗ್ನಗಳಿಲ್ಲ!

ಪತ್ನಿಯನ್ನು ಕಂಡದ್ದೇ ಇಲ್ಲ—ಆದರೆ,

ಕ್ರಮವಾಗಿ ವಿವಾಹವಾಗಿ, ಮೂವರು ಮಕ್ಕಳ ತಂದೆಯಾಗಿರುವನು!

ಮುದಿ ವಿಧವೆಯೊಬ್ಬಳ ತರುಣ ಪತಿಯು

ವಿಧವೆಯ ಸರ್ವ ಸಂಪತ್ತನ್ನೂ ಹಿಡಿದು ಪಲಾಯನವಾಗಿರುವನು, ಪಾಟ್ನಾನಗರದಲ್ಲಿ. ಐವತ್ತು ವರ್ಷ ಪ್ರಾಯದ ವಿಧವೆಯೊಬ್ಬಳು ತರುಣನೊಬ್ಬನನ್ನು ಪುನರ್ವಿವಾಹವಾದಳು.. ಇಂದಿನ ದಿನಗಳಲ್ಲಿ ಕಳ್ಳರ ಕಾಟವು ಬಹಳವಿದ್ದುದರಿಂದ ತನ್ನ ಭಂಗಾರದ ಆಭರಣ ಇತ್ಯಾದಿಗಳನ್ನು ಹಣ ರೂಪಕ್ಕೆ ಮಾರ್ಪಡಿಸಿ, ಅದನ್ನು ಬೇಂಕಿನಲ್ಲಿ ಭದ್ರವಾಗಿಡುವುದುತ್ತಮವೆಂದು ಆ ತರುಣ ಪತಿಯು ಆಕೆಯನ್ನು ಬೋಧಿಸಿ, ಅವಳಿಂದ ರೂ. ೧೦,೦೦೦ ಮೌಲ್ಯದ ಆಭರಣಗಳನ್ನು ಪಡೆದು ಪೇಟೆಗೆ ನಡೆದವನು ಪಲಾಯನವಾಗಿರುವನು. ಪೋಲೀಸರು ಈಗ ಅವನ ಪತ್ತೆಹಿಡಿಯಲು ಯತ್ನಿಸುತ್ತಿರುವರು.

೩೦ ಮಾಸಗಳಿಗೆ ಲಗ್ನಗಳಿಲ್ಲ.
ವಿವಾಹ ಯಾ ಉಪನಯನ-

ಮುಂದಕ್ಕೆ ಎರಡೂವರೆ ವರ್ಷಗಳಲ್ಲಿ ವಿವಾಹ ಯಾ ಉಪನಯನಗಳಿಗೆ ಲಗ್ನಗಳಿರುವುದಿಲ್ಲವೆಂಬುದಾಗಿ ಬಿಹಾರಿನ ಮಿಥಿಲಾ ವರ್ಗದ ಬ್ರಾಹ್ಮಣಪಂಡಿತರಲ್ಲಿ ಒಂದು ವಾದವುಂಟಾಗಿರುವುದು. ಶಾಸ್ತ್ರಗಳ ಪ್ರಕಾರ ಆ ಅವಧಿಯು ಮಹಾ ಅಧಿಕಾಂವೆಂದೆಣಿಸುವುದೆಂದೂ, ಅದರಿಂದ ಆ ಸಮಯದಲ್ಲಿ ವಿವಾಹ, ಉಪನಯನಗಳಿಗೆ ಮೌಢ್ಯವಿರುವುದೆಂದೂ ಅವರ ಹೇಳಿಕೆ. ಈ ಕುರಿತು ಮಿಥಿಲಾ ಪಂಡಿತರದೊಂದು ಪರಿಷತ್ತು ಜರಗಿ, ಅದರಲ್ಲಿ ಮೇಲಿನ ಇತ್ಯರ್ಥವಾಗಿ, ಈ ಇತ್ಯರ್ಥವು ಮಿಥಿಲಾ ವರ್ಗದ ಗುರುಗಳಾದ ದರ್ಭಾಂಗ ಮಹಾರಾಜರಿಗೆ ತಿಳಿಸಲ್ಪಟ್ಟಿರುವುದೆಂದು ವದಂತಿ ಇದೆ.

ಆದರೆ, ದರ್ಭಾಂಗ ಮಹಾರಾಜರು ಈ ಕುರಿತು ಯಾವತ್ತೂ ಇತ್ಯರ್ಥಕೊಡುವರೆ ಸಿದ್ಧರಿಲ್ಲವೆಂದು ಹೇಳಿ, ಅದನ್ನು ಇತರ ಬ್ರಾಹ್ಮಣ ಪಂಡಿತರೊಡನೆ ವಿಚಾರಿಸಬೇಕಾಗಿ ತಿಳಿಸಿರುವರಂತೆ. ಇದರಿಂದ ಮಿಥಿಲಾ ಪಂಡಿತರು ರೇಗಿರುವರಂತೆ.

ಗುಪ್ತ ಮಂತ್ರಾಚಾರ್ಯರು

ಒಬ್ಬರು ಈಗ ಸೆರೆಮನೆಯನ್ನು ಸೇರಿರುವರು. ಗುಪ್ತಮಂತ್ರ ಮೊಕದ್ದಮೆಯೊಂದು ನಡೆದು ಅಖಿಲ್ ಕಿಶೋರ್ ರಾಮ ಎಂಬವನಿಗೆ ಒಂದು ವರ್ಷದ ಕಠಿಣ ಸಜೆಯು ವಿಧಿಸಲಾಗಿದೆ. ಯಾವಾತನು ತನ್ನ ಈ ಗುಪ್ತಮಂತ್ರವನ್ನು ಏಳು ಸಲ ಉಚ್ಚರಿಸುವನೋ ಆತನು ಯಾವತ್ತು ಸಂಕಷ್ಟಗಳಿಂದ ಪಾರಾಗುವನೆಂದು ಅವನು ಪತ್ರಿಕೆಗಳ ಮೂಲಕ ಜಾಹೀರುಮಾಡುತ್ತಿದ್ದನು. ಆದರೆ, ಗುಪ್ತಮಂತ್ರವನ್ನು ಪಡೆಕೊಂಡವರಿಗೆ ಅದರೊಡನೆ ಒಂದು ಶರ್ತವೂ ಕಳುಹಿಸಲಾಗುತ್ತಿತ್ತಂತೆ. ಆ ಗುಪ್ತಮಂತ್ರವು ಪರಿಣಾಮಕಾರಿಯಾಗಬೇಕಾದರೆ, ಅದನ್ನುಪಯೋಗಿಸುವವನು ಎವೆಯಿಕ್ಕದೆ ೧೫ ನಿಮಿಷಗಳ ಸಮಯ ಚಂದ್ರನನ್ನು ನೋಡಬೇಕೆಂದು.

ತನ್ನ ಮಂತ್ರವು ಮೋಸಕರವಲ್ಲವೆಂದು ಕಿಶೋರನು ವಾದಿಸಿದರೂ, ಅಸಾಧ್ಯವಾದ ಶರ್ತವನ್ನು ತೋರಿಸಿ ಜನರನ್ನು ಮೋಸಗೊಳಿಸುವ ಮಂತ್ರವು ಅದುವೆಂದೂ ನ್ಯಾಯಾಧೀಶರ ಇತ್ಯರ್ಥವು.

'ಬಹಿಷ್ಕಾರಿಕರ ಮತಗುರು'ಗಳ ಪೋಷಾಕುಗಳನ್ನು ಕಳಚಿದರು!
ರಂಗೂನಿನಲ್ಲಿ ಸುಧಾರಣಾ ಚಳವಳ.

ಬೌದ್ಧ ಮತಗುರುಗಳನ್ನು ತಿದ್ದಿಕರಿಸಲು ಬರ್ಮಾ ದೇಶದ ರಂಗೂನಿನಲ್ಲಿ ತರುಣರ ಸ್ವಯಂಸೇವಕ ಮಂಡಳವೊಂದರ ಸ್ಥಾಪನೆಯಾಗಿದೆ. ಈ ಸುಧಾರಕರು, ಮೆರವಣಿಗೆಯಲ್ಲಿ ಅಲ್ಲಿನ ಒಂದು ಬೌದ್ಧದೇವಾಲಯಕ್ಕೆ ತೆರಳಿ, ಅಲ್ಲಿರುವ ಮತಗುರುಗಳಿಗೆ ದೇವಾಲಯ, ಧರ್ಮದ ಕುರಿತು ಪ್ರಶ್ನೆಗಳನ್ನು ಹಾಕಿದರು. ಮತಗುರುಗಳಿಂದ ಅಸಮಾಧಾನಕರ ಉತ್ತರಗಳು ಬರಲು, ಈ ತರುಣ ಸ್ವಯಂಸೇವಕರು ಗುರುಗಳು ಧರಿಸಿದ್ದ ಹಳದಿಬಣ್ಣದ ಪವಿತ್ರ ಪೋಷಾಕುಗಳನ್ನು ಕಳಚಿಸಿ, ಅವರಿಂದ ಬಿಳಿ ಬಟ್ಟೆಯನ್ನು ಧರಿಸಿಸಿದರು. ಈ ಸ್ವಯಂಸೇವಕ ದಳದ ವ್ಯವಸ್ಥೆಯು ಬರ್ಮಾದೇಶದ ಎಲ್ಲಾ ಕಡೆಗಳಲ್ಲಿಯೂ ಇರುವುದೆಂದೂ ತಿಳಿದುಬರುತ್ತದೆ.

ಮೆದುಳಿನ ಭಂಡಾರ.

ಜಗತ್ತಿನಲ್ಲಿ ಮೃತರ ಮೆದುಳುಗಳನ್ನು ಕೂಡಿಸುವ ಮೂರು ಸಂಸ್ಥೆಗಳಿವೆ. ಸಂಯುಕ್ತ ಅಮೇರಿಕದ ಕೊರ್ನೆಲ್ಲ ಯುನಿವರ್ಸಿಟಿ, ರಶ್ಯಾದೇಶದ ಒಂದು ಸಂಸ್ಥೆ, ವಾಶಿಂಗ್ಟನ್ ಮೆದುಳು ಪರಿಶೋಧನಾ ಸಂಘ. ವಾಶಿಂಗ್ಟನ್ನಿನ ಈ ಪರಿಶೋಧನಾಲಯದಲ್ಲಿ ಈಗ ೬ ಸಾವಿರ ಮೆದುಳುಗಳಿವೆ. ಅದಕ್ಕೆ ಇನ್ನೂ ಹೆಚ್ಚಿನ ಮೆದುಳುಗಳು ಬೇಕಾಗಿವೆ. ಈ ಸಂಸ್ಥೆಗೆ ಮಾನವರ ಮೆದುಳು ಮಾತ್ರವಲ್ಲದೆ ಸಕಲ ಪ್ರಾಣಿಗಳ ಮೆದುಳುಗಳೂ ಬೇಕಾಗಿರುವಂತೆ.

ಪತ್ನಿಯನ್ನು ಕಂಡದ್ದೇ ಇಲ್ಲ! ಆದರೆ

ಕ್ರಮವಾಗಿ ವಿವಾಹವಾಗಿ, ಮೂವರು ಮಕ್ಕಳ ತಂದೆಯಾಗಿದ್ದನು.

ಪರದೇಶಕ್ಕೆ ತೆರಳಿದ ಆಂಗ್ಲೆಯನೊಬ್ಬನು ಸ್ವದೇಶಕ್ಕೆ ಹಿಂತಿರುಗಿ, ತನ್ನ ಸ್ವಂತ ನಾಡಿನಲ್ಲಿ ವಿವಾಹವಾಗಲಿದ್ದನು. ಆದರೆ, ಆ ಕುರಿತು ಪೂರೈಸಬೇಕಾಗಿರುವ ಅಲ್ಲಿನ ಕ್ರಮಗಳನ್ನು ಪೂರೈಸಲು ವಿವಾಹಕಛೇರಿಗೆ ತೆರಳಿದವನಿಗೆ ಈ ಆಶ್ಚರ್ಯಕರ ವಾರ್ತೆಯು ದೊರಕಿತು. ಅವನು ಕ್ರಮಬದ್ಧವಾಗಿ ವಿವಾಹವಾಗಿದ್ದನಲ್ಲದೆ ೩ ಮಕ್ಕಳ ತಂದೆಯೂ ಆಗಿದ್ದನೆಂಬುದು ಅಲ್ಲಿಯ ಪುಸ್ತಕಗಳಿಂದ ತಿಳಿದುಬಂತು.

ಆತನು ಈ ಮೊದಲು ವಿವಾಹವಾಗಿರಲಿಲ್ಲವೆಂದು ಸಾಕ್ಷ್ಯಗಳನ್ನು ರುಜುಪಡಿಸಿದನು. ಕೆಲವು ಸಮಯದ ಹಿಂದೆ, ಪರದೇಶದ ಒಂದೆಡೆಯಲ್ಲಿ ಆತನು ಪ್ರವಾಸಮಾಡುತ್ತಿರುವಾಗ ಆತನ ಪೆಟ್ಟಿಗೆಯನ್ನು ಯಾರೋ ಕೊಂಡುಹೋಗಿದ್ದರಂತೆ. ಅದರಲ್ಲಿ ಆತನ ಪಾಸ್‌ಪೋರ್ಟ್ ಪತ್ರಗಳಿದ್ದವಂತೆ. ಪೆಟ್ಟಿಗೆಯನ್ನು ಹೊಡೆದ ಆ ಕಳ್ಳನು ಆ ಪಾಸ್ ಪೋರ್ಟನ್ನುಪಯೋಗಿಸಿ ತನ್ನ ನಾಡಿಗೆ ತೆರಳಿ, ತನ್ನ ಹೆಸರನ್ನು ಉಪಯೋಗಿಸಿಕೊಂಡು ವಿವಾಹವಾಗಿರಬಹುದೆಂದೂಹಿಸಲಾಗಿದೆ. ಈಗ ಕಳ್ಳನ ಪತ್ತೆಹಚ್ಚಲು ಪೋಲೀಸರು ಸಾಧಿಸುತ್ತಿದ್ದಾರೆ.

ಮುಸಲೋನಿಯ ಪ್ರಣಯಿಗೆ ಸಂಯುಕ್ತ ಅಮೇರಿಕದಲ್ಲಿ ಪ್ರವೇಶದೊರಕಲಿಲ್ಲ.

ಮಗ್ದಾ ದಿ ಫೊಂಟೆಜಸ್ ಎಂಬ ಫ್ರೆಂಚ್ ಸ್ತ್ರೀಯು ಪತ್ರಿಕಾ ವ್ಯವಸಾಯಿ, ಈ ಮೊದಲು ಇಟೆಲಿಯಲ್ಲಿದ್ದ ರಾಯಭಟರನ್ನು ಪೆರಿಸ್ ನಗರದಲ್ಲಿ ಗುಂಡಿಕ್ಕಿ ಜಗತ್ತಿನಲ್ಲೆಲ್ಲಾ ಕೌತುಕವನ್ನು ಉಂಟುಮಾಡಿದವಳು, ಮುಸಲೋನಿಯೊಡನೆ ಪ್ರಣಯ ನಡೆಸಿದವಳು— ಇವಳಿಗೆ ಸಂಯುಕ್ತ ಅಮೇರಿಕಕ್ಕೆ ಪ್ರವೇಶಿಸಲು ಅವಕಾಶ ದೊರಕಲಿಲ್ಲ. ನರಹತ್ಯೆ ನಡೆಸಲೆತ್ನಿಸಿದವಳು ತಮ್ಮ ದೇಶದಲ್ಲಿ ಕಾಲಿಡಬಾರದಾಗಿ ಸಂ॥ ಅಮೇರಿಕದ ನಿರ್ಬಂಧ. ಒಂದು ನಟನಾಮಂದಿರವನ್ನು ಸೇರಲು ಆಕೆಯು ಐರೋಪ್ಯದಿಂದ ಇತ್ತಕಡೆಗೆ ಬಂದಿದ್ದಳು; ಈಗ ಅವಳು ಅಮೇರಿಕಾ ಸರಕಾರದೊಡನೆ ಮಕದ್ದಮೆಮಾಡಿರುವಳು.

ಮಂಚುಕ್ಯೂನಲ್ಲಿ ಅಶಾಂತಿ!

ಜಮೀನ್ದಾರರೊಬ್ಬರು ಗೇಣಿ ಮಾಫಿಬಿಟ್ಟರು.

ಬಂಗಾಳವು ಮದ್ರಾಸನ್ನು ಅನುಸರಿಸುವುದೇ? **ಆರು ವಾರಗಳಲ್ಲಿ ಶಿಕ್ಷಣ**

ಬ್ರಿಟಿಷರು ತರಬೇತುಗೊಳಿಸುತ್ತಿದ್ದಾರೆ.

ಜಗತ್ತಿನ ಎಲ್ಲಾ ಕಡೆಗಳಿಗೆ ತೆರಳುವ ವ್ಯವಸ್ಥೆಯುರುವ ವಿಮಾನಸಂಸ್ಥೆಗಳು ಬ್ರಿಟನಡೊಡನೆ ಇರುವುದರಿಂದ, ಅತಿ ದೂರದ ದೇಶಗಳಿಗೆ ತೆರಳಿ ಬಾಂಬುಗಳನ್ನು ಹೊಡೆಯುವುದರಲ್ಲಿ ಅವರು, ತಮ್ಮ ವಾಯುಬಲದ ವಿಮಾನ ಚಾಲಕರನ್ನು ತಮ್ಮ ಪ್ರಯಾಣ ವಿಮಾನಗಳ ಮೂಲಕ ತರಬೇತುಗೊಳಿಸುತ್ತಿದ್ದಾರೆ. ಮುಂದಿನ ಯುದ್ಧಕ್ಕಾಗಿ ಈ ಸಿದ್ಧತೆಗಳಂತೆ.

ಮಂಚುಕ್ಯೂನಲ್ಲಿ ಅಶಾಂತಿ!

ಜಪಾನಿನ ಅಧೀನದಲ್ಲಿರುವ ಮಂಚುಕ್ಯೂನಲ್ಲಿ, ಜಪಾನಿಯರಿಗೆ ವಿರೋಧವಾಗಿ ದಂಗೆಗಳುಂಟಾಗಿರುವುದೆಂದು ವದಂತಿಯಿದೆ. ಉತ್ತರ ಚೀನದಲ್ಲಿ ಕೊಮ್ಯೂನಿಸ್ಟರು ತಮ್ಮ ಶಕ್ತಿಗುಂದುವಿಕೆಗೆ ಕಾರಣರಾಗಿರುವರೆಂದು ಜಪಾನಿನ ಸಂಗ್ರಾಮ ಸಚಿವರ ಪ್ರಕಟಣೆಯಾಗಿರುತ್ತದೆ. ಮಂಚುಕ್ಯೂ ದಂಗೆಗೂ ಕೊಮ್ಯೂನಿಸ್ಟರೇ ಕಾರಣರಂತೆ. ಮಂಚುಕ್ಯೂನಲ್ಲಿ ಜಪಾನಿಯರ ಕೈ ಕೆಳಗಿರುವ ದೇಶೀ ಸೈನ್ಯಮಂಡಳವು ಜಪಾನಿಗೆ ವಿರೋಧವಾಗಿ ದಂಗೆಯೆದ್ದಿರುವುದಂತೆ.

ನಗರದಲ್ಲಿ ಭಯಾತ್ಮಕ ರೂಪದ ಕಾರ್ಯಕಲಾಪಗಳು ನಡೆಯುತ್ತಿವೆ. ಪ್ರತಿ ರಾತ್ರೆ ಜಪಾನಿಯರ ಕೊಲೆ ನಡೆಯುತ್ತಿದೆ. ಆದರೆ ಕೊಲೆಪಾತಕಿಗಳನ್ನು ಹಿಡಿಯಲಾಗುವುದಿಲ್ಲ. ನಾಡುಪ್ರದೇಶಗಳಲ್ಲಿ ಜಪಾನಿಯರು ತಂಡಗಳಾಗಿ ಶಸ್ತ್ರಗಳನ್ನು ಧರಿಸಿ ಸಂಚರಿಸಬೇಕಾಗಿದೆ. ಕಾರಣ, ಅವರು ಅಲ್ಲಲ್ಲಿ ಅವಿತಿರುವ ದಂಗೆಗಾರರ ತಂಡಗಳನ್ನು ಆಗಾಗ್ಗೆ ಎದುರಾಯಿಸಬೇಕಾಗಿದೆ. ಈ ದಂಗೆಯು ಸಮಸ್ತ ಮಂಚುಕ್ಯೂ ದೇಶದಲ್ಲಿ ಹರಡಿದ್ದರಿಂದ, ಜಪಾನಿಯರಿಗೆ ಹೆಚ್ಚಿನ ಮಂದಿ ಸೈನಿಕರನ್ನು ಇತ್ತಕಡೆಗೆ ಕಳುಹಿಸಬೇಕಾಗಿ ಬಂದಿದೆ.

ಧರ್ಮಾರ್ಥವಾಗಿ ಹಾಲು.

ಅಶಕ್ತ ಮಕ್ಕಳಿಗೆ ಧರ್ಮಾರ್ಥವಾಗಿ ಹಾಲನ್ನೊದಗಿಸಲು ಕಾನ್ಪುರ ನಗರಸಭೆಯು ೫೦,೦೦೦ ರೂಪಾಯಿಗಳನ್ನು ಸಂಕಲ್ಪನಮಾಡಿರುವದಾಗಿ ತಿಳಿದುಬರುತ್ತದೆ.

ಆರು ವಾರಗಳಲ್ಲಿ ಶಿಕ್ಷಣ

'ಆರು ವಾರಗಳಲ್ಲಿ ಶಿಕ್ಷಣ' ಎಂಬ ನೂತನ ಯೋಜನೆಯೊಂದು ಪ್ರಯಾಗದ ಮಹಿಳಾ ವಿದ್ಯಾಪೀಠದ ವ್ಯಾಸ್ ಚಾನ್ಸಲರರಾದ ಬಾಬು ಸಂಗಮಲಾಲ ಅಗರ್ವಾಲರಿಂದ ನಿರ್ಮಿತವಾಗಿರುತ್ತದೆ. ಪ್ರಕೃತದಲ್ಲಿ, ಹಿರಿಯರನ್ನು ಶಿಕ್ಷಣಕ್ಕಾಗಿ ಅಲ್ಲಹಾಬಾದ್ ನಗರಸಭೆ ಇತ್ಯಾದಿ ವಿವಿಧ ಸಂಸ್ಥೆಗಳಿಂದ ಒಟ್ಟು ರೂಪಾಯಿ ೭೫೦೦ ಗಳು ವ್ಯಯವಾಗುತ್ತಿವೆ. ಇದೇ ವ್ಯಯದಿಂದ, ಇವರ ಮೇಲಿನ ಯೋಜನೆಯಿಂದ ಶಿಕ್ಷಿತರ ಸಂಖ್ಯೆಯನ್ನು ಹೆಚ್ಚಿಸಬಹುದಂತೆ. ಈ ಯೋಜನೆ ಪ್ರಕಾರ, ಓರ್ವ ಅಧ್ಯಾಪಕನು ದಿನ ಒಂದರ ಎರಡು ತಾಸುಗಳ ಬೋಧನೆ ನಡೆಸಿ ಬೇರೆ ಆರು ವಾರಗಳಲ್ಲಿ ೧೫ ಮಂದಿ ಹಿರಿಯರನ್ನು ಶಿಕ್ಷಿತರನ್ನಾಗಿ ಮಾಡಬಹುದು. ಹೀಗೆ ಶಿಕ್ಷಣಹೊಂದಿದವರಿಗೆ, ಕಥೆ ಪುಸ್ತಕಗಳನ್ನೂ ಓದಲೂ, ಸರಳ ತರದ ಪತ್ರಗಳನ್ನು ಬರೆಯಲೂ ತುಲಸೀದಾಸ ರಾಮಾಯಣದ ಕೆಲವಂಶಗಳನ್ನು ಓದಲೂ ಆಗುವುದಂತೆ.

ಬಂಗಾಳವು ಮದ್ರಾಸನ್ನು ಅನುಸರಿಸುವುದೇ?

ಮದ್ರಾಸ್ ಸರಕಾರದ ಅಪ್ಪಣೆ ಪ್ರಕಾರ ಹಿಂದೆ ಭಾರತೀಯರನ್ನು ಕ್ರೂರ ರೀತಿಯಲ್ಲಿ ಅವಮಾನಗೊಳಿಸಿದ ನೆಯಿಲ್ ಪ್ರತಿಮೆಯನ್ನು ತೆಗೆಯಲಾಯಿತು. ಅದರಂತೆ, ಕಲ್ಕತ್ತದಲ್ಲಿ ನಡೆದ ಬ್ಲೇಕ್ ಹೋಲ್ ಅತ್ಯಾಚಾರಕ್ಕಾಗಿ ಅಲ್ಲಿರುವ ಲಾರ್ಡ್ ಕರ್ಜನರ ವಿಗ್ರಹವನ್ನೂ ತೆಗೆಸುವರೆ ಬಂಗಾಳ ಸರಕಾರವು ಸಾಧಿಸುವುದೇ? ಕಾರಣ ಈ ಬ್ಲೇಕ್ ಹೋಲ್ ಪ್ರಕರಣವು ಮುಸ್ಲಿಮರಿಗೆ ಅತ್ಯಂತ ಅವಮಾನಕರದ್ದೆಂದು 'ಹಿಂದೂಸ್ಥಾನ ಸ್ಟ್ಯಾಂಡರ್ಡ್' ಪತ್ರಿಕೆಯ ಟೀಕೆ.

ಗೇಣಿ ಮಾಫಿಬಿಟ್ಟರು.

ಕಾಂಗ್ರೆಸ್ ಪ್ರಧಾನಮಂತ್ರಿಗಳಾದ ಶ್ರೀ ಗೋವಿಂದ ವಲ್ಲಭಪಂತರ ಆಗಮನದ ಸ್ಮಾರಕಾರ್ಥವಾಗಿ, ಬಿಹೋರಿನ ಇಟಾವ್ ಹಸೇನರೆಂಬ ಜಮೀನ್ದಾರರು ತಮ್ಮ ಒಕ್ಕಲುಗಳಿಗೆ ಪಟ್ಟಿ ೧೫೦೦ರ ಗೇಣಿಯನ್ನು ಮಾಫಿಬಿಟ್ಟಿರುವರು.

ಕಲೆಗಳಿಲ್ಲದೆ ಕಡಿತಗಳನ್ನೂ ಉರಿತವನ್ನೂ ಗುಣಪಡಿಸಿರಿ.

ಸಾಂಬಕ್ ವಿಚಿತ್ರ ಗುಣಕಾರಿ ಔಷಧವು.

ಘಳ್ಳನೆ ಆಗುವ ಕಡಿತ, ಉರಿತ ಇತ್ಯಾದಿಗಳಿಗೆ ಸಾಂಬಕ್ಕನ್ನು ಉಪಯೋಗಿಸಿದರೆ, ನಂತರ ದುಷ್ಪರಿಣಾಮಗಳೇ ಉಂಟಾಗಲಾರದು. ಅದರಲ್ಲಿರುವ ವನಸ್ಪತಿ ತೈಲಗಳು ಚರ್ಮದ ಒಳಗೆ ಸೇರಿ, ನೋವು, ಉರಿತ ಇತ್ಯಾದಿಗಳನ್ನು ನಿವಾರಿಸುತ್ತದೆ, ಕೆಂಪು ವರ್ಣಗಳನ್ನು ಮಾಸಗೊಳಿಸುತ್ತದೆ, ಅವುಗಳಿಂದ ಹೊರಡುವ ದ್ರಾವಕವನ್ನು ಒಣಗಿಸುತ್ತದೆ, ಸಾಂಬಕ್ ರೋಗಾಣುಗಳನ್ನು ನಾಶಪಡಿಸಿ, ಅತ್ಯಂತ ಶೀಘ್ರವೇ ಕಲೆಗಳನ್ನು ಬಿಡದೆ ಗುಣಪಡಿಸುತ್ತದೆ. ಸಾಂಬಕ್ಕು ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ರೂ. 1 ಮತ್ತು ರೂಪಾಯಿ 2-4-0ರಂತೆ ಮಾರಲ್ಪಡುತ್ತದೆ.

ಏಜಂಟರು—ಮೆಸರ್ಸ್ ರಾಧಾ ಎಂಡ್ ಕಂಪೆನಿ,
ಪಿ. ಟಿ. ಮದರಾಸು.

ಸಾಂಬಕ್ಕು ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ.

ಸಾಂಬಕ್

ಸ್ವದೇಶಾಭಿಮಾನಿ

[illegible] ಶುಕ್ರವಾರ ದಶಂಬರ ೧೯೩೭

ಯಾರಿಗಾಗಿ?

ಲಂಡನಿನಲ್ಲಿ ಸಾಮ್ರಾಜ್ಯಾಭ್ಯುದಯ ಸಾಧಕ ಸಂಘವೊಂದಿದೆ. ಇಲ್ಲಿ, ನಮ್ಮ ಇಂಡಿಯಾ ಸರಕಾರದಲ್ಲಿ ಅಧಿಕಾರ ನೋಡುತ್ತಿದ್ದ ನೊಯ್ಸ್ ಸಾಹೆಬರು ಭಾಷಣ ಮಾಡುತ್ತ— ಇಂಡಿಯಾ ದೇಶಕ್ಕೆ ಬಟ್ಟೆ, ಆಹಾರ, ಯಂತ್ರಾದಿಗಳು, ಕೈಗಾರಿಕೆಯ ಉತ್ಪನ್ನಗಳು ಮೊದಲಾದುವು ಇಡೀ ಸಾಮ್ರಾಜ್ಯದಲ್ಲಿ ಅತ್ಯಧಿಕವಾಗಿ ಬೇಕಾಗಿವೆ. ಇಂಡಿಯದ ಜನಗಳ ಜೀವನವು ಇನ್ನಷ್ಟು ಸುಖ ಹೊಂದಿ ಸುಧಾರಣೆ ಪಡೆವಂತೆ ಮಾಡುವುದು ಅಗತ್ಯವಾಗಿದೆ; ಎಂದು ಉಪದೇಶಿಸಿದರು.

ಕೈಗಾರಿಕೆಗಳ ಉತ್ಪನ್ನಗಳನ್ನು ತುಂಬ ಹರಡಿಸಿದರೆ, ಅವುಗಳ ಉಪಯೋಗದಿಂದಲೇ ಜೀವನದ ಸುಖ ಹೆಚ್ಚುವುದು ಅಗತ್ಯ ಎಂದು ಮೊದಲಾಗಿ ಸಾರುವುದು ಅರ್ಥಶಾಸ್ತ್ರಜ್ಞರ ಒಂದು ಬಹುಕಾಲದ ಭ್ರಮೆ. ಯಂತ್ರಗಳು ಹುಟ್ಟಿಸುವುದನ್ನು ವ್ಯಯಿಸುವವರಿಲ್ಲದಲ್ಲಿ ಯಂತ್ರಗಳನ್ನು ಇಟ್ಟುಕೊಂಡು ಮಹಾಶ್ರೀಮಂತರಾಗುವವರು ಹಾಳಾಗುವರು. ಜೀವನದ ಸುಖ ಹೆಚ್ಚುವಂತೆ ಇವನ್ನೆಲ್ಲ ಉಪಯೋಗಿಸಿರೆಂದು ಬೋಧಿಸದಲ್ಲದೆ, ಈ ಉತ್ಪನ್ನಗಳಿಗೆ ಗತಿಯಿಲ್ಲದಾಗುವುದು. ಹೀಗಾಗಿ ಸುಖ ಮತ್ತು ಯಂತ್ರೋತ್ಪನ್ನಗಳು ಇವೆರಡನ್ನು ಒಂದೇ ಕಾಸಿನಲ್ಲಿ [illegible], ಆದರೆ ಇವುಗಳಲ್ಲಿ,- ಮೊದಲಾವುದು, ಕಡೆತರದ್ದಾವುದು ಎಂದು ನಿಶ್ಚಯವಾಗಿ ಹೇಳಬರುವಂತಿಲ್ಲ.

ಸುಖವಾಗಿರುವಾತನು ಯಂತ್ರೋತ್ಪನ್ನ ವಿಲಾಸಗಳ ಕಡೆಗೆ ಗಮನ ಕೊಡುವನೋ, ಅಥವಾ ಇವುಗಳು ದೊರೆತರೆ ಮಾತ್ರ ಅವನಿಗೆ ಸುಖವುಂಟಾಗುವುದೇ? ಹೀಗಿರುವುದರಿಂದ ಉತ್ಪನ್ನಗಳನ್ನು ಹೆಚ್ಚಿಸುವ ಹಾಗೆ, ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿಕೊಟ್ಟಲ್ಲಿ, ಅವರು ದುಡಿಯುವುದರಿಂದ, ಸ್ವಲ್ಪ ಹಣವನ್ನು ಹೆಚ್ಚಿನ ಸುಖ ಅನುಭವಿಸುವ ಒಡವೆಗಳಿಗಾಗಿ ವ್ಯಯಿಸುವರು ಎಂದು ಹೇಳಲಹುದು. ಆದುದರಿಂದ, ಮೊದಲಾಗಿ ಉದ್ಯೋಗ ಸಂಪನ್ನತೆಯು ಜನಾಂಗದಲ್ಲಿ ಹೆಚ್ಚುವಂತೆ ಮಾಡುವುದು ಮೊದಲನೆಯ ಕರ್ತವ್ಯವಾಗಿದೆ ಎನ್ನಬೇಕು.

ಉದಾಹರಣೆಗಾಗಿ ಈಗ ಜರ್ಮನಿಯಲ್ಲಿ ಸರ್ಕಾರವು ಏನು ಮಾಡುತ್ತಿದೆ? (ಹಾಗೆಯೆ [illegible] ಇಟೆಲಿಗಳಲ್ಲಿ ಸಹ) ಮೊದಲು [illegible] ಯಗಳಲ್ಲಿ ಹಣ ವ್ಯಯಿಸು[illegible] ಮಾಡುತ್ತಾರೆ. ಹಾಗೆಂದು [illegible] ಅತ್ಯಾವಶ್ಯಕವಾಗಿಲ್ಲ.

[illegible] ಕೈಗಾರಿಕೆಗಳು [illegible] [illegible] ಹೀಗೆ ದೊರೆಯಿತು. [illegible] ಎಷ್ಟು ಮಂದಿ ನಿರುದ್ಯೋಗಿಗಳಿಗೆ ಜೀವನೋಪಾಯ ದೊರೆಯಿತು. ದೇಶವು ಎಷ್ಟು ಸುಂದರವೂ ಸೌಕರ್ಯಯುಕ್ತವೂ ಆಯಿತು, ಇದರಿಂದ ಆದ ಮತ್ತೊಂದು ಪ್ರಯೋಜನವೆಂದರೆ, ಎಲ್ಲ ರೈಲು ಗಾಡಿಗಳಲ್ಲಿ ತುಂಬ ಸರಕುಗಳು ಗ್ರಾಮಗಳಿಂದಲೂ ಒಂದು ರಾಶಿಯಾದುವು. ಹೆದ್ದಾರಿ ರಚಿಸುವಾಗ, ಸಿಮೆಂಟು, ಇಟ್ಟಿಗೆ, ತಾರು, ಮತ್ತೆಷ್ಟೋ ಬಗೆಯ ಸಾಮಾನುಗಳ ವ್ಯಾಪಾರವೂ ಹೆಚ್ಚಿತು. ಸಾವಿರಾರು ಜನರ ಕೈಯಲ್ಲಿ ಖರ್ಚಿಗೆ ತಕ್ಕ ಕಾಸೂ ದೊರೆಯಿತು. ಹೀಗೆ, ಕೈಗಾರಿಕೆಗಳ ಅಭಿವೃದ್ಧಿಯಿಂದ ಎಷ್ಟೋ ಜನರ ಸಂಪತ್ತೂ ಹೆಚ್ಚುವಂತೆ ನಿರುದ್ಯೋಗವು ಮಾಯವಾಗುವಂತೆ ಅನುಕೂಲವಾಯಿತು. ಖರ್ಚಿಗೆ ಹಣ ದೊರೆತ ನಂತರ ಜೀವನ ಸುಖಕ್ಕೆ ಬೇಕಾಗುವ ಒಡವೆಗಳನ್ನು ಆ ಜನರು ತಾವಾಗಿ ಕೊಂಡುಕೊಳ್ಳುವರೆನ್ನಬೇಕು.

ಈಗ ನೊಯ್ಸ್ ಸಾಹೆಬರ ಗುಟ್ಟು ಮತ್ತೊಂದು ಬಗೆಯದು. ಇಂಡಿಯದ ಜನರ ಜೀವನ ಸುಖ ಹೆಚ್ಚುವಂತೆ, ಕೈಗಾರಿಕೆಗಳ ಉತ್ಪನ್ನಗಳು ಹೆಚ್ಚುವ ಅಗತ್ಯವಿದೆ ಎಂಬುದು ನಿಜ. ಆದರೆ ಎಲ್ಲಿ? ಕೈಗಾರಿಕೆಗಳ ಉತ್ಪನ್ನಗಳು ಹೆಚ್ಚುವಂತಾಗಬೇಕಾದುದು ಯಾರಿಗಾಗಿ? ಎಂಬ ಪ್ರಶ್ನೆಯನ್ನು- ಇಂಡಿಯವು [illegible] ದೇಶ, ಇಂಗ್ಲೆಂಡು ಅಥವಾ ಬ್ರಿಟಿಷ ಸಾಮ್ರಾಜ್ಯದ ಇತರ ಅಂಗ ಸಂಸ್ಥೆಗಳು, [illegible] ದೇಶಗಳು ಎಂಬರ್ಥದಲ್ಲಿ ನೊಯ್ಸ್ ಸಾಹೆಬರು ತಿಳಿದುಕೊಂಡೇ ಹೀಗೆ ಹೇಳಿದರು.

ಹಿಂದೀಯರು ಜೀವನ ಸುಖಕ್ಕಾಗಿ ಯಂತ್ರೋತ್ಪನ್ನ ವಸ್ತುಗಳನ್ನು ಧಾರಾಳವಾಗಿ ಉಪಯೋಗಿಸಬೇಕು, ಹಾಗೆ ಹೇಳುವಾಗ, ಹಿಂದೀ ಕೈಗಾರಿಕೆಗಳು ಅಭಿವೃದ್ಧಿ ಹೊಂದುವಂತಾಗಬೇಕು ಎಂಬ ಮಾತನ್ನೇ ಸಾಹೆಬರು ಎತ್ತಲಿಲ್ಲ. ಬ್ರಿಟನ್ನಿನ ಯಂತ್ರೋತ್ಪನ್ನ ಸಾಮಗ್ರಿಗಳನ್ನು ಹಿಂದೀಯರು ಅಧಿಕವಾಗಿ ಕೊಂಡುಕೊಳ್ಳಬೇಕೆಂದು. ಬ್ರಿಟಿಷರು ಅಥವಾ [illegible] ಇಂಡಿಯದ ಕಚ್ಚಾ ಸಾಮಾನನ್ನು ಬ್ರಿಟಿಷರು ಹೆಚ್ಚಾಗಿ ಕೊಂಡುಕೊಂಡು. ಬ್ರಿಟಿಷ ಕೈಗಾರಿಕೆಗಳಿಗೆ ಉಪಯೋಗಿಸಬೇಕು ಎಂದೇ ಅವರ ಮುಖ್ಯ ಶಿಫಾರಸಾಗಿ ಭಾಷಣದಲ್ಲಿ ಇದೆ. ನಮ್ಮ ಕಚ್ಚಾ ಸಾಮಾನಿನ ಮೇಲೆ ಅವರ ಕಣ್ಣಿದೆ ಹೊರತು, ನಮ್ಮ ಕೈಗಾರಿಕೆಗಳ ಅಭಿವೃದ್ಧಿಯ ಮೇಲೆ ಅವರಿಗೇನೂ ದೃಷ್ಟಿಯಿಲ್ಲ. ಸರಕಾರದಲ್ಲಿ ಸೇರಿದ್ದು ನಮ್ಮನಾಳಿದ್ದ ಈ ಸಾಹೆಬರ ಕಣ್ಣಲ್ಲಿ ಈ ರೀತಿಯ ಪಕ್ಷಪಾತ ಬುದ್ಧಿಯು ಉಂಟಾದುದು ವಿಚಿತ್ರವೋ ಅಲ್ಲವೊ ಹೇಳಬೇಕಾಗಿಲ್ಲ. ನಮ್ಮ ಸ್ವಾಂತಂತ್ರ್ಯ ಅಭ್ಯುದಯಕ್ಕಾಗಿ ಅವರು ಸೂಚಿಸುವ ಒಂದೇ ಉಪಾಯವು ನಮ್ಮ ಕಚ್ಚಾ ಸರಕನ್ನು ಬಹಳವಾಗಿ ಬ್ರಿಟಿಷರು ಕೊಂಡುಕೊಳ್ಳಬೇಕೆಂದು. ಎಂದರೆ, ನಮ್ಮಲ್ಲೀಗ ಇರುವ ಕಾಸುಗಳು ಇತರ ದೇಶಗಳಲ್ಲಿ ಯಂತ್ರೋತ್ಪನ್ನ ಒಡವೆಗಳನ್ನು ತಯಾರಿಸುವವರ ಸುಖಜೀವನಕ್ಕಾಗಿ ವಿನಿಯೋಗವಾಗಬೇಕೆಂದಲ್ಲದೆ, ನಮ್ಮ ಜೀವನದಲ್ಲಿ ಸುಖಹೆಚ್ಚಬೇಕೆಂದೇನೂ ಸಾಹೆಬರ ಅಭಿಪ್ರಾಯದಲ್ಲಿ ಇಲ್ಲ.

ರಾಷ್ಟ್ರೀಯ ಕೈಗಾರಿಕೆಗಳಿಗೆ ರಾಷ್ಟ್ರೀಯರು ನೆರವಾದಾಗ ಮಾತ್ರ, ರಾಷ್ಟ್ರದೊಳಗೆ ಹಣವು ಹೆಚ್ಚಬಹುದು, ಜನರಲ್ಲಿ ಇದರಿಂದ ಜೀವನ ಸುಖಕ್ಕೆ ಬೇಕಾದ ಒಡವೆ ಕೊಳ್ಳಲು, ಆಸ್ಪದವುಂಟಾದೀತು. ಎಷ್ಟು ಕಾಲದ ವರೆಗೆ ಪರ ಯಂತ್ರಗಳ ಚಾಲನೆಗೆ ನಮ್ಮ ದುಡ್ಡು ಸಹಾಯವಾಗಬೇಕಾದೀತೋ, ಅಷ್ಟು ಕಾಲಕ್ಕೆ ನಮ್ಮ ಜೀವನವು ಸುಖಜೀವನಕ್ಕೆ ಬೇಕಾಗಿರುವ ಒಡವೆ ಪಡೆದರೂ, ಆ ಜೀವನದಲ್ಲಿ ಸುಖವಿದ್ದೀತೆ?

[illegible] ಗಳನ್ನು [illegible] ಬೇಕಾದ[illegible] [illegible] ಬೋಧಿಸಲಿರುವರು [illegible] ಗಳಲ್ಲಿ ಜೀವನದ ದುಃಖವನ್ನು ವಿದ್ಯಾಪ್ರಸಾರಕ್ಕಾಗಿಯು ಬಿಟ್ಟು ದಿವಂಗತರಾದರು. ಕಾಶೀ ವಿಶ್ವವಿದ್ಯಾಲಯಕ್ಕೆ, ಕೋಟ್ಯಾಂತರ ರೂಪಾಯಿಗಳು ಬೇಕಾಗಿವೆ. ಇವೆಲ್ಲ ಜ್ಞಾನದಾನಕ್ಕಾಗಿಯೆ ಶಾಶ್ವತವಾಗಿ ಬಿಡಲಾದ ಉಂಬಳಿಗಳು. ಸ್ವಾಮಿ ವಿವೇಕಾನಂದರ ಶಿಷ್ಯ ಪರಂಪರೆಯೂ ಬೇಲೂರು ದೇವಮಂದಿರವನ್ನು ದುರುಸ್ತಿಗೊಳಿಸಬೇಕಾಗಿ, ಧನಸಂಗ್ರಹ ಮಾಡುತ್ತದೆ. ಪರಮಹಂಸನ ಪೂಜ್ಯ ಆತ್ಮಕ್ಕೆ ಯಾವುದು ಪೂಜಾಗ್ರಹವಾಗಿತ್ತೋ ಅದರ ಮಂದಿರಕ್ಕಾಗಿ ಲಂಡನಿನಲ್ಲೂ ಒಂದು ಹಿಂದೂ ದೇವಾಲಯವು ಸ್ಥಾಪನೆ ಹೊಂದಬೇಕೆಂಬ ಆಸೆಯುಂಟಾಗಿ ಸ್ವಾಮಿ ಬೋನಾಂದರ [illegible] ಪ್ರಯತ್ನಗಳಾಗುತ್ತವೆ. ಇವೆಲ್ಲವೂ ಜ್ಞಾನ ದಾನಕ್ಕಾಗಿಯೇ. ಹೀಗೆ ದೇವಾಲಯಗಳು, ವಿದ್ಯಾಲಯಗಳೂ ಜ್ಞಾನದಾನಕ್ಕಾಗಿ ಶಾಶ್ವತವಾದ ಉಂಬಳಿ ಪಡೆವಂತಾಗುವುದು ನಮ್ಮಲ್ಲಿ ಮಾತ್ರವೇ ಅಲ್ಲದೆ, ಲೋರ್ಡ ನಫೀಲ್ಡ, ಲೋರ್ಡ ಶೆಲ್ಲಿಂಗ್, ಮೊದಲಾದ ನಾನಾ ಕೋಟ್ಯಾಧೀಶರ ಉದಾರ ಬುದ್ಧಿಯಿಂದಲೂ ಪ್ರಕಟವಾಗುತ್ತಬರುತ್ತದೆ. ಇವರು ವಿದ್ಯಾದಾನಕ್ಕಾಗಿ ಸಮಸ್ತ ಲಾಭಾಂಶಗಳನ್ನು ವ್ಯಯಿಸುತ್ತಾರೆ. ನಮ್ಮವರಲ್ಲಿನ ಕೆನರಾ ಹೈಸ್ಕೂಲಿನಲ್ಲಿ ಮಹಾತ್ಮಾಜಿಯವರ ಅಮೃತ ಹಸ್ತದಿಂದ ಕೃಷ್ಣಮಂದಿರ ವೊಂದಾಗಲೆಂದು ಬುನಾದಿ ಕಲ್ಲಿನ [illegible] ಲಾಗಿತ್ತು. ಅಂದಿನಾದ ನವರಾರು ಬಾಲಕರೂ ಬಾಲಿಕೆಯರೂ ಶಾಶ್ವತವಾಗಿ, ಬಾಲವಿನೋದಿಯಾದ ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಲೀಲೆಯಿಂದ ವಿದ್ಯಾಸಂಪಾದನೆ ಮಾಡಲು, ಕೃಷ್ಣ (ವಿದ್ಯಾ) ಮಂದಿರವು ಆಯಿತು. ಇಲ್ಲಿನ ವಿವೇಕಾನಂದ ಸಮಿತಿಯ ಪ್ರಯತ್ನಗಳಿಂದ ಇಟ್ಟೆಯಿದ್ದವರು ಜ್ಞಾನವನ್ನು ಭಕ್ತಿಯನ್ನು ಕರ್ಮವರ್ಗದಲ್ಲಿ ಅತ್ಯಾವಶ್ಯಕವಾದುದನ್ನು ಸಂಗ್ರಹಿಸುವ [illegible] ಪ್ರತಿವಾರದಲ್ಲೂ ಭಾಷಣ ಚರ್ಚೆಗಳ ನಡೆಯುತ್ತಿವೆ. ಸಮಸ್ತ ಪ್ರಾಥಮಿಕ ತರಗತಿಗಳ ಸ್ವಕೀಯ ಧರ್ಮಾರ್ಥವಾಗಿ ಶಿಕ್ಷಣ ಸಿಗುವ ಹಾಗೆ ಮೂಲಧನದ ಸಂಗ್ರಹವಾಗುತ್ತದೆ. ಇದನ್ನು ಕಂಡರೆ, ದೇವಾಲಯ ಮತ್ತು ವಿದ್ಯಾಲಯಗಳೆರಡೂ ಬಗೆಯ ಜ್ಞಾನದಾನ ಮಾಡುವ ಸಂಸ್ಥೆಗಳು ಇಲ್ಲಿ ಒಂದೇ ಕಡೆ ಇದ್ದು, ವಿವೇಕಿಗಳಾದ ಉದಾರಿಸಹೃದಯರು ಅಗತ್ಯವಾಗಿಯೂ ಶಾಶ್ವತ ಉಂಬಳಿ ಬಿಡುವರೆ ಅತ್ಯನುಕೂಲವಾದ ಸಂದರ್ಭವಿಲ್ಲೀ ಇದೆ ಎಂದು ತಿಳಿದು ಬಾರದೆ? ಕೆನರಾ ಹೈಸ್ಕೂಲಿನಿಂದ ಧರ್ಮಾರ್ಥ ಶಿಕ್ಷಣ ಪಡೆದವರು, ಈಗ ಅನುಕೂಲತೆ ಇದ್ದವರೂ, ದೇವರು ಹಾಗೆ ಆಶೀರ್ವದಿಸಿರುವಲ್ಲಿ, ತಾವು ಶಾಲೆಗೆ ಉಂಟುಮಾಡಿದ ಖರ್ಚಿನ ಒಂದಂಶವನ್ನಾದರೂ ಹಿಂದೆ ದಾನವಾಗಿ ಕೊಟ್ಟಲ್ಲಿ, ಮುಂದಣ ಬಾಲಕರಿಗೆ ಇವರಿಗೆ ದೊರೆತ ಶಿಕ್ಷಣವೂ ಸಿಗಲು ಅನುಕೂಲವಾಗಿ ಸಿಗುವುದಲ್ಲವೆ? ಜ್ಞಾನದಾನಕ್ಕೆ ಜಾತಿಭೇದವಿಲ್ಲವೆಂಬುದನ್ನು, ಗೌಡ ಸಾರಸ್ವತರಿಗೇ ಕಡಿಮೆಯಾಗಿ ಇತರರಿಲ್ಲ ಸಮಾಜಗಳಿಗೆ ಅಧಿಕವಾಗಿ ಕೆನರಾ ಹೈಸ್ಕೂಲಿನಿಂದ ಪ್ರತಿವರ್ಷ ಹಂಚಲಾಗುವ ವಿದ್ಯಾರ್ಥಿವೇತನಗಳನ್ನು ನೋಡಿದರೆ ತಿಳಿದುಬರುವುದು. ಹಾಗೆಯೆ, ಫ್ರೀಯಾಗಿ ಕಲಿತ ಇತರ ಸಮಾಜಗಳ ವಿದ್ಯಾರ್ಥಿಗಳೂ ಸಹ ಮುಕ್ತಹಸ್ತವಾಗಿ, ಮುಂದಣ ವಿದ್ಯಾರ್ಥಿಗಳೂ ಫ್ರೀಯಾಗಿ ಕಲಿಯಲಾಗುವಂತೆ, ಅಗತ್ಯ ಸಹಾಯ ಮಾಡುವುದೂ ನ್ಯಾಯವೇ ಎಂಬುದನ್ನು ಮರೆಯಬಾರದು.

[illegible]

ದಿವಂಗತ ಸರ್ [illegible], [illegible] ಸರವರು, ಕಾಂಗ್ರೆಸ್ಸಿನ ಕಾರ್ಯಾಧ್ಯಕ್ಷ ಶ್ರೀ ರಾಜೇಂದ್ರ ಪ್ರಸಾದರೊಡನೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಮಾಡಿರುವರಂತೆ. ಇವರು ಒಟ್ಟು ೩೭ ಲಕ್ಷ ರೂ.ಗಳ ದಾನ ಮಾಡಿರುವರೆಂದು ತಿಳಿದುಬರುತ್ತದೆ.

ಬೆನಾರಿಸ್ ವಿಶ್ವವಿದ್ಯಾನಿಲಯಕ್ಕೆ ೧೦ ಕೋಟಿ ರೂಪಾಯಿಗಳು ಬೇಕಾಗಿರುವುದೆಂದು ಪಂಡಿತ ಮಾಲವೀಯರ ಪ್ರಕಟಣೆಯಾಗಿರುವುದು.

ಮದ್ರಾಸು ಸರಕಾರದವರು ಖಾದಿ ಪ್ರಚಾರದ ಬಗ್ಗೆ ವಿಂಗಡಿಸಿಟ್ಟ ಎರಡು ಕೋಟಿ ರೂಪಾಯಿಗಳನ್ನು ಅಖಿಲ ಭಾರತ ರಾಟೆ ಸಂಘದ ಮೂಲಕ ವಿನಿಯೋಗಿಸಬೇಕಾಗಿ ನಿರ್ಧಾರವಾಗಿರುತ್ತದೆ.

ಜನವರಿ ತಾ. ೨೭ನೇ ದಿನ ಬೆಳಗಾವಿಯಲ್ಲಿ ನಡೆಯಲಿರುವ [illegible] ಪ್ರದರ್ಶನವು ಮುಂಬಯಿ ಗವರ್ನರರಿಂದ ತೆರೆಯೋಣಾಗುವುದೆಂದು ವದಂತಿ ಇದೆ.

ಬೆಳಗಾವಿ ಜಿಲ್ಲಾ ಬೋರ್ಡು ಶಾಲೆಗಳಲ್ಲೆಲ್ಲಾ ಖಾದಿಯನ್ನೆ ಉಪಯೋಗಿಸಬೇಕಾಗಿ ಜಿಲ್ಲಾ ಬೋರ್ಡಿನವರ ಠರಾವಾಗಿದೆ.

ಮಹಾತ್ಮಾಜೀಯವರು ಆರೋಗ್ಯಕ್ಕಾಗಿ ಸಮುದ್ರದ ಕರಾವಳಿಗೆ ಹೋಗಬೇಕಾಗಿ ಬಂದುದರಿಂದ ಅವರೀಗ ಮುಂಬಯಿಗೆ ಬಂದಿರುವರು.

[illegible] ದಲ್ಲಿ [illegible] ಗಳೆಲ್ಲ [illegible] ತಲೆದೋರಿರುವುದು.

[illegible] ಲೀಡಿ [illegible] ಒಂದು ನಿಧಿಯನ್ನು [illegible] ಹಾಕಿರುವರು. ಈ ನಿಧಿಗೆ ಬ್ರಿಟಿಷ ಚಕ್ರವರ್ತಿಯವರು ಒಂದು ಸಾವಿರ ಪೌಂಡುಗಳನ್ನು ಕೊಟ್ಟಿರುವರು. ಅಲ್ಲದೆ ಹಿಂದುಸ್ಥಾನದ ಅನೇಕ ಪ್ರತಿಷ್ಠಿತ ರಾಜ್ಯಗಳ ಸಂಸ್ಥಾನಾಧಿಪತಿಗಳೂ, ಇತರ ಧನಾಢ್ಯ ವ್ಯಕ್ತಿಗಳೂ ಇದಕ್ಕೆ ಉದಾರ ದಾನಕೊಟ್ಟಿರುವರು.

ಸಂಯುಕ್ತ ಪ್ರಾಂತ್ಯದ ಸರಕಾರವು ಈ ತಿಂಗಳ ತಾ. [illegible] ಕೈದಿಗಳನ್ನು ಬಿಡುಗಡೆಗೊಳಿಸುವುದಂತೆ.

ಉತ್ತರ ಅಮೇರಿಕದ ಕೆಲಿಫೋರ್ನಿಯದ [illegible] ಒಂದು ಪರ್ವತದ ಮೇಲೆ ಅತಿ ಪ್ರಾಚೀನವಾದ ಒಂದು ಶಿವಾಲಯವು ದೊರೆತಿರುವುದೆಂದು ವಾರ್ತೆ ಬಂದಿದೆ. ಇದರಿಂದ ಅತಿ ಪ್ರಾಚೀನ ಕಾಲದಲ್ಲಿ ಅಲ್ಲಿ ಹಿಂದು ಸಂಸ್ಕೃತಿಯು ಪ್ರಚಾರವಾಗಿಂಬಹುದೆಂದು ಸ್ಪಷ್ಟವಾಗುತ್ತದೆ.

ಇನ್ನೊಂದು ಮಹಾಯುದ್ಧದ ಸಂಭವದಲ್ಲಿ ಶಸ್ತ್ರಗಳ ಮೇಲೆ ಬಾಂಬಿನ ದಾಳಿ ನಡೆಯುವ ಸಂಭವಗಳಿವೆಯೆಂದೂ, ಆ ಅಗ್ನಿವೃಷ್ಟಿಯನ್ನು ತಡೆಯಲು ಸೈನ್ಯಾಧಿಕಾರಿಗಳೊಡನೆ ಪ್ರಜೆಗಳು ಸಹಕರಿಸಬೇಕೆಂದೂ, ಅಲ್ಲಿನ ಗವರ್ನರರ ಬೋಧನೆಯಾಗಿರುತ್ತದೆ. ಜಪಾನೀಯರ ಸಾಮ್ರಾಜ್ಯಕಾಂಕ್ಷೆಯನ್ನೂ ಅದರ ಇತ್ತೀಚಿನ ಚಟುವಟಿಕೆಗಳನ್ನೂ ನೋಡಿದರೆ, ಹಿಂದೂದೇಶದ ಮೇಲೆ ಜಪಾನೀಯರ ಆಕ್ರಮ ನಡೆಯುವುದು ಅಸಂಭವನೀಯವಲ್ಲ.

ಜಗದ್ವಿಖ್ಯಾತ ಜಟ್ಟಿಯಾದ ಗಾಮಾರವರು ಮುಂಬಾಯಿಗೆ ಬಂದಿರುವ ಪಾಶ್ಚಾತ್ಯ ಜಟ್ಟಿಗಳಿಗೆ, ಅವರು ಮೊದಲು ತಮ್ಮ ಶಿಷ್ಯರೊಡನೆ ಕುಸ್ತಿಯಾಡಬೇಕು, ನಂತರ ತಾನವರೊಡನೆ ಕುಸ್ತಿಗೆ ನಿಲ್ಲುವೆನೆಂದು, ಚಾಲೆಂಜ್ ಕೊಟ್ಟಿರುವರು. ಈ ಕುಸ್ತಿ ಪಂದ್ಯಾಟವು ಸಾಧಾರಣ ೩ ತಾಸುಗಳ ಸಮಯ ನಡೆಯಬಹುದು. [illegible] ಯಾದವನು, ಪಂಥದ ಎಲ್ಲಾ ಹಣವನ್ನು ಪಡೆಯಲು ಅರ್ಹನಂತೆ.

[illegible]ರಿಗೆ ಯುರೋಪಿಯರ [illegible]ತ್ಕಾರ!

[illegible]ಪಾನು ಸಂಧಾನವಾಗುವುದಿಲ್ಲ, ಮದ್ರಾಸು ಅಸೆಂಬ್ಲಿಯ ಅಧಿವೇಶನ, ಐರೋಪ್ಯದಲ್ಲಿ ಶಾಂತಿ ಸ್ಥಾಪನೆಯಾಗುವುದೆ? ಶಾಂಗಾಯಿಯಲ್ಲೇನು?

[illegible] ಮಾತುಕತೆಗಳು.

ಆಂಗ್ಲೇಯ—ಜರ್ಮನ್ ಸಂಬಂಧದ [illegible] ಅನೇಕ ಮಹತ್ವದ ವಿಚಾರಗಳು ಈ ಮಾತುಕತೆಯಲ್ಲಿ ಚರ್ಚಿಸಲ್ಪಟ್ಟವೆ. ಜರ್ಮನಿಗೆ ವಸಾಹತುಗಳು ಹಿಂದೆ ಕೊಡಲಾಗಬೇಕು, [illegible] ಆಸ್ಟ್ರಿಯಾದಲ್ಲಿ ಮತ್ತು ಜೆಕೊಸ್ಲೊವಾಕಿಯಾದಲ್ಲಿ ತನ್ನ ಪ್ರೇರಣೆಗೆ ಅಡ್ಡಿ ಬರಬಾರದು, ಇವುಗಳು ಹಿಟ್ಲರನ ಕೋರಿಕೆಗಳು. ಹೇಗಾದರೂ ಮಾಡಿ, ಮಧ್ಯ ಐರೋಪ್ಯದಲ್ಲಿ ಶಾಂತಿರಕ್ಷಣೆ ಮಾಡುವುದು ಬ್ರಿಟನಿನ ಉದ್ದೇಶವಾಗಿದ್ದರೂ, ಅದು ಜರ್ಮನಿಗೆ ವಸಾಹತುಗಳನ್ನು ಹಿಂದಕ್ಕೊಪ್ಪಿಸಲು ಸಿದ್ಧವಿಲ್ಲ. ಬದಲಾಗಿ, ಅದು ವಸಾಹತುಗಳನ್ನು ಸ್ಥಾಪಿಸುವರೆ ಜರ್ಮನಿಗೆ ನವೀನ ಪ್ರದೇಶಗಳನ್ನು ಕೊಡುವುದಂತೆ. ಹೀಗೆ ಜನಾಂಗಗಳೊಳಗೆ ಪರಸ್ಪರ ಮಾತುಕತೆಗಳು ನಡೆಯುತ್ತಿದ್ದು, ಎಲ್ಲರಿಗೂ ಸಮಾಧಾನ ಉಂಟಾಗುವುದಾದರೆ, ಶಾಂತಿರಕ್ಷಣೆಯ ಕುರಿತು, ಒಂದು ಒಪ್ಪಂದವನ್ನು ಮಾಡಿಕೊಳ್ಳಲು ಐರೋಪ್ಯದ ಎಲ್ಲಾ ಪ್ರಭುತ್ವದ ಜನಾಂಗಗಳು ಒಂದು ಪರಿಷತ್ತಿನಲ್ಲಿ ಸೇರಬಹುದು.

ಬ್ರಿಟನಿಗೆ ಸಂಪೂರ್ಣ ಸಿದ್ಧವಾಗಲು ಇನ್ನೂ ಸಮಯ ಬೇಕಾಗಿದೆ. ಅಷ್ಟರ ತನಕ, ಅವು ಮೇಲಿನ ಉಪಾಯಗಳನ್ನು ನಡೆಸುವುದೆಂದೂ, ಎಲ್ಲವೂ ಸಿದ್ಧವಾದ ನಂತರ, ಅದು ತನ್ನ ವಿಶ್ವರೂಪವನ್ನು ಜಗತ್ತಿಗೆ ತೋರಿಸಲಿದೆಯೆಂದೂ, ಕೆಲವರ ಭವಿಷ್ಯವಾಣಿ. ಪೌರ್ವಾತ್ಯದ ಸಿಂಗಾಪುರದಲ್ಲಿ ಬ್ರಿಟನಿನ ಮಹಾ ಪೆಟ್ಟಿದ ಬಾರಿ ಸಿದ್ಧತೆಗಳಾಗಿವೆ ಎಂದೂ ಇನ್ನು ಸ್ವಲ್ಪ ಸಮಯದಲ್ಲಿ ಸಿಂಗಾಪುರದ ದೆಸೆಯಿಂದ ಪೌರ್ವಾತ್ಯದಲ್ಲಿ ಬ್ರಿಟನಿನ ಸ್ಥಾನವು ಅತ್ಯಂತ ದೃಢವಾಗುವುದೆಂದು ವಾರ್ತೆಯಿದೆ

ಚೀನಾಕ್ಕೆ ಮುಸಲಿನಿಯ ಬೋಧನೆ.

ಚೀನಾದೇಶವು ಇತರ ಜನಾಂಗಗಳ ಸಹಕಾರವನ್ನಂಬಿ ಯುದ್ಧವನ್ನು ಮುಂದುವರಿಸುತ್ತಿದ್ದು, ಪ್ರಾಣತ್ಯಾಗವಾಗಿ ಪರಿಣಮಿಸುವುದೆಂದೂ, ಆದ್ದರಿಂದ ಈಗಲೆ ಚೀಣವು ಸಂಧಿ ಪ್ರಯತ್ನ ಮಾಡುವುದರಲ್ಲಿ ಉತ್ತಮವಿದೆ ಎಂದು ಚೀನಿಯರಿಗೆ ಮುಸಲಿನಿಯ ಬೋಧನೆ. ಆತನ ಪತ್ರಿಕೆಯ ಮೂಲಕ.

ಜಪಾನಿನ ಬಲವು ಕುಂದಬಾರದು.

ಚೀನಾ–ಜಪಾನ್ ಸಂಧಾನದ ಕುರಿತು ಜರ್ಮನಿಯ ಹಿಟ್ಲರನು ಮಧ್ಯಸ್ಥಿಕೆಯನ್ನು ವಹಿಸಿ, ಸಂಧಿ ಪ್ರಯತ್ನ ನಡೆಯಿಸಿದನೆಂದು ತಿಳಿದು ಬರುತ್ತದೆ. ಚೀನಾ ದೇಶವನ್ನು ಸಂಪೂರ್ಣ ಜಯಿಸುವುದರೊಳಗೆ, ಜಪಾನಿನ ಶಕ್ತಿ ಎಲ್ಲಾ ಕುಂದಿ ಹೋಗಿ ಅವರು ಸೋವಿಯಟ್ ರಷ್ಯದ ಬಾಯಿಗೆ ತುತ್ತಾಗದಂತೆ ನೋಡುವುದೇ ಹಿಟ್ಲರನ ಈ ಮಧ್ಯಸ್ಥಿಕೆಯ ಉದ್ದೇಶವಾಗಿತ್ತದೆ.

ಆದರೆ ಇತ್ತೀಚೆಗಿನ ಆಂಗ್ಲೋ–ಜರ್ಮನ್ ಮಾತುಕತೆಗಳಿಂದ, ಜಪಾನಿಗೆ ಹಿಟ್ಲರನಲ್ಲಿರುವ ವಿಶ್ವಾಸವೆಲ್ಲವೂ ಕಳೆದುಹೋಗಿರುವುದರಿಂದ, ಅವರು ಹಿಟ್ಲರನ ಮಾತುಗಳಿಗೆ ಮನ್ನಣೆಯನ್ನು ಕೊಡಲಿಲ್ಲ. ಯುದ್ಧವು ಕೊನೆಯ ತನಕ ನಡೆಯಬೇಕೆಂದು, ಜಪಾನಿನ ಸಂಗ್ರಾಮ ವರ್ಗದ ದೃಢಸಂಕಲ್ಪವಾಗಿರುತ್ತದೆ. ಸಂಧಾನದ ಬಗ್ಗೆ ನಡೆದ ಚೀನಾದೇಶದ ಜಮನ್ [illegible] ಪ್ರಯತ್ನಗಳು ಯುಕ್ತಿಗಳು ನಿಷ್ಫಲವಾಗಿವೆ.

ಬಂಗಾಳದ ವಿವಿಧ ರಾಜಕೀಯ ಪಕ್ಷಗಳು, ಒಂದು ಭೋಜನ ಸಭೆಯಲ್ಲಿ ಸೇರಿ, ಹಿಂದೂ-ಮುಸ್ಲಿಮ ಐಕ್ಯದ ಕುರಿತು ಆಲೋಚಿಸಿದರು. ಪ್ರಧಾನಮಂತ್ರಿ ಹಕ್ಕರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಚೀನಾ-ಜಪಾನ್ ಸಂಧಾನವಾಗುವುದಿಲ್ಲ.

ಜರ್ಮನಿಯ ಮಾಧ್ಯಮದಿಂದ ಉಂಟಾದ ಸಂಧಾನ ಪ್ರಸ್ತಾಪವು ಈಗ ಬಿದ್ದುಹೋಗಿರುತ್ತದೆ. ಚೀನಾ – ಜಪಾನ್ ಸಂಧಾನವಾಗುವ ಸಂಭವಗಳೂ ಇನ್ನು ಕಡಿಮೆ ಎನ್ನಬಹುದು. ಸಂಧಾನ ಪ್ರಸ್ತಾಪವೆತ್ತಬೇಕಾದರೆ, ಜಪಾನೀಯ ಸೈನ್ಯವರ್ಗವು ಹೊರ ನಡೆಯಬೇಕೆಂದು, ನಾಯಕ ಚಿಯಾಂಗ್-ಕೈ-ಶೇಕರನ ಶರ್ತ.

ಜಪಾನಿಯರ ಬಾಂಬಿನ ವಿಮಾನಗಳು, ನಾಂಕಿಂಗ್ ಹತ್ತಿರ ವಿಶೇಷ ತರದ ದಾಳಿ ನಡೆಯಿಸಿದರು. ರಾಜಧಾನಿ ನಾಂಕಿಂಗ್‌ನಿಂದ ಜಪಾನೀಯರು ಬರೆ ೩೩ ಮೈಲು ದೂರವಿದ್ದಾರೆ. ಸದ್ಯದಲ್ಲೆ ಈ ರಾಜಧಾನಿಯು ಅವರ ಕೈಸೇರಬಹುದಂತೆ.

ನಂತರ ಜಪಾನಿಯರು ಉತ್ತರ ಚೀನದ ಆಡಳಿತದ ಬಗ್ಗೆ ಸರಕಾರ ಕೇಂದ್ರವನ್ನು ನಾಂಕಿಂಗ್‌ನಲ್ಲಿ ಸ್ಥಾಪಿಸುವರಂತೆ.

ಬೆಳ್ಳಾರಿಯಲ್ಲಿ ಕ್ಷಾಮ.

ಸರಿಯಾದ ಮಳೆಬಾರದೆ ಬೆಳ್ಳಾರಿಯ ಕೆಲವೆಡೆಗಳಲ್ಲಿ ಬೆಳೆಯು ನಾಶವಾಗಿ ಕ್ಷಾಮಕ್ಕೆ ಅವಕಾಶ ದೊರಕಿರುವುದೆಂದು, ತಿಳಿದು ಬರುತ್ತದೆ. ಕಾಂಗ್ರೆಸ್ ಮಂತ್ರಿಮಂಡಳದ ಮಾನ್ಯ ಶ್ರೀ ಪ್ರಕಾಶಂನವರು ಆ ಪ್ರದೇಶಗಳ ಪ್ರವಾಸಗೈದು, ಕ್ಷಾಮಪೀಡಿತರಿಗೆ ಉಪಶಮನ ದೊರಕಿಸುವರೆ ಏರ್ಪಾಡು ಮಾಡಿರುವರು.

ಜಪಾನಿಯರು ಶಾಂಗಾಯಿಯಲ್ಲಿ ಬ್ರಿಟಿಷ್ ಹಡಗವೊಂದಕ್ಕೆ ಗುಂಡಿಕ್ಕಿದರಾಗಿ ವಾರ್ತೆ ಬಂದಿದೆ.

ಮದ್ರಾಸು ಎಸೆಂಬ್ಲಿಯ ಅಧಿವೇಶನ.

ಸಾಗುವಳಿಗಾರರ ಸಾಲ ನಿವಾರಣಾ ಬಿಲಿನ ಕುರಿತು ಆಲೋಚಿಸುವರೆ ಮದ್ರಾಸು ಅಸೆಂಬ್ಲಿ ಅಧಿವೇಶನವು ಇದೆ ತಾ. ೨೦ರಲ್ಲಿ ಪ್ರಾರಂಭವಾಗಿ, ಆ ಬಿಲಿನ ಕುರಿತು ಒಂದು ಜೊಯಿಂಟ್ ಸಿಲೆಕ್ಟ್ ಕಮಿಟಿಯನ್ನು ನೇಮಿಸುವುದಾಗಿ ತಿಳಿದುಬರುತ್ತದೆ. ಈ ಭಾರಿಯ ಅಧಿವೇಶನವು ಕೆಲವು ದಿವಸಗಳು ನಡೆದು ಕೆಲವು ಪ್ರಾಮುಖ್ಯ ವಿಷಯಗಳನ್ನು ವಿಚಾರಿಸುವುದಂತೆ. ಮೇಲಿನ ಜೊಯಿಂಟ್ ಸಿಲೆಕ್ಟ ಕಮಿಟಿಯು ಜನವರಿ ಮೂರನೆ ವಾರದಲ್ಲಿ ಮತ್ತೊಮ್ಮೆ ಜರಗಲಿರುವ ಅಸೆಂಬ್ಲಿ ಅಧಿವೇಶನದೊಳಗಾಗಿ ತಮ್ಮ ಕಾರ್ಯಗಳನ್ನು ಪೂರೈಸಬೇಕಾಗಿದೆ.

ಸಂಯುಕ್ತ ಪ್ರಾಂತ್ಯದ ಮಜೂರರ ಸಮಸ್ಯೆ.

ಕಾಂಗ್ರೆಸ್ ಸೌಮ್ಯವಾದಿಗಳ ಆಧಾರವು ತಮಗಿರುವುದೆಂಬ ಭಾವನೆಯಿಂದ ಕಾನಪುರದ ಕೊಮ್ಯುನಿಷ್ಟರು, ಮಜೂರರನ್ನು ಅಶಾಂತರನ್ನಾಗಿ ಉದ್ರೇಕಗೊಳಿಸುತ್ತಿದ್ದು, ಮಜೂರರ ಸಮಸ್ಯೆದಿನೇದಿನೇ ಕಠಿನ ರೂಪವನ್ನುಹೊಂದುತ್ತಿರುವುದು. ಅಹಮ್ಮದಾಬಾದಿನ ಮಜೂರರ ಸಮಸ್ಯೆಯನ್ನು ಸುಧಾರಿಸಿದ ಸರದಾರ ಪಟೇಲರನ್ನು ಸಂಯುಕ್ತ ಪ್ರಾಂತ್ಯದ ಪ್ರಧಾನಮಂತ್ರಿಗಳಾದ ಮಾನ್ಯ ಪಂತರವರು, ತಮ್ಮ ಪ್ರಾಂತ್ಯದ ಮಜೂರರ ಸಮಸ್ಯೆಯ ಸುಧಾರಣೆಗಾಗಿ, [illegible] ಕೊಂಡಿದ್ದಾರೆಂದೂ, ಸರದಾರ್ ಪಟೇಲರು ಅತ್ತಕಡೆಗೆ ತೆರಳಿರುವರೆಂದು ತಿಳಿದುಬರುತ್ತದೆ. ರಾಷ್ಟ್ರಪತಿಯರು, ಅಸ್ಸಾಂ ಪ್ರವಾಸವನ್ನು ಮುಗಿಸಿ ಬೇಗನೆ ಇತ್ತಕಡೆಗೆ ಬರುವರಾಗಿ ವಾರ್ತೆಯಿದೆ.

ಫೆಡರಲ್ ಕೋರ್ಟಿನ ಸ್ಥಾಪನೆ.

ಹಿಂದೂದೇಶದ ಫೆಡರಲ್ ಕೋರ್ಟು ಮೊನ್ನೆ ತಾ. ೬ರಿಂದ ರೂಢಿಗೆ ಬಂದಿರುತ್ತದೆ. ಇದರ ಪ್ರಾರಂಭೋತ್ಸವು ಹಿಂದೂದೇಶದ ಅನೇಕ ನ್ಯಾಯಾಧೀಶರೂ, ವಕೀಲರೂ ಇತ್ಯಾದಿ ಮಹಾಮಹನೀಯರುಗಳು ಕೂಡಿ ಬಂದು, ಅತಿ ವಿಜೃಂಭಣೆಯಿಂದ ನಡೆಯಿತು. ಫೆಡರಲ್ ಕೋರ್ಟಿನ ಎಡ್ವೊಕೆಟ್ ಜನರಲರು, ಫೆಡರಲ್ ಬದ್ಧರಾದ ಸರ್ ತೆಜ್ ಬಹದೂರ್ ಸಪ್ರೂ, ಇತ್ಯಾದಿ ಫೆಡರಲ್ ಕೋರ್ಟಿನ ಮುಖ್ಯ ಅಧಿಕಾರಿಗಳು, ಅತಿಥಿಗಳನ್ನು ಸ್ವಾಗತಿಸಿದರು.

ನವರಾಜ ಶಾಸನದ ಕ್ರಮಗಳನ್ನು ಸ್ಪಷ್ಟೀಕರಿಸಿ, ನೂತನ ಪ್ರಾಂತ್ಯಕೀಯ ಸರಕಾರಗಳ ಅಧಿಕಾರವನ್ನು ತೀರ್ಮಾನಿಸುವುದು, ಶಾಸಕ ಸಭೆಗಳಿಂದ ಮಂಜೂರಾದ ಮಸೂದೆಗಳು ನ್ಯಾಯಬದ್ಧವಾದವುಗಳೊ, ಎಂಬುದನ್ನು ಇತ್ಯರ್ಥಗೊಳಿಸುವುದೆ ಈ ಕೋರ್ಟಿನ ಕರ್ತವ್ಯಗಳು.

ರಾಷ್ಟ್ರಪತಿಯರ ಪ್ರವಾಸ.

ರಾಷ್ಟ್ರಪತಿಯರು ಈಗ ಅಸ್ಸಾಮದಲ್ಲಿ ಪ್ರವಾಸಗೈಯುತ್ತಿದ್ದಾರೆ. ಅವರ ದರುಶನ ಮಾಡಲು ಹೋದೆಡೆಗಳಲ್ಲಾ ಜನವರ್ಗವು ಕಿಕ್ಕಿರಿದು ನೆರೆದುಬಂದರು. ರಾಷ್ಟ್ರಪತಿಯರು ಹೋದ ಕಡೆಗಳಲ್ಲಾ ಉಜ್ವಲವಾದ ಭಾಷಣಗಳಿಂದ ಕಾಂಗ್ರೆಸ್ಸಿನ ಸಂದೇಶವನ್ನು ಸಾರಿರುವರು. ಸ್ವಾತಂತ್ರ್ಯಸಾಧನೆಗೆ ಕಾಂಗ್ರೆಸು ಒಂದೆ ಒಂದಾದ ಹಾದಿ, ಬಡತನ ನಿವಾರಣೆಯಾಗುವುದಾದರೆ ಕಾಂಗ್ರೆಸ್ಸಿನಿಂದ ಮಾತ್ರ ಎಂದು ಸಾರಿದ್ದು, ಒಳ್ಳೆ ಪ್ರಶಂಸಿತವಾಗಿರುವುದೆಂದು ತಿಳಿದುಬರುತ್ತದೆ. ರಾಷ್ಟ್ರಪತಿಯರ ಪ್ರವಾಸದ ಪರಿಣಾಮವಾಗಿ, ಗಡನಾಡಿನ ಪ್ರಾಂತ್ಯದಲ್ಲಿ ನಡೆದ ಅಸ್ಸಾಮು ಪ್ರಾಂತ್ಯವು ಕಾಂಗ್ರೆಸ್ ಪ್ರಾಂತ್ಯವಾಗಿ ಮಾರ್ಪಡುವ ಸಂಭವಗಳಿವೆಂದು ತಿಳಿದುಬರುತ್ತದೆ. ಅಸ್ಸಾಮಿನ ಯುರೋಪಿಯ ತೋಟಗಾರರು ರಾಷ್ಟ್ರಪತಿಯರಿಗೆ ಒಂದು ಸತ್ಕಾರವನ್ನು ಕೊಟ್ಟರೆಂದು ತಿಳಿದುಬರುತ್ತದೆ.

ಆಂಗ್ಲೋ ಇಂಡಿಯಾನರು ಕಾಂಗ್ರೆಸ್ಸನ್ನು ಸೇರಿದರು.

ಮುಂಬಾಯಿಯ ಇಗಟ್‌ಪುರಿ ಎಂಬಲ್ಲಿ ನಗರ ಸಭೆಯ ಚುನಾವಣೆಯಲ್ಲಿ ಆಂಗ್ಲೋ ಇಂಡಿಯಾನರು ಕಾಂಗ್ರೆಸ್ಸಿನೊಡನೆ ಸೇರಿರುವರು. ತಮ್ಮ ಹಿತಸಾಧನೆ ಮತ್ತು ರಕ್ಷಣೆಯ ಬಗ್ಗೆ ಕಾಂಗ್ರೆಸ್ಸೇ ಶ್ರೇಷ್ಠವಾದುದೆಂದು ಅವರ ನಂಬಿಕೆಯಾಗಿರುತ್ತದಂತೆ.

ಎಲ್ಲಾ ಪ್ರಾಂತ್ಯಗಳ ಆರ್ಥಿಕ ಸಚಿವರ ಪರಿಷತ್ತೊಂದು ಜನವರಿ ತಾ. ೨೦ರಲ್ಲಿ ನವದಿಲ್ಲಿಯಲ್ಲಿ ನಡೆಯುವುದು.

ಒರಿಸ್ಸಾದಲ್ಲಿ ಇತ್ತೀಚೆಗೆ ಬಹಳ ನೆರೆ ಉಂಟಾಗಿ, ಅನೇಕರು ಮಹಾನಷ್ಟಗಳಿಗೆ ಒಳಗಾಗಿರುವರು. ಹೀಗೆ ನಷ್ಟಕ್ಕೆ ಒಳಗಾಗಿರುವವರಿಗೆ ಉಪಶಮನ ದೊರಕಿಸುವ ಏರ್ಪಾಡು ಒರಿಸ್ಸಾ ಪ್ರಾಂತ್ಯದ ಕಾಂಗ್ರೆಸ್ ಸರಕಾರದಿಂದ ಮಾಡಲಾಗಿದೆ. ನೆರೆ ದೆಸೆಯಿಂದ ನಷ್ಟಹೊಂದಿದ ರೈತವರ್ಗದ ಕುರಿತು ಅತ್ಯಂತ ಲಕ್ಷ್ಯವಾಗಿರುವುದು.

ಅಂತೆಯೆ ಮದ್ರಾಸು ಪ್ರಾಂತ್ಯದ ಪೂರ್ವದಿಕ್ಕಿನಲ್ಲಿ ವಿಶೇಷ ತರದ ನೆರೆಯ ಹಾವಳಿಯು ನಡೆದಿದ್ದು, ಅಲ್ಲಿ ಸಂಕಷ್ಟಗೊಳಗಾದವರಿಗೆ ಉಪಶಮನ ದೊರಕಿಸುವ ಏರ್ಪಾಡು ಮದ್ರಾಸಿನ ಕಾಂಗ್ರೆಸ್ ಸರಕಾರವು ಮಾಡಿರುತ್ತದೆ.

ಮೈಸೂರು ಧೋರಣೆಯನ್ನು ಸರಕಾರದ ಖಂಡಿಸಿ, ಮೈಸೂರಿನ ಶಾಸನಸಭೆಯ ಹನ್ನೊಂದು ಮಂದಿ ಚುನಾಯಿತ ಸದಸ್ಯರು, ತಮ್ಮ ಸದಸ್ಯತನಕ್ಕೆ ರಾಜಿಯಿತ್ತಿರುವರು. ಕಾಂಗ್ರೆಸ್ಸಿಗೆ ಸಮಸ್ತ ದೇಶದ ಆಧಾರವಿರುವುದೆಂಬುದನ್ನು ವ್ಯಕ್ತಪಡಿಸಲು, ಅವರು ಪಾತಃಪುನಃ ಚುನಾವಣೆಗೆ ನಿಲ್ಲುವರಾಗಿ ತಿಳಿದುಬರುತ್ತದೆ.

ಮೈಸೂರಲ್ಲಿ ಒಂದು ನ್ಯಾಶನಲಿಷ್ಟ ಪಕ್ಷದ ಸ್ಥಾಪನೆಯಾಗಿರುತ್ತದೆ. ಕಾಂಗ್ರೆಸ್ ಪಕ್ಷವು ಮಹಾತ್ಮಾಜಿಯರ ಸಲಹೆಗಳಿಗೆ ವಿರೋಧವಾಗಿ ನಡೆದುದರಿಂದ ಈ ಪಕ್ಷವನ್ನು ಹೊರಡಿಸಬೇಕಾಯಿತೆಂದು, ಈ ಪಕ್ಷದ ನಾಯಕರ ಹೇಳಿಕೆ.

ಸಾವಧಾನದಿಂದ, ಮೈಸೂರಿನ ಮಹಾರಾಜರ ಅಡಿಯಲ್ಲಿ ಪ್ರಜಾಮತ ಸರಕಾರವನ್ನು ಸ್ಥಾಪಿಸುವುದು ಈ ಪಕ್ಷದ ಉದ್ದೇಶವಂತೆ.

ಮಹಾತ್ಮಾಜಿಯರ ದೇಹಸ್ಥಿತಿಯು ಸ್ವಲ್ಪ ಉತ್ತಮಗೊಂಡಿರುವುದೆಂದು ವಾರ್ತೆಯಿದೆ. ರಕ್ತ ಒತ್ತಾಟವು ಸಂಪೂರ್ಣ ಮಾಯವಾಗಲಿಲ್ಲ. ಮಹಾತ್ಮಾಜಿಯರು ಇನ್ನು ಮೂರು ಮಾಸಗಳ ವಿಶ್ರಾಂತಿಪಡೆಯಬೇಕೆಂದು ವೈದ್ಯರ ಬೋಧೆ. ಈ ಕಾರಣದಿಂದ ಹರಿಪುರ ಕಾಂಗ್ರೆಸ್ಸಿನ ಮೊದಲು ಜರಗಿಸಬೇಕಾಗಿ ನಿರ್ಣಯಿಸಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಸೇರುವುದಿಲ್ಲವಾಗಿ ತಿಳಿದುಬರುತ್ತದೆ.

ನವರಾಜ ಶಾಸನವು ಹೇಗೆ ನಡೆಯುತ್ತದೆಂದು ನೋಡಲು, ಲಾರ್ಡ್ ಲೋಥಿಯಾನರು, ಹಿಂದೂದೇಶಕ್ಕೆ ಬಂದಿರುವರು. ಲಾರ್ಡ್ ಲೋಥಿಯಾನರು, ನೂತನ ಇಂಡಿಯಾ ಆಕ್ಟಿನ ಫ್ರಾಂಚೈಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ಐರೋಪ್ಯದ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಣೆ ಹೊಂದಿರುವುದೆಂದೂ, ಪ್ರಭುತ್ವದ ಜನಾಂಗಗಳು ಮೈತ್ರಿಯನ್ನು ಬೆಳೆಯಿಸುವುದರಲ್ಲಿ ತೊಡಗಿರುವರೆಂದು, ಇವರ ಅಂಬೋಣ. ಲಾರ್ಡ್ ಲೋಥಿಯಾನರು, ಹಿಂದೂದೇಶದಲ್ಲಿ ಏಳು ವಾರ ಸಮಯ ತಮ್ಮ ಹಿಂದೂದೇಶದ ವಿವಿಧ ಪ್ರಾಂತ್ಯಗಳ ಪ್ರವಾಸಗೈದು, ನವರಾಜ್ಯ ಶಾಸನದ ಕುರಿತು ಅನುಭವ ಪಡೆಯುವರಾಗಿ ತಿಳಿದುಬರುತ್ತದೆ.

ಶಾಂಗಾಯಿಯನ್ನು ಜಪಾನೀಯರು ಹಿಡಿದಿರುವರಷ್ಟೆ. ಅಲ್ಲಿ ಪಾಶ್ಚಾತ್ಯದ ಅನೇಕ ಪ್ರಭುತ್ವದ ಜನಾಂಗಗಳ ಹಿತಗಳಿವೆ. ಇವುಗಳ ಕುರಿತು ಜಪಾನು ಯಾವ ತರದ ಧೋರಣೆಯನ್ನು ಕೈಕೊಳ್ಳಲಿರುವುದಾಗಿ ನೋಡಲಿದೆ. ಶಾಂಗಾಯಿಯು ಜಪಾನೀಯರ ಕೈವಶವಾದುದರಿಂದ, ಅಲ್ಲಿರುವ ಇತರ ಪ್ರಭುತ್ವದ ಜನಾಂಗಗಳಿಗೆ ಸುಖವಿರದು.

[illegible] ... ವಿಚಿತ್ರ ಸತ್ಯಶೋಧನೆ!

[illegible] ಹಿಂದಿನ ಮೂರು ... ಆಚೆ ಇಂದು—ಹದಿನೆಂಟು ... ಸಾವಿರ ರೂಪಾಯಿ ಡಾಲರುಗಳು, ... ಟೊರೆಂಟೋ ನಗರದಲ್ಲಿ ಒಂದು ಕಾಲ ... ಬಡತನದಿಂದ ಜೀವಿಸುತಿದ್ದು ... ಶಕ್ತಿಯುಂದಲೂ ಕಾರ್ಯ ಚತು ... "ಡಾಯ ಬೆಟೀಸ್" ರೋಗ ... ಕಂಡು ಹಿಡಿದ ಡಾಕ್ತರನೊಬ್ಬನ ... ಆತನ ಹೆಸರು ಸರ್ ಫ್ರೆಡರಿಕ್ ಗ್ರೆಂಟ್ ಬೆಂಟಿಂಗ್ ಎಂದು.

ತನ್ನ ಡಾಕ್ತರೀ ಉದ್ಯೋಗದಲ್ಲಿ ಅತೃಪ್ತಿ ಗೊಂಡ ಈತನಿಗೆ "ಒಂಟೇರಿಯೋ ಮೆಡಿಕಲ್ ಸ್ಕೂಲ್"ನಲ್ಲಿ ಸಾಮಾನ್ಯ ಉಪಾಧ್ಯಾಯ ವೃತ್ತಿಯು ದೊರೆಯಿತು. ಅಂತೇ ಕೆಲಕಾಲದಲ್ಲಿ ಅದೊಬ್ಬನು ತನ್ನ ರೋಗಕ್ಕೆ ಔಷಧವನ್ನು ಕಂಡುಹಿಡಿಯಬೇಕೆಂದು ತೀರ್ಮಾನಿಸಿಕೊಂಡನು. ಆ ರೋಗವೇ—"ಡಾಯ ಬೆಟೀಸ್".

ದೇಹದಲ್ಲಿ ಸಕ್ಕರೆ ಸತ್ವವು ಹೆಚ್ಚಾದಾಗ ಈ "ಡಯಬೆಟೀಸ್" ಬರುತ್ತದೆಂದು ಬೆಂಟಿಂಗನಿಗೆ ತಿಳಿದಿತ್ತು. ನಾಗರಿಕ ಜನಾಂಗ ದಲ್ಲಿ ಶೇಕಡಾ ಒಂದರಷ್ಟು ಮಂದಿಗೆ ತಪ್ಪದೆ ಇದು ಬಂದು ಅವರ ಬಾಳನ್ನು ಕೀಳುವುದೆಂದೂ ಬೆಂಟಿಂಗನು ತಿಳಿದಿದ್ದ. ಆದ್ದರಿಂದ ಆ ರೋಗದ ಚಿಕಿತ್ಸೆಗಾಗಿ ಬಂದವರನ್ನು ಹೊಸ ಹೊಸ ರೀತಿಯಿಂದ ಉಪಚರಿಸಿದ. ಸಕ್ಕರೆ ರಹಿತ ತಿಂಡಿತಿನಸುಗಳನ್ನು ಕೊಳ್ಳುವಂತೆ ಹೇಳಿದ. ಆದರೆ ಅದರಿಂದ ಪ್ರಯೋಜನವೇನೂ ಕಂಡು ಬರಲಿಲ್ಲ.

ಮೆರಿಂಗ್ ಮತ್ತು ಮಿನ್ಕೊವಿಸ್ಕಿ ಎಂಬಿಬ್ಬರು ಜರ್ಮನೀಯರು ಮೇದೋಜೀರಕ ರಸಕೋಶವನ್ನು ನಾಯಿಯ ಉದರದಿಂದ ತೆಗೆಯಲು ಅದು ಸತ್ತು ಹೋದವಿಚಾರವನ್ನು ಬೆಂಟಿಂಗ್ ತಿಳಿದಿದ್ದ. ಆದರೆ ಅದೇಕೆ ಆ ಪ್ರಾಣಿಯು ಸತ್ತಿತೆಂದು ಯಾರಿಗೂ ತಿಳಿಯದಾಯಿತು. ಮೇದೋಜೀರಕ ರಸವು ಆಹಾರವನ್ನು ಜೀರ್ಣಿಸುವ ಮುಖ್ಯಾಂಗವೆಂದು ಎಲ್ಲರಿಗೂ ತಿಳಿದಿದ್ದುದೇ. ಇದಾದ ಕೆಲಕಾಲದಲ್ಲಿ 'ಮೇದೋಜೀರಕ ರಸಕೋಶದಲ್ಲಿ 'ಐಲೆಂಡ್ ಸೆಲ್ಸ್' ಎಂಬ ಕೋಶವು ಬಲವಾದರೆ, ಆರೋಗ್ಯಕ್ಕೆ ಕೆಡುಕಿಲ್ಲ" ಎಂಬ ಲೇಖನವೊಂದನ್ನು ಓದಿದ್ದ.

೧೯೨೦ನೇ ಇಸವಿಯ ಅಕ್ಟೋಬರ ತಿಂಗಳ ಅದೊಂದು ರಾತ್ರಿ, ಬೆಂಟಿಂಗನ ಮನವೆಲ್ಲ ಹಲವು ಹನ್ನೆರಡು ಯೋಚನೆಗಳಿಂದ ಅಲ್ಲೋಲಕಲ್ಲೋಲವಾಯಿತು. ಅವನು ಬಹಳವಾಗಿ ಯತ್ನಿಸಿದ; ಆದರೂ ನಿದ್ದೆ ಹತ್ತಲೊಲ್ಲದು. ಪ್ರಾಣಿಗಳ ಮೇದೋಜೀರಕ ಕೋಶದಿಂದ 'ಐಲೇಂಡ್ ಸೆಲ್ಸ್'ನಲ್ಲಿನ ರಸವನ್ನು ತೆಗೆದು ಮನುಷ್ಯರಿಗೆ ಉಪಯೋಗಿಸಿದರೆ ಅದು 'ಡಯಬೆಟೀಸ್' ರೋಗವನ್ನು ವಾಸಿಮಾಡಬಹುದು—ವೆಂಬ ಯೋಚನೆಯು ಅವನನ್ನು ಅತಿಯಾಗಿ ಕಾಡಿತು.

ಮರುದಿನವೇ ಟೊರೆಂಟೋ ಕಲಾಶಾಲೆಯ ಪ್ರೊಫೆಸರನೊಡನೆ ತನಗೆ ಈ ವಿಚಾರದಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಂಡನು. ಅವರು ಸಂತೋಷದಿಂದ ಒಪ್ಪಿ ಬೇಕಾದ ಸಲಕರಣೆಗಳನ್ನೊದಗಿ ಕೊಟ್ಟರು.

... ಕೆಲವಾರಗಳು ಕಳೆದುವು. ಡಯಬಟೀ ... ರೋಗದಿಂದ ನರಳುತ್ತಿರುವ ನಾಯಿಯ ... ಬೆಂಟಿಂಗನು ತನ್ನ ಹೊಸ ಔಷಧಿಯನ್ನು ... ಉಪಯೋಗಿಸಿದನು. ಒಂದು ತಾಸಿನ ಬಳಿಕ ಆ ಪ್ರಾಣಿಯ ರಕ್ತವನ್ನು ಪರೀಕ್ಷಿಸಲಾಗಿ ರಕ್ತದಲ್ಲಿ ಸಕ್ಕರೆ ಕಡಿಮೆಯಾಗಿರುವುದು ಕಂಡು ಬಂದಿತು. ಬೆಂಟಿಂಗ್ ಸಂತೋಷದಿಂದ ಹಿಗ್ಗಿದನು. ಆದರೆ ಆ ಪ್ರಾಣಿ ಮಾತ್ರ ಮರುದಿನವೇ ಮಡಿಯಿತು.

ಬೆಂಟಿಂಗನು ಕಂಗೆಡಲಿಲ್ಲ. ಪ್ರಯತ್ನವನ್ನು ಬಿಡಲಿಲ್ಲ. ಅದೊಂದು ದಿನ ಆತನ ಮಿತ್ರರೊಬ್ಬರು ಡಯಬಿಟೀಸ್ ರೋಗ ನಿಮಿತ್ತ ಬೆಂಟಿಂಗನಲ್ಲಿ ಬಂದರು. ಈಗ ತನ್ನ ಔಷಧವನ್ನು ಬೆಂಟಿಂಗ್ ಮನುಷ್ಯರಿಗೆ ಪ್ರಯೋಗಿಸ ಹೊರಟ. ಇದೇ ಬೆಂಟಿಂಗನ ಜೀವನವನ್ನು ಬೆಳಗಿಸಿತು. ಅವನ ಕರ್ತವ್ಯದ ಫಲವಾಯಿತು. ಆತನ ಮಿತ್ರನು ಸಂಪೂರ್ಣ ಗುಣಮುಖಹೊಂದಿದನು.

ಇಂದು ಡಯಬಟೀಸ್ ರೋಗದಿಂದ ನರಳುವ ಸಹಸ್ರಾರು ಮಂದಿಗೆ 'ಬೆಂಟಿಂಗ್' ಜೀವನದ ದಾರಿದೋರಿದ 'ಇನ್ಸುಲಿನ್' ಎಂಬುದೆ ಈ ಔಷಧಿಯು.

ಜಪಾನೀಯ ಸೈನಿಕರ ಅತ್ಯಾಚಾರ

ವಿಜಯದಿಂದ ಭ್ರಮೆಗೊಂಡ ಜಪಾನೀಯರ ಅತ್ಯಾಚಾರಗಳ ಕುರಿತು ಕೆಲವಾರ್ತೆಗಳು ಬಂದಿವೆ. ಟಿನ್ಸಿನ್ ಎಂಬಲ್ಲಿ ಚೀನಿಯ ಸ್ತ್ರೀಯರ ಕಾಲೇಜು ಒಂದನ್ನು ನುಗ್ಗಿ ಅಲ್ಲಿರುವ ವಿದ್ಯಾರ್ಥಿನಿಯರ ಮೇಲೆ ಜಪಾನೀಯರು ಕೈಮಾಡಿ, ಅವರ ಮೇಲೆ ಹೇಯ ಕೃತ್ಯಗಳನ್ನು ನಡೆಸಿದರಂತೆ. ಪತನವಾದ ಸ್ಥಳಗಳನ್ನು ನುಗ್ಗಿದ ಜಪಾನೀಯ ಸೈನಿಕರು ಚೀನಿಯರ ಮನೆಗಳನ್ನು ನುಗ್ಗಿ, ಚೀನಿಯ ಸ್ತ್ರೀಯರ ಮೇಲೆ ಅವರ ಪತಿಯರ ಎದುರಿನಲ್ಲಿ ಅತ್ಯಾಚಾರ ನಡೆಸುತ್ತಿದ್ದರಂತೆ.

ಒಳ್ಳೆ ಉಪಾಯ.

[illegible] ಎಂಬಲ್ಲಿನ ಜಾರ್ಜ್ ಟೌನ್ ಎಂಬಲ್ಲಿ ಇಲಿಗಳ ಬಾಧೆ ಕಾಣಿಸಿಕೊಂಡಿತು. ಈ ಇಲಿಗಳನ್ನು ನಾಶಪಡಿಸಲು, ಅಲ್ಲಿನ ನಗರ ಸಭೆಗೆ ಹೆಚ್ಚು [illegible] ... ಈ [illegible] ಹೊಸ ಉಪಾಯವನ್ನು ಹೂಡಿದರು.

ಜೀವ ಸಹಿತ [illegible] ಇಲಿಗಳನ್ನು ಹಿಡಿದರು. ಅವುಗಳಿಗೆ [illegible] ಹಚ್ಚಿ ಅವುಗಳನ್ನು ಬಿಟ್ಟುಬಿಟ್ಟರು. [illegible] ಹಾಗೆ ಬಿಟ್ಟ ಇಲಿಯನ್ನು [illegible] ... ನಗರ ಪ್ರಚಾರ [illegible].

ಕೆಲವೆ ದಿನಗಳಲ್ಲಿ [illegible] ಇದ್ದ ಇಲಿಗಳು [illegible] ಒಪ್ಪಿಸಿದ್ದಾದವಂತೆ. [illegible] ವಿಜಯವಾದರೆ, ಜಾರ್ಜ್ ಟೌನಿನಲ್ಲಿ, ಶೇಕಡಾ [illegible] ಇಲಿಗಳ [illegible] ...?

ಒಂದು ವಿಚಿತ್ರ ಔಷಧಿ.

ಕೃತಕ ರೀತಿಗಳಿಂದ ತಯಾರಿಸಲ್ಪಡುವ ಒಂದು ವಿಚಿತ್ರ ತರದ ಔಷಧಿಯು ಶೋಧಿಸಲಾಗಿರುವುದೆಂದು, ಕಳೆದ ಬ್ರಿಟಿಷ್ ಫಾರ್ಮಸ್ಯೂಟಿಕಲ್ ಪರಿಷತ್ತಿನಲ್ಲಿ ತಿಳಿಯಬಂತು.

ಈ ಔಷಧಿಯು ದೇಹದ ರಕ್ತದಲ್ಲಿ ಮಿಶ್ರವಾಗಿದ್ದರೆ, ಯಾವತ್ತು ರೋಗಾಣುಗಳು ನಾಶವಾಗುವವಂತೆ. ನ್ಯೂಮೋನಿಯಾ ವಿಸರ್ಪ, ರಕ್ತಕ್ಕೆ ವಿಷವಾಗುವುದು, ಇತ್ಯಾದಿ ಮಹಾರೋಗಗಳ ಚಿಕಿತ್ಸೆಯಲ್ಲಿ ಈ ಔಷಧಿಯು, ಬಹಳ ಯುಕ್ತಿಯಾಗಿ ಉಪಯೋಗಿಸಲ್ಪಟ್ಟದೆಂದು, ಇಂಗ್ಲಾಂಡಿನ ಅನೇಕ ಆಸ್ಪತ್ರೆಗಳ ವರದಿಯಾಗಿರುತ್ತದೆ.

ನೋಟುಗಳು—[illegible]

[illegible] (ಸರಕಾರಿ) ಹಿಂದುಗಳ ಕೊಡುವ ಉಪಚಾರಾದಿಗಳು (ಕೆಲಸ) ಜಗತ್ತಿನ ಜನಾಂಗಗಳ ಮೂಗು ಸೊಳ್ಳೆಗಳಲ್ಲಿ ದುರ್ಗಂಧವನ್ನೆಬ್ಬಿಸಿವೆ.' ಹಿಂದೀಯರನ್ನು ಬಹಳ ಹಿಂದೆಗೆ ಇದೇ ಗುರಿ ಮಾಡಿರುವುದು—ಎಂದು ಪಾಟ್ನಾ ಹೈಕೋರ್ಟಿನ ಚೀಫ್ ಜಡ್ಜರು (ಸರ್ ಕೂರ್ಟನೀ ಟೆರೆಲ್) ಪಾಟ್ನಾದಲ್ಲಿ ಎಚ್ಚರಿಸಿದರು—ಈ ದುರ್ಗಂಧವು ಬ್ರಿಟಿಷ ವಸಾಹತುಗಳಿಗೆ ಹರಡಿ, ಅಲ್ಲಿ ಎಲ್ಲ ಹಿಂದೀಯರನ್ನು (ಪೂಜ್ಯ) ಉಪಚಾರಾದಿಗಳಿಂದ ಬ್ರಿಟಿಷರು ಅಭಿನಂದಿಸುತ್ತಿರುವರೆಂಬುದನ್ನು ಯಾರೂ ಮರೆಯರಷ್ಟೆ!

○ ○ ○ ○

ಇವೇ ಬ್ರಿಟಿಷರ ಉಪಚಾರಾದಿಗಳಿಂದ ಬಹಳವಾಗಿ ಹಿಗ್ಗಿರುವ ಹಿಂದೀಯರು ಅಲ್ಲಿನ ವಸಾಹತುಗಳಿಂದ ಆಗಾಗ ವರದಿ ಇದುವುದನ್ನು ಇತರ ಜನಾಂಗಗಳಾದರೂ ಕೇಳಿ (ಬ್ರಿಟಿಷರಿಗಂತೂ ನಮ್ಮ ಸನಾತನಿಗಳ ಅಪಚಾರದ ದುರ್ಗಂಧ ತಿಳಿದಿದೆಯಷ್ಟೆ) ಅವರ ಮೂಗು ಸೊಳ್ಳೆಗಳು ಸುವಾಸನೆಯ ಉಸಿರೆಳೆಯಲು ಅರಳಿರುವುವೇ? ಯಾರು ಬಲ್ಲರು?

○ ○ ○ ○

ವಿದ್ಯಾಭ್ಯಾಸದ ವಿಷಯ, ಎಲ್ಲ ಮಂತ್ರಿಗಳೂ ತುಂಬಾ ಮಾತಾಡುತ್ತಾರೆ. ನಾನಿನ್ನು ಆಲೋಚನೆಯಲ್ಲಿದ್ದೇನೆ ಎಂದು ನಮ್ಮ ವಿದ್ಯಾಶಾಖಾ ಮಂತ್ರಿಗಳು ಹೇಳುತ್ತಿದ್ದರು. ಈಗ ಇವರೇ ಭಾಷಣಗಳನ್ನು ಕೊಡಲಾರಂಭಿಸಿ, ಮುಗಿಸುವ ಹಾಗಿಲ್ಲ. ಅವುಗಳಲ್ಲಿ ಇತ್ಯರ್ಥವೇನಾಗಿದೆಯೆಂದೂ ಯಾರೂ ತಿಳಿಯುವ ಹಾಗೂ ಇಲ್ಲವಾಗಿದೆ.

○ ○ ○ ○

ಸಿನಿಮಾ ಚಿತ್ರಗಳನ್ನು ಪ್ರದರ್ಶಿಸಿ ಶಿಕ್ಷಣ ಸಾಂಗಗೊಳಿಸುವುದಕ್ಕಾಗಿ ಮೊನ್ನೆ ಮದ್ರಾಸಿನದೊಂದು ಹೈಸ್ಕೂಲಿನಲ್ಲಿ ಸಭೆಸೇರಿತು. ಆಫ್ರಿಕದ ವಿಷಯವಾದ ಚಿತ್ರವು ಪ್ರದರ್ಶನಕ್ಕಿತ್ತು. ಈ ಬಗೆಯ ಚಿತ್ರಗಳನ್ನು ಕಂಡು ಪ್ರಯೋಜನವೇನೆಂದು ಹೆಡ್ಮಾಸ್ತರರು ಭಾಷಣಮಾಡಿದ್ದು. ಭಾಷಣ [illegible] ಅಭಿನಂದನೆಯೆಂದು ಮಂತ್ರಿಗಳು. ಭಾಷಣವನ್ನು ಮುಗಿಸಿಬಿಟ್ಟರು. ಪ್ರಾರಂಭಿಸಿದ್ದನ್ನು,—ಒಬ್ಬನೇ ಒಬ್ಬ ವಿದ್ಯಾರ್ಥಿಯೂ ಕೇಳಲಾರದಷ್ಟು ಚೆನ್ನಾಗಿ, ಎಲ್ಲ ವಿದ್ಯಾರ್ಥಿಗಳು ಅಟ್ಟಹಾಸಯುಕ್ತವಾಗಿ ಆಫ್ರಿಕದ ಸಿಂಹಗಳಂತೆ ಗರ್ಜಿಸಿ, ಚಿತ್ರ ಪ್ರದರ್ಶನವನ್ನು ಮಾಡಿದರು. ಸಿನಿಮಾ ಚಿತ್ರದ ಇದಿರಲ್ಲಿ, ಈ ಬಗೆಯ ಭಾಷಣ, ಘಂಟೆಗಳಗಟ್ಟಲೆ ಯಾರು ಕೇಳ ಬಯಸುವರು?

○ ○ ○ ○

ವಿಜಯ ಯಾತ್ರೆಯೊಂದು ಜಪಾನೀಯರು ತಿಂಗಳಿನಿಂದ ಯಶಸ್ವಿ ಸೈನ್ಯಾಚರಣೆಗಳೂ ತಿರುಗಿದಂತೆ ಮುಂದುವರಿದಾಗ, ಒಂದು ಬಾಂಬು ಬಿದ್ದುದು ವಿಶೇಷವೇನೂ ಅಲ್ಲ. ಯಾರ ಊರಿನ ಮೇಲೆ ಯಾರು ಹೇಗೆ ಬೀಳಬಲ್ಲವರಾದರು? ಆದರೆ ಅಂತರ್ಜಾತಿ ... ಪೋಲೀಸರ ಬಲಾತ್ಕಾರದಿಂದಾಗಿ ಯಾವ ಹೆಚ್ಚಿನ ಹಾನಿಯಾಗದಿದ್ದುದೇ ಪವಾಡ. ಊರ ಜನರೂ ಚಕಿತರಾಗಿಯೋ ವಿವೇಕದಿಂದಲೋ ಇನ್ನೇನು ಹೆಚ್ಚಿಗೆ ಗಲಭೆಗೆ ಹೋಗದೆ, ಈ ವಿಧಿಯ ವೈಚಿತ್ರ್ಯವನ್ನು ನೋಡಿಯೇ ಕೂತರು. ಇಲ್ಲದಿದ್ದಲ್ಲಿ ಅಲ್ಲಿಯೆ ಒಂದು ಮಾರಿಪೂಜೆಯೂ ಆಗುತಿತ್ತು!

○ ○ ○ ○

ನೈತಿಕ ಪರಾಮರ್ಶೆ ಹಾಗಿರಲಿ; ಸ್ವಲ್ಪ ಸಂಯಮ ಬುದ್ಧಿಯಾದರೂ ವಿಜಯಿಗಳೆಂಬವರಲ್ಲಿ ಇದ್ದಿರಬೇಡವೆ? ಅದರಿಂದ, ಇದೊಂದು ಬಗೆಯಾಗಿ, ಹಿರಣ್ಯಕಶಿಪುವಿನ ಸ್ವರ್ಗವಿಜಯದಂತೆ ತೋರುತ್ತಿದೆ. ಮೊನ್ನೆಯವರೆಗೆ ಸ್ವತಂತ್ರವಾಗಿದ್ದ ಚೀನ ದೇಶ, ಇನ್ನೂ ಯುದ್ಧ ಘೋಷಿಸಲಾರದ ಯುದ್ಧಮಾಡಿಯೂ, ದಿಗ್ವಿಜಯದ [illegible] ಏನು? ಚೀನಿಯರು ಜಪಾನಿನ ಈ ಜಯವು ಒಂದು ಸೋಲು ಎಂದೇ ಜಪಾನು ತಿಳಿಯದೇ ಹೋಗಿದೆ ಎಂದು ಹೇಳುತ್ತಿರುವಾಗ, ಜಪಾನಿನಲ್ಲಿ ಯುದ್ಧ ಬೇಡವೆನ್ನುವವರಿಗೆ ಬಾಯಿ ಬಿಡದ ಹಾಗೆ ಉಪಾಯವಾಗಿ ಈ ವಿಜಯ ಮೆರವಣಿಕೆ ಮಾಡಿದಲ್ಲವೆ?

○ ○ ○ ○

ಜಪಾನಿನ ಸರಕನ್ನು ಬಹಿಷ್ಕರಿಸುವ ಹಾಗೆ ಬ್ರಿಟಿಷ ಸಾಮ್ರಾಜ್ಯವೆಲ್ಲ ನಿರ್ಧರಿಸಿದ್ದು ಈಗ ಬರ್ಮ—ಇದು ಇಂಡಿಯದ ಹೊರಗಾಗಿದೆ, ಬ್ರಿಟಿಷ ಸಾಮ್ರಾಜ್ಯಕ್ಕೂ ಹೊರಗಾಗಿಲ್ಲವಷ್ಟೆ!—ಬಹಿಷ್ಕರಿಸುವ ಹಾಗೆ ಸೂಚನೆ ಕೊಡುವ ಯಾವ ಬಗೆಯ ಚಳವಳವೂ ನಡೆಯಬಾರದಾಗಿ ಸರಕಾರೀ ಅಪ್ಪಣೆ ಕೊಟ್ಟೇ ಬಿಟ್ಟಿದೆ. ಚೀನಿಯರು ಅಲ್ಲಿ ಇದನ್ನು ಒಲ್ಲದಿರುವರು. ಅವರು ಹಳ್ಳಿಹಳ್ಳಿಗೂ ತೆರಳಿ, ಜಪಾನನ್ನೆ ಬಹಿಷ್ಕರಿಸಲು ಸಾರುತ್ತಿದ್ದಾರೆ.

○ ○ ○ ○

ಮೊಂಟೆನೆಗ್ರೋ ರಾಜ್ಯವನ್ನು ಮುಂಚೂ ರುವರಾಗಿತು. ಇಟಲಿ. ಜನರಲ್ ಫ್ರೆಂಕೋವಿನ ರಾಜ್ಯತಂತ್ರವನ್ನು ಒಪ್ಪಿತು—ಇಟಲಿ. ನಿಜವಾಗಿಯೂ ಕಲಿಯುಗ,—ಜಾತಿ ಜಾತಿಗೆ ಹಗೆಯಿಲ್ಲ.

○ ○ ○ ○

ಆದರೆ, ಯುನೈಟೆಡ್ ಸ್ಟೇಟ್ಸ್ ಇದನ್ನು [illegible] ಫ್ರೆಂಕೋವಿನ ಜಪಾನರು ಆ ರಾಜ್ಯದ [illegible] ತನ್ನ ಕೆಲಸನೋಡದಂತೆ ಮಾಡುವ ಕಾರಣ, ಫ್ರೆಂಕೋವನ್ನು ಯಾವ ಬಗೆಯಲ್ಲಿ 'ಅಂಗೀಕರಿಸುವುದಿಲ್ಲ' ಎಂದಿದೆ. ಫ್ರೆಂಕೋವಿನ ಅಮೇರಿಕವು ಅಂಗೀ—ಕರಿಸಬೇಕಾಗಿಲ್ಲ. ಈಗ ಹಾತೊರೆಯದೆ! ಇಟಲಿಯನ್ ಸೈನಿಕರು ಫ್ರೆಂಕೋನಿಗಾಗಿ ಯುದ್ಧ ಮಾಡುತ್ತಿದ್ದಾರೆ.

○ ○ ○ ○

ಮೇತರ್ [illegible] ಸೈತನ್ ಎಂಬಾಕೆ [illegible], ತನ್ನ ಪ್ರಣಯಿಯೊಡನೆ ವಿಮಾನದಲ್ಲಿ ಹಾರುತ್ತ, ಅಂತರಿಕ್ಷದಲ್ಲಿರುವಾಗ ಆತನನ್ನು ಬಿಡದು ನೂಕ್ಕಿಗೆಯು [illegible] ಪ್ರಯತ್ನಿಸಿ ಸ್ವರ್ಗಕ್ಕೆ ಕಳುಹಿದಳೆಂದು. ಮೊಕದ್ದಮೆಯಾಯಿತು ಫಲ—ಮೂರು ತಿಂಗಳ ವಿಚಾರಣೆ ನಡೆದು, ಆಕಳಲ್ಲಿ ತಪ್ಪಿಲ್ಲವೆಂದು ಅವಳನ್ನು ಬಿಡುಗಡೆ ಮಾಡಿರುವರು. ಕೋರ್ಟಿನ ಒಳಯಲ್ಲಿ, ಸಾವಿರ ಜನರು ಹುರ್ರೆ ಎಂದು ಕೂಗಿದರು.

○ ○ ○ ○

ಅವಳನ್ನು ಬಿಡುಗಡೆ ಮಾಡಲು ಕಾರಣವೇನು? ಅವಳು ಕೊಲೆ ಮಾಡಿದ್ದಂಬ ತಪ್ಪಿಗೆ ವಿಚಾರಣೆ ನಡೆಯಿತು. ಸರಿಯಲ್ಲ,—ಬರೇ ಆತ್ಮಹನನ ಮಾಡಿದ್ದಳೆಂದಾಗಬೇಕಾಗಿತ್ತು ಎಂದು ಕೋರ್ಟಿನ ಅಭಿಪ್ರಾಯ. ಪ್ರಣಯಿಗೆ ಭೂಲೋಕದ ಪ್ರಣಯ ಸ್ವರ್ಗದ ಬಾಗಿಲು, ಸ್ವರ್ಗೀಯ ಪ್ರಣಯಕ್ಕೆ ಅವನನ್ನು ಕಳುಹಿ ಕೊಟ್ಟು, ವಿಶ್ವಾಮಿತ್ರನ ಶಿಷ್ಯೆಯವಳು,—ಫ್ರೆಂಚ್ ಜ್ಯೂರಿ ಕೆಡದಾದಾತ ತರ್ಕ್ಕದೇ.

○ ○ ○ ○

ಹೊಲೆಂಡು ನೌಕಾಸೈನ್ಯ ಬಲಪಡಿಸುತ್ತದೆ, ಕಳೆದ ವರ್ಷದ ದುಬಾರಿ ಹಣ ಸೆಂಕ್ಷನಾಗಿದೆ. ಈಸ್ಟ್ ಇಂಡೀಸ್‌ನಲ್ಲಿ (ನಮ್ಮ ದಕ್ಷಿಣಕ್ಕಿದ್ದು, ಜಪಾನಿಗೆ ಇತ್ತ ಬರುವ ಧಾರಿಯಲ್ಲಿರುವ ದ್ವೀಪಗಳು) ಈ ನೌಕಾ ಪಡೆಯನ್ನಿಡುವರು. ಆ ದಾರಿ ಸುರಕ್ಷಿತವಾಗಲಿ ಎಂದು ಉದ್ದೇಶ. ಜಪಾನಿನ ಮುಂದಾಲೋಚನೆ ಅಷ್ಟು ದುಂದಾಲೋಚನೆಯಾಗಿರಬಹುದೆ?

[illegible]ರು.

[illegible]ಟುಗಳಿಗೆ ಲೈಸೆನ್ಸು ಕೊಡಬಹುದೆ?

[illegible] ನಗರಸಭೆಯಲ್ಲಿ ಚರ್ಚೆ.

[illegible] ಖಾಸಗಿ ಮಾರ್ಕೆಟನ್ನು ತೆರೆಯು[illegible] ಶ್ರೀಗಳಾದ ಎಚ್. ಎಸ್. [illegible] ಅವರ ಅರ್ಜಿ ಪ್ರಕಾರ ಲೈಸೆನ್ಸ್ ಕೊಡ[illegible] ಎಂಬುದರ ಕುರಿತು ಮೊನ್ನೆ ತಾ. ೬ರಲ್ಲಿ [illegible] ಅಧ್ಯಕ್ಷತೆಯಲ್ಲಿ ನಡೆದ ನಗರಸಭೆಯ [illegible] ಸಭೆಯಲ್ಲಿ ಚರ್ಚಿಸಲಾಯಿತು.

[illegible] ವ್ಯಾಪಾರವು [illegible] ಬ್ರಿಟಿಷರು [illegible] ಹಿಂದೂಸ್ಥಾನದ ಹಡಗುಗಳ [illegible] ಇಂಗ್ಲಿಷ ಹಡಗು ಕಂಪೆನಿಗಳು [illegible] ವ್ಯಾಪಾರವೆಲ್ಲವೂ ಅವರ [illegible]. ಹಿಂದೂಸ್ಥಾನದ ಸಾಹುಕಾರರು ಸ್ಥಾಪಿಸಿದ ಹಡಗು ಕಂಪೆನಿಗಳು ಇಂಗ್ಲಿಷ ಹಡಗು ಕಂಪೆನಿಗಳೊಡನೆ ಸ್ಪರ್ಧಿಸಲು ಸಾಧ್ಯವಿಲ್ಲದೆ ಬಹಳ ನಷ್ಟಹೊಂದಿದವು. ಕರಾವಳಿಯ ವ್ಯಾಪಾರದ ಹಕ್ಕು ಹಿಂದೂಸ್ಥಾನದವರಿಗೆ ಇರುವಂತೆ ಮಾಡುವದು. ಕರಾವಳಿಯ ಹಡಗು ವ್ಯಾಪಾರದ ಬಿಲ್ಲು ಒಂದು ತಯಾರಾಗಿ ಎಸೆಂಬ್ಲಿಯ ಮುಂದೆ ಇದೇ ಬರುವ ಅಧಿವೇಶನದಲ್ಲಿ ಬರಲಿಕ್ಕಿದೆ. ಇದರಿಂದ ಬ್ರಿಟಿಷ ಹಡಗು ಕಂಪೆನಿಗಳಿಗೆ ನಷ್ಟವಾಗುತ್ತದೆಂದು ಅವರ ದೂರು. ಅದಕ್ಕಾಗಿ ವ್ಯಾಸರಾಯರ ಅಧ್ಯಕ್ಷತೆಯಲ್ಲಿ ದಿಲ್ಲಿಯಲ್ಲಿ ಒಂದು ಹಿಂದೀ ಮತ್ತು ಬ್ರಿಟಿಷ್ ಹಡಗು ಕಂಪೆನಿಗಳ ಸಾಹುಕಾರರ ಸಭೆಯು ಸೇರಿತು. ಹಿಂದೂಸ್ಥಾನದ ಕರಾವಳಿಯ ವ್ಯಾಪಾರದ ಹಕ್ಕು ಹಿಂದೀಯರಿಗೆ ಇರಬೇಕೆಂದು ಹಿಂದೀಯರ ವಾದ, ಹಿಂದೀಯರಿಗೆ ಈ ಹಕ್ಕನ್ನು ಕೊಟ್ಟರೆ ತಮಗೆ ಹೇರಳ ನಷ್ಟವಾಗುತ್ತದೆ, ಆದುದರಿಂದ ಹಿಂದೀ ಹಡಗು ಕಂಪೆನಿಯವರು ಈಗ ಹಿಂದೂಸ್ಥಾನದ ಕರಾವಳಿಯಲ್ಲಿ ವ್ಯಾಪಾರ ನಡಿಸುವ ಬ್ರಿಟಿಷ ಹಡಗುಗಳನ್ನೆಲ್ಲಾ ಕ್ರಯಕ್ಕೆ ಪಡೆಯಬೇಕೆಂದು ಬ್ರಿಟಿಷ್ ಕಂಪೆನಿಗಳವರ ಹೇಳಿಕೆ. ಅವುಗಳನ್ನೆಲ್ಲಾ ಕೊಂಡುಕೊಳ್ಳಲಿಕ್ಕೆ ೮ ಯಾ ೧೦ ಕೋಟಿ ರೂಪಾಯಿ ಬೇಕಂತೆ. ಆದರೆ ಇವುಗಳೆಲ್ಲಾ ಹಳೇ ನಮೂನೆಯಲ್ಲಿ ಕಟ್ಟಿದ ಹಡಗುಗಳು. ಅದಲ್ಲದೆ ಹಳೇ ಹಡಗುಗಳು. ಇವುಗಳಿಗಿಂತ ಈಗ ಕಡಿಮೆ ಕ್ರಯಕ್ಕೆ ಹೊಸ ರೀತಿಯಲ್ಲಿ ಕಟ್ಟಿದ ಹೊಸ ಹಡಗುಗಳು ಇದಕ್ಕಿಂತಲೂ ಕಡಿಮೆ ಕ್ರಯಕ್ಕೆ ಸಿಕ್ಕುತ್ತವೆಂದು ಹಿಂದೀಯರ ವಾದ, ಈ ರೀತಿಯಲ್ಲಿ ವಾಗ್ವಾದಗಳಾಗಿ ಸಭೆಯಲ್ಲಿ ಯಾವುದೊಂದು ತೀರ್ಮಾನವಾಗಲಿಲ್ಲ. ಕೆನಡಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಈ ತರದ ಕಾನೂನು ಮಾಡುವಾಗ ಅಲ್ಲಿಯ ವ್ಯಾಪಾರ ನಡಿಸುತ್ತಿದ್ದ ಕಂಪೆನಿಗಳು ಇದಕ್ಕೆ ಅಡ್ಡಿ ಬರಲಿಲ್ಲ. ಒಂದು ದೇಶದ ಕರಾವಳಿಯ ಹಡಗು ವ್ಯಾಪಾರವು ಆಯಾದೇಶದ ಹಡಗು ಕಂಪೆನಿಗಳವರ ಸ್ವಾಧೀನದಲ್ಲಿರುವುದು ಆಯಾ ದೇಶದ ವ್ಯಾಪಾರ ಮತ್ತು ಕೈಗಾರಿಕೆ ಏಳಿಗೆಗೆ ಒಂದು ಸಾಧನವಾಗಿದೆ. ಭೂಲೋಕದ ಎಲ್ಲಾ ಜನಾಂಗಗಳು ಒಪ್ಪುತ್ತಲಿವೆ, ಮತ್ತು ಈ ತರದ ವ್ಯಾಪಾರವನ್ನು ರಕ್ಷಣೆ ಮಾಡುವುದು ಆಯಾ ದೇಶಗಳ ಸರಕಾರಗಳ ಕರ್ತವ್ಯವಾಗಿದೆ. ಅನ್ಯದೇಶೀಯರ ಹಡಗು ವ್ಯಾಪಾರಕ್ಕೆ ಉತ್ತೇಜನಕೊಟ್ಟು ಊರಿನ ಹಡಗು ವ್ಯಾಪಾರವು ಬಿದ್ದುಹೋಗುವಂತೆ ಮಾಡುವದು ದೇಶದ ಏಳಿಗೆಗೆ ಹಾನಿಕರವಾಗಿದೆ. ಹಿಂದೂಸ್ಥಾನದಲ್ಲಿ ಸರಕಾರದ ಬೆಂಬಲವಿಲ್ಲದೆ ಸ್ಥಾಪಿತವಾದ ಹಡಗು ಕಂಪೆನಿಗಳು ಬಹಳ ನಷ್ಟಹೊಂದಿದವು. ಆದುದರಿಂದ ಹಿಂದೀ ಕರಾವಳಿಯ ವ್ಯಾಪಾರವು ಹಿಂದೂಸ್ಥಾನದ ಹಡಗು ಕಂಪೆನಿಗಳ ಕೈಯಲ್ಲಿದ್ದು ಅವುಗಳು ನಷ್ಟಹೊಂದದಂತೆ ಮಾಡುವುದಕ್ಕಾಗಿ ಇಂಡಿಯಾ ಸರಕಾರವು ಕಾನೂನು ಮಾಡುವುದು ಅಗತ್ಯವಿದೆ.

ಲೀಗ್ ಒಫ್ ನೇಶನಿನ ಅತಿರೇಕ ಖರ್ಚು.

ಲೀಗ್ ಒಫ್ ನೇಶನಿನಲ್ಲಿ ಹಿಂದೂಸ್ಥಾನದ ಕಡೆಯ ಪ್ರತಿನಿಧಿಗಳು ಇರುವರು. ಈ ಲೀಗಿನ ಖರ್ಚು ಬಹಳ ಹೆಚ್ಚಾಗುತ್ತ ಬರುತ್ತದೆ. ಈ ಖರ್ಚಿನ ಹಣವನ್ನು ಇದಕ್ಕೆ ಮೆಂಬರರಾಗಿ ಸೇರಿದ ಪ್ರತಿ ಒಂದು ರಾಜ್ಯಗಳವರೂ ಕೊಡಬೇಕಾಗಿದೆ; ಇದರ ಖರ್ಚು ಹೆಚ್ಚಾಗುವದು ಮಾತ್ರವಲ್ಲ, ದಕ್ಷಿಣ ಅಮೇರಿಕ ಮಧ್ಯ ಅಮೇರಿಕದ ರಾಜ್ಯಗಳೂ ಚೈನಾ ಸರಕಾರವೂ ಬೇರೆ ಬೇರೆ ನೆವನೆಗಳಿಂದ ತಾವು ಕೊಡಬೇಕಾದ ಹಣವನ್ನು ಕೊಡದೆ ಬಾಕಿ ಮಾಡಿರುವರು. ಹೀಗೆ ಬಾಕಿಯಾದ ಹಣವು ಸುಮಾರು ೧೮| ಮಿಲಿಯ ಮಾರ್ಕುಗಳಾಗುತ್ತಿವೆ. ಇವರು ಕೊಡದೆ ಬಾಕಿ ಮಾಡಿದರೂ ಕೊಟ್ಟವರ ಹಣವನ್ನು ಸರಿಯಾಗಿ ಖರ್ಚಿಗೆ ಸಾಲುವಷ್ಟು ಹಾಕಿಯದೆ ಎಂದು ಬ್ರಿಟಿಷ್ ಫೋರ್ನ್ ಸೆಕ್ರಿಟರಿಯವರು ಹೇಳುತ್ತಿರುವರು. ಆದರೂ ಅವರು ಕೊಡತಕ್ಕ ಹಣದ ಮೌಲ್ಯವನ್ನು [illegible]. ಇದು ಒಂದು

[illegible] ಸರಕಾರದ [illegible] ಸಾರಾಯಿದವರೂ ಅದೇ ತರದ ಸಮಾಗಮನ್ನು ಹುಡುಕಿ ಲೀಗಿಗೆ ಕೊಡುವ ಹಣವನ್ನು ಯಾಕೆ ನಿಲ್ಲಿಸಬಾರದು ಎಂಬ ಪ್ರಶ್ನೆಯು ಹುಟ್ಟುತ್ತದೆ. ಎಸೆಂಬ್ಲಿ ಮೆಂಬರರು ಈ ವಿಷಯ ಚೆನ್ನಾಗಿ ಪರ್ಯಾಲೋಚಿಸಿ, ಈ ಸಂಗತಿಯ ಕುರಿತು ಲೀಗಿನವರಿಗೆ ಇನ್ನೊಂದು ಸಾರಿ ತಿಳಿಸುವುದು ಉತ್ತಮ.

ಕೌನ್ಸಿಲ್ ಮೆಂಬರಿಕೆಗೆ ರಾಜಿನಾಮೆ.

ಕಳೆದ ಲಾಹೋರ್ ಕೊಂಗ್ರೆಸಿನಲ್ಲಿ ಕೌನ್ಸಿಲ್ ಮೆಂಬರಿಕೆಗೆ ಕೊಂಗ್ರೆಸ್ ಮೆಂಬರರು ರಾಜಿನಾಮೆ ಕೊಡಬೇಕೆಂಬ ಠರಾವು ಪಾಸಾದೊಡನೆ ಕೌನ್ಸಿಲ್ ಮೆಂಬರರಾದವರಲ್ಲಿ ಗಲಿಬಿಲಿಯನ್ನು ಉಂಟುಮಾಡಿಯದೆ. ಈ ತರದ ಗಲಿಬಿಲಿಯಾಗಲು ಹಲವು ಕಾರಣಗಳಿವೆ. ಕೊಂಗ್ರೆಸ್ ಮೆಂಬರರಲ್ಲಿ ಹಲವು ವಿಧದ ಮೆಂಬರರಿರುವರು. ಮನಃಪೂರ್ವಕವಾಗಿ ದೇಶವಾತ್ಸಲ್ಯವಿದ್ದು, ಕೊಂಗ್ರೆಸ್ ಕಾರ್ಯಕ್ರಮಗಳಿಗೂ ಕೊಂಗ್ರೆಸಿನ ಧ್ಯೇಯಕ್ಕೂ ಸರಿಯಾಗಿ ಕೆಲಸ ನಡಿಸುವವರು ಮೊದಲನೇ ತರಗತಿಯವರು. ಇವರು ದೇಶಕ್ಕಾಗಿ ಸೆರೆಮನೆಗಳನ್ನು ಸೇರಲಿಕ್ಕೂ, ಪ್ರಾಣಾರ್ಪಣ ಮಾಡುವುದಕ್ಕೂ ಯಾವಾಗಲೂ ಸಿದ್ಧರಾಗಿಯೇ ಇರುವರು. ದೇಶವಾತ್ಸಲ್ಯವು ಇದ್ದು ಕೆಲಸ ಮಾಡುವವರು ಎರಡನೆಯ ತರಗತಿಯವರು. ಇವರು ಜೈಲಿಗೆ ಹೋಗಿ ದೇಶಕ್ಕಾಗಿ ಪ್ರಾಣವನ್ನು ಅರ್ಪಿಸುವುದಕ್ಕೆ ಸಿದ್ಧರಿಲ್ಲ. ಸೌಮ್ಯರೀತಿಯಿಂದ ಇರುವರು. ಇನ್ನು ಕೊಂಗ್ರೆಸ್ ಮೆಂಬರರೆಂದೆನ್ನಿಸಿಕೊಂಡು ದೇಶವಾತ್ಸಲ್ಯವಿಲ್ಲದಿದ್ದರೂ ಉಂಟೆಂದು ತೋರಿಸಿಕೊಂಡು ಒಂದೆಡೆ ಸರಕಾರದೊಡನೆ ಸ್ನೇಹಭಾವದಿಂದ ಇದ್ದು ಸರಕಾರಿ ಕೆಲಸ, ಕೌನ್ಸಿಲ್ ಮೆಂಬರಿಕೆ ಮುಂತಾದನ್ನು ಪಡೆದು ಎರಡೂ ಕಡೆಯಿಂದಲೂ ಶಿಫಾರಸು ಪಡಿಯಬೇಕೆಂದಿರುವವರು ಮೂರನೇ ತರಗತಿಯವರು. ಇವರು ಕೊಂಗ್ರೆಸ್ ಕಡೆಯಿಂದ ದೇಶೋದ್ಧಾರದ ಕೆಲಸವು ಮಾಡುವ ಸಮಯ ಒಂದಾಗ ಇವರ ಗುಟ್ಟು ಬಯಲಾಗುವುದು. ಆಗ ಸರಕಾರದ ಹೆದರಿಕೆಯಿಂದಲೂ, ಮೆಂಬರಿಕೆಯನ್ನು ಬಿಡಲಿಕ್ಕೆ ಮನಸ್ಸಿಲ್ಲದೆಯೂ ತಳಮಳಿಸುವರು. ಕಡೆಗೆ ಕೊಂಗ್ರೆಸ್ ಮೆಂಬರಿಕೆಯನ್ನೇ ಬಿಟ್ಟು, ಕೌನ್ಸಿಲು, ಮೆಂಬರಿಕೆಯೂ, ಎಲ್ಲಾ ತರದ ಮಾನಮರ್ಯಾದೆಗಳೂ, ಬೇಕೆಂದು ಹೇಳುವವರು ಈ ವರ್ಗದವರು. ಈ ರೀತಿಯಲ್ಲಿ ಹಲವು ಧ್ಯೇಯಗಳಿಂದ ಕೊಂಗ್ರೆಸ್ ಮೆಂಬರರಾಗಿರುವವರ ಪರೀಕ್ಷಾಕಾಲವು ಈಗ ಬಂದೊದಗಿಯದೆ. ಮೊದಲನೇ ತರಗತಿಯವರು ಮೆಂಬರಿಕೆಯನ್ನು ಬಿಟ್ಟೇಬಿಟ್ಟರು. ಎರಡನೇ ತರಗತಿಯವರು ಆಲೋಚಿಸುತ್ತಿರುವರು. ಮೂರನೇ ತರಗತಿಯವರು ಮರ್ಯಾದೆಗಾಗಿ ಕೊಂಗ್ರೆಸ್ ಧ್ಯೇಯಕ್ಕಾಗಿ ಕೌನ್ಸಿಲ್ ಮೆಂಬರಿಕೆಯನ್ನು ಬಿಟ್ಟು ನಂತರ ಹೋಗಿ ಒಂದ ಮೇಲೆ ಕೊಂಗ್ರೆಸ್ ಮೆಂಬರಿಕೆಗೆ ರಾಜಿನಾಮೆ ಕೊಟ್ಟು ತಿರಿಗಿ ಕೌನ್ಸಿಲ್ ಸೇರುವ ಆಲೋಚನೆಯಲ್ಲಿರುವರು. ಆದರೆ ಈ ರೀತಿಯಲ್ಲಿ ಮಾಡದೆ ಎಲ್ಲರೂ ಭಾರತಮಾತೆಯ ಪುತ್ರರೆಂದು ತಿಳಿದುಕೊಂಡು ಕೆಲಸ ಮಾಡುವದು ಒಳ್ಳೇದು.

ಒಂದೆಡೆ ವೈದೀಕರ ಮಸೂದೆಯ ವಿರೋಧವಾದ ಚಳವಳಿ. ಇನ್ನೊಂದೆಡೆ ಕಾನೂನಿನ ಪ್ರಚಾರಕ್ಕೆ ಸರಕಾರದ ಕಾರ್ಯಕ್ರಮ

* * *

ಸುಪ್ರಸಿದ್ಧವಾದ ನಮ್ಮ ಮುನಿಸಿಪಾಲಿಟಿಗೆ ಈಗ ಫಸ್ಟ ಕ್ಲಾಸ್ ಹೆಲ್ತ ಆಫೀಸರರಿರುವರು. ಫಸ್ಟ್ ಕ್ಲಾಸ್ ಆಫೀಸರರಿದ್ದ ಮೇಲೆ ಪಟ್ಟಣದ ಆರೋಗ್ಯವನ್ನು ಕೇಳಬೇಕೆ? ಅಲ್ಲಲ್ಲಿ ಚರಂಡಿಗಳೆಲ್ಲವೂ ಸಿಮೆಂಟಿನಿಂದಲೇ ಕಟ್ಟಿಸಲ್ಪಟ್ಟವು. ಆದರೆ ಚರಂಡಿಗಳಿಂದ ದುರ್ವಾಸನೆಯನ್ನು ದೂರುವ ನೀರು ಸರಿಯಾಗಿ ಹೊರಡುತ್ತದೊ ಎಂದು ನೋಡುವರೆ ಫಸ್ಟ್ ಕ್ಲಾಸು ಆಫೀಸರರಿಗೆ ಪುರುಸೊತ್ತೇ ಕಮ್ಮಿ. ನಮ್ಮ ಪಟ್ಟಣ ತಾತರಾದರೂ ಈ ವಿಷಯಲ್ಲಿ ಸ್ವಲ್ಪ ಆಫೀಸರರೊಡನೆ ವಿಚಾರಿಸಲಾರರೆ?

* * *

ಜಿಲ್ಲಾ ಪ್ರಚಾರಕ ಕಮಿಟಿಯ ಕಾರ್ಯವು ಭರದಿಂದ ಸಾಗುತ್ತಲಿದೆ. ಅದರ ಮೇಲೆ ಬೇರೆ ಬೇರೆ ತಾಲೂಕುಗಳಲ್ಲಿ ಪ್ರಚಾರಕಾರ್ಯದ ಸಲುವಾಗಿ ಕೆಲಸ ಮಾಡಲು ಹಲವು ಉಮೇದುವಾರರು ಪ್ರಯತ್ನಪಡುತ್ತಿರುವರು.

* * *

ಸಮಾಜೋನ್ನತಿಯ ಇವರ ಕಾರ್ಯವು ಯಶಸ್ವಿಯಾಗಿ ಪೂರ್ಣವಾಗಲೆಂದು ಹಾರೈಕೆ.

[illegible] ಅಧ್ಯಕ್ಷತೆಯಿಂದ [illegible]

* * *

ಯುವಕ ಉತ್ಸಾಹೀ ಅಧ್ಯಕ್ಷರ ಅಧ್ಯಕ್ಷತೆಯಿಂದ ಈವರ ಕಾಂಗ್ರೆಸ್ಸು ಉತ್ಸಾಹದಿಂದ ನಡೆಯಬೇಕಾಯಿತು.

* * *

ಸಿಲ್ಹರಿನ ಲಕ್ಷ್ಮೀಪುರದಲ್ಲಿ ಒಬ್ಬ ಪೋಲೀಸನು ಒಬ್ಬ ಸ್ತ್ರೀಯನ್ನಪಹರಿಸಿರುವನು. ಪೋಲೀಸನ ಅಪರಾಧಕ್ಕೆ ಲಿಯಲಿಗೆ ಬಂದು ಹದಿನೆಂಟು ತಿಂಗಳ ಕಠಿಣ ಸಜೆಯು ಆತನಿಗೆ ವಿಧಿಸಲ್ಪಟ್ಟಿತು.

* * * *

ಅಪರಾಧಗಳನ್ನು ತಡೆಯುವ ಅಧಿಕಾರಿಗಳೇ ಹೀಗೆ ವರ್ತಿಸಿದರೆ, ಇನ್ನು ಅಪರಾಧಗಳಾಗುವ ಬಗೆ ಹೇಗೆ?

* * *

ಪ್ರತಾಪಗಡದಲ್ಲಿರುವ ಶ್ರೀ ಶಿವಾಜಿಯ ಭವಾನಿ ದೇವಸ್ಥಾನದಿಂದ ಕೆಲ ದಿನಗಳ ಹಿಂದೆ ಕಳ್ಳನರು ಸುಮಾರು ನಾಲ್ಕು ಲಕ್ಷಕ್ಕೆ ಮಿಕ್ಕಿದ ಮೌಲ್ಯದ ರತ್ನಾಭರಣಗಳನ್ನು ಸೂರೆಮಾಡಿದರು.

* * * *

ದೇವಳದ ಹಣವನ್ನು ರಾಷ್ಟ್ರೋದ್ಧಾರದ ಸಲುವಾಗಿ ಈ ಮೊದಲೇ ವಿನಿಯೋಗಿಸುತ್ತಿದ್ದರೆ ಎಷ್ಟೋ ಚೆನ್ನಾಗುತ್ತಿದ್ದಿತು. ಅದರ ಬದಲು ಈಗ ಪಠಾನ ಕಳ್ಳರ ಹೊಟ್ಟೆ ತುಂಬಲು ದಾರಿಯಾಯಿತು.

* * * *

ಕಾಂಗ್ರೆಸ್ ಮೆಂಬರರು ಕೌನ್ಸಿಲನ್ನು ಬಹಿಷ್ಕರಿಸಬೇಕೆಂಬ ಕಾಂಗ್ರೆಸ್ ಠರಾವಿನಂತೆ ಬಂಗಾಳ ಮೊದಲಾದ ಕಡೆಗಳಲ್ಲಿ ಹಲವರು ಕೌನ್ಸಿಲ್ ಮೆಂಬರಿಕೆಗೆ ರಾಜಿಯತ್ತಿರುವರು.

* * *

ನಮ್ಮೂರಿನ ಶ್ರೀ ರಾಮಕೃಷ್ಣ ಕಾರಂತರವರೂ ಮದರಾಸು ಕೌನ್ಸಿಲ್ ಮೆಂಬರಿಕೆಗೆ ರಾಜಿಯತ್ತಿರುವರೆಂದು ವಾರ್ತೆಯಿದೆ. ನಿಜವಾಗಿದ್ದರೆ ಅತ್ಯಂತ ಅಭಿನಂದನೀಯ.

* * *

ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರ ಆಫೀಸಿಗೆ ಬೆಂಕಿಹಿಡಿದು ಕೆಲವು ಮಹತ್ವದ ರಿಕಾರ್ಡುಗಳು ಸುಟ್ಟುಹೋದುವಂತೆ.

* * * *

ರಾಜ್ಯಾಡಳಿತೆಯ ಆಫೀಸಿಗನೇ ಬೆಂಕಿಹಿಡಿದುದು ಶುಭ ಸೂಚನೆಯೊ ಅಥವಾ ಅಶುಭದ ಲಕ್ಷಣವೋ ಎಂಬುದು ಮುಂದೆ ತಿಳಿಯಬೇಕಷ್ಟೆ!

* * * *

ಅಫಘಾನಿನವಲ್ಲಿ ಈಗ ಪುನಃ ಜನರು ಪಾಶ್ಚಾತ್ಯ ಪದ್ಧತಿಗಳನ್ನು ಅನುಕರಿಸತೊಡಗಿರುವರು. ಅಮಾನುಲ್ಲಾಖಾನರ ನವೀನ ಸುಧಾರಣೆಯನ್ನು ಸಮರ್ಥಿಸತೊಡಗಿರುವರು.

* * * *

ಬಚ್ಚಾನೆ ಅಮಾನುಲ್ಲಾಖಾನರ ಹೊಸ ಕಾನೂನು ಅವರಿಗೇನೆ ಕಾಬೂಲ್ಲಲ್ಲಿ ನಿಲ್ಲಬಿಡಲಿಲ್ಲ. ಅವರು ಹೋದದ್ದೆ ತಡ, ಹಳೇ ಕ್ರಮ ಪ್ರಾರಂಭ.

* * * *

ಕ್ರಿಸ್ತ ಗುರುಗಳಾದ ಪೋಪ ಸಾಹೇಬರು ತಮ್ಮ ಕ್ರಿಸ್ತೀ ಸ್ತ್ರೀಯರು ಹಿಂದೀಯರ ರೀತಿಯ ಸೀರೆಗಳನ್ನುಡುವುದೇ ಚೆನ್ನಾಗಿರುವದೆಂದು ಅಭಿಪ್ರಾಯಪಟ್ಟಿರುತ್ತಾರೆ.

* * * *

ನಾಗರೀಕ ಹಿಂದೀ ಸ್ತ್ರೀಯರನೇಕರಿಗೆ, ಸೀರೆ ಉಡುವುದರಲ್ಲಿ ಅಸಹ್ಯಯುಂಟಾಗತಹತ್ತಿದೆ. ಇಂಡಿಯಾನರಲ್ಲಿ ಕಡಿಮೆಯಾಗುವಾಗ್ಗೆ ಕ್ರಿಸ್ತರಲ್ಲಿ ಪ್ರಾರಂಭವಾದರೆ, ಸೀರೆ ವ್ಯಾಪಾರಿಗಳು ಬಚಾವು.

* * *

ಸರದಾರವರ ಬಾಲ್ಯ ವಿವಾಹ ನಿಷೇಧ ಮಸೂದೆಯ ಪ್ರಚಾರಕ್ಕಾಗಿ ಮುಂಬಾಯಿ ಸರಕಾರದವರು ವಿವಿಧ ಕಾರ್ಯಕ್ರಮಗಳನ್ನು ಕೈಕೊಳ್ಳಲಾಲೋಚಿಸಿರುವರು.

* * *

[illegible]
[illegible] ಬಿಟ್ಟ [illegible]
[illegible] ಸರಿಗಿನ [illegible]
([illegible])

ತಾ.	[illegible]	[illegible]	[illegible]	[illegible]	[illegible]	ಗ. [illegible]	ಸೂರ್ಯ. ಉ	ಅಸ್ತ
11	[illegible]	[illegible]	[illegible]	[illegible]	[illegible]	[illegible]	6.58	6.19
12	[illegible]	[illegible]	[illegible]	[illegible]	[illegible]	[illegible]	6.59	6.20
13	[illegible]	[illegible]	[illegible]	[illegible]	[illegible]	[illegible]	6.59	6.20
14	[illegible]	○	[illegible]	[illegible]	[illegible]	[illegible]	6.59	6.21
15	ಬುಧ	[illegible]	[illegible]	ರೇವತಿ	[illegible]	[illegible]	6.59	6.21
16	ಗುರು	[illegible]	[illegible]	ಅಶ್ವಿನಿ	[illegible]	[illegible]	6.59	6.22
17	ಶುಕ್ರ	[illegible]	[illegible]	ಭರಣಿ	[illegible]	[illegible]	6.59	6.22

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
2	89—4	67—1	—	—
3	88—5	69—1	—	—
4	89—4	70—4	—	—
5	90—7	71—7	—	—
6	91—3	72—4	—	—
7	91—8	72—6	—	—
8	94—0	75—3	—	162-97

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮುಕ್ತಿ ...	7—0	8—0
ಗುಡ್ಡೆ ...	6—4	6—14
ಹೊಸ ರಾಶಿ ...	5—6	6—8
ಉದ್ದ ಅಪ್ಪಲ್ ಬೆಳ್ತಿಗೆ ...	7—6	8—0
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ ...	12—8	13—0
ಸಾಗ್ಗಿ ...	5—14	6—14
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ ...	6—8	6—12
ಗೋಧಿ ಗೋಣಿ ಗಳ್ಳೆ ...	18—8	20—0
ಹುರುಳಿ ಗೋಣಿ ಗಳ್ಳೆ ...	8—4	10—0
ಕಡಲೆ ಗೋಣಿ ಗಳ್ಳೆ ...	16—8	18—8
ತೊಗರಿ ಗೋಣಿ ಗಳ್ಳೆ ...	16—8	17—0
ತೊಗರಿಬೇಳೆ ಗೋಣಿ ಗಳ್ಳೆ ...	18—8	27—0
ಉದ್ದು ಗೋಣಿ ಗಳ್ಳೆ ...	15—8	16—8
ಹೆಸರು ಗೋಣಿ ಗಳ್ಳೆ ...	14—8	16—0
ಊರು ಬೆಲ್ಲ ಖಂಡಿ ಗಳ್ಳೆ ...	45—0	52—8
ಉಪ್ಪು ಗೋಣಿ ಗಳ್ಳೆ ...	4—5	4—14
[illegible] ಖಂಡಿ ಗಳ್ಳೆ ...	88—0	94—
[illegible] ಖಂಡಿ ಗಳ್ಳೆ ...	31—0	32—0
ಎಳ್ಳೆಂಡಿ ಖಂಡಿ ಗಳ್ಳೆ ...	35—0	32—8
[illegible] ಎಣ್ಣೆ ಮುಡಿ ಗಳ್ಳೆ ...	6—0	7—0
ಎಳ್ಳೆಣ್ಣೆ ಮುಡಿ ಗಳ್ಳೆ ...	7—12	8—6
[illegible] ಬೆಳ್ತಿಗೆ ಗಳ್ಳೆ ...	7—12	8—4
[illegible] ಗಳ್ಳೆ ...	8—7	8—8
ಹೊಸ [illegible] ...	5—6	9—8
ಸಾಸಿವೆ ಮುಡಿ ಗಳ್ಳೆ ...	8—5	8—12
[illegible] ಮುಡಿ ಗಳ್ಳೆ ...	2—8	3—12
[illegible] ಖಂಡಿ ಗಳ್ಳೆ ...	310—0	315—0
[illegible] ಖಂಡಿ ಗಳ್ಳೆ ...	340—0	450—0
[illegible] ಗಳ್ಳೆ ...	36—0	40—
[illegible] ಮುಡಿ ಗಳ್ಳೆ ...	3—8	—
[illegible] ಖಂಡಿ ಗಳ್ಳೆ ...	42—8	45—0
[illegible] ಗಳ್ಳೆ ...	18—4	18—8
[illegible] ಗಳ್ಳೆ ...	22—0	23—0
[illegible] ಗಳ್ಳೆ ...	14—12	—
[illegible] ಗಳ್ಳೆ ...	17—0	17—8
[illegible] ಗಳ್ಳೆ ...	13—8	—
[illegible] ಖಂಡಿ ಗಳ್ಳೆ ...	30—0	37—8
[illegible] ಖಂಡಿ ಗಳ್ಳೆ ...	[illegible]	395—0

Chikmagalur Public Conveyance Motor Service.

C H I K M A G A L U R.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವರೆಗೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತಾರೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ ಸ್ಟೇಷನು ಗಾಟಿ 11-45ಕ್ಕೂ ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ, ಮೋಟಾರ ಸ್ಟೇಷನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ಯಾಮಿಗೆ ಸಿದ್ಧವಾಗಿರುವ ಸ್ಟೀಮರಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ಯಾಕುಮಾರಿ ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಸ್ಟೇಷನು ಗಾಟಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಿಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ, ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಾಯಸಂಚಾರಿಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂಡಬಿದರೆ ಕಂಬಳ ಮಾರ್ಗವಾಗಿಯೂ ಎಡಪದವು ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವೀಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅವಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಚಿಕ್ಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

[illegible]

[illegible] . . . ೬
[illegible] — [illegible], [illegible], [illegible], [illegible] . . . ೬
[illegible] . . . ೭
[illegible] ಸಂಘದ [illegible] ಕರಾವುಗಳು . . . ೧೧
[illegible] . . . ೧೧
[illegible] . . . ೯
ಕಾಂಗ್ರೆಸ್ ಸಭಾಧ್ಯಕ್ಷರ ಭಾಷಣ . . . ೧೧
[illegible] ಸ್ವರಾಜ್ಯ ಸಾಧಿಸುವವು . . . ೧೪
ನಮ್ಮ ಮುಂದಿನ ಕರ್ತವ್ಯ . . . ೧೧
[illegible] ಒಂದು [illegible] ಘಟನೆ . . . ೧೧

ಸ್ವದೇಶಾಭಿಮಾನಿ.

ತಾರೀಕು ೧೦ನೇ ಶುಕ್ರವಾರ ಜನವರಿ ೧೯೩೦.

ನಾಯಿಯ ಪ್ರೇತಬಾಧೆ

ಅರ್ಲ ರಸ್ಸೆಲ್ ಎಂಬವರು ಇಂಡಿಯಾ ಆಫೀಸಿನ ಅಂಡರ್ ಸೆಕ್ರೆಟರಿ ಒಫ್ ಸ್ಟೇಟಿನ ಗದ್ದಿಗೆಗೆ ಇತ್ತೀಚೆಗೇನೇ ಏರಿಸಲ್ಪಟ್ಟವರು. ಅವರಿಗೊಂದು ನಾಯಿ ಇತ್ತು. ಒಂದು ದಿನ ಆ ನಾಯಿ ಸತ್ತುಹೋಯಿತು. ಅರ್ಲ ರಸ್ಸೆಲರ ದುರಾದೃಷ್ಟದಿಂದಲೊ ಹಿಂದೂಸ್ಥಾನದ ದುರಾದೃಷ್ಟದಿಂದಲೊ ಅದೇ ದಿನ ಅವರಿಗೆ ಒಂದು ಲೇಬರ್ ಪಕ್ಷದ ಸಭೆಗೆ ಭಾಷಣ ಕೊಡುವ ಯೋಗವು ಉಂಟಾಯಿತು. ಅಷ್ಟರೊಳಗೇನೆ ಅವರಲ್ಲಿ ಕಳೆದುಹೋದ ನಾಯಿಯ ಪ್ರೇತಬಾಧೆ ಉಂಟಾಗಿತ್ತೆಂದು ಯಾರಿಗೂ ತಿಳಿದಿಲ್ಲ. ಸಭೆಗೆ ಬಂದೇ ಬಂದರು. ಭಾಷಣವನ್ನೂ ಕೊಟ್ಟೇ ಬಿಟ್ಟರು. ಏನೆಂದು?—"ಹಿಂದೂಸ್ಥಾನಕ್ಕೆ ಡೊಮಿನಿಯನ್ ಸ್ಟೇಟುಸು ಈಗ ಸಾಧ್ಯವಿಲ್ಲ. ಮಾತ್ರವಲ್ಲ; ಇನ್ನು ಬಹಳ ಸಮಯದ ವರೆಗೂ ಸಾಧ್ಯವಿಲ್ಲ, ಇಂಗ್ಲೀಷರು ಅದನ್ನು ಪ್ರಜಾಸತ್ತೆಯ ಕಡೆಗೆ ತರಬೇಕು ಮಾಡುತ್ತಾ ಬಂದಿದೆ; ಈಗ ಅದನ್ನು ಥಕ್ಕನೆ ಬಿಟ್ಟರೆ ಹಿಂದೂಸ್ಥಾನಕ್ಕೆ ಭಯಂಕರ ಸಂಕಷ್ಟದಲ್ಲಿ ಹಾಕಿದಂತಾಗುವುದು"

ಹಿಂದೂಸ್ಥಾನವು ಇಂತಹ ಭಾಷಣಗಳನ್ನು ಪ್ರೀತಿಯಿಂದ ಅಂಗೀಕರಿಸುವುದು. ಮೆಕ್ಡೊನಾಲ್ಡರ ಯುಕ್ತಿಯ ಮಾತುಗಳಿಗಿಂತಲೂ, ವೆಜ್‌ವುಡ್‌ಬೆನ್ನರ ಅನುಭೂತಿಮಯ ಮಾತುಗಳಿಗಿಂತಲೂ, ಅರ್ಲ ರಸ್ಸೆಲರ ಈ ನಗ್ನಸ್ಪಷ್ಟೋಕ್ತಿಯನ್ನು ಹಿಂದೂಸ್ಥಾನವು ಬಹಳವಾಗಿ ಮಾನಿಸುವುದು. ಮಿ| ಫೆನ್ನರ್ ಬ್ರೊಕ್ವೆಯವರ ಬೆನ್ನು ತಟ್ಟುವಿಕೆಯು, ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯ ಉದಾರ ಠರಾವುಗಳಿಗಿಂತಲೂ ಇದು ಹೆಚ್ಚು ಪ್ರಯೋಜನಕಾರಿಯಾಗಿದೆ. ಲೋರ್ಡ ಇರ್ವಿನರ ಆಶ್ವಾಸನೆಯಿಂದ ಈ ವರೆಗೆ ಒಂದು ತರದ ಸುಳ್ಳು ವಾತಾವರಣವು ಹರಡಿಸಲ್ಪಡಲು ಯತ್ನಗಳು ನಡೆಯುತ್ತಿದ್ದುವು. "ಉಸುಬಿನ ಮೃಗತೃಷ್ಣಿಕೆಯನ್ನು ಬ್ರಿಟಿಷ ರಾಜತಂತ್ರಜ್ಞನು ನಮ್ಮ ಬಾಯಾರಿಕೆಗೆ ತೋರಿಸಿ ಬಿಟ್ಟಿದ್ದನು. ಎಂದಿಗೂ ಮೋಸಹೋಗಬೇಡಿ" ಎಂಬುದೇ ಅರ್ಲ ರಸ್ಸೆಲರ ಮಾತಿನ ಗೂಢಾಭಿಪ್ರಾಯವಾಗಿರುತ್ತದೆ ಎಂದು ಈಗ ನಾವು ನೆನಸಬೇಕಾಗಿದೆ.

ಅರ್ಲ ರಸ್ಸೆಲರೇನೋ ಕಾಂಗ್ರೆಸ್ಸಿನ ತೀಕ್ಷ್ಣ ಠರಾವನ್ನು ಉದ್ದೇಶಿಸಿ ಹೀಗೆ ಹೇಳಿ; ಆ ಠರಾವುಗಳು ಬರೇ ಹುಚ್ಚುತನವೆಂದು ಹೇಳಿದರು. ಅರ್ಲ ರಸ್ಸೆಲರ ಈ ಮಾತುಗಳು ಎಂದಿಗೂ ಕಾಂಗ್ರೆಸ್ಸಿಗೆ ಪ್ರತ್ಯುತ್ತರವಾಗಿರಲಾರವು. ಬಹಳ ಸಮಯದ ವರೆಗೆ ಸಾಧ್ಯವಾಗದ ಡೊಮಿನಿಯನ್ ಸ್ಟೇಟುಸು ಹಾಗಿರಲಿ; ರೌಂಡ್ ಟೇಬಲಿನಲ್ಲಿ ಸಿಕ್ಕಬಹುದೆಂಬ [illegible] ಲ್ಪಟ್ಟ ಡೊಮಿನಿಯನ್ ಸ್ಟೇಟಸನ್ನು ಕೂಡ ಕಾಂಗ್ರೆಸ್ಸು ಸ್ವೀಕರಿ

[illegible] ಯನ್ನು, [illegible] ಕಾಂಗ್ರೆಸ್ಸಿನ [illegible] ಯಾವುದೂ ಉಪಯುಕ್ತವಾಗಿದೆ ಎಂದು ನೆನಸುವರಾಗಿ ಅಷ್ಟುವೆನ್ನ.

ಹಿಂದೂಸ್ಥಾನದ ಆಸುವಿಕೆಯಲ್ಲಿ ತೋರಿಸಬೇಕಾದ ಧೋರಣದ ಕಡೆಗೆ ಬ್ರಿಟಿಷ ಮಜೂರ ಸರಕಾರವು ಈ ತರದ ಚಂಚಲತೆಯನ್ನು ತೋರಿಸುವುದಾಗಿ ನಾನು ನೆನಸಲಿಲ್ಲ. ಇರ್ವಿನರು ಆಶ್ವಾಸನವನ್ನು ಕೊಟ್ಟರು; ಬ್ರಿಟಿಷ ಕನ್ಸರ್ವೆಟಿವ್ ಪಕ್ಷವು ನಿರೋಧಿಸಿದ ಕೂಡಲೆ, ಈ ಆಶ್ವಾಸನದಲ್ಲಿ ಹೊಸದೇನೂ ಇಲ್ಲವೆಂದು ಹೇಳಿದರು. ಆ ಮೇಲೆ ಬೆನ್ನರು ಇದರಲ್ಲಿ ಧೋರಣದ ಬದಲಾವಣೆ ಇದೆಯೆಂದರು; ಲೊಯಿಡ್ ಜೋರ್ಜ ಮೆಕ್ಡೊನಾಲ್ಡರಿಗೆ ಕಾಗದ ಬರೆದಾಗ, ಮೆಕ್ಡೊನಾಲ್ಡ ಲೊಯಿಡ್ ಜೋರ್ಜರನ್ನು ಸಮಜಾಯಿಸಿದರು; ಪುನಃ ಫೆನ್ನರ ಬ್ರೊಕ್ವೆಯವರ ಸೌಹಾರ್ದದ ಠರಾವು ಬಂದಾಗ ಬೆನ್ನರು ಅದಷ್ಟು ಅನುಭೂತಿಯನ್ನು ಉಸುರಬಿಟ್ಟರು; ಈಗ ಪುನಃ ಅಂಡರ್ ಸೆಕ್ರೆಟರಿಯವರು ಡೊಮಿನಿಯನ್ ಸ್ಟೆಟಸೇ ಸಾಧ್ಯವಿಲ್ಲವೆನ್ನುವರು. ನಂಬುವುದು ಯಾರನ್ನು? ಕಾಂಗ್ರೆಸ್ಸಿನ ಮುಖಂಡರು ರಾಜತಂತ್ರದ ಕುಯುಕ್ತಿಗಳನ್ನು ಮನಸ್ಸಿನಲ್ಲಿ ತಂದು ರೌಂಡ್‌ಟೇಬಲ್ ಕೊನ್ಫರೆನ್ಸಿನ ಉದ್ದೇಶವನ್ನು ಮುಂದಾಗಿ ಕೇಳಿದುದರಲ್ಲಿ ತಪ್ಪೆಣಿಸುವುದು ಹೇಗೆ?

ಅರ್ಲ ರಸ್ಸೆಲರು ಈಗ ತಾನು ಹಾಗೆ ಹೇಳಿದ್ದೆ ಇಲ್ಲವಂತೆ. ಹೇಳಿದ್ದಾದರೆ ತನ್ನ ಪ್ರೀತಿಯ ನಾಯಿ ಸತ್ತುಹೋಗಿ ತನ್ನ ತಲೆಯು ಏನೂ ಏನೂ ಆಗಿಹೋಯಿತಂತೆ. ನಿಜ. ಇಂತಹ ದುಃಖದ ಸಂದರ್ಭಗಳಲ್ಲಿ ಯುಕ್ತಿಯ ಮಾತುಗಳು ಬಾಯಿಯಲ್ಲಿ ಬರುವುದಿಲ್ಲ. ಮನಸ್ಸಿನ ಅಂತರ್ಯದ ಮಾತುಗಳೇ ಬರುವುವು. ಅಂತೆಯೇ ಅರ್ಲ ರಸ್ಸೆಲರು ಅಧಿಕಾರಿ ವರ್ಗದ ಮನಸ್ಸನ್ನು ಹೊರಗೆಡವಿದರು. ಹೀಗೆ ಆಕಸ್ಮಾತ್ತಾಗಿ ಬಂದ ಈ ಎಚ್ಚರಿಕೆಯನ್ನು ಹಿಂದೂಸ್ಥಾನವು ಕಳಕೊಳ್ಳಲಾರದು. ಲಿಬರಲ್ ಪಕ್ಷವೂ ಇದರಿಂದ ಎಚ್ಚರಿಸಲ್ಪಟ್ಟು ಕಾಂಗ್ರೆಸನ್ನು ಸೇರುವುದು ಉಚಿತವೆಂದು ಕಂಡುಬರುತ್ತದೆ.

ಬ್ರಿಟಿಷ ಮಜೂರ ಸರಕಾರದ ಅಂತರ್ಯವು ನಿಜವಾಗಿ ಅರ್ಲ ರಸ್ಸೆಲರ ಅಭಿಪ್ರಾಯಗಳ ವಿರೋಧವಾಗಿದ್ದರೆ ಸರಕಾರವು ಅವರಿಂದ ರಾಜೀನಾಮೆಯನ್ನು ತೆಗೆದುಕೊಂಡು ಅವರನ್ನು ಇಂಡಿಯಾ ಆಫೀಸಿನಿಂದ ಹೊರಹಾಕಬೇಕು. ಹಾಗೆ ಮಜೂರ ಸರಕಾರವು ಮಾಡದಿದ್ದರೆ ಅವರಲ್ಲಿ ಎಷ್ಟು ಮಾತ್ರವೂ ವಿಶ್ವಾಸವನ್ನಿಡಲಾಗುವುದಿಲ್ಲವೆಂಬುವುದು ಖಚಿತವಾಗುವುದು. ಹಿಂದೊಂದು ಸಮಯದಲ್ಲಿ ಮೊಂಟೆಗ್ಯುರವರು ಸೆಕ್ರೆಟರಿಗಳಾಗಿದ್ದಾಗ ಅವರು ಹಿಂದೂಸ್ಥಾನಕ್ಕೆ ಅನುಕೂಲವಾಗಿ ಮಂತ್ರಿಮಂಡಳದ ಧೋರಣಕ್ಕೆ ವಿರೋಧವಾಗಿ ನಡೆದಿದ್ದಾಗ, ಹಿಂದೂಸ್ಥಾನದ ರಾಜಕೀಯ ಸೂತ್ರವನ್ನು ಅಷ್ಟು ಚಾತುರ್ಯದಿಂದಲೂ ಶಕ್ತಿಯಿಂದಲೂ ಅವರು ಹಿಡಿದಿದ್ದರಾದರೂ ಲೊಯಿಡ್ ಜೋರ್ಜರು ಅವರಿಂದ ರಾಜೀನಾಮೆ ತೆಗೆದುಕೊಂಡಿದ್ದರು. ಈ ರಾಜಕೀಯ ಕೆಲಸಗಳಲ್ಲಿ ಏನೊಂದು ತಿಳಿಯದ 'ಅಂಡರ್ ಸೆಕ್ರೆಟರಿ'ಯು ಮಂತ್ರಿಮಂಡಳದ ಧೋರಣಕ್ಕೆ ವಿರೋಧವಾಗಿ ಮಾತನಾಡಿದಾಗ ಅವನನ್ನು ಇಂಡಿಯಾ ಆಫೀಸಿನಿಂದ ಹೊರಗೆ ಹಾಕುವುದೇ ಮಂತ್ರಿಮಂಡಳದ ಕರ್ತವ್ಯವಿದೆ. ಮೆಕ್ಡೊನಾಲ್ಡರು ಇದನ್ನು ಮಾಡಲಾರರು; ಅಂತೆಯೇ ಮೆಕ್ಡೊನಾಲ್ಡರು ಇರ್ವಿನ್ ಆಶ್ವಾಸನವನ್ನು ಕಾರ್ಯಕಾರಿಯಾಗಿ ಮಾಡಲಾರರು.

ಇದಕ್ಕೆ ಹಿಂದೂಸ್ಥಾನದ ಪ್ರತ್ಯುತ್ತರವು ಒಂದೇ ಆಗಿದೆ ಅದು ಕಾಂಗ್ರೆಸ್ಸನ್ನು ಬಲಪಡಿಸಿ, ಕಾಂಗ್ರೆಸ್ಸಿನ ಕಾರ್ಯಕ್ರಮಕ್ಕೆ ಸಾರ್ವಜನಿಕ ಬೆಂಬಲವನ್ನು ಕೊಡಬೇಕು.

ವಿದೇಶ ವರ್ತಮಾನ.

— ವಿಮಾನದಲ್ಲಿ ಕುಳಿತು ಇಂಗ್ಲಾಂಡಿನಿಂದ ಹಿಂದೂಸ್ಥಾನಕ್ಕೆ ಹಾರಬೇಕೆಂದು ಹೊರಟಿದ್ದ ಮನಮೋಹನಸಿಂಹನು ತನ್ನ ಪಯಣವನ್ನು ಒಂದು ವಾರಕ್ಕೆ ಮುಂದರಿಸಿರುವನು. ಆತನು ತನ್ನ ವಿಮಾನಕ್ಕೆ 'ಮಿಸ್ ಇಂಡಿಯಾ' ಎಂಬ ಹೆಸರನ್ನು ಕೊಟ್ಟಿರುವನು. ಕೋಚಬಿಹಾರದ ಮಹಾರಾಣಿಯವರು ಈ ನಾಮಕರಣ ಸಮಾರಂಭವನ್ನು ಜರಗಿಸಿದರು.

ಅಮೇರಿಕದ ಯುನೈಟೆಡ್ ಸಂಸ್ಥಾನದ ಪ್ರತಿನಿಧಿ ಸಭೆಯ ಮಂದಿರದಲ್ಲಿ ಬೆಂಕಿಯುಂಟಾಗಿ ಕೆಲವು [illegible] ಸುಟ್ಟುಹೋಯಿತು.

— ಅಮೇರಿಕದ [illegible] [illegible] [illegible] ಶ್ರೀಗಳನ್ನು [illegible]

[illegible]

— ಗ್ರೀಕದೇಶದಲ್ಲಿ [illegible] ನರುಹೋಗಿ [illegible] [illegible] ಗಡಿತ್ತದೆ. [illegible] ಸಂಖ್ಯೆಯಲ್ಲಿ ಸ್ತ್ರೀಯರಿಗೆ ಮತ ಕೊಡುವ ಅಧಿಕಾರ ಬಂದಿರುತ್ತದೆ.

— ಪೆಲೆಸ್ತೀನದಲ್ಲಿ ಸಿಲ್ಕು ತಯಾರಿಸುವ ಕೈಗಾರಿಕೆಯನ್ನು ಸ್ಥಾಪಿಸುವ ಬಗ್ಗೆ ಸರಕಾರದವರು ಸಿಲ್ಕು ಬೆಳೆಯಿಸುವವರಿಗೆ [illegible] ವನ್ನು ಕೊಡುತ್ತಿರುವರು. ಮಲಬೆರಿ ಗಿಡಗಳನ್ನು ಧರ್ಮಾರ್ಥವಾಗಿ ಹಂಚುವರು. ಸಿಲ್ಕು ತಯಾರಿಸುವುದರ ವಿಷಯಕವಾದ ಭಾಷಣ ವಾದಗಳು ನಡೆಯುವವು.

— ಲಂಡನಿನ ಕಳ್ಳಕಳೆಯ ರೀತಿಯು ಕಳವೆಂದರೆ ಮೋಟಾರಕಾರಿನಲ್ಲಿ ಕುಳಿತು ಓಡುತ್ತಾ ಸ್ತ್ರೀ ಸಂಚಾರಕರ ಕೈಗಳಿಂದ ಕೈಚೀಲಗಳನ್ನು ಎಳೆದುಬಿಡುವವು. ಕಳೆದ ಒಂದು ವಾರದೊಳಗೆ ಲಂಡನಿನಲ್ಲಿ ಇಂತಹ ಘಟನೆಗಳು ಮುನ್ನೂರಕ್ಕೆ ಮಿಕ್ಕಿದುವು. ಕಳ್ಳರು ಹಿಂದಿನಿಂದ ಮೋಟಾರಿನಲ್ಲಿ ಓಡಿ ಬಂದು, ಮೋಟಾರಿನಿಂದ ಕೈಯನ್ನು ಹೊರಗೆ ಚಾಚಿ, ಸ್ತ್ರೀ ವ್ಯಕ್ತಿಯ ಟೊಪ್ಪಿಯನ್ನು [illegible] ಕಲ್ಲುಗಳನ್ನು ತಾಗಿಸಿ, ಕೈಯಲ್ಲಿನ ಕಂಚೀಲವನ್ನು ಅಪಹರಿಸಿ ಬಿಡುವರು. ಈ ರೀತಿಯ ಮೊಂದಸ್ಥರಿಂದ ಒಬ್ಬ ಸ್ತ್ರೀಯ ೫೦೦ ಪವನುಗಳು ಅಪಹರಿಸಲ್ಪಟ್ಟವೆ. ಈ ತರದ ಕಳವನ್ನು ಕಂಡುಹಿಡಿಯುವುದು ಪೋಲೀಸರಿಗೆ ಬಹು ಕಷ್ಟವಾಗಿ ಪರಿಣಮಿಸಿರುತ್ತದೆ

— ಮೆಕ್ಸಿಕೋದಿನಲ್ಲಿ ಬೆಳ್ಳಿಯ ಕ್ರಯವು [illegible] ಇಳಿದಿರುತ್ತದೆ. ಇಂತ ಕ್ರಯವು [illegible] ಇದ್ದರೆ ಮೂರು ತಿಂಗಳೊಳಗಾಗಿ [illegible] ಸಾವಿರ ಮಂದಿ ಗಣಿ ಕೆಲಸಗಾರರಿಗೆ ಕೆಲಸವಿರಲಾರದೆಂದು ನೆನಸಲ್ಪಟ್ಟಿದೆ.

— ಪೆಲೆಸ್ತೀನದ ಗಲಭೆಯ ವಿಚಾರಣೆಯನ್ನು ನಡಿಸಲು ನೇಮಿಸಲ್ಪಟ್ಟ ಕಮಿಟಿಯವರು ಕಳೆದ ಶನಿವಾರ ಲಂಡನಿಗೆ ತಲುಪಿದರು. ಪೆಲೆಸ್ತೀನದಲ್ಲಿ ಈ ಕಮಿಟಿಯವರು ದಿನಕ್ಕೆ ಆರು ತಾಸುಗಳಂತೆ ಒಂಭತ್ತು ವಾರಗಳ ವರೆಗೆ ಕೆಲಸ ನಡೆಸಿದರು. ಲಂಡನಿನಲ್ಲಿ ಇನ್ನು ಕೆಲವು ಸಾಕ್ಷಿಗಳನ್ನು ವಿಚಾರಿಸಲಿದೆ. ಮತ್ತು ಕೆಲವು ವಾರಗಳೊಳಗೆ ಕಮಿಟಿಯ ವರದಿಯು ತಯಾರಿಸಲ್ಪಡುವದು.

— ಕಳೆದ ವಾರದಲ್ಲಿ ಲಂಡನಿನ ರಸ್ತೆಯಲ್ಲಿ ಅಧಿಕ ವಾಹನಗಳಿಂದಾದ ಮೂರು ಅಪಘಾತಗಳು ಈ ರೀತಿಯಾಗಿವೆ. ಒಬ್ಬ ಸ್ತ್ರೀಯು ನಡೆಯುವಾಗ ನಾಯಿಯೊಂದಕ್ಕೆ ಎಡವಿದ್ದಳು. ಒಡನೆಯೇ ಹಿಂದಿನಿಂದ ಮೋಟಾರುಕಾರು ಬಂದು ಅವಳ ಮೇಲಿನಿಂದ ಹೋಯಿತು. ಒಬ್ಬ ಮನುಷ್ಯನು ಒಂದು ಮೋಟಾರುಕಾರಿನಿಂದ ನೂಕಲ್ಪಟ್ಟು ಮಾರ್ಗದ ಮೇಲೆ ಬಿದ್ದನು. ಆತನು ಏಳುವಷ್ಟರೊಳಗೆ ಆತನ ಬೆನ್ನ ಹಿಂದೆಯೇ ಬೇರೊಂದು ಮೋಟಾರುಕಾರು ಬಂದು ಆತನನ್ನು ಕೊಂದುಹಾಕಿತು. ನಾಲ್ಕು ವಯಸ್ಸಿನ ಒಂದು ಹೆಣ್ಣು ಮಗುವು ಟ್ರಾಮುಕಾರಿನಿಂದ ನೂಕಲ್ಪಟ್ಟಿತು. ಹಿಂದೆಯೇ ಒಂದು ಮೋಟಾರು ಬಸ್ಸು ಬಂದು ಅದರ ಮೈಮೇಲಿನಿಂದ ಹಾದುಹೋಯಿತು.

— ನ್ಯೂಯೋರ್ಕಿನ ಜೆ. ಪಿ. ಮೋರ್ಗನ್ ಎಂಬ ಕಂಪೆನಿಯವರಿಗೆ ವಿಶೇಷ ಲಾಭವಾದುದರಿಂದ ಸುಮಾರು ಒಂದು ಸಾವಿರ ಮಂದಿ ಕೆಲಸಗಾರರಿಗೆ ಒಂದೊಂದು ವರುಷದ ಸಂಬಳವನ್ನು ಬೋನಸಾಗಿ ಕೊಟ್ಟಿರುವರು.

— ಅಮೇರಿಕೆಯಲ್ಲಿ ಪೋಲೀಸರು ವಾಯುವಿಮಾನದಲ್ಲಿ ಕುಳಿತು ಹಾರುತ್ತ ಮಾರ್ಗದ ಚಲನವಲನೆಯ ಮೇಲೆ ಕಣ್ಣಿಡುವುದನ್ನು ನೋಡಿಕೊಳ್ಳಲು ಪ್ರಾರಂಭಿಸಿರುವರು.

— ಜರ್ಮನಿಯಲ್ಲಿ ಆದಾಯ ತೆರಿಗೆಯನ್ನು ಇಳಿಸುವುದರಲ್ಲಿರುವರು. ಮೊದಲಾಗಿ ಒಟ್ಟು ಕೊಡುವ ತೆರಿಗೆಯಲ್ಲಿ ೧೦,೦೦೦,೦೦೦ ಪವನುಗಳನ್ನು ಇಳಿಸುವರು. ಅಲ್ಲದೆ ಕಡೆಗೆ ವರ್ಷಕ್ಕೆ ೩೦,೦೦೦,೦೦೦ ಪವನುಗಳನ್ನು ಇಳಿಸುವರು.

— ಕಂಠನಾಳವಿಲ್ಲದೆ ಮಾತನಾಡಲು ಸಾಧ್ಯವಿದೆಯೆಂದು ಈಗ ಕಂಡುಹಿಡಿಯಲ್ಪಟ್ಟಿರುತ್ತದೆ. ಜರ್ಮನನೊಬ್ಬ ಅಮೇರಿಕನನೊಬ್ಬನು, ಒಪರೇಶನಿನ ಸಮಯ ಕಂಠನಾಳವನ್ನು ತೆಗಿಸಿದ್ದನು. ಈಗ ಆತನು ಮೆಲ್ಲಮೆಲ್ಲನೆ ಮಾತನಾಡತೊಡಗಿರುವನು.

— ಫಿಲ್ಮುಗಳ ವಿಷಯವಾಗಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾನೂನುಗಳಿವೆ. ಒಹಿಯೋವಿನಲ್ಲಿ ಚುಂಬಿಸುವ ದೃಶ್ಯದ ಫಿಲ್ಮು ಆರು ಇಂಚಿಗಿಂತಲೂ ಹೆಚ್ಚಿಗಿರಬಾರದು. ಹೆಂಗಸರು ಹೇಗೆ ಬತ್ತಿ ಸೇದುವ ಚಿತ್ರದನ್ನು ಕಾನ್ಸಾಸಿನಲ್ಲಿ ಪ್ರದರ್ಶಿಸಬಾರದು. ಪೆನ್ಸಿಲ್ವೇನಿಯದಲ್ಲಿ ಮದ್ಯಪಾನ ಮಾಡುವ ಚಿತ್ರಗಳನ್ನು ತೋರಿಸಲಾಗದು. ಮತಧರ್ಮಕ್ಕೆ ವಿರೋಧವಾದ ದೃಶ್ಯವುಳ್ಳ ಚಿತ್ರಪ್ರದರ್ಶನವನ್ನು ಪೆಲೆಸ್ತೀನದಲ್ಲಿ ಮಾಡಲಾಗದು. ಜಪಾನಿನಲ್ಲಿ ಮೊದಲಾದವುಗಳ ಪ್ರದರ್ಶನವನ್ನು ಬೆಲ್ಜಿಯಮಿನಲ್ಲಿ ಮಾಡಬಾರದಂತೆ.

— ಸರ್. ಅಲನ್ ಕೊಬ್‌ಹಾಮರು ಲಂಡನಿನಿಂದ ಕೇಪ್‌ಟೌನಿಗೆ ಹಾರಲು ತೊಡಗಿರುವರು.

— ಫ್ರಾನ್ಸ್ ಮತ್ತು [illegible] ವಿಮಾನ ಟಪ್ಪಾಲುಗಳ ಸರ್ವಿಸನ್ನು ಪ್ರಾರಂಭಿಸುವ ಬಗ್ಗೆ ಹಾದಿಯನ್ನು ನೋಡಲು ಜನವರಿ ೧೦ನೇ ತಾರೀಕಿನ ದಿವ ಇಬ್ಬರು ಫ್ರೆಂಚ ವೈಮಾನಿಕರು [illegible] ಎಂಬಲ್ಲಿಂದ ಹೊರಡುವರು. ಅವರು ಬಂದು [illegible] [illegible] ಗಾಗಿರುತ್ತದೆ.

ಜರ್ಮನಿಯ [illegible] ಎಂಬಲ್ಲಿ ಒಂದು ಹೊಸ ತರದ ಮಕ್ಕಳ ರೋಗವು ಪ್ರಾರಂಭವಾಗಿ ಬಹು ಅಲ್ಪ ಸಮಯದೊಳಗೆ [illegible] ಮಂದಿ ಮಕ್ಕಳು ಸತ್ತುಹೋದರು.

ಸ್ವದೇಶ ವರ್ತಮಾನ.

— ಶ್ರೀ ... ಸರಕಾರದ ... ಶತೋಧಶಾಸನದಯನ್ನು ಸಮು ... ಸಾಂಗವಾಗಿ ನಡೆಸುವ ಕಾರ್ಯವನ್ನು ... ಸರದಾ ಶಾಸನದ ವಿಷಯವಾದ ಸಂಗತಿಗಳನ್ನು ... ಅಕ್ಷರಗಳ ಜನರೊಳಗೆ ಧರ್ಮಾರ್ಥವಾಗಿ ಹಂ ... ಈ ಪತ್ರ, ಪತ್ರಿಕೆಗಳನ್ನು ವಿವಿಧ ಭಾಷೆಗಳಲ್ಲಿ ಮುದ್ರಿ ... ಈ ಶಾಸನವು ಎಪ್ರಿಲ್ ಒಂದನೇ ತಾರೀಖಿನಿಂದ ಜ್ಯಾರಿಗೆ ... ಸೂಚಿಸುವ ದೊಡ್ಡ ದೊಡ್ಡ ನೋಟೀಸುಗಳು ಸರ ... ಸ್ಥಳಗಳಲ್ಲಿಯೂ, ಬಹಿರಂಗವಾದ ಸ್ಥಳಗಳಲ್ಲಿಯೂ, ಸಂಸ್ಥಾನದ ಎಲ್ಲ ... ಹಚ್ಚಲ್ಪಡುವವು.

— ... ನಿರೋಧ ಲೀಗಿನ ಬರುವ ಸಭೆಯು ಎಪ್ರಿಲ್ ೧೯ನೇ ತಾರೀಖಿಗೆ ಮದರಾಸಿನಲ್ಲಿ ನಡೆಯುವದು.

— ಹಿಂದೂಸ್ಥಾನ ಸೇವಾದಳಕ್ಕೆ ಶ್ರೀ ಸ್ವಯಂಸೇವಕರು ಸೇರಿ ತರ ಬೇತು ಹೊಂದಬೇಕೆಂದೂ, ಮುಂದಣ ಸ್ವಾತಂತ್ರ್ಯ ಯುದ್ಧದಲ್ಲಿ ಅವರ ಅವಶ್ಯಕತೆಯೊದಗಬಹುದೆಂದೂ ಶ್ರೀಯುತ ಕಮಲಾದೇವಿ ಚಟ್ಟೋಪಾಧ್ಯಾಯರವರು ಸೂಚಿಸುವರು.

— ಹಿಂದೂ ಯುನಿವರ್ಸಿಟಿಯು ಒಂದು ದೊಡ್ಡ ಸಂಸ್ಥೆಯಾಗಿ ಪರಿಣಮಿಸಿಯದೆ. ಕಳೆದ ವರುಷ ಇಲ್ಲಿ ಕಲಿಯುವ ೩೧೯೬ ಜಿಲ್ಲೆಗಳಿಂದ ವಿದ್ಯಾರ್ಥಿಗಳು ಬಂದಿದ್ದರು. ತಮಿಳು ನಾಡಿನಿಂದ ೧೪೭ ಮಂದಿಗಳೂ, ಕೇರಳದಿಂದ ೨೨ ಮಂದಿಗಳೂ, ಆಂಧ್ರದಿಂದ ೪೧ ಮಂದಿಗಳೂ, ದಕ್ಷಿಣ ಕನ್ನಡದಿಂದ ಒಬ್ಬರೂ ಬಂದಿದ್ದರು.

— ಮುಂಬಯಿಯ ಅಂಧೇರಿಯಲ್ಲಿ ರತ್ನಸೋನಾಯಿಯೆಂಬ ಯುವತಿಗೆ ಜಾನಕಿ ಎಂಬ ಹೆಸರಿನ ಒಬ್ಬ ಕ್ಷತ್ರಿಯನ ಮಗಳನ್ನು ಮದುವೆ ಮಾಡಿಕೊಳ್ಳಬೇಕೆಂದು ಇಚ್ಛೆಯಿದ್ದಿತು. ಆದರೆ ಹುಡುಗಿಯು ನಿರಾಕರಿಸಿದಳು. ರತ್ನಸೋನಾಯಿಯು ಹುಡುಗಿಯ ತಾಯಿಯೊಡನೆ ವಿಚಾರಿಸಿದಾಗ ಆಕೆಯೂ ನಿರಾಕರಿಸಿದಳು. ರತ್ನಸೋನಾಯಿಗೆ ಸಿಟ್ಟು ಬಂದು ತಾಯಿಯ ಪ್ರತ್ಯಕ್ಷತೆಯಲ್ಲಿಯೇ ಆತನು ಕತ್ತಿಯಿಂದ ಜಾನಕಿಯನ್ನು ಚೆನ್ನಾಗಿ ಹೊಡೆದು ಕೊಂದನು. ಆತನೀಗ ಕೈದುಮಾಡಲ್ಪಟ್ಟಿರುವನು.

— ಕಾಂಗ್ರೆಸ್ಸಿನ ನಿರ್ಣಯಾನುಸಾರವಾಗಿ ಶ್ರೀ ಸೇನಗುಪ್ತರವರು ತನ್ನ ಕೌನ್ಸಿಲು ಮೆಂಬರತನಕ್ಕೆ ರಾಜಿಯಿತ್ತಿರುವರು. ಮಾತ್ರವಲ್ಲದೆ ಇತರರೂ ಹಾಗೆಯೇ ಮಾಡಬೇಕೆಂದು ಪ್ರಕಟಿಸಿರುವರು. ಇದು ವರೆಗೆ ಇತರ ಮೂವರೂ ತಮ್ಮ ಮೆಂಬರತನಕ್ಕೆ ರಾಜಿಯಿತ್ತಿರುವರೆಂದು ತಿಳಿದು ಬರುತ್ತದೆ. ಕಾಂಗ್ರೆಸ್ ನಿರ್ಣಯವನ್ನು ಹಳ್ಳಿಯುಗಳ ತಿಳಿಯಪಡಿಸಲು ಶ್ರೀ ಸೇನಗುಪ್ತರವರು ಸಂಚಾರ ಹೊರಡುವವರಲ್ಲಿರುವರು. ಇದೇ ರೀತಿ ಸಂಯುಕ್ತ ಸಂಸ್ಥಾನದ ಕೌನ್ಸಿಲ್ ಮೆಂಬರರಾದ ಶ್ರೀ ಸಂಪೂರ್ಣಾನಂದರವರು ತನ್ನ ಮೆಂಬರತನಕ್ಕೆ ರಾಜಿಯಿತ್ತಿರುವರು.

— ಗೋಖಲೆ ಸ್ಮಾರಕ ನಿಧಿಯಲ್ಲಿ ಈಗ ಒಟ್ಟು ೩,೬೨೦-೧೨-೦ ರೂಪಾಯಿಗಳು ಸಂಗ್ರಹವಾಗಿರುತ್ತದೆ. ಕಮಿಟಿಯವರು ಈ ಹಣವನ್ನು ಎಲ್ಲಿಯಾದರೂ ಠೇವಣಿಯಾಗಿಟ್ಟು ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪುಗಳನ್ನು ಕೊಡಲು ನೆನಸಿರುವರು.

— ವಿಚಾರಕ ಕೈದಿಗಳ ಮೊಕದ್ದಮೆಯಲ್ಲಿ ಜಜ್‌ಮೆಂಟ್ ಇನ್ನೂ ತಯಾರಾಗಿಲ್ಲವಂತೆ. ಸ್ಪೆಶಲ್ ಮೆಜಿಸ್ಟ್ರೇಟರು ಈ ವಿಷಯವಾಗಿ ಚೆನ್ನಾಗಿ ಕೆಲಸ ಮಾಡುತ್ತಿರುವರು. ಜಜ್‌ಮೆಂಟು ಯಾವಾಗ ಕೊಡಲ್ಪಡುವ ದೆಂದು ಸರಿಯಾಗಿ ತಿಳಿದುಬರುವುದಿಲ್ಲ.

— ಮುಜಾಫರಪುರದಲ್ಲಿ ಕಳೆದುಹೋದ ಒಂದು ಸ್ವಪ್ನದ ... ಆಂಗ್ಲೇಯ ಸೈನಿಕರು ಮುನಿಸಿಪಾಲಿಟಿಯ ವ್ಯಾನ ಡೇಯವನೊಬ್ಬನ ... ಮಾಡಿರುವರು. ಕೋರ್ಟಿನಿಂದ ಆತನು ಹಿಂದಿರುಗುವಾಗ ಸೈನಿಕರು ಆತನನ್ನು ಅಡ್ಡಮಿಸಿದರು. ಒಬ್ಬನು ವ್ಯಾನ ಡೇಯವನ ಮೂಗಿನ ಮೇಲೆ ಗುದ್ದಿ ಆತನ ಹಲ್ಲುಗಳೆಲ್ಲವನ್ನು ಮುರಿದುಬಿಟ್ಟನು.

— ಕಾಂಗ್ರೆಸ್ ವಾರದಲ್ಲಿ ವಿಶೇಷ ಉತ್ಸಾಹದಿಂದ ಕೆಲಸ ಮಾಡಿದುದರಿಂದ ರಾಹೋರಿನಿಂದ ಅಲಹಾಬಾದಕ್ಕೆ ಬಂದ ಪಂಡಿತ ಮೋತಿಲಾಲ ನೆಹರೂರವರು ಸ್ವಲ್ಪ ಅಸ್ವಸ್ಥವಾಗಿರುವರು. ಒಂದು ವಾರದ ತನಕ ಅವರು ವಿಶ್ರಾಂತಿ ಪಡೆದು ತದನಂತರ ಕಲಕತ್ತೆಗೆ ಹೋಗಲು ನಿಶ್ಚಯಿಸಿರುವರು.

ನಟ್ಟೋರಿ ಟಿಪ್ಪಾಲು ಕಳವಿನ ಸಂಬಂಧದಲ್ಲಿ ಪೋಲೀಸರು ಬರಿಸಾಲದ ಹಲವು ಕಡೆಗಳನ್ನು ಶೋಧಿಸಿ, ಅಮಿಯ ಬೆನರ್ಜಿ ಎಂಬ ಹೆಸರಿನ ಒಬ್ಬ ವಿದ್ಯಾರ್ಥಿಯನ್ನು ಕೈದುಮಾಡಿದರು. "ಸ್ವಾಧೀನತಾ" ಎಂಬ ಹೆಸರಿನ ಪತ್ರಿಕೆಯ ಕೆಲವು ಪ್ರತಿಗಳನ್ನು ಸ್ವಾಧೀನಪಡಿಸಿಕೊಂಡರು.

— ಈ ತಿಂಗಳ ಮೂರನೇ ವಾರದಲ್ಲಿ ರಾಜಮಹೇಂದ್ರಿಯಲ್ಲಿ ಶ್ರೀ. ಸುಭಾಸ ಚಂದ್ರಬೋಸರ ಅಧ್ಯಕ್ಷತೆಯಲ್ಲಿ ಆಂಧ್ರ ವಿದ್ಯಾರ್ಥಿಗಳ ಪರಿಷತ್ತು ಜರಗುವುದು.

— ತಿರುವನೂರ ಎಂಬಲ್ಲಿ ಎರಡು ರೈಲು ಬಂಡಿಗಳು ಒಂದ ಕ್ಕೊಂದು ಢಿಕ್ಕಿ ಹೊಡೆದು ಸುಮಾರು ಎಂಟು ಮಂದಿಗಳಿಗೆ ಜಖಮು ಉಂಟಾಗಿರುತ್ತದೆ.

— ಶ್ಯಾಸರಾಯಿಯವರ ಕೈಲಿನಡಿಯಲ್ಲಿ ಬಾಂಬಿನ ದರ ಸಂಬಂಧವಾಗಿ ಕೈದುಮಾಡಲ್ಪಟ್ಟ ವ್ಯಾಸ ಜತೀನದಾಸರ ಸಹೋದರ ಕಿರಣಚಂದ್ರ ದಾಸ, ರಾಮಕೃಷ್ಣ ಬಿ. ಕರನ್, ಮತ್ತು ವೀರೇಂದ್ರ ಇವರನ್ನು ಹತ್ತು ಹತ್ತು ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವರು.

— ಕೆಲ ಸಮಯದ ಹಿಂದೆ ಮುಂಬಯಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ರಮಾಬಾಯಿ ಧನನಾಥಳೆಂಬ ವಾದಿಯೊಬ್ಬಳು ಕೇಳರ ಎಂಬ ವೈದ್ಯನ ಮೇಲೆ ತನ್ನ ಮಕ್ಕಳ ಸಂರಕ್ಷಣಾರ್ಥವಾಗಿ ದಾವೆ ತಂದಿದ್ದಳಷ್ಟೆ. ರಮಾಬಾಯಿಯು ತಂದ ದಾವೆಯು ತೀರ ಸುಳ್ಳಾಗಿರುತ್ತದೆಂದು ಮೆಜಿಸ್ಟ್ರೇಟರು ಅದನ್ನು ತೆಗೆದು ಹಾಕಿರುತ್ತಾರೆ.

— ಕಾಂಗ್ರೆಸ ವರ್ಕಿಂಗ್ ಕಮಿಟಿಯ ಸಭೆಯು ಸಬರಮತಿಯಲ್ಲಿ ಬರುವ ಮಾರ್ಚ ತಿಂಗಳ ೧೫ನೇ ತಾರೀಖಿನ ದಿನ ನಡೆಯುವುದು.

ದಕ್ಷಿಣ ಕನ್ನಡ.

ಮಂಗಳೂರು: — ದಿ ಯುನಿವರ್ಸಲ್ ಪಾಟ್ಟರೀಸ್ ಎಂಡ್ ಟೈಲ್ ವರ್ಕ್ಸ ಎಸೋಸಿಯೇಶನ್, ಈ ಸಂಘದ ಸಿಲ್ ಕೊಟು ಹೋಲ್ಡರುಗಳ ದಾಖ್ಲು ನಂಬರ ಮತ್ತು ರಕಂಬಲ ಸರಿಕಿನ ಸೋಡ್ತಿಯು ಬರುವ ತಿಂಗಳ ತಾ. ೧೬ನೇ ರವಿವಾರ ರಥಬೀದಿಯಲ್ಲಿ ರುವ ಕಂಪೆನಿಯ ಬ್ರೆಂಚ್ ಆಫೀಸಿನಲ್ಲಿ ಹಗಲು ೧ ಘಂಟೆ ಹಳ್ಳೆ ಎತ್ತಲಾಗು ವುದು.

ತಾ. ೮-೧-೩೦ರಲ್ಲು ಜಿಲ್ಲಾ ಬ್ರಾಹ್ಮಣಭಾಗರ ಸಂಘದ ಸಭೆಯು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸೇರಿ ಮುಂದಿನ ಕಾರ್ಯ ಕಲಾಪಗಳನ್ನು ನಿರ್ಣಯಿಸುವ ಸಲುವಾಗಿ ಈ ಸಂಘದ ಸಭೆಯು ಇದೇ ತಿಂಗಳ ತಾ. ೧೬ಕ್ಕೆ ಮಂಗಳೂರಿನ ಡೊಂಗರಕೇರಿ ಕರ್ನಾಟಕ ಬೇಂಕಿ ನಲ್ಲಿ ಸಂಜೆ ೬ ಘಂಟೆಗೆ ಸೇರಬೇಕೆಂದು ನಿರ್ಣಯವಾಯಿತು. ಈ ಸಭೆಗೆ ಮಂಗಳೂರು ತಾಲೂಕಿನ ಎಲ್ಲಾ ಬ್ರಾಹ್ಮಣಭಾಗರೂ ಡಿಸ್ಟ್ರಿಕ್ಟ ಕೌನ್ಸಿಲು ಪ್ರತಿ ನಿಧಿಗಳೂ ಅವಶ್ಯ ಹಾಜರಾಗಬೇಕಾಗಿ ವಿನಂತಿ.

ಇದೇ ಬರುವ ತಾ. ೧೨-೧-೩೦ನೇ ಆದಿತ್ಯವಾರ ಬೆಳಗ್ಗೆ ಘಂಟೆ ೭-೩೦ಕ್ಕೆ ಶ್ರೀ ಗಂಗೊಳ್ಳಿ ಕೃಷ್ಣರಾಯರು ಇಲ್ಲಿನ ಬ್ರಹ್ಮ ಸಮಾಜ ದವರ ಮಂದಿರದಲ್ಲಿ ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ಮಾಡುವರು. ಸರ್ವರಿಗೂ ಸುಸ್ವಾಗತವಿದೆ.

ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ ಕಂಪೆನಿ ಇವರು ಕಳೆದ ಸೋಮವಾರ ದಿನ "ಭಕ್ತ ತುಕಾರಾಮ" ಎಂಬ ನಾಟಕ ವನ್ನೂ ಬುಧವಾರ ದಿನ 'ವೀರ ಸಿಂಹ ಚರಿತ್ರೆ' ಎಂಬ ನಾಟಕವನ್ನೂ ಆಡಿ ತೋರಿಸಿದರು. ನಾಳೆ ಶನಿವಾರ ದಿನ ಇವರ ಮಾಸ್ಟರ್ ಪೀಸಾದ 'ಧನಿಕರ ಕಣ್ಣ' ಎಂಬ ನಾಟಕವನ್ನು ಅಭಿನಯಿಸಿ ತೋರಿಸುವರು.

ತಾರೀಖು ೪-೧ ೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೨ ಮರಣಗಳಾದವು. ಈ ಸ್ಮಶಾ ನ್ಯುಮೋನಿಯಾದಿಂದ ೧, ಅತಿಸಾರದಿಂದ ೧, ಜ್ವರರೋಗದ ರೋಗಗಳಿಂದ ೬, ಕ್ಷಯ ಮರಣ ೧, ಇತರ ಎಲ್ಲಾ ಕಾರಣಗಳಿಂದ ೧೩, ಜನನಗಳು ೪೯.

ಹೊಸದುರ್ಗ: — ರಜೆಯಲ್ಲಿದ್ದ ಇಲ್ಲಿಯ ಡೆಪ್ಯುಟಿ ಮಿ. ಗುರುರಾವ ಮತನ್ನುದ ಸ್ಥಾನಕ್ಕೆ ಬಂಟ್ವಾಳಕ್ಕೆ ಇಲ್ಲಿಗೆ ಮಿ. ಎನ್. ಅಪ್ಪರಾವ್ ಅವರನ್ನು, ಇವರು ಡೆಪ್ಯುಟಿ ತಹಸೀಲದಾರ ರಾಗಿಯೂ ನೇಮಕಹೊಂದಿರುತ್ತಾರೆ. ಸ್ಥಳೀಯ ಪೋಲೀಸ ಸಬ್ ಇನ್ ಸ್ಪೆಕ್ಟರರೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಪ್ರೊಫೆಸರ್ ದೇವಲರ ಸರ್ಕಸ್ ಕಂಪೆನಿಯು ಇಲ್ಲಿ ನಾಲ್ಕು ದಿವಸಗಳನ್ನು ತೋರಿಸಿ ಕಾಸ್ಸರಗೋಡಿಗೆ ಹೋಯಿತು.

ಸ್ಥಳದಾರ್ ಮೋಟಾರ್ ಸರ್ವಿಸು ಇಲ್ಲಿಂದ ಕೊಲ್ಲೂರಿಗೆ ಇರು ತ್ತದಷ್ಟೆ. ಅದೇ ಸರ್ವಿಸು ಕಲ್ಯಾಣಿನಿಂದ ಹೊಸದುರ್ಗಕ್ಕೆ ತಿರುಗಿಬರಲಿಕ್ಕೆ ಹಣ ... ಆಗಿಯದಾಗಿ ತಿಳಿಯುತ್ತೇವೆ. ತನ್ನಲ್ಲಿ ಇರುವ ಮಿಯಾ ಸರ್ವಿಸ ಸತಾ ಹೊಸದುರ್ಗದಿಂದ ಕಲ್ಯಾಣಿಗೆ ಈ ಮೊದಲೇ ತೆರೆಯಲಾಗಿದೆ. ಸಮಯ ಪ್ರಕಾರ ಈ ಬಸ್ ಚಲಾವಣೆಯಾಗುವುದಿಲ್ಲ. ರಸ್ತೆಯ ಸಂಗತಿ ದಿನ್ನೆ ದಿನ್ನೆ ಬೋರ್ಡಿನ ತಿಳುವಳಿಕೆ ಇದೆ. ಸ್ವಲ್ಪ ಸಮಯಕ್ಕೆ ಚಲಾವಣೆ ಯಾಗದೆ ಇದ್ದರೆ ಪಟ್ಟಣದ ಸ್ಥಿತಿಯಲ್ಲಿ ಅನುಮಾನ ಬರುವುದು. ಸಂಬಂಧಪಟ್ಟವರು ಈ ವಿಷಯದಲ್ಲಿ ಗಮನ ಕೊಡಬೇಕಾಗಿಯದೆ.

ಕಾಲೂರಾಬೋರ್ಡ ಕಡೆಯಿಂದ ಅರಮೂಲೆ ಎಂಬಲ್ಲಿ ಶಾಲೆ ತೆರೆಯಲಾಗಿಯದೆ. ಶಾಲೆ ತೆರೆಯುವಲ್ಲಿ ಉಪಾಧ್ಯಾಯರ ಶಿಕ್ಷಣ ಯಲ್ಲಿ ಅನಸರಾತ 'ಮಾನ್ಯ ಬೋರ್ಡ ಮೆಂಬರರೊಬ್ಬರು ಅಲ್ಲಿಗೆ ಸನಿ ನಡೆಸುತ್ತಾರೆ. ಸಹಾಯಕ ಉಪಾಧ್ಯಾಯರ ಶಿಕ್ಷಣೆಯು ಮಾತ ಸಂಬಂಧಕ್ಕೆ ತೀರಾ ವಿರೋಧ ಮತ್ತು ನೋವು ಉಂಟುಮಾಡುವ ಸ್ವಭಾ ವದ್ದು. ಇದರ ವಿಷಯವಾಗಿ ಚರ್ಚಿಸಬೇಕಾಗಿದೆ. ಸಿಗಾ ಕೊಟ್ಟರೆ ಉತ್ತಮ.

ಉಡುಪಿ: — ಇದೇ ತಾ. ೮ರಿಂದ ಶ್ರೀ ಕೃಷ್ಣದೇವರ ಸಮ್ಬಂಧವಾದ ವರ್ಷಾವಧಿ ರಥೋತ್ಸವ ಜಾತ್ರೆಯು ಪ್ರಾರಂಭವಾಗಿದೆ. ತಾ. ೧೩ನೇ ಸೋಮವಾರ ದಿನ ಮಕ್ಕರ ಸಂಕ್ರಮಣ ಜಾತ್ರೆಯೂ, ಮರುದಿನ ಚೂರ್ಣೋತ್ಸವವೂ, ೧೭ನೇ ಶುಕ್ರವಾರ ಪರ್ಯಾಯ ಮಹೋತ್ಸವವೂ ಜರಗಲಿವೆ. ಪರ್ಯಾಯ ಯಾತ್ರಿಕರ ಸಂದಣಿಯು ಬಹಳವಾಗಿದೆ. ಜಿಲ್ಲಾ ಆರೋಗ್ಯಾಧಿಕಾರಿಯವರು ಸ್ಥಳೀಯ ಬೋರ್ಡಿನ ಸಹಾಯದೊಂದಿಗೆ ಬಹು ಚಟುವಟಿಕೆಯಿಂದ ಮತ್ತು ಯೋಗ್ಯ ರೀತಿಯಲ್ಲಿ ಆರೋಗ್ಯದ ಏರ್ಪಾಟುಗಳನ್ನು ವ್ಯವಸ್ಥಿತ ಮಾಡುತ್ತಿದ್ದಾರೆ. ಈಗೀಗ ಮೋಟಾರು ಮತ್ತು ಇತರ ಗಾಡಿಗಳ ಚಲಾವಣೆಯು ಬಹಳ ವಾಗಿರುವುದರಿಂದ ಪಟ್ಟಣದ ಬೀದಿಬೀದಿಗಳಲ್ಲೆಲ್ಲಾ ಧೂಳಿನ ಬಾಧೆಯು ವಿಶೇಷವಾಗಿರುತ್ತದೆ. ಇದು ದೀರ್ಘಕಾಲದ ವರೆಗೆ ಇರುತ್ತಿದ್ದುದಾದರೆ ಪಟ್ಟಣಿಗರ ಆರೋಗ್ಯಕ್ಕೆ ಬಹಳ ಕುಂದೇ ಸರಿ. ಮಾರ್ಗಗಳಿಗೆ ನೀರು ಹಾಕುವ ಏರ್ಪಾಡನ್ನು ಬೋರ್ಡಿನವರು ಮಾಡಲಾಗದೇ?

ಸ್ಥಳೀಯ "ಬಾಡಿಸಲು"ವಿಂದ ಕಲ್ಲಿನ ಸರಬಂದ ಮತ್ತು ಡಿಸೆಂಬರ ತಿಂಗಳುಗಳಲ್ಲಿ ಅನುಕ್ರಮವಾಗಿ ರೂ. ೨೯೭-೭-೯ ಮ.ತ. ೩೨೯-೫-೯. ಬಿಲಿಬಾಳದ ಖಾದಿಯು ವಿಕ್ರಯವಾಯಿತು. ನಾಕನ್ನು ಖಾದಿಯು ತಿರುಪೂರು ವಗೈರೆ ಕೇಂದ್ರಗಳಲ್ಲಿ ದೊರೆಯುವಾಗ ದಿನ್ನವರಿಂದ ಖಾದಿ ಬಾಂಧವರ ಬೇಡಿಕೆಗಳನ್ನು ಕಕ್ಕಷ್ಟು ಪೂರೈಸಲಾಗ ದಿನ್ನದೇ ವಿಷಾದದ ಸಂಗತಿಯಾಗಿದೆ. ಈ ತಿಂಗಳಾಂತ್ಯದಿಂದ ಬೇಕಷ್ಟು ಖಾದಿಯು ದೊರೆಯಬಹುದೆಂದು ತಿರುಪೂರಿನಿಂದ ಸುದ್ದಿಯಿದೆ. ಎಂದ ನಂತೆಯೇ ಇನ್ನು ದೇಶಬಾಂಧವರು "ದರಿದ್ರನಾರಾಯಣ"ನ ಸೇವೆಯ ದೃಷ್ಟಿಯಿಂದ ಖಾದಿಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಅಖಿಲ ಪ್ರಚಾರ ಕಮಿಟಿಯವರ ಖಾದಿ ಪರ್ಯಾಯ ಸಮಯದ ಕಾರ್ಯಕ್ರಮ: — ತಾ. ೧೧-೧-೩೦ರಲ್ಲು ಬೆಳಗ್ಗೆ ಟ್ಟಿಂಡ ಅದಿ ದ್ರಾವಿಡರ ಶಾಲೆಯಲ್ಲಿ ಅಧ್ಯಾಪಕರ ಮಹಾಸಭೆ, ತಾ. ೧೨ರಲ್ಲಿ ಮಧ್ಯಾಹ್ನ ಉಡುಪಿ ರಾಜಮೋತ್ಸವ ಕಾರ್ಯಕ್ರಮ ಬಳಿ ದೇವಡಿಗರ ಸಭೆ, ತಾ. ೧೩ರಲ್ಲಿ ಸಾಯಂಕಾಲ ಸ್ಕೌಟು ಆಟಗಳು, ತಾ. ೧೪ರಲ್ಲಿ ಸಾಯಂ ಕಾಲ ಮಹಾತ್ಮರ ಜನ್ಮ ... ಸಭೆ. ತಾ. ೧೫ರಲ್ಲಿ ಸಾಯಂಕಾಲ ... ಸಭೆ ... ತಾ. ೧೬ರಲ್ಲಿ ಸಾಯಂಕಾಲ ... ತಾಲೂಕಿನ ಎಲ್ಲಾ ಶಾಲಾ ಶಾಲೆಗಳ ಮತ್ತು ಉಪಾಧ್ಯಾಯರ ಮಹಾಸಭೆ. ಜಿಲ್ಲಾ ಪ್ರಚಾರಕರ ಪ್ರತಿದಿನದ ಕಾರ್ಯಕ್ರಮ — (೬-೧-೩೦ರಿಂದ ೧೭-೧-೩೦ರ ವರೆಗೆ) ಬೆಳಗ್ಗೆ ೮-೧೧ರ ವರೆಗೆ ರಥಬೀದಿ ಕಮಿಟಿ ಆಫೀಸಿನಿಂದ ಹೊರಟು ಪೇಟೆಯಲ್ಲಿ ಪ್ರಚಾರ ಕಾರ್ಯ. ಮಧ್ಯಾಹ್ನ ೨ ೬-೩೦ರ ವರೆಗೆ ಉಡುಪಿಯ ಪರಿಗ್ರಾಮಗಳಲ್ಲಿ ಸ್ಕೌಟು ಮತ್ತು ಶಾಲಾ ಮಕ್ಕಳೊಂದೊಡನೆ ಗಾಡಿನ ತಂಡಗಳೊಡನೆ ಮೆರವಣಿಗೆ, ಪ್ರವಚನ, ಭಾಷಣ ವಗೈರೆ. ಮಧ್ಯಾಹ್ನ ೬-೩೦-೭-೩೦ರ ವರೆಗೆ ಕಮಿಟಿಯ ರಥಬೀದಿ ಆಫೀಸಿನಲ್ಲಿ ಪ್ರಚಾರ ಕಾರ್ಯದ ಮಾಯಾಲಾಂದ್ರ ಪ್ರವಚನ (ಹೆಲ್ತ ಆಫೀಸರರ ಸಹಕಾರದಿಂದ) ೮-೩೦-೧೦ರ ವರೆಗೆ ಉತ್ಸವ ಕಾಲದಲ್ಲಿ ಪ್ರಚಾರ ಕ್ರಮ.

ಬಂಟ್ವಾಳ: — ಡೆಪ್ಯುಟಿ ತಹಸೀಲದಾರರಾಗಿದ್ದ ರಾ. ಬೇಕಲ ನರಸಿಂಗರಾಯರಿಗೆ ಪುತ್ತೂರು ತಾಲೂಕು ಸ್ಪೇಶಲ ಸಬ್ ಮೆಜಿಸ್ಟ್ರೇಟರಾಗಿ ವರ್ಗವಾಗಿ ಅದೇ ತಾರೀಕಿಗೆ ವರ್ಗವಾಗಿ ಹೊಸತಾಗಿ ಡೆಪ್ಯುಟಿ ತಹಸೀಲದಾರರಾಗಿ ಇಲ್ಲಿಗೆ ಬೇಗನೆ ಬಂದ ರಾ. ಗುರಾವರ್ ಗೋಸ್ ಬಿ. ಎ. ಇವರಿಗೆ ಚಾರ್ಜು ಕೊಟ್ಟಿರುವರು.

ಇಲ್ಲಿಯ ಪೋಲೀಸ್ ಸಬ್ ಇನ್ಸಪೆಕ್ಟರರಾಗಿದ್ದ ರಾ. ರಾಮ ಕೃಷ್ಣಯ್ಯನವರಿಗೆ ಸುಳ್ಯಕ್ಕೆ ವರ್ಗವಾಗಿಯದೆ. ಇಲ್ಲಿಗೆ ರಾ. ವೆಂಕಟೇಶ ಶ್ಯಗಳು ಸಬ್ ಇನ್ಸಪೆಕ್ಟರಾಗಿ ಬಂದಿರುವರು.

ಸಬ್ ಪೋಸ್ಟಾಫೀಸಿನಲ್ಲಿ ಕ್ಲಾರ್ಕರಾಗಿದ್ದು ಬೇರೆ ಕಡೆಗೆ ವರ್ಗಾಯಿ ಸಲ್ಪಟ್ಟ ರಾ. ಶಿವಳ ಸಂಜೀವರಾವ್, ಬಿ. ಎ. ಯವರು ಇಲ್ಲಿಗೆ ತಿರುಗಿ ವರ್ಗವಾಗಿ ಬಂದಿರುವರು.

ಈ ಸರ್ಕಲಿನ ಉಪಾಧ್ಯಾಯರ ಸಂಘದ ಸಭೆಯು ಇದೇ ತಿಂಗಳ ತಾರೀಖು ೧೧ನೇ ಶನಿವಾರ ಮಧ್ಯಾಹ್ನ ೨॥ ಘಂಟೆಗೆ ಪಂಜಕಲ್ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಜರಗಲಿದೆ.

ಮಂಜೇಶ್ವರ: — ಇಲ್ಲಿಯ ಹೊಳೆಗೆ ಹಾಕುವ ಸೇತುವೆಯ ಕೆಲಸವನ್ನು ಸಂದರ್ಶಿಸುವದಕ್ಕಾಗಿ ಡಿಸ್ಟ್ರಿಕ್ಟ ಬೋರ್ಡ ಇಂಜಿನಿಯರರು ಬಂದು ಒಂದು ದಿವಸ ಇದ್ದು ಮರುದಿನ ತೆರಳಿದರು. ಈ ವರುಷ ಮಳೆ ಗಾಲ ಬರುವದರಲ್ಲಿ ಸೇತುವೆಯ ಕೆಲಸವು ಆಗುವ ಸಂಭವವು ತೋರುವು ದಿಲ್ಲ.

ಗುರುಪುರ: — ಇಲ್ಲಿಯ ಸಮೀಪದ ಮುಕ್ಕಾಲಿನಲ್ಲಿ ಮೂರನೇ ದಾಗಿ ಕಾಲ ಮರವನ್ನು ಕತ್ತರಿಸಿ ಕೆಳಗೆ ಬಿದ್ದು ಹೊಡಲೇ ಮೃತಪಟ್ಟರು ತ್ತಾನಾಗಿ ತಿಳಿಯುತ್ತೇವೆ. ಅದೇ ದಿನ ಕುಳಪ್ಪಾಡ ಎಂಬಲ್ಲಿಯೂ ತಾಳೆ ಮರದಿಂದ ಬಿದ್ದು ಒಬ್ಬ ಮೃತಪಟ್ಟಿರುತ್ತಾನಾಗಿ ವರದಿ.

ಗುರುಪುರ ವಿದ್ಯಾವರ್ಧಕ ಸಂಘದವರು ಸ್ಥಾಪಿಸುವ ಹಾಯರ್ ಎಲಿಮೆಂಟರಿ ಶಾಲಾ ಪ್ರಾರಂಭೋತ್ಸವವು ಇದೇ ಬರುವ ತಾರೀಖು ೧೬-೧-೩೦ರಲ್ಲು ಗುರುಪುರ ಹಿಂದೂ ಎಲಿಮೆಂಟರಿ ಶಾಲಾ ಕಟ್ಟಡ ದಲ್ಲಿ ಜರಗುವುದು. ಸದರಿ ಸಮಾರಂಭಕ್ಕೆ ವಿದ್ಯಾಭಿಮಾನಿಗಳೆಲ್ಲರೂ ದಯಮಾಡಿ ಬರಬೇಕಾಗಿ ಸದರಿ ಸಂಘದ ಅಧ್ಯಕ್ಷರ ವಿನಂತಿ.

ಇಲ್ಲಿ ಗುರುಪುರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಡೆಯುವ ವರ್ಷಂಪ್ರತಿ 'ಏಕಾಹ' ಭಜನೆಯು ಶ್ರಮಾಂತಿ ಈ ವರ್ಷವೂ ಬರುವ ಪುಷ್ಯ ಶು ೧೧ಕ್ಕೆ ನಡೆದು ಮರುದಿನ ತಾ ೧೨ಕ್ಕೆ ಸಂತರ್ಪಣೆ, ರಾತ್ರಿ ರಥೋತ್ಸವ ಕೂಡಾ ಜರಗಲಿಕ್ಕಿರುವುದರಿಂದ ಭಜಕ ರೆಲ್ಲರೂ ತಪ್ಪದೆ ಬಂದು ಶ್ರೀ ಗಂಧ ಪ್ರಸಾದವನ್ನು ಸ್ವೀಕರಿಸಿ ಹೋಗ ಬೇಕಾಗಿ ಸದ್ರಿ ದೇವರ ಅರ್ಚಕರಾದ ರಾ. ಬಾಬಣ್ಣಗಳವರು ವಿನಂತಿ ಮಾಡಿಕೊಳ್ಳುತ್ತಾರೆ.

ಕಳೆದ ತಾ. ೨೬-೧೨-೨೯ರಲ್ಲು ಮಂಗಳೂರು, ಕೆನರಾ ಹೈ ಸ್ಕೂಲಿನ ಅಧ್ಯಾಪಕರು ಸ್ಕೌಟ್ ಟ್ರುಪಿನವರೂ ೨೬-೧೨-೨೯ರಲ್ಲಿ ಫರಂಗಿಪೇಟೆ ಶ್ರೀ ರಾಮ ಹಾಯರ್ ಎಲಿಮೆಂಟರಿ ಶಾಲೆಯ ಶ್ರೀ ರಾಮ ಸ್ಕೌಟ್ ಟ್ರುಪಿನವರೂ ಇಲ್ಲಿಗೆ ಬಂದು ತಮ್ಮ ಜತೆ ಶಿಬಿರ ಯಾನ ಮೊಕ್ಕಾಂವನ್ನು ಬಹಳ ಚಂದ ರೀತಿಯಲ್ಲಿ ನೆರವೇರಿಸಿದರು. ತಾರೀಖು ೨೭ನೇ ಶುಕ್ರವಾರ ರಾತ್ರಿ ಇವರು ಒಂದು ಶಿಬಿರಾಗ್ನಿಯನ್ನು (camp fire) ಮಾಡಿ ಊರಿನ ಗೃಹಸ್ಥರನ್ನು ತುಂಬಾ ಬಾಲಕರನ್ನೂ ಸಂತೋಷಗೊಳಿಸಿದರು. ಈ ಸಂದರ್ಭದಲ್ಲಿ ಇವರು ತಮ್ಮ ಕರ್ತವ್ಯ ದಕ್ಷತೆಯನ್ನು ತಮ್ಮ ಸಾಹಸೋಕ್ತಿಗಳಿಂದಲೇ ವ್ಯಕ್ತಪಡಿಸಿದರು. ಮರು ದಿವಸ ಇವರು ಬಪ್ಪನಾಡು ಹೋಗಿ ಸಂಜೆಗೆ ಪುನಃ ಇಲ್ಲಿಯೇ ಬಂದರು. ಅದೇ ದಿವಸ ರಾತ್ರಿ ಇಲ್ಲಿಯ ಸಾಹುಕಾರ ಗುರ್ಪುರ ಬಾಬಣ್ಣಗಳವರು ಎರಡೂ ಟ್ರುಪಿನವರಿಗೂ ಊಟ ಉಪಚಾರಗಳಿಂದ ಸತ್ಕರಿಸಿದರು.

ಆ ಮರುದಿನ ಟ್ರುಪಿನವರು ತಾ. ೨೯ನೇ ಆದಿತ್ಯವಾರ ಬೆಳಗಾಗ ತಮ್ಮ ಶಿಬಿರವನ್ನು ಅಂತ್ಯಗೊಳಿಸಿ ಮಂಗಳೂರಿಗೂ, ಶ್ರೀ ರಾಮ ಟ್ರುಪಿ ನವರು ಬೆಳಗಾಗ ಇಲ್ಲಿಯ ಪ್ರಸಿದ್ಧ ಸ್ಥಳಗಳಾದ ಅಂಗಡಿ ಮಠ ಮೊದಲಾದವುಗಳನ್ನು ಸಂದರ್ಶಿಸಿ ಸಾಯಂಕಾಲ ಫರಂಗಿಪೇಟೆಗೂ ಹಿಂತಿರುಗಿದರು.

ಈ ಸಂದರ್ಭದಲ್ಲಿ ತಮಗೆ ಅನೇಕ ತರದ ಅನುಕೂಲತೆಗಳನ್ನು ಒದಗಿಸಿಕೊಟ್ಟ ಸಾಹುಕಾರ ಬಾಬಣ್ಣ ಮತ್ತು ಸಹೋದರರಿಗೆ ಸ್ಕೌಟರು ತುಂಬಾ ಕೃತಜ್ಞರಾಗಿರುತ್ತಾರೆ.

ಸುಳ್ಯ: — ಇಲ್ಲಿಯ ವರ್ಷಾವಧಿಯ ಜಾತ್ರೆಯು ಇದೇ ತಿಂಗಳ ತಾ. ೩ಕ್ಕೆ ಪ್ರಾರಂಭವಾಗಿ ೧೧ಕ್ಕೆ ಅಂತ್ಯವಾಗುವುದರಿಂದ ತಾ. ೧೧ಕ್ಕೆ ನಡೆ ಯುವ ರಥೋತ್ಸವ ತಾ. ೧೧ಕ್ಕೆ ನಡೆಯುವದರಿಂದ ಈ ದಿವಸಗಳಲ್ಲಿ ಹೆಚ್ಚು ಜನರು ಕೂಡುವದರಿಂದ ರಾತ್ರಿ ಕಾಲ ದೀಪಗಳು ಅಗತ್ಯ ವಿದ್ದಲ್ಲಿಯಾದರೂ ಇರಿಸುವ ವಿಲೇವಾರಿ ಗ್ರಾಮ ಪಂಚಾಯತದವರು ಮಾಡಿಸುತ್ತಿದ್ದರೆ ತುಂಬಾ ಉಪಕಾರವಾಗುತ್ತಿತ್ತು.

[illegible]

ಎಲ್ಲಾ ರೋಗಗಳಿಗೆ ಒಂದೇ ಔಷಧ [illegible]

ಅರ್ಕಶಫಾ ಅಥವಾ ಆರೋಗ್ಯಬಿಂದು.

[illegible]

ರೋಗದ ನಾಮಗಳು:—

[illegible]

ನಮ್ಮ ವಿಳಾಸ:—ಎಚ್. ಎಮ್. ಮುಲ್ಲಾ,

[illegible] (ಬೆಳಗಾವ.)

[illegible]

200 [illegible] 1ಕ್ಕೆ 4 [illegible]

[illegible]

[illegible] ಬೆಲೆ 1ಕ್ಕೆ ರೂ. 1—0—0.

[illegible]

ಬೆಲೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

[illegible] ಬೆಲೆ 1ಕ್ಕೆ ರೂ. 0—8—0.

[illegible] ವೆಂಕಟಾಚಲ ಪಂಡಿತರು,

ಶ್ರೀ [illegible] ವೈದ್ಯ ಶಾಲಾ,

[illegible]

[illegible] ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ [illegible]

ಒಂದೇ ದಾರಿ

[illegible]

— ದಾರಿ ಯಾವುದೆಂದರೆ: —

[illegible]

ವೈದ್ಯವಿದ್ಯ

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 [illegible] ಬಜಾರು, ಮದ್ರಾಸು.

ಉಚಿತ! ಉಚಿತ!!

4 ಆಣೆ ಟಪಾಲು ಸ್ಟಾಂಪು

ಕಳುಹಿಸಿದರೆ 372 [illegible] ಉಪಯೋಗ

ವಾದ ಮತ್ತು ಸುಂದರವಾದ

1930ನೇ ಇಸವಿಯ ಡೈರಿ

ಮುಫತ್ತಾಗಿ ಕಳುಹಿಸಲ್ಪಡುವುದು. ತ್ವರೆಮಾಡಿರಿ!!

52—14 ಮದನ ಮಂಜರಿ ಫಾರ್ಮಸಿ,

1/94 [illegible] ಬಜಾರ್ ಮದರಾಸು.

[illegible]

ವೈದ್ಯರಾಜ ಶ್ರೀ ಕೇಶವಶಾಸ್ತ್ರೀ [illegible] ಇವರ,

ಶಕ್ತಿಕಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

[illegible]

ಅಮೃತಸಿಂಧು ಡಿಪೋ,

[illegible]

Grand Clearing Sale!

[illegible] 36H [illegible]

[illegible] ರೂ. 4. [illegible] 10 [illegible] ರೂ. 4—10—0. [illegible]

ಪೋಲ್ ಎಂಡ್ ಕೊ,

[illegible]

PAUL & CO,

Sham Bazaar Street

[illegible] ಸಮಾಚಾರಗಳು.

[illegible] ನಿರೋಧ.

[illegible] ಕಛೇರಿಯ ಕೆಲಸವನ್ನು ಇಡಗಿಸಲು ಒಂದು ಕಮಿಟಿಯು ನೇಮಕ [illegible] ಮದ್ಯಪಾನ ನಿರೋಧಕ ಮಂಡಲಿಯವರು ಈ ಕಮಿ[illegible]ಗಿರುವರು. [illegible] ಮಹಾತ್ಮಾ ಗಾಂಧಿಯವರು ಈ ಕಮಿಟಿಯ ಮೆಂಬರ [illegible] ಶ್ರೀ. ಸಿ. ರಾಜಗೋಪಾಲಾಚಾರ್ಯರು, ಶ್ರೀ ಡಿ. ಬಿ. [illegible] ಶ್ರೀ. [illegible] ಶ್ರೀ. ಸ್ವಾಮಿ ಆನಂದರವರು ಕಾರ್ಯ[illegible]ಗಿರುವರು.

ಅಸ್ಪೃಶ್ಯರಿಗೆ ದೇವಾಲಯಗಳಲ್ಲಿ ಪ್ರವೇಶ ದೊರೆಯುವಂತೆ, ಅವರ [illegible] ಅವರನ್ನು ಉದ್ಧರಿಸುವಿಕೆ, ಇವೇ ಈ ಕಮಿಟಿಯ ಮುಖ್ಯ ಧ್ಯೇಯಗಳಾಗಿರುತ್ತವೆ. ಈ ವಿಷಯವಾಗಿ ಪಾರ್ವತಿ ದೇವಾಲಯದ ಸತ್ಯಾಗ್ರಹದ ಕಮಿಟಿಯ ನಾಯಕರಾದ ಶ್ರೀ [illegible] ರವರು ಬಹಳಷ್ಟು ನಗರದಲ್ಲಿ ಮಹಾತ್ಮಾಜೀಯವರೊಡನೆ [illegible] [illegible] ದೇವಳವನ್ನು ಅಸ್ಪೃಶ್ಯರೇ ಕೈಕೊಳ್ಳಬೇಕು. [illegible] ಅವರ ದೇವಳದಲ್ಲಿ [illegible] ಪಾರ್ವತಿ ದೇವಾಲಯದ ವಿಷಯದಲ್ಲಿ ಅಸ್ಪೃಶ್ಯರು ಸತ್ಯಾಗ್ರಹಕ್ಕೆ ಸಿದ್ಧರಿರಬೇಕು. ಆದರೆ ಸತ್ಯಾಗ್ರಹವನ್ನು [illegible] ಉಚ್ಚ ಜಾತಿಯ ಹಿಂದೂಗಳಲ್ಲಿ ಈಗ ಅಸ್ಪೃಶ್ಯರ ವಿಷಯಕವಾದ ತಿರಸ್ಕಾರವು ಕಳೆಯುತ್ತಾ ಹೋಗಿ ಅವರಲ್ಲಿ ಉದಾರಭಾವನೆಯು ತೋರುತ್ತಲಿದೆ. ಉಚ್ಚ ತರಗತಿಯ ಹಿಂದೂಗಳು ಅಸ್ಪೃಶ್ಯರ ಉದ್ಧಾರದ ಕಡೆಗೆ ತಮ್ಮ ಚಿತ್ತವನ್ನು ಕೇಂದ್ರೀಕರಿಸಬೇಕು. ಅಸ್ಪೃಶ್ಯರ ಧುರೀಣರು ಅವರೊಡನೆ ಸಹಕರಿಸಿ ಕಮ್ಮ-ಸವಾದವನ್ನು ನಡೆಸಬೇಕು. ಆದರೆ ವೃಥಾ ಸತ್ಯಾಗ್ರಹವನ್ನು ಹೂಡಿರುವದು ಯೋಗ್ಯವಲ್ಲ' ಎಂದು ಮಹಾತ್ಮಾಜಿಯವರು ಅಭಿಪ್ರಾಯಪಡುವರು.

* * *

ಭವಾನಿ ದೇವಳದ ಸೂರೆ.

ಛತ್ರಪತಿ ಶ್ರೀ. ಶಿವಾಜಿಯ ಭವಾನಿ ದೇವಾಲಯವು ಪ್ರತಾಪಗಡದಲ್ಲಿದೆ. ಅಲ್ಲಿಯೇ ಶಿವಾಜಿಯಿಂದ ವಧಿಸಲ್ಪಟ್ಟ ಅಫಜಲ್‌ಖಾನನ ಗೋರಿಯೂ ಇದೆ. ಈ ಗೋರಿಯೆದುರಿನಲ್ಲಿ ಸುಮಾರು ಒಂದು ತಿಂಗಳ ಹಿಂದೆ ಒಂದು ದೊಡ್ಡ ಸಂತೆಯು ನಡೆಯಿತು. ಈ ಸಂತೆಗಾಗಿ ನ[illegible]ಯ ಅತ್ತಕಡೆಯಿಂದ ಎಷ್ಟೋ ಮಂದಿ ಮುಸಲ್ಮಾನರೂ ಪಠಾಣರೂ ಬಂದಿದ್ದರು. ಭವಾನಿ ದೇವಾಲಯದ ಐಶ್ವರ್ಯವು ಅಷ್ಟಿಷ್ಟಲ್ಲ. ನವರತ್ನಗಳ ರಾಶಿಯೇ ಅಲ್ಲಿದ್ದಿತು. ಚಿನ್ನದ [illegible] ವಸ್ತ್ರಭೂಷಣಗಳೂ ಬಹಳವಿದ್ದವು. ಈ ದ್ರವ್ಯವನ್ನು ದೇವಳದಲ್ಲಿ ಮುಚ್ಚಿಡದ ಪೆಟ್ಟಿಗೆಗಳ ಬಾಗಿಲನ್ನು ಸದಾಕಾಲವೂ ತೆರೆದಿಡುತ್ತ ಯಾತ್ರಿಕರು ಅವುಗಳನ್ನು ನೋಡುವಂತೆ ಇಟ್ಟಿದ್ದರಿಂದ ಈ ವಿಷಯದ ಗೂಢಗಳೆಲ್ಲವೂ ಸಂತೆಗೆ ಬಂದಿದ್ದ [illegible] ಚೋರರಿಗೆ ಅರಿಯಲು ಸುಲಭವಾಯಿತು. ಎಲ್ಲವನ್ನೂ ಸಜ್ಜುಗೊಳಿಸಿ, ಈ ಚೋರರು ಕಳೆದ ಡಿಸೆಂಬರ ೨೬ನೇ ತಾರೀಕಿನ ದಿನ ರಾತ್ರಿ ಸುಮಾರು ಹದಿನೊಂದು ಗಂಟೆಯ ಹೊತ್ತಿಗೆ ದೇವಾಲಯವನ್ನು ಆಕ್ರಮಿಸಿದರು. ಹದಿನಾರು ಮಂದಿಗಳು ಆಯುಧಪಾಣಿಗಳಾಗಿ ಹೋಗಿ ದೇವಳವನ್ನು ಕಾಯುತ್ತಿದ್ದ ಜನರನ್ನು ಓಡಿಸಿದರು. ವಜ್ರ ವೈಡೂರ್ಯಾದಿಗಳನ್ನು ಸೂರೆ ಮಾಡಿ ಅಲ್ಲಿಂದ [illegible] [illegible] ಕೆಲವು ಸಾವಿರ ರೂಪಾಯಿಗಳನ್ನು ಅಪಹರಿಸಿದರು. ಈ ದೇವಾಲಯದ ಅಧಿಕಾರಿಗಳು [illegible] [illegible] ಈ ವರೆಗೆ ಕಳ್ಳರ ಪತ್ತೆಯೇ ಆಗಲಿಲ್ಲ. [illegible] ಪೋಲೀಸ್ ಅಧಿಕಾರಿಗಳಿಗೆ ತಿಳಿಸಲ್ಪಟ್ಟುದರಿಂದ ಈ ಕಳವಿನ ಶೋಧನಕ್ಕೆ [illegible] ಘೋರ [illegible] ನರೆಹೊರೆಯವರೆಂದು ವರ್ತಮಾನ [illegible].

ಪ್ರಕಟಣೆ.

ತಾ. 6—1—30ರಲ್ಲಿ ಸುಮಾರು ೧॥ ಘಂಟೆಗೆ ನಾವು ಶಾಲೆಯಿಂದ ಮನೆಗೆ ಹೋಗುವಾಗ ಕೆನರಾ ಪಬ್ಲಿಕ್ ಸರ್ವೀಸ್ ಕಂಪೆನಿಯ ಆಫೀಸಿನ ಬಳಿ ರಸ್ತೆಯ ಮೇಲೆ ಯಾರೋ ಕಳಕೊಂಡದೊಂದು ನಮಗೆ ಸಿಕ್ಕಿರುತ್ತದೆ. ಕಳಕೊಂಡವರು ನಾವಿದ್ದಲ್ಲಿಗೆ ಬಂದು ಅವರೇ ಅದರ ಮಾಲೀಕರೆಂಬ ವಿಷಯ ನಮಗೆ ಖಚಿತವಾಗುವ ರೀತಿಯಲ್ಲಿ ಅದರ ವಿವರಗಳನ್ನು ತಿಳಿಯಪಡಿಸಿದರೆ ನಾವು ಅದನ್ನು ಕೊಡಲಿಕ್ಕೆ ಸಿದ್ಧರಿದ್ದೇವೆ. ಇದು ಪ್ರಕಟವಾದ 15 ದಿನಗಳೊಳಗೆ ತಕ್ಕ ವಾರೀಸುದಾರರು ಬಂದು ತೆಗೆದುಕೊಂಡು ಹೋಗದಿದ್ದರೆ 40 ರೂಪಾಯಿಗಳಿಗೆ ಮಿಕ್ಕಿ ಬೆಲೆಯುಳ್ಳ ಇದನ್ನು ಯುಕ್ತ ಕಂಡಂತೆ ಯಾವುದಾದರೂ ಒಂದು ಸಾರ್ವಜನಿಕ ಸಂಸ್ಥೆಗೆ ಕೊಡಲ್ಪಡುವದೀತು.

1. Pandeshwar Rama Rao.
2. Udyavar Kantappa

Teachers Bd. High School Udipi.

ಉಡ್ಪಿ, ತಾ. 6—1—30.

ಕಾಂಗ್ರೆಸ್ ಅಧ್ಯಕ್ಷರ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಇವುಗಳು ಭಾರತದ ರಾಜ್ಯಗಳ ಧರ್ಮ್ಮದೇವತೆಗಳು. ಇವುಗಳ ಅರಸರಲ್ಲಿ ರಾಜಾ ಪ್ರತ್ಯಕ್ಷ ದೇವರು ಎಂಬ ಭಾವನೆಯು ಇದೆ. ಇವರು ನಮ್ಮ ರಾಜ್ಯದಲ್ಲಿರುವ ಪ್ರಜೆಗಳು, ಐಶ್ವರ್ಯ ಮುಂತಾದೆಲ್ಲವೂ ತಮ್ಮ ಸ್ವಂತ ಆಸ್ತಿಯೆಂದೇ ಭಾವಿಸುತ್ತಿರುವರು. ರಾಜ್ಯದ ಹಣವನ್ನು ಮನ ಬಂದಂತೆ ಖರ್ಚು ಮಾಡುತ್ತಿರುವರು. ಕೆಲವರು ಮಾತ್ರ ಜವಾಬುದಾರಿ ಸರಕಾರವನ್ನು ಸ್ಥಾಪಿಸಿ ಪ್ರಜೆಗಳಿಗೆ ಹೆಚ್ಚು ಹಕ್ಕು ಸ್ವಾತಂತ್ರ್ಯಗಳನ್ನು ಕೊಟ್ಟಿರುವರು. ಹಿಂದೂಸ್ಥಾನದ ನಿವಾಸಿಗಳೂ ಆಶ್ರಿತರಾಜ್ಯಗಳ ನಿವಾಸಿಗಳೂ ಒಂದೇ ಆಗಿರುವರು. ಎರಡರ ನಿವಾಸಿಗಳಿಗೂ ಸರಿಸಮಾನ ಹಕ್ಕುಗಳಿರಬೇಕು. ಪ್ರಜೆಗಳಿಗೆ ರಾಜ್ಯಭಾರದಲ್ಲಿ ಹಕ್ಕು ಸ್ವಾತಂತ್ರ್ಯಗಳನ್ನು ಕೊಡಲು ಸಮ್ಮತವಿಲ್ಲ. ಆಶ್ರಿತ ರಾಜ್ಯಗಳು ಇದ್ದು ಪ್ರಯೋಜನವಿಲ್ಲ.

ಕೆಲಸದ ಫಲ ಕೆಲಸಗಾರರಿಗೆ ಸಿಕ್ಕಬೇಕು.

ಇಪ್ಪರಿಸ್ಥಿತಿಯನ್ನು ಸರಿಪಡಿಸಿದರೆ ನಮ್ಮ ಕಾರ್ಯದಲ್ಲಿ ಜಯಸಿಕ್ಕಿದಂತಾಯಿತು. ನಮ್ಮ ರಾಷ್ಟ್ರೀಯ ಚಳವಳಿಗೆ ಅವರ ಬೆಂಬಲವು ಬೇಕಾಗಿದೆ. ನಾವು ಅವರ ಏಳಿಗೆಗಾಗಿ ಸಾಧಿಸಿದರೆ ಅವರೆಲ್ಲರೂ ನಮ್ಮನ್ನು ಹಿಂಬಾಲಿಸುವರು. ಹಣವಂತರನ್ನೂ ಕೂಲಿಗಾರರನ್ನೂ ಸರಿಸಮಾನತೆಯಿಂದ ನೋಡಬೇಕು. ಜಮೀನುದಾರರನ್ನೂ ಒಕ್ಕಲುಗಳನ್ನೂ ಸರಿಸಮಾನತೆಯಿಂದ ನೋಡಬೇಕು. ಈಗ ಒಂದು ಕಡೆ ಭಾರವಾಗಿದೆ; ಇನ್ನೊಂದು ಕಡೆ ಹಗುರವಾಗಿದೆ. ಸರಿಯಾಗಬೇಕಾದರೆ ಒಬ್ಬರನ್ನೊಬ್ಬರು ಪೀಡಿಸದಂತೆ ಮಾಡಬೇಕು. ಒಬ್ಬರನ್ನೊಬ್ಬರು ಉದ್ಧಾರ ಮಾಡುತ್ತೇವೆಂದು ಹೇಳುವದು ಮಾತ್ರವೇ ಅಲ್ಲದೆ, ಒಳ್ಳೇದಾಗುವುದರ ಬದಲಾಗಿ ಇಷ್ಟರ ವರೆಗೆ ಕೇಡೇ ಹೆಚ್ಚಾಗಿದೆ. ಕೈಗಾರಿಕೆಗಳನ್ನು ಮಾಡುವದು ಯಾರ ಲಾಭಕ್ಕಾಗಿ, ಭೂಮಿ ಸಾಗುವಳಿ ಮಾಡುವುದು ಯಾರಿಗಾಗಿಯೂ ಎಂಬುದನ್ನು ವಿಚಾರಿಸಬೇಕಾಗಿದೆ. ಕೈಗಾರಿಕೆಯಿಂದ ಕಾರಖಾನೆಯ ಯಜಮಾನರು ಕೋಟ್ಯಾಧಿಪತಿಗಳಾದರು. ಬೇಸಾಯದಿಂದ ಜಮೀನುದಾರರು ಮತ್ತೂ ದೊಡ್ಡ ಜಮೀನುದಾರರಾದರು. ಬೇಸಾಯಗಾರರಿಗೆ ಮಣ್ಣಿನ ಗುಡಿಸಲಿನಲ್ಲಿರುವುದೂ ಮೈತುಂಬಾ ಒಪ್ಪೆ ಇಲ್ಲದಿರುವುದೂ ತಪ್ಪಲಿಲ್ಲ.

ನಮ್ಮ ಆರ್ಥಿಕ ಸ್ಥಿತಿ ಅಂದರೆ ಮನುಷ್ಯರನ್ನು ಅಭಿವೃದ್ಧಿಮಾಡುವ ತರದ್ದಾಗಿರಬೇಕು. ಮನುಷ್ಯನನ್ನು ಧನಕ್ಕೆ ಬಲಿಕೊಡಬಾರದು. ಕೂಲಿಗಾರರಿಗೆ ಸಂಬಳ ಕೊಡಲು ಸಾಧ್ಯವಿಲ್ಲದ ಕೈಗಾರಿಕೆಯನ್ನು ನಿಲ್ಲಿಸಬೇಕು. ಕೂಲಿಗಾರರಿಗೆ ಸಾಧಾರಣ ಸುಖದಿಂದ ಇರುವ ರೀತಿಯ ಸಂಬಳವನ್ನು ಕೊಡಬೇಕು. ಅವರ [illegible] ಹೆಚ್ಚು ಸಮಯ ಅವರಿಂದ ಕೆಲಸಮಾಡಿಸಬಾರದು. ಹಿಂದೂಸ್ಥಾನದಲ್ಲಿ [illegible] ಕೆಲಸಮಾಡುವ ಕೂಲಿಗಾರರ ಸ್ಥಿತಿಗಿಂತಲೂ ಬೇಸಾಯಮಾಡುವ ಒಕ್ಕಲುಗಳ ಸ್ಥಿತಿಯು ಕಷ್ಟದಾಗಿದೆ. ಆದುದರಿಂದ ಭೂಕಂದಾಯದ ಮತ್ತು [illegible] ವಸೂಲಿಯ ಕ್ರಮ ಇನ್ನು ತಿದ್ದುಪಡಿ ಮಾಡಬೇಕು. ಜಮೀನುದಾರರ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತದೆ. ಬೇಸಾಯದ ಭೂಮಿಯನ್ನು ಒಡೆಯರೊಳಗೆ ಹಂಚುತ್ತಿರುವರು. ಹಿಂದೂಸ್ಥಾನದಲ್ಲಿಯೂ ಅದೇ ಮಾದರಿಯಾಗದ ನಿರ್ವಾಹವಿಲ್ಲ.

ಕಾಂಗ್ರೆಸನ್ನು ಟ್ರೇಡ್ಸ್ ಯೂನಿಯನ್ ಕಾಂಗ್ರೆಸಿನೊಡನೆ ಸಹಕರಿಸುವಂತೆ ಮಾಡಬೇಕು. ಕಾಂಗ್ರೆಸಿನೊಳಗಿರುವ ಚಿಲ್ಲರೆ ಜಗಳಗಳು ಇನ್ನೂ ಮುಗಿಯಲಿಲ್ಲ. ಈ ತರದ ಜಗಳಗಳನ್ನೆಲ್ಲಾ ನಿಲ್ಲಿಸಿ ದೇಶಕ್ಕಾಗಿ ಒಮ್ಮನಸ್ಸಿನಿಂದ ಕೆಲಸ ಮಾಡುತ್ತಿರಬೇಕು. ಕೌನ್ಸಿಲುಗಳನ್ನೂ ಬಹಿಷ್ಕರಿಸಲೇ ಬೇಕು. ಕಂದಾಯವನ್ನು ಕೊಡುವದಿಲ್ಲವೆನ್ನುವದು ನಮ್ಮ ಕಾರ್ಯಸಾಧನೆಗೆ ಒಂದು ದಾರಿಯಾಗಿದೆ. ನಾವು ಅನ್ಯದೇಶದ ವಸ್ತುಗಳನ್ನೂ ಬ್ರಿಟಿಷ ಸಾಮಾನುಗಳನ್ನೂ ತೆಗೆದುಕೊಳ್ಳಬಾರದು. ಇದರಿಂದ ಹೆಚ್ಚಿಗೆ ಪ್ರಯೋಜನವಿದೆಯೆಂದು ಕಳೆದ ಹತ್ತು ವರುಷಗಳ ಅನುಭವದಿಂದ ತಿಳಿದುಬಂದಿದೆ.

ಹಿಂದೂಸ್ಥಾನದ ಸಾಲದ ವಿಷಯವಾಗಿ ನಮಗಿರುವ ಜವಾಬ್ದಾರಿಯನ್ನು ತಪ್ಪಿಸಬೇಕು. ಹಿಂದೂಸ್ಥಾನದ ಪ್ರಯೋಜನಕ್ಕಾಗಿಯೇ ಎತ್ತಿದ ಸಾಲವನ್ನು ನಾವು ಕೊಡಲೇಬೇಕು. ಬ್ರಿಟಿಷ ಸರಕಾರವು ತಮ್ಮ ರಾಜ್ಯದ ವಿಸ್ತಾರಕ್ಕಾಗಿ ಮಾಡಿದ ಯುದ್ಧಗಳ ಖರ್ಚಿಗಾಗಿ ಎತ್ತಿದ ಸಾಲಕ್ಕಾಗಿ ಹಿಂದೂಸ್ಥಾನವು ಜವಾಬ್ದಾರಿಯಲ್ಲ.

ಕಾಂಗ್ರೆಸ್ಸಿನ ರೀತಿಯಲ್ಲಿ ಬದಲಾವಣೆಯಾಗಬೇಕು.

ಕಾಂಗ್ರೆಸ್ ಕ್ರಮಗಳೆಲ್ಲಾ [illegible]. [illegible] ಹಿತವಾದವುಗಳಲ್ಲ. ಭಾಷಣಗಳನ್ನು ಕೊಡುವ ಕಾಲವು ಕಳೆದುಹೋಯಿತು. ಈಗ ಕೆಲಸಮಾಡುವ ಕಾಲ. ಕ್ರಮಪ್ರಕಾರ ಧೈರ್ಯದಿಂದ ಕೆಲಸ ಮಾಡಿದರೆ ಜಯವು ಸಿಕ್ಕುವುದು. ನಾವು ಅಲ್ಲಲ್ಲಿ ಒಳಸಂಚುಗಳನ್ನೂ ಗಲಭೆಗಳನ್ನೂ ಮಾಡಿ ಪ್ರಯೋಜನವಿಲ್ಲ. ನಾವು ಬಹಿರಂಗವಾಗಿ ದೇಶವನ್ನು ಸ್ವತಂತ್ರಪಡಿಸಲು ಕೆಲಸಮಾಡಬೇಕು. ಇದರ ಫಲಿತಾಂಶವಾಗಿ ಕೆಲವರು ಸೆರೆಮನೆಯನ್ನು ಸೇರಬಹುದು. ಕೆಲವರಿಗೆ ಮರಣದಂಡನೆಯಾಗಬಹುದು. ಆದರೆ ಹಿಂದೂಸ್ಥಾನಕ್ಕಾಗಿ ಕೆಲಸಮಾಡಿದ್ದೇವೆ ಎಂಬ ಅಭಿಮಾನವು ನಮ್ಮಲ್ಲಿ ಇರುವುದು.

ದಕ್ಷಿಣ ಕನ್ನಡದಲ್ಲಿರುವ ಎಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘಗಳ ತಿಳುವಳಿಕೆ ಬಗ್ಗೆ.

ಇದೇ ಬರುವ ಫೆಬ್ರವರಿ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಅಧ್ಯಾಪಕ, ಅಧ್ಯಾಪಕಿಯರ ಜಿಲ್ಲಾ ಸಂಘದ ವರ್ಷಾವಧಿ ಮಹಾಸಭೆಯು ಬಂಟವಾಳ ಬೋರ್ಡು ಹುಡುಗರ ಎಲಿಮೆಂಟರಿ ಶಾಲೆಯಲ್ಲಿ ಜರಗಿಸಬೇಕೆಂದು ನಿರ್ಣಯಿಸಿರುತ್ತದೆ. ಆದುದರಿಂದ ಈ ಜಿಲ್ಲೆಯಲ್ಲಿರುವ ೬ ತಾಲೂಕು ಸಂಘಗಳಿಂದಲೂ ಮುನಿಸಿಪಾಲಿಟಿ ಸಂಘದಿಂದಲೂ ಉಪಾಧ್ಯಾಯರ ಉಪಾಧ್ಯಾಯಿನಿ ಪ್ರತಿನಿಧಿಗಳನ್ನು ಚುನಾಯಿಸಿ ಅವರ ಹೆಸರುಗಳನ್ನು ಜಿಲ್ಲಾ ಉಪಾಧ್ಯಾಯರ ಸಂಘದ ಸೆಕ್ರೆಟರಿಯವರಿಗೆ ತಿಳಿಸಬೇಕಾಗಿ ವಿನಂತಿ. ಕನಿಷ್ಠಪಕ್ಷಕ್ಕೆ ಒಂದೊಂದು ತಾಲೂಕು ಸಂಘದಿಂದ ೬ ಮಂದಿ ಉಪಾಧ್ಯಾಯರನ್ನು ೪ ಮಂದಿ ಉಪಾಧ್ಯಾಯಿನಿಯರನ್ನು ಪ್ರತಿನಿಧಿಗಳಾಗಿ ಚುನಾಯಿಸಿ ಕಳುಹಿಸುವಂತೆ ಆಯಾ ತಾಲೂಕು ಸಂಘದವರು ಈಗಲೇ ಕೆಲಸವನ್ನಾರಂಭಿಸುವುದು ಒಳ್ಳೇದು. ಕಳೆದ ವರುಷ ಕುಂದಾಪುರ ತಾಲೂಕಿನ ಪ್ರತಿನಿಧಿಗಳು ಯಾರೂ ಬಾರದೆ ಇದ್ದುದರಿಂದ ಈ ವರ್ಷ ಅಗತ್ಯವಾಗಿ ಆ ಸಂಘದವರು ಪ್ರತಿನಿಧಿಗಳನ್ನು ಕಳುಹಿಸುವುದು ಸ್ತ್ರೀ ಉಪಾಧ್ಯಾಯರ ಏಳಿಗೆಗೆ ಅತಿ ಅಗತ್ಯವಾಗಿದೆ. ಉಡುಪಿ, ಕಾರ್ಕಳ, ಉಪ್ಪಿನಂಗಡಿ, ಮಂಗಳೂರು, ಕಾಸರಗೋಡು ತಾಲೂಕುಗಳ ತಾಲೂಕು ಸಂಘಗಳು ಕಳೆದ ವರ್ಷದಂತೆ ಉತ್ಸಾಹದಿಂದ ಪ್ರತಿನಿಧಿಗಳನ್ನು ಕಳುಹಿಸುವರೆಂದು ನಂಬಲಾಗಿಯದೆ. ವಿಷಯಗಳ ತಾರೀಕು ಬೇಗನೇ ತಿಳಿಸಲಾಗುವುದು.

ಎಸ್. ಗಣಪತಿ ರಾವ್ ಐಗಳ್.

ಬಂಟವಾಳ, 4—1—'30. — ಕಾರ್ಯದರ್ಶಿ, ಎಲಿಮೆಂಟರಿ ಶಾಲಾ ಅಧ್ಯಾಪಕ ಅಧ್ಯಾಪಕಿಯರ ಸಂಘ, ದಕ್ಷಿಣ ಕನ್ನಡ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟನಲ್ಲಿ.

O. P. No. 124/1929.

ಗೌರಿ ಹೆಂಗ್ಸು—ಅರ್ಜಿದಾರಳು.

ನಾರಾಯಣಪ್ಪಯ್ಯ ಕೂಡಾ—ಎದುರು.

ಅರ್ಜಿದಾರಳ ಗಂಡ ಹಾಲ್ ಮೃತಪಟ್ಟ ಕೃಷ್ಣಭಟ್ಟನು ಪುತ್ತೂರು ಡಿ. ಮುನ್ಸೀಫ ಕೋರ್ಟು ಕ್ರಮಸಂಖ್ಯೆ 230/1928ನೇಗೆ ಹಿಂದೀ ಗೋಪಾಲ ಕೃಷ್ಣಭಟ್ಟನ ಮೇಲೆ ಪಡೆದ ಡಿಕ್ರಿಯ ಸಾಲ ಮತ್ತು ಬಡ್ಡಿಯು ರಾಮಕೃಷ್ಣಾಚಾರ್ಯರಿಂದ ರೂಪಾಯಿ 200ಕ್ಕೆ ಎಡ್ವಿ ಸಿಕ್ಕಿದ [illegible] ದಿವಾನ್ [illegible] ಸಾಲ ಕೂಡಾ, ಸಾಲಗಳ ವಸೂಲಿ ಕುರಿತು ತನಗೆ [illegible] ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಮೇಲ್ಕಂಡ ಅರ್ಜಿಯ ಮೂಲಕ ಈ ಕೋರ್ಟಿಗೆ ಮನವಿ ಮಾಡಿಕೊಂಡಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಾರೀಕು 23—1—'30ನೇ ಹಗಲು ಘಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಖುದ್ದಾಗಿ ಇಲ್ಲವೆ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು.

ಪುತ್ತೂರು, ತಾ. 4—1—'30. — (Sd) M. Shiva Rao. Pleader, Puttur S. K.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟನಲ್ಲಿ.

O. S. No. 369/1925. R. E. P. No. 489/1929.

ಶಿವಯ್ಯ ಶೇರೆಗಾರ—ಅರ್ಜಿದಾರ.

ವ- ಕ್ಕ

ಶ್ರೀನಿವಾಸ ಕಂಪ್ತಿ ಕೂಡಾ—ಎದ್ರಿಯರು.

ಇವರಿಗೆ

ಮೇಲ್ಕಂಡ ಅಮ್ಲುಜ್ಯಾರಿಯಲ್ಲಿ 2ನೇ ಎದ್ರಿ ಪುತ್ತು ಯಾನೆ ಗೋವರ್ಧನ ಕಂಪ್ತಿ ಬಾಬತು ಸ್ಥಿರಾಸ್ತಿ ಏಲಮಿಗೆ ಅಪೇಕ್ಷಿಸಿ ಆ ಬಗ್ಗೆ ಸದರಿ ಕೋರ್ಟಿನಲ್ಲಿ ಹಾಜರಿಪಡಿಸಿದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸಲಿಕ್ಕೆ ಸದರಿ ಅಮಲ್ದಾರಿಯು ತಾರೀಕು 6—2—1930ಕ್ಕೆ ಇಟ್ಟಿರುತ್ತದೆಂತಲೂ—ಆ ಕುರಿತು ಆಕ್ಷೇಪ ಇರುವ ಸಂಗತಿಯಲ್ಲಿ ಅಂಥಾ ಆಕ್ಷೇಪವನ್ನು ಸದರಿ ಕೋರ್ಟು ಮುಂದೆ ಸದರಿ ತಮ್ಮ ದಿವಸ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದೆಂತ ಕೂಡಾ ಸದರಿ 2ನೇ ಎದ್ರಿಯಾದ ಪುತ್ತು ಯಾನೆ ಗೋವರ್ಧನ ಕಂಪ್ತಿಗೆ ಈ ಮೂಲಕ ತಿಳಿಸುವದಾಗುತ್ತದೆ.

ತಾ. 6—1—'30, ಉಡ್ಪಿ. — P. PADMANABHA RAO, Vakil for Petitioner.

[illegible]

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್, ಕಾಂಞಂಗಾಡ (ದ. ಕ

MAGICAL PILES BALM (ಮೂಲವ್ಯಾಧಿಗೆ ಯುಕ್ತಲೇಪನ)

ನಮ್ಮ ಸಿಂಹ ಗುರುತಿನ ಮೂಲವ್ಯಾಧಿಯ ಯುಕ್ತಲೇಪನವು ಪ್ರಸಿದ್ಧವಾಗಿದೆ. ರಕ್ತಹೋಗುತ್ತಿದ್ದರೂ, ಒಳ ಮೊಳೆರೋಗಕ್ಕೂ ಇದನ್ನು ಹೊರಗೆ ಹಚ್ಚುವದು. ಬಾಧೆ, ರಕ್ತಹೋಗುವದು 24 ಘಂಟೆಯಲ್ಲಿ ಶಮನವಾಗಿ ಹತ್ತು ದಿನದಲ್ಲಿ ಪೂರ್ಣ ವಾಸಿಯಾಗುತ್ತೆ. ಟಿನ್‌ಗೆ ರೂ. 2.8.0 ಮಾತ್ರ. ಎಲ್ಲೆಲ್ಲೂ ಏಜಂಟರು ಬೇಕು.

ವಿಳಾಸ – ಪೈಲ್ಸ್ ಬಾಂ ಡಿಪೋ, [illegible], ದಕ್ಷಿಣ ಇಂಡಿಯಾ

ಅತ್ಯುತ್ತಮ ಕಾದಂಬರಿಗಳು.

೧ ಅಂಬಿಕೆ (ಪತ್ತೇದಾರೀ)	೧-೪-೦	೭, ಕಂಠಹಾರ	೧-೪-೦
೨ ಭಗವಾನ್ ದಾಸ ,,	೧-೦-೦	೮, ನರವೀರ ಕಾಸೀಮ	೧-೪-೦
೩ [illegible] ,,	೨-೧೦-೦	೯ ಶಕ್ತಿಮಯಿ	೦-೦-೦
೪ ಇಂದುಮುಖಿ [illegible]	೦-೧೨-೦	೧೦ ಸೌಭಾಗ್ಯ ತಿಲಕ	೧-೦-೦
೫ [illegible] ,,	೦-೮-೦	೧೧ ನಿಗೂಢ ಕೊಲೆ	೦-೮-೦
೬ ವಿಜಯನಗರದ ವಿಜಯ ,,	೧-೪-೦	೧೨ [illegible] ಹೆಂಡತಿ	೦-೮-೦

ಇನ್ನೂ ನೂರಾರು ಬಗೆಯ ಪುಸ್ತಕಗಳು ನಮ್ಮಲ್ಲಿ ಸಿಗುವವು. ಕ್ಯಾಟಲಾಗಿಗೆ ಬರೆಯಿರಿ; ಬುಕ್ ಸೆಲ್ಲರರಿಗೆ ಧಾರಾಳವಾದ ಕಮಿಶನ್

ವಿಳಾಸ – ಭಿ. ಪ. ಕಾಳೆ,

ಪೋ. ಆನಂದವನ, (ಜಿ. ಧಾರವಾಡ)



Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.

MANGALORE

[illegible]

A NAME THAT MERIT HAS MADE FAMOUS

೮೪ ವರ್ಷ ಅನುಭವ ಹೊಂದಿದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಬಂಗಾರದ ಪದಕಗಳು ದೊರೆತಿರುತ್ತವೆ.

[illegible]

LIBERAL DISCOUNT TO TRADE

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadeli ad, Bombay. No. 14.

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

[illegible]

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

[illegible]

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

[illegible]

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 758 | ತಂತಿ: "ಕೇಸರಿ" | ಫೋನ್ 3486.

ಏಜಂಟರು – ಪಾ ಕಂಪೆನಿ, (ದಿ ಬುಲನ್ ಮಾರ್ಟ್) ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! | ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ [illegible]

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

[illegible]

ಒಮ್ಮೆ ಪರೀಕ್ಷಿಸಿ ನೋಡಿರಿ!

[illegible]

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

[illegible]

ಪ್ರಕೃತಿಯು ಶಕ್ತಿಗೆಡಬೇಕಾದರೆ "ಅಲೆಂಬಿಕ ದ್ರಾಕ್ಷಾಸವ" ಇದನ್ನು ಪ್ರತಿನಿತ್ಯ ಉಪಯೋಗಿಸಿರಿ.

ಅಜೀರ್ಣ, ಅಪಚನ, ಮಲಬದ್ಧತೆ, ಬಡಕ್ಕು, ಜೀರ್ಣಜ್ವರ, ವಾಂತಿ, ಕೆಮ್ಮು,
ಹೊಸದಾದ ಯಾ ಹಳೆದಾದ ಕಫವಿಕಾರ, ನಾಯಿಕೆಮ್ಮು ಇತ್ಯಾದಿಗಳ ಮೇಲೆ

ಅಲೆಂಬಿಕ ದ್ರಾಕ್ಷಾಸವ

ಆಯುರ್ವೇದ ರೀತ್ಯಾ ಯಾವತ್ತೂ ಔಷಧ ದ್ರವ್ಯಗಳನ್ನು ತಕ್ಕ ಪ್ರಮಾಣದಲ್ಲಿ ಸೇರಿಸಿ ತಯಾರಿಸಿದ ಕ್ರಿಯಾ ಶುದ್ಧ ಹಾಗೂ ಸ್ವಾದಿಷ್ಟ ಔಷಧವೆಂದರೆ ಇದೇ ದ್ರಾಕ್ಷಾಸವವು. ಇದು ವಿಶಿಷ್ಟ ಪ್ರಕೃತಿಯ ಸ್ತ್ರೀಪುರುಷರಿಗೆ ಎಲ್ಲ ಋತುಮಾನಗಳಲ್ಲಿ ತನ್ನ ಉತ್ತಮ ಗುಣವನ್ನು ಕೊಡುವುದು. ಇದರ ಸೇವನೆಯಿಂದ ಮಲಶುದ್ಧಿಯಾಗುತ್ತದೆ. ಪಚನ ಶಕ್ತಿಯು ಬೆಳೆದು ಹಸಿವು ಚೆನ್ನಾಗಿ ಆಗಹತ್ತುವುದು. ಸ್ವಸ್ಥವಾಗಿ ನಿದ್ರೆ ಹತ್ತಿ ಆಲಸ್ಯತನವೂ ನಷ್ಟವಾಗುವುದು. ಶರೀರವು ಸುದೃಢವಾಗುವುದು. ಉಷ್ಣತೆ, ಕ್ಷಯದ ಪ್ರಥಮಾವಸ್ಥೆ, ಕೆಮ್ಮು, ಯಾವುದೇ ರೋಗದಿಂದುಂಟಾಗುವ ಅಶಕ್ತತೆ ಇತ್ಯಾದಿ ವಿಕಾರಗಳ ಮೇಲೆ ಅಲೆಂಬಿಕ ದ್ರಾಕ್ಷಾಸವವು ಅಪ್ರತಿಮ ಗುಣಕಾರಿಯಾಗಿದೆ.

	೧॥ ರಾತಲಿನ ಬಾಟ್ಲಿ ಗಳ್ಗೆ ರೂ.	೧—೧೨—೦.
ಕ್ರಯ:—	೧ ,, ,, ,, ,,	೧— ೪—೦.
	ಅರ್ಧ ,, ,, ,, ,,	೦—೧೨—೦.

ಈ ಔಷಧವು ಎಲ್ಲಾ ಕಡೆಗಳಲ್ಲೂ ದೊರೆಯುತ್ತದೆ 'ಅಲೆಂಬಿಕ' ಎಂತಿರುವ ಹೆಸರನ್ನು ನೋಡಿ ತೆಗೆದುಕೊಳ್ಳಬೇಕು.

Alambic Chemical Works Co., Ltd., ಅಲೆಂಬಿಕ ಕೆಮಿಕಲ್ ವರ್ಕ್ಸ ಕೊ. ಲಿಮಿಟೆಡ್.
Princess Street, BOMBAY. ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಾಗಲಿ ಮರಾಠಿಯಲ್ಲಾಗಲಿ ಮಾಡಬೇಕು.

ಇಕೋ ನೋಡಿರಿ! ಇತ್ತ ಲಕ್ಷ್ಯಕೊಡಿರಿ!

ವಿಜಾಪುರ ಮತ್ತು ಮೈಸೂರು ಪ್ರದರ್ಶನದಲ್ಲಿ ಗೋಲ್ಡ ಮೆಡಲು ಮತ್ತು
ಸರ್ಟಿಫಿಕೇಟು ದೊರಕಿಸಿದಂಥ

ರಿಜಿಸ್ಟರ್ಡ್ ## ಪ್ಯಾರಾ ಹೇಯರ್ ಆಯಿಲ್ ರಿಜಿಸ್ಟರ್ಡ

ಶುದ್ಧ ಆಲ್ಹಾದದಾಯಕ.

ಪರಿಮಳಯುಕ್ತ ಕೇಶರಂಜಕ ಮತ್ತು ಕೇಶವರ್ಧಕವಾದ ಈ ತೈಲವನ್ನು ವನಸ್ಪತಿ ಮತ್ತು ಕುಸುಮಗಳಿಂದ ನಾವು ತಯಾರಿಸಿದ್ದೇವೆ. ಬಿಳೀ ಎಣ್ಣೆಮೇಣ, ಸ್ಪಿರಿಟ್ ಅಥವಾ ರಸಾಯನ ದ್ರವ್ಯ ಇವುಗಳ ಕಿಂಚಿತ್ತಾದರೂ ಅಂಶವು ಇದರಲ್ಲಿ ಮಿಶ್ರವಾಗಿಲ್ಲವೆಂದು ನಾವು ಗ್ಯಾರಂಟಿಯನ್ನು ಕೊಡುತ್ತೇವೆ. ಈ ತೈಲದ ಉಪಯೋಗದಿಂದ ಮಿದುಳು ಉತ್ಸಾಹಕರವಾಗಿ ಕೂದಲು ಭರವಾಗಿ ಬೆಳೆಯಹತ್ತುತ್ತವೆ. ಸುಗಂಧವನ್ನು ಸೂಸುವಂಥ ಈ ತೈಲಾಭ್ಯಂಜನದಿಂದ ಮನವು ಪ್ರಸನ್ನವಾಗುತ್ತದೆ. ಅಕ್ಷವು ಶಾಂತವಾಗುತ್ತದೆ. ಮತ್ತು ಇದರಲ್ಲಿಯ ವನಸ್ಪತಿ ಗುಣಗಳಿಂದ ಕೇಶಕಲಾಪವು ಕಪ್ಪಾಗಿ ಮಿರಿಮಿರಿ ಮಿಂಚಹತ್ತುತ್ತವೆ. ಬಹಳ ಹೇಳುವದೇಕೆ? ತನ್ನ ಉತ್ಕೃಷ್ಟ ಗುಣಗಳಿಂದ ಈ ತೈಲವು ಜನರ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸದಿರಲಾರದೆಂದು ನಮ್ಮ ದೃಢವಾದ ನಂಬಿಗೆ ಇದೆ.

ಅದರ ಜೋಡಿ ಎಲ್ಲರ ಪೇಟೆಯಲ್ಲಿ ಅಗ್ಗಾಗಿ ದೊರೆಯುವ ಹೊರ ಹೊಳಪಿನ ಮತ್ತು ಘಾತಕ ತೈಲಗಳ ವಿಷಯವಾಗಿ ಜೋಕೆ, ಮೋಸ ಹೋಗಬೇಡಿರಿ.

ಶ್ರೀಮಂತರಿಗೂ ಮತ್ತು ಬಡವರಿಗೂ ಉಪಯೋಗಿಸಲು ಅನುಕೂಲವಾಗಬೇಕೆಂಬ ಉದ್ದೇಶದಿಂದ ಇದರ ಬೆಲೆಯನ್ನು ಬಹಳ ಕಡಿಮೆ ಮಾಡಿದೆ. ಆದಕಾರಣ ಎಲ್ಲರೂ ಇದರ ಲಾಭವನ್ನು ಹೊಂದಬಹುದು.

ನಮೂನೆ ಬಾಟಲಿಗಾಗಿ ಒಂದು ಆಣೆ ತಿಕೀಟನ್ನು ಕಳಿಸಿರಿ. ಒಂದೇ ಸಲ ನೋಡಿರಿ ಮುಂದೆ ಎಂದಿಗೂ ಬಿಡಲಾರಿರಿ!!

ಸಿಗುವ ಸ್ಥಳ—

ಪ್ರೊಪ್ರಾಯಿಟರ,
ಬಿ. ಎಸ್. ಸುಗಂಧಿ,
ಪರಫ್ಯೂಮರ, ವಿಜಾಪೂರ (ಕರ್ನಾಟಕ)

ತಯಾರಾಗಿವೆ! ಮಾರಾಟಕ್ಕೆ ಸಿದ್ಧವಿವೆ!! ತ್ವರೆಮಾಡಿರಿ!!

1930ನೇ ಇಸವಿಯ ಪೋಕೆಟ್ ಡ್ಯಾರಿಗಳು. 1930ನೇ ಇಸವಿಯ

ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸ್ಯಾಜಿನ ಡ್ಯಾರಿ (ಇಂಗ್ಲೀಷ ಮೆಟರಿನೊಂದಿಗೆ)	0	10	0	ಕೆಲಿಕೊ ಬ್ಯಾಂಡಿನ ಮೀಡಿಯಮ್ ಸ್ಯಾಜಿನದ್ದು	0	8	0
ಕೆಲಿಕೊ ಬ್ಯಾಂಡು ದೊಡ್ಡದು ಮುಚ್ಚಳದ್ದು	0	14	0	,, ,, ಮುಚ್ಚಳದ್ದು ,,	0	12	0
ಕೆಲಿಕೊ ಬ್ಯಾಂಡು ದೊಡ್ಡದು (ಕನ್ನಡ ಮೆಟರಿನೊಂದಿಗೆ)	0	9	0	ಮೀಡಿಯಮ್ ಸ್ಯಾಜ್ ಸ್ಟಿಫ್ ಬ್ಯಾಂಡ್ ಡ್ಯಾರಿ	0	7	0
,, ಮುಚ್ಚಳದ್ದು ,,	0	14	0	ಸಣ್ಣ ಸ್ಯಾಜಿನ ಕೆಲಿಕೊ ಬ್ಯಾಂಡ್ ಡ್ಯಾರಿ	0	6	0
				,, ,, ಮುಚ್ಚಳದ್ದು	0	10	0
				,, ಸ್ಟಿಫ್ ಬ್ಯಾಂಡ್ ಡ್ಯಾರಿ	0	5	0
ಕನ್ನಡ ಮೆಟರಿರುವ ದೊಡ್ಡ ಸ್ಯಾಜು ಸ್ಟಿಫ್ ಬ್ಯಾಂಡ್ ಡ್ಯಾರಿ	0	8	0				

ದೊಡ್ಡ ಸ್ಯಾಜಿನ ಡ್ಯಾರಿಯಲ್ಲಿ ಟಪ್ಪಾಲು ಮತ್ತು ಕೋರ್ಟು ವ್ಯವಹಾರ, ಸ್ಟಾಂಪು ಆಕ್ಟು ಮುಂತಾದ ಕ್ರಮಗಳನ್ನು ಕನ್ನಡದಲ್ಲಿ ಕೊಟ್ಟಿರುತ್ತದೆ.

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಿಗಳಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಶಾರದಾ ಛಾಪಖಾನೆ,
ಕಥೋಲಿಕ್ ಮಂಗಳೂರು.

ಸಾಲ ಕೊಡುವ ಸಂಘ.

ದಿ ಆಲ್ ಇಂಡಿಯಾ ಮ್ಯೂಚುವಲ್ ಫಿನೇನ್ಸಿಂಗ್ ಕೊರ್ಪೊರೇಶನ್ ಲಿಮಿಟೆಡ್, ಪಾಟ್ನಾ.

ಪರಸ್ಪರ ಸಹಕಾರದ ಮೂಲಕ ಸಾಲಗಳನ್ನು ಶಿಬದ್ಧಿಯಿಂದಲೂ, ಸಾಲಿಯಾನ ಶೇಕಡಾ ೩||ರ ಸಳೆ ಬಡ್ಡಿಯಿಂದಲೂ, ಸಾಲ ಅಗತ್ಯವಿದ್ದಲ್ಲಿ ಮರುಪಾವತಿಯು ಹಂಗಿಲ್ಲದ ಉಚಿತಾರ್ಥ (ಫ್ರೀಕೇಶ್ ದೋನಸ್)ವನ್ನು ಒದಗಿಸಿ ಕೊಡಲಾಗುವುದು. ತಮ್ಮ ಇಷ್ಟಮಿತ್ರರೊಂದಿಗೆ ಸಹಕರಿಸಿ ಧನ್ಯರಾಗಿರಿ!

ವಿಶೇಷ ಮಾಹಿತಿನ ಬಗ್ಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಕುಡ್ವ,
ದಕ್ಷಿಣ ಕನ್ನಡ ಜಿಲ್ಲಾ ಏಜಂಟ್,
ಮೂಡಬಿದ್ರೆ.

ದಿ ಜನರಲ್ ಹೆಲ್ಪಿಂಗ್ ಕಂಪೆನಿ,
ಲಿಮಿಟೆಡ್, ಅಮೃತಸಾರ.

ತಿಂಗಳೊಂದರ ರೂಪಾಯಿ 0—8—0, 1—0—0, 1—8—0ರಂತೆ 12 ವರ್ಷಗಳ ವರೆಗೆ ಮಾತ್ರ ಪ್ರೀಮಿಯಮ್ ಕಟ್ಟುವ ಪೋಲೀಸಿಗಳ ಆಧಾರದಿಂದ ಜೀವ ವಿಮಾ ಪೋಲಿಸಿದಾರರಿಗೆ ತಾವು ಕಟ್ಟಿದ ಪ್ರೀಮಿಯಮ್‌ಗಳ ಎರಡರಷ್ಟು ಮದುವೆ ಫಂಡಿನ ವಿಮಾ ಪೋಲಿಸಿದಾರರಿಗೆ ಹದಿನಾರರಷ್ಟು ಮೀರದಂತೆ ಧನ ಸಹಾಯ ಒದಗಿಸಿಕೊಡಲಾಗುವುದು. ಅತೀ ಕಡಿಮೆ ಹಣ ಕಟ್ಟಿ ಅತೀ ಹೆಚ್ಚು ಲಾಭ ಪಡೆಯಬಹುದಾದ ಈ ಸುಸಾಧನವನ್ನು ಕೃಪೆಯಿಟ್ಟು ಸ್ವೀಕರಿಸಿ ಧನ್ಯರಾಗಿರಿ!

ಉದಾರ ಶರ್ತಗಳ ಮೇಲೆ ಸಬ್ ಏಜಂಟರು ಬೇಕಾಗಿದ್ದಾರೆ.

ಕೆ. ಎಸ್. ಕುಡ್ವ,
ದಕ್ಷಿಣ ಕನ್ನಡ ಜಿಲ್ಲಾ ಏಜಂಟ್,
ಮೂಡಬಿದ್ರೆ.

WANTED:—Candidates for Telegraph and Station Master's Classes. Full particulars and Railway Fare Certificate on 2 annas stamp.

Apply to:—

Imperial Telegraph College,
Nai Sarak, Delhi.

Wanted a Master Tailor.

Required an Anglo Indian or Catholic or Protestant tailor with upto date knowledge. Bombay returned preferred. Very good prospects. Apply with details.—

Kumble Raghaveendra Rao.
Merchant, Udipi.
4—4

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

ಕ್ರಮ ನಂಬ್ರ 414/1929

1. ಶೀನ ಶೆಟ್ಟಿ—ಚನ್ನಪ್ಪ ಗೌಡನ ಹೆಂಡತಿ,
2. ಶೇಶಪ್ಪ ಗೌಡ—ಚನ್ನಪ್ಪ ಗೌಡನ ಮಗ, ಪಡುನಾಡು ಗ್ರಾಮ—ವಾದಿಯು.

ಕೊಂಚಾಡ್ಡ ಶೆಟ್ಟಿ, ಅಪ್ಪಯ್ಯ ಶೆಟ್ಟಿ ಅಳಿಯ ಕಳಿಯಗ್ರಾಮದ ಮಲ್ಲೊಟ್ಟು—ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯವು ತಾ. 20—1—30ಕ್ಕೆ ತಸ್ತೀಕ ಇಟ್ಟಿರುತ್ತದೆ. ಆ ವಾಯಿದೆಗೆ ಪ್ರತಿವಾದಿಯು ಕೋರ್ಟಿಗೆ ಹಾಜರಾಗದೆ ಇದ್ದರೆ ತಿಮ್ಮಾ ಮಾಡಲಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

ಪುತ್ತೂರು, 3-1-'30. } **ಬೆಳ್ತಂಗಡಿ ಚಿದಾನಂದ ರಾವ್.** ವಾದಿರ ವಕೀಲು.

[illegible]

ಎಯರ್ ಪಿಸ್ತೂಲು.

[illegible] ಕ್ರಯ ರೂ. 5 ಮಾತ್ರ!



[illegible] ಇರುವ ನಮೂನೆಯಲ್ಲಿಯೇ [illegible] [illegible] ಗಟ್ಟಿಯಾಗಿದೆ. ಅದನ್ನು [illegible] [illegible] ಈ ಪಿಸ್ತೂಲನ್ನು ಜೇಬಿನಲ್ಲಿಟ್ಟು ಎಂತಹ ಕಾಡುಗಳಲ್ಲಿಯೂ ನಿರ್ಭಯವಾಗಿ [illegible]. [illegible] ನಮ್ಮ [illegible] ಧೈರ್ಯ ಕಾಣನು. ಪ್ರತಿ ಪಿಸ್ತೂಲಿನೊಂದಿಗೆ [illegible] [illegible]. ಕ್ರಯ ರೂಪಾಯಿ 5 ಮಾತ್ರ. ಪೆಕಿಂಗ್ ಮತ್ತು ಅಂಚೆವೆಚ್ಚ ಆಣೆ 8.

ಉತ್ತಮ ಎಯರ್ ಗನ್.

ಅಮೇರಿಕದಿಂದ ಇತ್ತೀಚೆಗೆ ತರಿಸಲ್ಪಟ್ಟಿದು. ನಮ್ಮಲ್ಲಿ ಉತ್ತಮ ಎಯರ್ ಗನ್ನುಗಳಿವೆ. ಅವು ಗಟ್ಟಿಯಾಗಿ ಬಹು ಸಮಯ ಬಾಳಿ, ಒಡೆಯುವಾಗ ದೊಡ್ಡ ಶಬ್ದವನ್ನುಂಟುಮಾಡುವವು. ಪ್ರತಿ ಗುಂಡಿನೊಂದಿಗೆ 1000 ಚರೆಗಳು ಉಚಿತ. ಒಂದು ಗುಂಡಿನದಕ್ಕೆ ರೂ. 6—0—0; 350 ಚರೆಗಳಿಗೆ ರೂ. 8—0—0; ರೂ. 9—0—0; 500 ಚರೆಗಳಿಗೆ ರೂ. 10; ರೂ. 11; ಒಂದು ಸಾವಿರ ಚರೆಗಳಿಗೆ ರೂ. 15. ಪೆಕಿಂಗ್ ಮತ್ತು ಅಂಚೆವೆಚ್ಚ ರೂ. 2.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಕಪೂರ್ ಬ್ರದರ್ಸ್ ಎಂಡ್ ಕಂಪೆನಿ,
ಪೋಸ್ಟು ಬಾಕ್ಸ್ ನಂಬ್ರ 6795, ಡಿ. ಡಿ.
ಕಲ್ಕತ್ತಾ.

ಗೀತಾಜಯಂತಿಯ ಅಭಿನಂದನೋತ್ಸವದ ಸಲುವಾಗಿ ಒಂದು ತಿಂಗಳು ವರೆಗೆ ಮಾತ್ರ ಈ ರಿಯಾಯಿತಿ!

ಶ್ರೀಮನ್ಮಹಾರಾಜರವರ, ಶ್ರೀಮದ್ಯುವರಾಜರವರ, ಶ್ರೀಮನ್ಮಹಾರಾಣೀ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಇವರುಗಳ ಕೃಪಾಪೋಷಣೆಯನ್ನು ಪಡೆದು, ಕರ್ಣಾಟಕಸ್ಥರ ಉದಾರಾಶ್ರಯದಿಂದ ಕೂಡಿ ಪ್ರಕಟಿಸುತ್ತಿರುವ

ಸಚಿತ್ರ ಕನ್ನಡ ಸುಧಿಯ ಮಾಸಪತ್ರಿಕೆ. **"ಶ್ರೀ ಕೃಷ್ಣ"** ೧೫ನೆಯ ವರ್ಷಾರಂಭ:— ಸೆಪ್ಟಂಬರ ೧೯೩೯.

ಸಂಪಾದಕ:— ಶ್ರೀ ಬಿ. ಆರ್. ಚಕ್ರವರ್ತಿ.

ವಾರ್ಷಿಕ ಚಂದಾ:—	ಪೋಷಕರಿಗೆ	ರೂ. ೧೦—೦—೦	ಅಂಚೆಹಾಸಲು ಉಚಿತ!
	ಆಶ್ರಯದಾತರಿಗೆ	ರೂ. ೫—೦—೦	
	ಇತರರಿಗೆ	ರೂ. ೩—೪—೦	

ಇದರಲ್ಲಿ ಬಂಧುಪ್ರಾಯವಾದ ವಿದ್ಯಾ, ನೀತಿ, ಭಕ್ತಿ, ಕೃಷಿ, ಕೈಗಾರಿಕೆ, ಸದಾಚಾರ, ಆರ್ಥಸಾಧಕ, ಭಗವದ್ವಿಲಾಸ, ಇತ್ಯಾದಿ ಐಹಿಕಾಮುಷ್ಮಿಕ ಪಾರಮಾರ್ಥಿಕ ಸಂಪತ್ತುಗಳು ವೃದ್ಧಿಯಾಗುವುದಕ್ಕೆ ಸಾಧನವಾದ ಉತ್ತಮ ಲೇಖನಗಳು ಸಚಿತ್ರವಾಗಿ ಪ್ರಕಟಿಸಲಾಗುವುವು. ೧೪ನೆಯ ಸಂಪುಟದಲ್ಲಿ ವಾಲ್ಮೀಕಿ ವಿಜಯ, ಭಾರತ ಯೋಗಕ್ಷೇಮದಲ್ಲಿನ ನಮ್ಮ ಕರ್ತವ್ಯ, ಶ್ರೇಯಸ್ಸಾಧನೆಗೆ ಮನುಷ್ಯನ ಕರ್ತವ್ಯತೆ, ಮಾತಾ-ಪಿತೃ ಸೇವೆಯ ಮಹತ್ವ, ಪತಿವ್ರತೆಯರ ಕರ್ತವ್ಯ ಇತ್ಯಾದಿ ಮುಖ್ಯವಾದ ಲೇಖನಗಳವರಿಗೆ ಪ್ರತಿಪಾದಿಸಲ್ಪಟ್ಟಿರುವುವಲ್ಲದೆ, ಭಗವನ್ನಾಮಾಮೃತಸಾರ, ಪಾಂಡವರ ವಸ್ತ್ರ ಅಥವಾ ಸತ್ಯವತಿಯ ಸತ್ಯದರ್ಶಿತ್ವ, ಶ್ರೀ ವಿಷ್ಣುಸಹಸ್ರನಾಮ ಪಾಠಕೃಷ್ಣಚಂದ್ರಿಕೆ, ಎಂಬ ಮೂರು ಗ್ರಂಥಗಳು ಪ್ರತ್ಯೇಕ ಪುಟ ಸಂಖ್ಯೆಯಿಂದ ಪ್ರಕಟವಾಗಿರುವವು. ಸನಾತನಧರ್ಮ ಪರಾಯಣರಿಗೆ ವ್ಯಾಸರತ್ನಗಳು ೧೪ನೆಯ ಸಂಪುಟದ ಸ್ವಲ್ಪ ಪ್ರತಿಗಳು ಮಾತ್ರವೇ ಉಳಿದಿವೆ. ಆದ್ದರಿಂದ ಧರ್ಮಾತ್ಮಕವನ್ನು ಪಾನಮಾಡಬಿಚ್ಛಿಸುವವರು "ಶ್ರೀ ಕೃಷ್ಣ"ಕ್ಕೆ ೧೫ನೆಯ ಸಂಪುಟದಿಂದ ಚಂದಾದಾರರಾಗಿ ನಾಲ್ಕನೆಯ ರೂಪಾಯಿ ಮನಿ ಆರ್ಡರ್ ಮಾಡಿದ್ದಲ್ಲಿ ಅವರಿಗೆ ೧೪ನೆಯ ಸಂಪುಟ ಕಳುಹಿಸಿ ಕೊಡುವುದಲ್ಲದೆ ಮುಂದೆ ಒಂದು ವರ್ಷ ಪತ್ರಿಕೆ ಕಳುಹಿಸುವೆವು. ಶ್ರೀಮನ್ಮಹಾರಾಜರವರ ಮನ್ನಣೆಗೆ ಪಾತ್ರವಾಗಿ, ಸಂಸ್ಥಾನದ ಮಹಾ ವಿದ್ವಾಂಸರ ಮೆಚ್ಚಿಕೆಗೆ ಪಾತ್ರವಾದ ಬಹುಮಾನ ಯೋಗ್ಯವಾದ "ರತ್ನ" ಒಂದನ್ನು ಕೈಗಾಣಿಕೆಯಾಗಿ ಉಚಿತವಾಗಿ ರವಾನಿಸಿ ಕೊಡುವೆವು. ಇದರ ರವಾನೆಗಾಗಿ ದಯವಿಟ್ಟು ನಾಲ್ಕು ಆಣೆ ಸ್ಟಾಂಪು ರವಾನಿಸಿ ಕೊಡಬೇಕು, ಕಾಣಿಕೆ ಗ್ರಂಥವು ಸ್ವಲ್ಪವೇ ಇದೆ. ಸಾವಕಾಶಮಾಡಿದರೆ ಮುಗಿದ ನಂತರ ಕಾಣಿಕೆ ಗ್ರಂಥ ರವಾನಿಸಲಾಗುವುದಿಲ್ಲ. ಕೂಡಲೆ ಹಣವನ್ನು ಕಳುಹಿಸಿ ಚಂದಾದಾರರಾಗಿ ಅಕ್ಷಯಮಾತ್ಮ ಸವಿಯನ್ನು ಸವಿಯಿರಿ!

ಮ್ಯಾನೇಜರ್, "ಶ್ರೀ ಕೃಷ್ಣ" ಕಾರ್ಯಾಲಯ, ಮೈಸೂರು.

The Zandu Pharmaceutical Works, Ltd., Bombay, 14.
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

— ಬೊಂಬಾಯಿಯಲ್ಲಿ ಕಳ್ಳರು ಪೋಲೀಸ ಅಧಿಕಾರಿಗಳನ್ನು ವಂಚಿಸುವ ಹೊಸಹೊಸ ಉಪಾಯಗಳನ್ನು ಕಂಡುಹಿಡಿಯುತ್ತಿರುವರು. ಕಳ್ಳರು ಒಂದು ಜವಳಿ ಅಂಗಡಿಯನ್ನು ಪ್ರವೇಶಿಸಿ ಬೇಕಾದ ಸಾಮಾಗ್ರಿಗಳನ್ನು ಕಳವುಮಾಡಿ ಮೋಟಾರಿನಲ್ಲಿ ಹಾಕಿ ಓಡುವಾಗ ಪೋಲೀಸರು ಅವರನ್ನು ಹಿಂಬಾಲಿಸಿದರು. ಬಹು ದೂರ ಹೋದ ತರುವಾಯ ಕಳ್ಳರು ಒಂದು ಹೆಂಗಸಿನ ಬೊಂಬೆಯನ್ನು ಮಾಡಿ, ಹೊಸ ವಸ್ತ್ರಗಳಿಂದ ಅದನ್ನು ಅಲಂಕರಿಸಿ ಅದನ್ನು ಮಾರ್ಗದಲ್ಲಿ ಉಸಾಡಿದರು. ಹೆಂಗಸೊಬ್ಬಳು ಮೋಟಾರಿನಿಂದ ಬಿದ್ದಳೆಂದು ನೆನಸಿ ಅವಳಿಗೆ ಸಹಾಯಮಾಡಲು ಪೋಲೀಸರು ಕಾರು ನಿಲ್ಲಿಸಿದರು. ರಹಸ್ಯವು ಪೋಲೀಸರಿಗೆ ತಿಳಿಯುವ ಮೊದಲೇ ಕಳ್ಳರು ಪಾರಾಗಿಬಿಟ್ಟರು.

— ಇಂಗ್ಲೆಂಡಿನಿಂದ ಹಿಂದೂಸ್ಥಾನಕ್ಕೆ ಬರುವ ಟಪ್ಪಾಲು ವಿಮಾನವು ಇನ್ನು ಮುಂದೆ ಒಂದು ಹೊಸ ಹಾದಿಯನ್ನು ಕಂಡುಹಿಡಿದಿರುವುದು. ಈ ಹಾದಿಯು ಹಳೇ ಹಾದಿಗಿಂತ ನೂರು ಮೈಲು ಕಡಿಮೆಯಾಗಿರುತ್ತದೆ.

— ಲಂಡನಿನ ಕಿಂಗ್ಸ್ವೆಯಲ್ಲಿ ಬಂದು ತಲುಪಿದ ಟಪ್ಪಾಲನ್ನು ಬೇರೆ ಬೇರೆ ಇಲಾಖೆಯವರಿಗೆ ಹಂಚಿಕೊಡಲು ಅನುಕೂಲಿಸದಾಗ ಕಳ್ಳನ ಒಂದು ಮೋಟಾರುಕಾರು ಬಂದು ನಿಂತಿತು. ಒಬ್ಬ ಮನುಷ್ಯನು ಕೆಳಗಿಳಿದು ಎರಡು ಟಪ್ಪಾಲು ಚೀಲಗಳನ್ನು ಸೆಳೆದು ತನ್ನ ಮೋಟಾರಿನಲ್ಲಿ ಹಾಕಿ ಓಡಿಹೋದನು. ಕಳವಾದ ಚೀಲಗಳಲ್ಲಿ ಒಂದರಲ್ಲಿ ರಿಜಿಸ್ಟ್ರಿಯಾದ ಪತ್ರಗಳಿದ್ದುವಂತೆ.

— ಸಿಲೋನಿನಲ್ಲಿ ಇನ್ನು ದಾಸ್ಯವು ನೆಲೆಗೊಳ್ಳುವುದಾದರೆ ಸಿಲೋನಿನ ಆ ಕೊಪ್ಪನ್ನು ತೆಗೆದಾಕಿಯಬೇಕೆಂದು ಲೇಡಿ ಸೈಮನರವರು ಬ್ರಿಟನಿನಲ್ಲಿ ಒಂದು ಚಳವಳವನ್ನು ಹೂಡಿರುವರು. ಆಗಸ್ಟಿನಲ್ಲಿ ಈಗ ಸುಮಾರು ನಾಲ್ಕರಿಂದ ಆರು ವರ್ಷಗಳ ವರೆಗೆ ಗುಲಾಮರಿರುವರು. ಇಂಗ್ಲೆಂಡಿನ ವಿವಿಧ ದೇಶಗಳಲ್ಲಿ ಗುಲಾಮ ವ್ಯಾಪಾರವು ನಡೆಯುತ್ತಿದೆಯಂತೆ.

— ಕೊಲಂಬಿಯಾ ಯುನಿವರ್ಸಿಟಿ ಕಾಲೇಜಿನಲ್ಲಿ [illegible] ಒಂದು ಸಾವಿರ ಮಂದಿ ವಿದ್ಯಾರ್ಥಿಗಳನ್ನು ಕ್ಷಮಿಸಿರುವರು. ಇವರಲ್ಲಿ [illegible] ವಿದ್ಯಾರ್ಥಿನಿಯರು. [illegible] ಒಂದು ಎರಡರಲ್ಲಿ ಕೆಲವು [illegible] ಹಿಂದೆ ಕ್ರಮವಾದಲ್ಲಿ ವಿದ್ಯಾರ್ಥಿಗಳ [illegible] ಸಮಾನ ಭೂತಿಯನ್ನು ಸೂಚಿಸುವ ಸಲುವಾಗಿ ಈ ಶಾಲಾ ವಿದ್ಯಾರ್ಥಿಗಳು [illegible] ಮನ್ನಿಸಲಾಗಿದೆ.

ವಿದೇಶ ವರ್ತಮಾನ.

— [illegible] [illegible] ಸಿಸಿಲಿ ಮತ್ತು [illegible] [illegible] ಕಾಣದಿರು [illegible]. [illegible] [illegible] [illegible] [illegible].

— ಕಲಕತ್ತೆಯ [illegible] ಬಜಾರದಲ್ಲಿ ಒಬ್ಬ [illegible] ಧನಿಕನು [illegible] [illegible] ರಾತ್ರಿ [illegible] [illegible] [illegible] [illegible] [illegible] [illegible].

ಶ್ರೀ [illegible] ಚಟ್ಟೋಪಾಧ್ಯಾಯರವರು, ಬಂಗಾಳದ [illegible] ಬರೆದಿರುವ 'ವಸಂತ ಸೇನಾ' ಎಂಬ ಚಿತ್ರದಲ್ಲಿ [illegible] ಪಾತ್ರವನ್ನು ವಹಿಸಿರುವರು.

— [illegible] [illegible] ಬಂದೊಂದು [illegible] ಅವುಗಳ [illegible] ಸ್ವಾಧೀನ [illegible] ಪೋಲೀಸರು. ನವಜೀವನ ಭಾರತ ಸಭೆಗೆ ಸಂಬಂಧಿಸಿ [illegible] ಶೋಧಿಸಿಂದಿದಾಗ [illegible] [illegible] ಭಗತ್‌ಸಿಂಗರ [illegible]. ಅವರಿಗೆ [illegible] ಕೆಲವು [illegible] ಪ್ರತಿಗಳು, [illegible] ಕೆಲವು ಪತ್ರಗಳೂ ದೊರೆತಿರುವವು.

ಬಂಗಾಳದ [illegible] ಎಂಬ ಹಳ್ಳಿಯಲ್ಲಿ ತರಿಗೆ ಕೊಡುವ [illegible] ಪ್ರಾರಂಭವಾದ ಸತ್ಯಾಗ್ರಹವು ಅಂತ್ಯವಾಗಿರುತ್ತದೆಂದು ವಾರ್ತೆಯಿತ್ತು. ಆದರೆ ಅಂತ್ಯವಾಗುವ ಬದಲು ಅದು ಭರದಿಂದ ನಡೆಯುತ್ತಿದೆ ಎಂದು ಶ್ರೀ ಸುಭಾಷ ಚಂದ್ರಭೋಸರು ಅನ್ನುತ್ತಿರುವರು. [illegible] ಸಂಧಿಯುಂಟಾಗುವ ವರೆಗೆ ಸತ್ಯಾಗ್ರಹವು ನಡೆದೇ [illegible] ಹಳ್ಳಿಯಲ್ಲಿ ಈಗ [illegible], ಪೋಲೀಸ [illegible] [illegible] ಕಳವುರಿರುವರು.

— ಉತ್ತರ ಕಲಕತ್ತೆಯ ಪೆಟ್ರೋಲು ಕಂಪೆನಿಯೊಂದರಲ್ಲಿ ಒಂದು ಟ್ಯಾಂಕು ಒಡೆದುಹೋಗಿ ಗಣೇಶಚಂದ್ರನಂದಿಯೆಂಬ ಒಬ್ಬ ಕಾರಕೂನನು ಸತ್ತುಹೋದನು. ಇನ್ನೊಬ್ಬನಿಗೆ ವಿಶೇಷ ಅಪಾಯವುಂಟಾಗಿರುತ್ತದೆ.

— ರಾಮನಗರದ ಬಾಂಬು ಮೊಕದ್ದಮೆಯಲ್ಲಿ ಆಪಾದಿತರಾದ ಕೆ. ಪಿ. ಭಟ್ಟಾಚಾರ್ಯ ಮತ್ತು ಪಿ. ನಾಯ್ಡು ಇವರಿಗೆ ೬ ವರುಷಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿರುತ್ತದೆ.

— ನಂದಿದುರ್ಗದ ಗವಿಗಳಲ್ಲಿ ಒಂದು ಬಂದೆಕಲ್ಲು ಒಡೆದು ಇಬ್ಬರು ಕೂಲಿಗಳು ಅದರಡಿಯಲ್ಲಿ ಸತ್ತುಬಿಟ್ಟರು.

[illegible]

ಇಂಡಿಯಾ [illegible] "ಯಾವ ಆರ್ಯರು ಕೈಕೊಳ್ಳುವರೆ [illegible] ಇನ್ನು [illegible] ಸರಕಾರದ ಕೊನೆಯ ತೀರ್ಮಾನವು ನಮಗೆ ಒಂದು [illegible]" ಈ ವಾರ್ತೆಯನ್ನು [illegible] ಕೊಡುವರೆಂದೂ [illegible]

ದಕ್ಷಿಣ ಕನ್ನಡ.

ಈ ಕೆಳಗಿನ ಪುಸ್ತಕವನ್ನು ನಾವು ಆಧಾರ ಪೂರ್ವಕವಾಗಿ ಸ್ವೀಕರಿಸಿರುವೆವು:— ಶ್ರೀ ಪುರಂದರದಾಸರು (ನೃತ್ಯ). ಲೇಖಕರು:— ಶ್ರೀ [illegible] ರಾವ್, ಬಿ. ಎ. ಬೆಂಗಳೂರು. ಇದರ ವಿಮರ್ಶೆಯನ್ನು ಹಿಂದಿನಿಂದ ಕೊಡುವೆವು.

ತಿರುಪತಿ:— ಶ್ರೀ ವೆಂಕಟರಮಣ ದೇವಸ್ಥಾನದ ನೊಕ್ತೇಸರಿಕೆಯನ್ನು ಶ್ರೀ ಮಿಜಾರ ರಾಮಕೃಷ್ಣಯ್ಯನವರು ಬಿಟ್ಟು ಕೊಡಬೇಕಾದಾಗ ಸಬ್ ಜಡ್ಜರು [illegible] ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದುದರಲ್ಲಿ ಸಬ್ ಜಡ್ಜರ ಬದಲಿಗೆ ಡಿಸ್ಟ್ರಿಕ್ಟ್ ಜಡ್ಜರೆಂದು ಓದಿಕೊಳ್ಳತಕ್ಕದ್ದು.

ಮಂಗಳೂರು:— ಮಂಗಳೂರು ಆರ್ ಅಕ್ಟೋರಿಯ [illegible] ಸಂಘದವರ ಒಂದು ಮಹಾಸಭೆಯು ತಾ. ೧೪ ೧—೩೦ನೇ ಮಂಗಳವಾರ ದಿವಸ ಸಂಘದ ಆಫೀಸಿನಲ್ಲಿ ಕೂಡಿ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಈ ಸಂಘದ ಅಧ್ಯಕ್ಷರಾಗಿರುವ ಜನಾಬ್ ಮಹಮೂದ್ ಬೆವಜ್ಜಿರ್ ಸಾಹೇಬ ಬಹದ್ದೂರರವರಿಗೆ ಖಾನ್ ಬಹದ್ದೂರ್ ಬಿರುದು ದೊರೆತ ಸಂತೋಷಾರ್ಥವಾಗಿ ಮಹಿನ್ನ ವೈಸರಾಯರವರಿಗೂ, ಮಾನ್ಯ ಮದ್ರಾಸು ಗವರ್ನರವರಿಗೂ ಸಂತೋಷ ಪತ್ರಗಳನ್ನು ಕಳುಹಿಸಿಕೊಡಬೇಕೆಂತ ನಿಶ್ಚಯಿಸಲಾಯಿತು. ಮತ್ತು ಠರಾವುಗಳನ್ನು ಬಹುಮಾನ ಪತ್ರಗಳ ಸಮೇತ ಮಾನ್ಯ ವೈಸರಾಯರವರಿಗೂ, ಮಹಿನ್ನ ಗವರ್ನರರಿಗೂ, ಮತ್ತು ಜನಾಬ್ ಮಹಮೂದ್ ಬೆವಜ್ಜಿರ ಸಾಹೇಬರವರಿಗೂ ಕಳುಹಿಸಿಕೊಡುವಂತೆ ಸಂಘದ ಸೆಕ್ರೆಟರಿಯವರಿಗೆ ಅಧಿಕಾರ ಕೊಡಲಾಯಿತು.

ಶ್ರೀ ಚಾಮುಂಡೇಶ್ವರೀ ಕರ್ನಾಟಕ ನಾಟಕ ಸಭೆಯವರು ಕಳೆದ ಬುಧವಾರ 'ದಾನಶೂರ ಕರ್ಣ' ಎಂಬ ನಾಟಕವನ್ನು ಅಭಿನಯಿಸಿ ತೋರಿಸಿದರು. ಇವರು ನಾಳೆ ಶನಿವಾರ 'ವೀರ ಅಭಿಮನ್ಯು' ಎಂಬ ಇವರ ಅಮೋಘವಾದ ನಾಟಕವನ್ನು ಆಡಿತೋರಿಸಲಿರುವರೆಂದು ತಿಳಿದುಬರುತ್ತದೆ.

ಇದೇ ಕಳೆದ ತಾರೀಕು ೧೩ನೇ ಗುರುವಾರ ರಾತ್ರಿ ಘಂಟೆ [illegible] ಶ್ರೀ ಪಡಮನೂರು ರಾಮಚಂದ್ರರಾಯರವರು ಮಲ್ಕಿಯ [illegible] ದೈವಾಧೀನರಾದರೆಂಬುದನ್ನು ತಿಳಿಸಲು ಬಹಳ ವ್ಯಸನಪಡುತ್ತೇವೆ. ಇವರು ಇಲ್ಲಿಯ ಕೆನರಾ ಹ್ಯಾಸ್ಕೂಲಿನಲ್ಲಿಯೂ, ನಂತರ ಉಡುಪಿ ಮಿಶನ್ ಹ್ಯಾಸ್ಕೂಲಿನಲ್ಲಿಯೂ ಭೂಗೋಳದ ಅಧ್ಯಾಪಕರಾಗಿದ್ದರು. ತರುವಾಯ ರಾಷ್ಟ್ರೀಯ ಚಳವಳಿಗೆ ಸೇರಿ ಸಮಾಜ ಸೇವೆ ಮತ್ತು ಪತಿತೋದ್ಧಾರವನ್ನೇ ತನ್ನ ಧ್ಯೇಯವಾಗಿಟ್ಟುಕೊಂಡರು. ತನ್ನ ಪತ್ನಿಯು ಮರಣದ ನಂತರ ಇವರು ಬ್ರಹ್ಮ ಸಮಾಜಕ್ಕೆ ಸೇರಿ ಆಂಧ್ರ ದೇಶದ ವೀರೇಶಲಿಂಗಂ ಪಂತುಲುರವರ ಆಶ್ರಮದ ಒಬ್ಬ ಸ್ತ್ರೀಯನ್ನು ಪುನಃ ಮದುವೆಯಾದರು. ಇವರ ಪುತ್ರಿ ಪದ್ಮಾವತಿಯೆಂಬವಳು. ಇಂಗ್ಲಿಷ ಭಾಷೆಯಲ್ಲಿ ಅಸಾಧಾರಣ ಪಾಂಡಿತ್ಯವನ್ನು ಪಡೆದು ಕವಿತೆಗಳನ್ನು [illegible] ಇಂಟರ್ ಮೀಡಿಯೇಟ್ ಪರೀಕ್ಷೆ ಕೊಟ್ಟಿದ್ದಳೆಂದೂ ಅವಳು ಮೃತಳಾದ್ದೂ ಎಲ್ಲರೂ ತಿಳಿದ ಸಂಗತಿಯೇ ಆಗಿದೆ. ಪತ್ನಿಯು ಹಿಂದೆ ತಾಯಿಯೂ ಮೃತಳಾದಳು. ತದನಂತರ ಇವರ [illegible] ತನ್ನ ಎಷ್ಟೋ ದ್ರವ್ಯವನ್ನು ಜನಸೇವೆಗಾಗಿ ವಿನಿಯೋಗಿಸಿ ತಾನು [illegible] ತ್ಯಾಗಿಯಾಗಿ ಜೀವಿಸಿ [illegible] ಇವರ ಹೆಸರು ಚಿರಸ್ಥಾಯಿಯಾಗಿರುವುದರಲ್ಲಿ ಸಂಶಯವಿಲ್ಲ. [illegible] ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ!

ಇಲ್ಲಿಯ ಸೈಂಟ್ ಎಲೋಶಿಯಸ್ ಕಾಲೇಜಿನ [illegible] ಕಳೆದ ತಾ. ೧೨ರಿಂದ [illegible] ವರೆಗೆ ಬಹು [illegible] ಜರಗಿತು.

ಉಂಬಳೆ:— ಇದೇ ತಾರೀಕು ೧೬ನೇ [illegible] ಸಂಕ್ರಮಣಕ್ಕೆ ಮುಚ್ಚಿದ್ದ ಇಲ್ಲಿಯ ಗೋಪಾಲಕೃಷ್ಣ ದೇವಸ್ಥಾನದ ಬಾಗಿಲು [illegible] ತಾ. 17ರಲ್ಲು ಸಾಂಗ್ಯವಾಗಿ ತೆರೆಸಿತು.

ಇಲ್ಲಿ ನೂತನವಾಗಿ ಕಟ್ಟಿಸಿ ತಯಾರಾದ [illegible] ಎಲಿಮೆಂಟರಿ ಶಾಲಾ ಕಟ್ಟಡದ ಪ್ರವೇಶ ಸಮಾರಂಭವು ಬರುವ [illegible] ತಿಂಗಳಲ್ಲಿ ನಡೆಯಬೇಕಾಗಿ ವರ್ತಮಾನವಿದೆ.

ಇಲ್ಲಿ ಸುಮಾರು ಮೂರು ತಿಂಗಳ ಹಿಂದೆ ನೂತನವಾಗಿ ತಯಾರಾದ ಶ್ರೀ ವೀರವಿಠಲ ಪ್ರಸಾದಿತ ಕರ್ನಾಟಕ ನಾಟಕ ಮಂಡಲಿಯ [illegible] ಅಭಿನಯವನ್ನು [illegible] ಸ್ಥಳಕ್ಕೆ [illegible] ಯೋಗ್ಯ ನಟರನ್ನು ತರಿಸಿ ಆಡಿಸುವ ಪ್ರಶ್ನೆ [illegible] ನಾಟಕಗಳಿಗೆ ಬರುವ ಸೇಟುಗಳ ಸಂದಣಿಯು ಜಾಸ್ತಿಯಾಗುತ್ತಿರುವುದು ಸಂತೋಷದಾಯಕವಾಗಿದೆ. ಈ ಕಂಪೆನಿಯು ಅಭಿವೃದ್ಧಿ ಹೊಂದುವಂತೆ ಶ್ರೀ ದೇವರು ಕರುಣಿಸಲಿ.

[illegible] ಸಮಯ [illegible] ಅಗ್ನಿ [illegible] ಮಾಡಿದ [illegible] ಸದ್ಯ ಮಾಡದೆಂತ ಮಾರ್ಗದಿ [illegible] ಪ್ರಯೋಜನವಿದೆ.

ಗುರುವಾಯನಕೆರೆ:— ಇಲ್ಲಿಯ ಯುವಕ ಸಮಾಜದವರು ಇದೇ ಆಗಸ್ಟ ತಾ. ೧೯ಕ್ಕೆ 'ರಾಮಾಂಜನೇಯ' ಎಂಬ ನಾಟಕವನ್ನು ಆಡುವದೆಂತ ನಿಶ್ಚಯಿಸಿದ್ದರು. ಆದರೆ ಇತರ ಕೆಲವು ಅನಾನುಕೂಲತೆಗಳಿಂದ ಸದರಿ ನಾಟಕವನ್ನು ಮುಂದರಿಸಿ ಇದೇ ಬರುವ ಫೆಬ್ರುವರಿ ತಿಂಗಳ ತಾ. ೨ಕ್ಕೆ ಅಭಿನಯಿಸುವರು. ದೇಶಾಭಿಮಾನಿಗಳೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಕರೋಪಾಡಿ ಮಿತ್ತನಡ್ಕ:— ಇದೇ ಕಳೆದ ತಾ. ೨೯—೧೨—೧೯೨೯ನೇ ರವಿವಾರ ಮ. ರಾ. ರಾಜ್ಯಪುತ್ರರು [illegible] ಬೋರ್ಡ್ ಪ್ರೆಸಿಡೆಂಟರವರ ಹುಕುಂ ಪ್ರಕಾರ ವಿಟ್ಲ ತಾ. ಎ. ಶಾಲಾ ಉಪಾಧ್ಯಾಯರೂ ಸ್ಟಾಫು ಪಡೆದವರೂ ಮಧ್ಯಪಾನ ನಿಷೇಧ ಪ್ರಚಾರದ ಕುರಿತು ಕೆಲವು ಶಾಲೆಗಳಲ್ಲಿ ಸುತ್ತಾಡಿ ಈ ದಿನ ಇಲ್ಲಿಗೆ ಚಿತ್ತೈಸಿದರು. ಇಲ್ಲಿ ಕ್ರಮಪ್ರಕಾರ ಈ ಶಾಲಾ ಉಪಾಧ್ಯಾಯ-ಬಾಲಕರೊಡನೆ ಆಟ, ಡ್ರಿಲ್ಲು, ಕ್ಯಾಂಪ್ ಫಾಯರ್ ಮೊದಲಾದ ತಮಾಷೆಗಳನ್ನು ಮಾಡಿದ ತರುವಾಯ ಈ ಶಾಲಾಕಮಿಟಿ ಅಧ್ಯಕ್ಷರಾದ ಮ. ರಾ. ಮುಗುಳಿ ರಾಮಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಕೆಲವು ಭಾಷಣಗಳೂ, ಕವಿಟಿ ಸಭೆಯೂ, 'ಸಾವಿತ್ರಿ ಸಿರಿಯ' ಎಂಬ ನಾಟಕವನ್ನೂ ಚಲೋದಾಗಿ ಆಡಿ ತೋರಿಸಲ್ಪಟ್ಟಿತು. ಈ ನಾಟಕ, ಭಾಷಣ ಮೊದಲಾದವುಗಳಿಗೆ ಸುಮಾರು ೩೦೦ ಜನರು ನೆರೆದಿದ್ದರು. ವಿಟ್ಲ ಶಾಲಾ ಉಪಾಧ್ಯಾಯ ಸ್ಟಾಫುಗಳನ್ನೂ ಮ. ರಾ. ಮುಗುಳಿ ರಾಮಕೃಷ್ಣ ಭಟ್ಟರವರು ಆದರ ಪೂರ್ವಕ ಊಟ ಉಪಚಾರಾದಿಗಳಿಂದ ಸತ್ಕರಿಸಿದುದು ಅಭಿನಂದನೀಯವಾಗಿದೆ.

ವಿವಿಧ ಸಮಾಚಾರಗಳು.

ಡಕಾಯಿತರೊಡನೆ ಹುಡುಗಿಯ ಕಾದಾಟ.

[illegible] ಪಟ್ಟಣದ ಸಮೀಪದಲ್ಲಿರುವ ಮನೆಯೊಂದರಲ್ಲಿ ಕೆಲವು ದಿನಗಳ ಹಿಂದೆ ಭಯಂಕರ ರೀತಿಯ ಕಳವು ನಡೆಯಿತು. [illegible] ಮಲಗಿದ್ದ ಕೋಣೆಗೆ ಸುಮಾರು ಪ್ರಾತಃಕಾಲ ೩ ಗಂಟೆಯ ಹೊತ್ತಿಗೆ ಕಳ್ಳನೊಬ್ಬನು ಪ್ರವೇಶಿಸಿದನು. ಕಳ್ಳನು ಪೆಟ್ಟಿಗೆಯಿಂದ ಆಭರಣಗಳೆಲ್ಲವನ್ನು ಕಳವು ಮಾಡಿ ಓಡುವುದರಲ್ಲಿರುವಾಗ ಹೆಂಡತಿಯು ಎಚ್ಚತ್ತು ತನ್ನ ಗಂಡನನ್ನು ಎಚ್ಚರಿಸಿದಳು. ಗಂಡನು ಒಡನೆ ಎದ್ದು ಕಳ್ಳನ ಸೊಂಟವನ್ನು ಹಿಡಿದು ಅವನನ್ನು ತಡೆದನು. ಕೆಲ ಸಮಯದವರೆಗೆ ಅವರೊಳಗೆ ಬಡಿದಾಟವಾಯಿತು. ಈ ಸಮಯದಲ್ಲಿ ಹೆಂಡತಿಯು ಗಂಡನ ಸಹಾಯಕ್ಕಾಗಿ ಕರೆಯುತ್ತಲೇ ಇದ್ದಳು. ಆದರೆ ಕಳ್ಳನು ಚೂರಿಯಿಂದ ಗಂಡನ ಹೊಟ್ಟೆಗೆ ತಿವಿದು ಬಿಟ್ಟನು. [illegible] ಗಂಡನು ಪ್ರಜ್ಞೆ ತಪ್ಪಿ ನೆಲದ ಮೇಲೆ ಬಿದ್ದುಬಿಟ್ಟನು. [illegible] ಕಳ್ಳನನ್ನು ಹಿಡಿದಳು. ಅವರೊಳಗೂ ಬಹು ಸಮಯದ ವರೆಗೆ ಬಡಿದಾಟವಾಯಿತು. ಆವಳು ಕಳ್ಳನನ್ನು ಹೋಗಗೊಡಲಿಲ್ಲ. [illegible] ಕೇಳಿ ನೆರೆಹೊರೆಯ ಜನರು ಅಲ್ಲಿಗೆ ಬಂದು ಕಳ್ಳನನ್ನು ಹಿಡಿದರು. ಕಳ್ಳನಿಂದ ತಿವಿಯಲ್ಪಟ್ಟ ಆ ಹುಡುಗಿಯ ಗಂಡನು ಮಾರನೆ ದಿನ ಪ್ರಾತಃಕಾಲ ಸತ್ತು ಹೋದನು.

ಅಮೇರಿಕನ ಯಾತ್ರಾರ್ಥಿ.

ಸಾನ್ ಫ್ರಾನ್ಸಿಸ್ಕೋವಿನ ರಾಮಕೃಷ್ಣ ಮಿಷನ ಹಿಂದೂ ದೇವಾಲಯದ ಸ್ವಾಮಿ [illegible] ಇಲ್ಲಿಗೆ ಬಂದಿರುವರು. ಈ ಸ್ವಾಮಿಗಳು [illegible] ಯಾತ್ರಾರ್ಥಿಗಳ [illegible] ಅವರ ಮನೆಯಿಂದ [illegible] ಅಮೇರಿಕಕ್ಕೆ ಹೋಗಿದ್ದಾಗ [illegible] ಸ್ವಾಮಿ ವಿವೇಕಾನಂದರ ಶಿಷ್ಯನಾದ ಸ್ವಾಮಿ [illegible] ಭಾಷಣಗಳನ್ನು ಕೇಳಿ ಅವರ [illegible] ತನ್ನ ದೇವರ ಹೆಸರನ್ನಿತ್ತರು [illegible] ಹಿಂದೂಸ್ಥಾನದ ಎಲ್ಲಾ ಸ್ಥಳಗಳನ್ನು [illegible] ಹಿಂದೂಸ್ಥಾನದ ವಿಷಯವಾಗಿ ಅವರ ಸದಭಿಪ್ರಾಯಗಳನ್ನು ಕೊಡುತ್ತಿರುವರು. ಸ್ವಾಮಿ ವಿವೇಕಾನಂದರ [illegible] ವಾಚನಾಲಯವು [illegible] ಅವರ ಅಂಬೋಣ.

ಸಹೋದರರ ಕೊಲೆ.

[illegible] ಸಹೋದರರನ್ನು [illegible] ಕೊಲೆ ಮಾಡಿ ಕೊಂಡುಹಾಕಿರುವನು. [illegible] ಮುಂದರಿಸಿದ್ದನು. ಸಹೋದರರು [illegible] ಬಗ್ಗೆ ಹೇಳಿದ [illegible] ಸಹೋದರರ ಮನೆಗೆ [illegible] ಕಳ್ಳ [illegible] ಕೊಂದು [illegible] ಪೋಲೀಸರು ಬಂದು ಆಪಾದಿತನನ್ನು ಹಿಡಿದರು. [illegible]

[illegible] ಎಲ್ಲರನ್ನೂ ಕೊಂದು ಹಾಕಿದಂತೆ ತನ್ನ ಜನರಿಗೆ ಶಪಥ [illegible] ಆಯಿತು. ತಸದೀಕನು ತನ್ನ [illegible] ಅವನ ಬೆನ್ನಿಗೆ ಗುಂಡು ಹೊಡೆದು ಅವನನ್ನು ಕೊಂದನು. ಎಲ್ಲ ಗುಂಡುಗಳು [illegible] ಎಂಬ ಮುಂಡಿಗಳು [illegible] ಸಾಕ್ಷಿದ ಬಹಾಕಿವರು [illegible] ಕೊಂದರು. ತಸದೀಕ [illegible] ಮಾಡಿರುವನು. ಅವರಲ್ಲಿ ೧೩ ಮಂದಿಗಳಿಗೆ ಜೀವಿತ ಶಿಕ್ಷೆಯು ವಿಧಿಸಲ್ಪಟ್ಟಿರುತ್ತದೆ.

ಮೆಜಿಸ್ಟ್ರೇಟನಿಗೊಬ್ಬ ವಕೀಲನು.

ಅಲಹಾಬಾದದಲ್ಲಿ ಮೆಜಿಸ್ಟ್ರೇಟನಿಗೆ ಜಡ್ಜಮೆಂಟನ್ನು ಬರೆದು ಕೊಡಲಿಕ್ಕೆ ವಕೀಲನೊಬ್ಬನಿರುವನು. ವಕೀಲನು ಅಪಾದಿತರ ಕಡೆಯಿಂದ ವ್ಯವಹರಿಸುತ್ತಿದ್ದ ಮೊಕದ್ದಮೆಯೊಂದರಲ್ಲಿ ವಕೀಲನೇ ಮೆಜಿಸ್ಟ್ರೇಟನಿಗೆ ಜಡ್ಜಮೆಂಟನ್ನು ಬರೆದುಕೊಟ್ಟನು. ಮತ್ತು ತನ್ನ ಕಕ್ಷಿಗಾರರನ್ನು ತಪ್ಪುಗಾರರಲ್ಲವೆಂದು ಬಿಟ್ಟುಬಿಟ್ಟನು. ಮೆಜಿಸ್ಟ್ರೇಟನು ಹಿಂದೆ ಡಿಸ್‌ಮಿಸ್ ಮಾಡಿದ ಒಬ್ಬ ಮೊಹರೀರನ ಮೂಲಕ ಈ ರಹಸ್ಯವು ಬಯಲಾಯಿತು. ಎಲ್ಲ ಜಡ್ಜಮೆಂಟನ್ನು ತಾನೇ ಬರೆದುದಾದರೂ ಅಪಾದಿತರನ್ನು ಬಿಟ್ಟುಬಿಡುವ ನೆಂಬ ಕೊನೆಯ ನಾಲ್ಕು ಪಂಕ್ತಿಗಳನ್ನು ಮಾತ್ರ ಮೆಜಿಸ್ಟ್ರೇಟನೇ ಬರೆದನೆಂದು ವಕೀಲನ ಅಂಬೋಣ. ಆದರೆ ತನಗೆ ಯಾವ ಸಂಗತಿಯೂ ತಿಳಿಯದೆಂದು ಮೆಜಿಸ್ಟ್ರೇಟನ ಹೇಳಿಕೆ. ವಕೀಲನು ಮೆಜಿಸ್ಟ್ರೇಟನೊಂದಿಗೆ ಸಹಕರಿಸಿದನು ವಕೀಲನ ತಪ್ಪೆಂದಾಗಿ ವಕೀಲನು ಮೂರು ತಿಂಗಳುಗಳ ವರೆಗೆ ಕೋರ್ಟಿನಲ್ಲಿ ವಕಾಲತ್ತು ಮಾಡಬಾರದೆಂದಾಗಿರುತ್ತದೆ.

ಎಸೆಂಬ್ಲಿಯ ಅಧಿವೇಶನ.

ಕಳೆದ ತಾರೀಕು ೨೦ನೇ ದಿನ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನವು ನಡೆಯಿತು. ಕಾಂಗ್ರೆಸ್ [illegible] ಪ್ರೆಸಿಡೆಂಟರು [illegible] ಎಸೆಂಬ್ಲಿಯ [illegible] ಮೆಂಬರರಲ್ಲಿ ಹಲವರು [illegible] ಪ್ರೆಸಿಡೆಂಟರು [illegible] ಪ್ರೆಸಿಡೆಂಟರೊಳಗೂ ಎಸೆಂಬ್ಲಿಯೊಳಗೆ [illegible] ಬರಲು [illegible] ಅಪೇಕ್ಷಿಸುವೆನು. ಎಸೆಂಬ್ಲಿ [illegible]

[illegible]

ಎಸೆಂಬ್ಲಿಯ [illegible]

[illegible]

[illegible]

[illegible]

... ಪ್ರತಿ ಡಿಸ್ಕೋಲಿನೊಂದಿಗೆ ಆರು ಕಾರ್ಟ್ರಿಜುಗಳು ಉಚಿತ ಸಿಗುವವು. ಕ್ರಯ ರೂಪಾಯಿ 5 ಮಾತ್ರ. ಪೆಕಿಂಗ್ ಮತ್ತು ಅಂಚೆವೆಚ್ಚ ಆಣೆ 8.

ಉತ್ತಮ ಏಯರ್ ಗನ್.

ಅಮೇರಿಕದಿಂದ ಇತ್ತೀಚೆಗೆ ತರಿಸಲ್ಪಟ್ಟದು. ನಮ್ಮಲ್ಲಿ ಉತ್ತಮ ಏಯರ್ ಗನ್ನುಗಳಿವೆ. ಅವು ಗಟ್ಟಿಯಾಗಿ ಬಹು ಸಮಯ ಬಾಳಿ, ಒಡೆಯುವಾಗ ದೊಡ್ಡ ಶಬ್ದವನ್ನುಂಟುಮಾಡುವವು. ಪ್ರತಿ ಗುಂಡಿನೊಂದಿಗೆ 1000 ಚರೆಗಳು ಉಚಿತ. ಒಂದು ಗುಂಡಿನದಕ್ಕೆ ರೂ. 6—0—0; 350 ಚರೆಗಳಿಗೆ ರೂ. 8—0—0; ರೂ. 9—0—0; 500 ಚರೆಗಳಿಗೆ ರೂ. 10; ರೂ. 11; ಒಂದು ಸಾವಿರ ಚರೆಗಳಿಗೆ ರೂ. 15. ಪೆಕಿಂಗ್ ಮತ್ತು ಅಂಚೆವೆಚ್ಚ ರೂ. 2.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಕಪೂರ್ ಬ್ರದರ್ಸ್ ಎಂಡ್ ಕಂಪೆನಿ,
ಪೋಸ್ಟು ಬಾಕ್ಸ್ ನಂಬ್ರ 6795, ಬಿ. ಬಿ.
ಕಲ್ಕತ್ತಾ.

ಗೀತಾಜಯಂತಿಯ ಅಭಿನಂದನೋತ್ಸವದ ಸಲುವಾಗಿ ಒಂದು ತಿಂಗಳು ವರೆಗೆ ಮಾತ್ರ ಈ ರಿಯಾಯಿತಿ.

ಶ್ರೀಮನ್ಮಹಾರಾಜರವರ, ಶ್ರೀಮದ್ಯುವರಾಜರವರ, ಶ್ರೀಮನ್ಮಹಾರಾಣೀ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಇವರುಗಳ ಕೃಪಾಪೋಷಣೆಯನ್ನು ಪಡೆದು, ಕರ್ಣಾಟಕಸ್ಥರ ಉದಾರಾಶ್ರಯದಿಂದ ಕೂಡಿ ಪ್ರಕಟಿಸಲ್ಪಡುತ್ತಿರುವ

ಸಚಿತ್ರ ಕನ್ನಡ ಸುದಿಯ ಮಾಸಪತ್ರಿಕೆ.

"ಶ್ರೀ ಕೃಷ್ಣ"

೧೫ನೆಯ ವರ್ಷಾರಂಭ:— ಸೆಪ್ಟಂಬರ ೧೯೨೯.

ಸಂಪಾದಕ:— ಶ್ರೀ ಬಿ. ಆರ್. ಚಕ್ರವರ್ತಿ.

ವಾರ್ಷಿಕ ಚಂದಾ:—	ಪೋಷಕರಿಗೆ	ರೂ ೧೦—೦—೦	ಅಂಚೆಹಾಸಲು ಉಚಿತ!
	ಆಶ್ರಯದಾತರಿಗೆ	ರೂ. ೫—೦—೦	
	ಇತರರಿಗೆ	ರೂ. ೩—೪—೦	

ಇದರಲ್ಲಿ ಪರಿಪುಷ್ಟವಾದ ವಿದ್ಯಾ, ನೀತಿ, ಮತ, ಕೃಷಿ, ಕೈಗಾರಿಕೆ, ಸಹಕಾರ, ಅರ್ಥಶಾಸ್ತ್ರ, ಭಗವದ್ವಿಲಾಸ, ಇತ್ಯಾದಿ ಪ್ರಾಪಂಚಿಕ ಪಾರಮಾರ್ಥಿಕ ಸಂಪತ್ತುಗಳ ವೃದ್ಧಿಯಾಗುವುದಕ್ಕೆ ಸಾಧನವಾದ ಉತ್ತಮ ಲೇಖನಗಳು ಸಚಿತ್ರವಾಗಿ ವಿವರಿಸಲಾಗುವುವು. [illegible]

ಮ್ಯಾನೇಜರ್, "ಶ್ರೀ ಕೃಷ್ಣ" ಕಾರ್ಯಾಲಯ, ಮೈಸೂರು.

The Zandu Pharmaceutical Works, Ltd., Bombay, 14.

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಇದು ಆಮಲಕ ಅನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ಮೇಹಲಕ್ಷ್ಯ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವ್ಯಾಧಿಯ ಅಶಕ್ತಿ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ಶಕ್ತಿ, ರಕ್ತಹೀನತೆ, ದೃಷ್ಟಿಹೀನತೆ, ಜ್ಞಾನಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾಗಿರುವುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

ಕ್ರಯ 1 ಪೌನು ಸೀಸೆ ರೂ. 2—8—0, ½ ಪೌ. ರೂ. 1—5—0, ¼ ಪೌ. ರೂ. 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 1/90 ಸ್ವಾಮಿಯಪ್ಪ ನಾಯಕನ ಬೀದಿ, ಜಿ. ಟಿ. ಮದ್ರಾಸು.

ತೀರ್ಥಹಳ್ಳಿ ಏಜಂಟರು:— ಮೆಸರ್ಸ್ ಪಂಡಿತ ಮತ್ತು ಕಂಪೆನಿ.
ಮಂಗಳೂರು ಏಜಂಟರು:— ದಿ ಉಡುಪಿ ಸ್ಟೋರ್.
[illegible] ಏಜಂಟರು:— ವಿ. ಎಲ್. ಭಾಸ್ಕರ್ ಎಂಡ್ ಬ್ರದರ್ಸ್.
[illegible] ಏಜಂಟರು:— ಮು. [illegible], ಪುತ್ತೂರು, ದ. ಕನ್ನಡ.

ವಿವರ ಕಟ್ಟಳೆಗಾಗಿ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

Estd. 1900.

[illegible] ... ವ್ಯಾಪಾರಗಳಿಗೆ ... ಹೆಸರು ಪಡೆದುದಾಗಿದೆ. ... ಸರಕುಗಳನ್ನು ಕಳುಹಿಸುತ್ತೇವೆ. ... ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫ ವ್ಯಾಪಾರಿ,
[illegible], ಸೇಲಂ, (ದಕ್ಷಿಣ ಇಂಡಿಯಾ)

NOTICE.

In the Court of the District Judge of South Kanara.

O. P. No. 133/29.

In the matter of the will Thomas Alfred Maurice D'Souza—deceased.

Mary D'Souza—Petitioner.

Notice is hereby given that application has been made to the abovenamed court for grant of Probate to the will of Thomas Alfred Maurice D'Souza who died on 15—9—'29 in Falneer Mangalore to the Petitioner, one of the executors named in the said will, and that the 30th day of January 1930 has been appointed for the hearing of the said application.

MANGALORE, 17th Jan. 1930 } **P. D'Souza**, B. A. B. L. & **L. C. Pais**, B. A. B. L. *Vakils for Petitioner.*

ನೋಟೀಸು.

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಮದ್ವಿದ್ಯಾಪೂರ್ಣತೀರ್ಥ ಪಾದಂಗಳವರು ವಾದಿಯಾಗಿ 2ನೇ ಪ್ರತಿವಾದಿರು ಉತ್ತರಾದಿ ಮಠದ ಸತ್ಯಧ್ಯಾನತೀರ್ಥ ಶ್ರೀ ಪಾದಂಗಳವರು ವಗೈರೆ ಮೇಲೆ ಮಾಡಿದ ಉಡುಪಿ ಡಿ. ಮು. ಕೋರ್ಟು ಕ್ರಮ ನಂಬ್ರ 127/29ನೇ ವ್ಯಾಜ್ಯದಲ್ಲಿ ಸದರಿ 2ನೇ ಪ್ರತಿವಾದಿಗೆ ಅನಕ್ಕೆ ವ್ಯಾಜ್ಯದ ನೋಟೀಸು ಅವರ ವಾಸ್ತವ್ಯಕ್ಕೆ ಸದರಿ ಕೋರ್ಟು ದ್ವಾರಾಗೂ ಅಂಟಿಸಿ ಜ್ಯಾರಿ ಮಾಡುವ ಹಾಗೆ ಸದರಿ ಕೋರ್ಟು R. I. A. No. 1/30ನೇ ಅರ್ಜಿ ಮೇಲೆ ತಾ 3—1—'30ಲ್ಲು ಹುಕುಂ ಆಗಿಯದೆ. ಮತ್ತು ಸದರಿ ವ್ಯಾಜ್ಯವು ತಾ. 14—2—'30ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಸದರಿ 2ನೇ ಪ್ರತಿವಾದಿರ ಉದಾಹರಣೆ ಇದ್ದ ಪಕ್ಷದಲ್ಲಿ ಆ ದಿವಸದ ಮುಂಚಿತವಾಗಿ ಜ್ಯಾಹೀರು ಮಾಡಿಕೊಳ್ಳದೆ ಇದ್ದಲ್ಲಿ ಸದರಿ ನಂಬ್ರವು ಮೇಲ್ಕಂಡ ತಾರೀಕಿಗೆ 2ನೇ ಪ್ರತಿವಾದಿರ ಅವಗುಣಕ್ಕೆ ತೀರ್ಮಾನವಾದೀತೆಂದು ಈ ಮುಖಾಂತರ ತಿಳಿದಿರುವುದು.

ಉಡುಪಿ, ತಾ. 16—1—'30. } **M. Ramakrishna Rao,** *Vakil for Plaintiff.*

[illegible]

[illegible] ಸಂದೇಶದ [illegible] ದಿನದ [illegible]

[illegible] ಕಾರ್ಯಕ್ರಮವನ್ನು ಕೆಳಗಿನಂತೆ ಪಟ್ಟಯಿಸಿ [illegible]

[illegible] ಸರಿಯಾಗಿ ಬೆಳಗಿನ ೮ ಘಂಟೆಗೆ [illegible] ನಡೆಸಬೇಕು.

[illegible] (ಪತ್ತು, ಹತ್ತು ಮನೆಗಳ ಮೇಲೆ) "ರಾಷ್ಟ್ರ [illegible] ಹತ್ತು ಘಂಟೆಗೆ.

[illegible] ಹಾಡಲಾಗುವ "ಸ್ವಾತಂತ್ರ್ಯ ದಿನ [illegible] ಘಂಟೆಗೆ.

[illegible] ರಾಷ್ಟ್ರಧ್ವಜದ ಕೆಳಗೆ "ಸ್ವಾತಂತ್ರ್ಯ [illegible] ಘಂಟೆಗೆ.

[illegible] ಸಭೆಯ ಕೆಲಸವು ಪೂರೈಯಾದ ನಂತರ [illegible] (ಧ್ವಜವನ್ನು ಇಳಿಸುವ) ಕಾರ್ಯಕ್ರಮವನ್ನು [illegible]

ಈ ಸಭೆಯಲ್ಲಿ ಮಹಾತ್ಮಾ ಗಾಂಧಿಯವರ ಹಿಂದೂಸ್ಥಾನದ ಸ್ವಾತಂತ್ರ್ಯ ದಿನದ ಸಂದೇಶವನ್ನು ಓದತಕ್ಕದ್ದು. ಇತರ ಯಾವ ಭಾಷಣಗಳು ಆಗಕೂಡದೆಂದು ಮಹಾತ್ಮರು ಆಜ್ಞಾಪಿಸಿದ್ದಾರೆ.

ಸಂದೇಶವು ಓದಲ್ಪಟ್ಟ ಕೂಡಲೇ ಸರ್ವರೂ ಕೈಗಳನ್ನು ಮೇಲೆತ್ತಿ ಅದರಲ್ಲಿರುವ ಪ್ರತಿಜ್ಞೆಯನ್ನು ಸ್ವೀಕರಿಸತಕ್ಕದ್ದು.

(ಹಿಂದೂಸ್ಥಾನ ಸೇವಾದಲದ ಗಣವೇಷವು ಇಡಿಯ ಪ್ರಥಮ "ರಾಷ್ಟ್ರಧ್ವಜ" ವಂದನೆಯ ಸಮಾರಂಭವು ಇದರಲ್ಲಿಯೇ ಸಮಾವೇಶವಾಗಿರುವುದು.)

ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿಯ ಸೇವಾದಲದ ಪ್ರಾಂತಿಕ ಮಂಡಲಗಳೂ, ಎಲ್ಲಾ ಶಾಖೆಗಳೂ ಮತ್ತು ಎಲ್ಲಾ ಸಭಾಸದರೂ ಅವರಂತೆ ಕಾಂಗ್ರೆಸ್ ಸಂಸ್ಥೆಗಳೂ ಅಖಿಲ ಭಾರತೀಯ ತರುಣ ಸಂಘದ ಸಭಾಸದರೂ ಮತ್ತು ತರುಣ ಸಂಘಗಳ ಸಭಾಸದರೂ ಪರಸ್ಪರ ಸಹಕಾರದಿಂದ ಈ ಕಾರ್ಯಕ್ರಮವನ್ನು ಅತ್ಯಂತ ಯಶಸ್ವೀ ರೀತಿಯಿಂದಲೂ ಶಿಸ್ತಿನಿಂದಲೂ ಮತ್ತು ಶಾಂತತೆಯಿಂದಲೂ ಆಚರಿಸಬೇಕೆಂದು ಅಪೇಕ್ಷಿಸುತ್ತೇನೆ.

ಆ ದಿವಸ ಸರ್ವರೂ ಸಣ್ಣ ಸಣ್ಣ ಕಾಗದದ ಧ್ವಜಗಳನ್ನು ಅಥವಾ ರಾಷ್ಟ್ರಧ್ವಜದ ಚಿತ್ರವುಳ್ಳ ಬಿಲ್ಲೆ (lockets) ಗಳನ್ನು ತಮ್ಮ ತಮ್ಮ ವಸ್ತ್ರಗಳ (ಎದೆಯ) ಮೇಲೆ ಹಚ್ಚಿಕೊಳ್ಳಬೇಕೆಂದು ವಿನಂತಿಯಿದೆ.

ಹಿಂದೂಸ್ಥಾನೀ ಸೇವಾದಲದ ಕಚೇರಿಯಲ್ಲಿ ಇವುಗಳು (ಕಾಗದದ ನಿಶಾನೆಗಳು) ಸಿಕ್ಕಗೊಂಡ; ಬಿಲ್ಲೆಗಳು ಆನೆಗೊಂದು ಮಾರಲಿಕ್ಕೆ ದೊರೆಯುತ್ತವೆ. ಅಂಚೆವೆಚ್ಚವನ್ನು ತರಿಸಿಕೊಳ್ಳುವವರೇ ವಹಿಸಬೇಕಾಗುವದು.

ಎಲ್ಲರೂ ಈ ನಿಶಾನೆಗಳನ್ನೂ ಬಿಲ್ಲೆಗಳನ್ನೂ ಬೇಗನೇ ತರಿಸಿಕೊಂಡು, ತಮ್ಮಲ್ಲಿಯ ಇತರ ಹೆಚ್ಚು ಜನರು ಆ ದಿವಸ ತಾ. (೨೬-೧-'೩೦) ಇವುಗಳನ್ನು ಉಪಯೋಗಿಸುವಂತೆ ಮಾಡಬೇಕು.

ಹುಬ್ಬಳ್ಳಿ, ೧೬-೧-'೩೦. } ನಾ. ಸು. ಹರ್ಡೀಕರ, ಕಾರ್ಯದರ್ಶಿ, ಹಿಂ. ಸೇ. ದಲ.

ಹುಬ್ಬಳ್ಳಿಯವರಿಗೆ ಕಾಂಗ್ರೆಸ್ ಸಂದೇಶವು.

ತಾ. ೧೬-೧-೩೦ನೇ ದಿವಸ ಹುಬ್ಬಳ್ಳಿಯಲ್ಲಿ ಸಂಜೆ ೬ ಗಂಟೆಗೆ ಕರ್ನಾಟಕ ಪ್ರೆಸ್ಸಿನಲ್ಲಿ ಸಭೆಯು ಕೂಡಿತು. ಆ ದಿವಸ ಡಾ. ಹರ್ಡೀಕರರೂ, ಶ್ರೀ ರಮಾಕಾಂತ ಗೋಳಕೇರಿ, ಶ್ರೀ, ಗುರುರಾವ ಪಾಳಪೇಕರ ಮೊದಲಾದವರು 'ಲಾಹೋರ' ಕಾಂಗ್ರೆಸ್' ಈ ವಿಷಯದ ಮೇಲೆ ಮಾತಾಡಿದರು. "ನಾವು ಇದು ವರೆಗೆ ಮಾಡಿದ ರಾಷ್ಟ್ರ ಸೇವೆಗೂ ಇನ್ನು ಮುಂದೆ ಮಾಡುವದಕ್ಕೂ ಮಹದಂತರವಿದೆ. ನಮ್ಮೆಲ್ಲರ ನಿಜವಾದ ಪರೀಕ್ಷೆಯ ಕಾಲ ಬಂದಿದೆ. ಕಾರಾಗೃಹವಾಸವನ್ನೂ ಮರಣವನ್ನೂ ಸಂತೋಷದಿಂದ ನಾವೆಲ್ಲರು ಎದುರುಗೊಳ್ಳಬೇಕಾಗಿದೆ" ಎಂಬುದೆ ಎಲ್ಲರೂ ಮಾಡಿದ ಭಾಷಣದ ತಿರುಳಾಗಿತ್ತು.

ಸಭೆಯ ಕೊನೆಯಲ್ಲಿ ೨೬ನೇಯ ತಾರೀಕಿನ ದಿವಸ ನಡೆಯಬೇಕಾದ ಸ್ವಾತಂತ್ರ್ಯ ದಿನದ ಕಾರ್ಯಕ್ರಮವು ಹೇಳಲ್ಪಟ್ಟಿತು. ಮತ್ತು ೨೬ನೇಯ ತಾರೀಕಿನ ದಿವಸ ಸರ್ವ ಕಾರ್ಯವನ್ನು ಶಾಂತತೆಯಿಂದ ಸುವ್ಯವಸ್ಥೆಯಿಂದಲೂ ಜರುಗಿಸುವಂತೆ ನೋಡಿಕೊಳ್ಳಲು ಸಂಬಂಧಪಟ್ಟ ಕೆಲವು ಹುರುಪಿನ ತರುಣರ ಹೆಸರುಗಳು ತೆಗೆದುಕೊಳ್ಳಲ್ಪಟ್ಟವು. ನಗರ ರಕ್ಷಕ (ಸಿವಿಕ್ ಗಾರ್ಡ್ಸ) ರನ್ನು ಆಯಾ ಊರುಗಳಲ್ಲಿಯ ಎಲ್ಲ ಸಾರ್ವಜನಿಕ ಕಾರ್ಯಗಳನ್ನು ಮಾಡಲಿಕ್ಕೆ ಪ್ರತಿ ಊರಲ್ಲಿ ೧೧ ಜನರಂತೆ ನಿಯಮಿಸಬೇಕೆಂದು ಡಾ. ಹರ್ಡೀಕರರು ಸೂಚನೆ ಮಾಡಿದರು. ಆ ಕೆಲಸವು ಈ ಸಭೆಯಲ್ಲಿ ಪ್ರಾರಂಭಿಸಲ್ಪಟ್ಟಿತು ಮತ್ತು ಹುಬ್ಬಳ್ಳಿಯಲ್ಲಿ ನಗರ ರಕ್ಷಕರಾಗಿ ಕಾರ್ಯಮಾಡಲಿಕ್ಕೆ ನಿನ್ನಂದಿನ್ನ ತರುಣರ ಹೆಸರುಗಳು ಈ ಸಭೆಯಲ್ಲಿ ತೆಗೆದುಕೊಳ್ಳಲ್ಪಟ್ಟವು.

ಸಭೆಗೆ ಪ್ರಚಂಡ ಸಮುದಾಯವು ಕೂಡಿತ್ತು. ಇದರ ಮೇಲಿಂದ ದೇಶದಲ್ಲಿ ಹೆಚ್ಚಿನ ಹುರುಪೂ, ಹೆಚ್ಚಿನ ಪರಿಣಾಮವೂ, ಸಂಪೂರ್ಣ ಸ್ವಾತಂತ್ರ್ಯದ ಗೊತ್ತುವಳಿಯಿಂದ ಉಂಟಾಗಿದೆ ಎನ್ನಲು ಯಾವ ಅಡ್ಡಿಯೂ ತೋರುವುದಿಲ್ಲ.

ಹುಬ್ಬಳ್ಳಿ, ತಾ. ೧೬-೧-೩೦. — ರಾ. ವಿ. ಕಡಿಗುದರಿ, ದಲದ ಪ್ರಕಟಣಾ ಕಾರ್ಯದರ್ಶಿ.

ದಿ ಸಿಟಿ ಮೋಟರ ಸರ್ವಿಸು ಮಂಗಳೂರು.

ಈ ಮೊದಲು ಈ ಕಂಪೆನಿಯ ಸರ್ವಿಸು ಮಂಗಳೂರಿನಿಂದ ಕಾರ್ಕಳದ ವರೆಗೆ ಇದ್ದು ಈಗ ಅನಂತರಿಯಿಂದ ಸೀದಾ ಉಡುಪಿ ವರೇಗೆ ಹೋಗುತ್ತದೆ. ಸರ್ವ ಜನರ ಅಪೇಕ್ಷೆ ಮೇರೆಗೆ ವ ಸೌಕರ್ಯಕ್ಕಾಗಿ ಮಂಗಳೂರಿನಿಂದ ಬೆಳಿಗ್ಗೆ 8-30ಕ್ಕೆ ಹೊರಟು 12-30ಕ್ಕೆ ಉಡುಪಿಗೆ ತಲುಪಿ ಉಡುಪಿಯಿಂದ 1-30ಕ್ಕೆ ಹಿಂತಿರುಗಿ 5-30ಕ್ಕೆ ಮಂಗಳೂರಿಗೆ ಬಂದು ತಲುಪುವದು. ಅತೀ ವೇಗವುಳ್ಳ ವ ಕೂತುಕೊಳ್ಳುವರೆ ಉತ್ತಮವಾದ ಸೌಕರ್ಯವಿರುವ ಹೊಸ ಬಸ್ಸನ್ನೇ ಇಟ್ಟಿರುವೆವು. ಉಡುಪಿಯಿಂದ ಮುಂದಕ್ಕೆ ಪ್ರಯಾಣಮಾಡುವ ಪ್ರಯಾಣಿಕರಿಗೆ ನಾವು ಹನುಮಾನ ಕಂಪೆನಿಯ ಸೀದಾ ಕನೆಕ್ಷನ್ ಇಟ್ಟಿರುವೆವು. ಈ ಕಂಪೆನಿಯ ಹೊಸ ಲೈನು ಮಂಗಳೂರಿನಿಂದ ಗುರುಪುರ, ಕೈಕಂಬಕ್ಕಾಗಿ ಬಜಪೆ, ಕಟೀಲು ವರೆಗೆ ಇಂದಿನಿಂದ ಚಾಲು ಮಾಡಿಯದೆ. ಬೆಳಿಗ್ಗೆ 7 ಘಂಟೆಗೆ ಕಟೀಲಿನಿಂದ ಹೊರಟು 8-30 ಮಂಗಳೂರಿಗೆ ತಲುಪುವದು. ಎಲ್ಲಾ ವ್ಯಾಪಾರಸ್ಥರು, ಜನಸಾಮಾನ್ಯರಿಗೆ ಕೆಲಸ ತೀರಿಸಿ ಹಿಂತಿರುಗಿ ಅವರವರ ಸ್ಥಳ ಸೇರುವರೆ ಅನುಕೂಲವಾಗುವಂತೆ ಮಂಗಳೂರಿನಿಂದ ಸಾಯಂಕಾಲ 4 ಘಂಟೆಗೆ ಈ ಸರ್ವಿಸು ಹೊರಟು 5-30ಕ್ಕೆ ಕಟೀಲಿಗೆ ಹೋಗಿ ತಲ್ಪುವುದು. ಗುರುಪುರ ಹಾದಿಯಾಗಿ ಬಜಪೆ ವಗೈರೆ ಊರುಗಳಿಗೆ ಹೋಗುವವರಿಗೆ ದಾರಿಯಲ್ಲಿ ಕಡವಿನ ಯಾವದೊಂದು ತರದ ಕಷ್ಟಗಳೂ ಇರುವುದಿಲ್ಲ. ಸುಖವಾದ ಪ್ರಯಾಣವನ್ನು ಬೆಳೆಸಬಹುದು; ಮಳೆಗಾಲದಲ್ಲಂತೂ ಆ ಕಡವುಗಳ ಭಾದೆಯೇ ಇರುವುದಿಲ್ಲ.

ಕಟೀಲು, ಬಜಪೆ, ಪೆರಾರ ಈ ಊರುಗಳ ಪ್ರಯಾಣಿಕರಿಗೆ ಮೂಡಬಿದ್ರೆ, ಕಾರ್ಕಳ, ಉಡುಪಿ, ಕುಂದಾಪುರಕ್ಕೆ ಹೋಗುವ ಬಗ್ಗೆ ಅನುಕೂಲವಾಗುವಂತೆ ಕೈಕಂಬದಲ್ಲಿ ಮಂಗಳೂರಿನಿಂದ ಹೊರಡುವ ಇದೇ ಕಂಪೆನಿಯ ಸೀದಾ ಕನೆಕ್ಷನ ಸಿಕ್ಕುವ ಏರ್ಪಾಡು ಮಾಡಿಯದೆ. ವಿಶೇಷ ಮಾಹಿತಿ ಬಗ್ಗೆ ಸ್ಥಳೀಕ ಏಜಂಟರಿಂದ ತಿಳಕೊಳ್ಳಬಹುದು.

ಟಿಕೇಟು ಆಫೀಸು —
ಹೂವಿನ ಮಾರ್ಕೇಟು ಬಳಿ,
ರಥಬೀದಿ, ಮಂಗಳೂರು.

K. RANGA PAI,
Pro. City Motor Service,
MANGALORE.

ಕನ್ನಡಿಗರೂ, ಕಾಯಿದೆ ಭಂಗವೂ.

ಡಾ. ಹರ್ಡೀಕರರು ಲಾಹೋರದಲ್ಲಿಯ ಮಹಾ ಸಭೆಯ ಕಾರ್ಯವನ್ನು ಮುಗಿಸಿಕೊಂಡು ತಿರುಗಿ ಬರುವಾಗ್ಗೆ ಸಾಬರಮತಿಯಲ್ಲಿ ಮಹಾತ್ಮಾಜಿಯವರನ್ನು ಕಂಡು ಹಿಂದೂಸ್ಥಾನೀ ಸೇವಾದಲದ ಮುಂದಿನ ಕಾರ್ಯಕ್ರಮದ ಬಗ್ಗೆ ಮಾತನಾಡಿಕೊಂಡು ಹುಬ್ಬಳ್ಳಿಗೆ ಬಂದರು.

ಎಲ್ಲಾ ಕನ್ನಡಿಗರೂ ನಾಳೆ ಪ್ರಾರಂಭವಾಗಲಿರುವ ಸವಿನಯ ಕಾಯಿದೆ ಭಂಗದ ಸಂಗ್ರಾಮದಲ್ಲಿ ಮನಃಪೂರ್ವಕವಾಗಿ ಭಾಗ ತೆಗೆದುಕೊಳ್ಳಬೇಕೆಂದು ಡಾ. ಹರ್ಡೀಕರರು ಬಯಸುತ್ತಾರೆ. ಇದಕ್ಕಾಗಿ ಮಹಾತ್ಮಾಜೀಯವರು ಅಪ್ಪಣೆಕೊಡುತ್ತಲೇ ಉತ್ಸಾಹಿಗಳೂ, ಧೈರ್ಯಶಾಲಿಗಳೂ ಸಶಕ್ತರೂ ಮತ್ತು ಸ್ವಾರ್ಥತ್ಯಾಗಿಗಳೂ ಆದ ಮತ್ತು ಸತ್ಯಾಗ್ರಹವನ್ನು ಪ್ರಾರಂಭಿಸಲು ಟೊಂಕಕಟ್ಟುವಂತೆ ಒಂದು ಸಾವಿರ ಕನ್ನಡ ತರುಣರನ್ನು ಸಿದ್ಧಗೊಳಿಸಲು ಅವರು ಸಂಕಲ್ಪ ಮಾಡಿದ್ದಾರೆ. ಈ ಜನರನ್ನು ಕಲೆಹಾಕುವ ಕಾರ್ಯವು "ಸ್ವಾತಂತ್ರ್ಯ ದಿನ"ವೆಂದು ಗೊತ್ತಾದ ಜನವರಿ ೨೬ನೇ ತಾರೀಕಿನಿಂದ ಫೆಬ್ರುವರಿ ೨೮ನೇ ತಾರೀಕಿನ ಮಧ್ಯ ರಾತ್ರಿಯ ವರೆಗೆ ನಡೆಯುವುದು.

ಆದ್ದರಿಂದ ಪ್ರತಿಯೊಬ್ಬ ಕರ್ನಾಟಕ ಪ್ರೇಮಿಯೂ ಎಲ್ಲ ಕಾಂಗ್ರೆಸ್ ಸಂಸ್ಥೆಗಳೂ, ತರುಣ ಸಂಘಗಳೂ, ಮತ್ತು ಇತರ ರಾಷ್ಟ್ರೀಯ ಸಂಸ್ಥೆಗಳೂ ಸ್ವಾತಂತ್ರ್ಯ ಘೋಷಣೆ ದೊರೆತ ಪ್ರಾಂತದಲ್ಲೆಲ್ಲಾ ತರುಣರ ಕಕ್ಷ ದಾಖಲೆಯನ್ನು ಬರೆಯುವ ಮೂಲಕ ನಿಶ್ಚಯಿಸಿದ ಸೇವಾದಲದ ಕಾರ್ಯಕರ್ತರಿಗೆ ಸಹಾಯ ಮಾಡಬೇಕೆಂದು ಪ್ರಾರ್ಥನೆಯಿದೆ.

ಈ ಕಾಯಿದೆ ಭಂಗಕ್ಕಾಗಿ ಕರ್ನಾಟಕದಲ್ಲಿ ಸ್ವಯಂ ಸೇವಕರನ್ನು ಕೂಡಿಸುವ ಕಾರ್ಯಕ್ರಮವು ಸಂಪೂರ್ಣವಾಗಿ ಡಾ. ಹರ್ಡೀಕರರ ನೇತೃತ್ವದಲ್ಲಿಯೇ ನಡೆಯುವುದು. ಅದಕ್ಕಾಗಿ ಅವರು ಕರ್ನಾಟಕದ ಮುಖ್ಯ ಮುಖ್ಯ ಸ್ಥಳಗಳನ್ನು ಸಂದರ್ಶಿಸುವವರಿದ್ದಾರೆ.

ಕರ್ನಾಟಕಕ್ಕೂ ಪರೀಕ್ಷೆಕಾಲವು ಬಂದೊದಗಿರುವುದು. ಈ ಪ್ರಸಂಗದಲ್ಲಿ ಯಾವ ಕಷ್ಟಗಳನ್ನೂ ಲಕ್ಷಿಸದೆ ಕರ್ನಾಟಕದ ಮಾನವನ್ನೂ ಗೌರವವನ್ನೂ ಸಂರಕ್ಷಿಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ.

ಆಂದ್ರ ಬಳಿಕ ಕರ್ನಾಟಕಕ್ಕೂ ಸೇವಾದಲ ಮತ್ತು ರಾಷ್ಟ್ರೀಯ ಮಹಾ ಸಭೆಯ ಸ್ವಯಂ ಸೇವಕರುಗಳು ಮುಂದೆ ಬರುವರೋ? ಡಾ. ಹರ್ಡೀಕರರು ಈ ಸಂಬಂಧವಾಗಿ ತಮ್ಮ ಕರ್ನಾಟಕ ಪ್ರವಾಸವನ್ನು ಪ್ರಾರಂಭಿಸುವ ಮೊದಲು, ಕರ್ನಾಟಕದ ಎಲ್ಲಾ ಭಾಗಗಳಲ್ಲಿಯ ಜನರಿಂದ ಇದರ ಉತ್ತರವನ್ನು ನಿರೀಕ್ಷಿಸುತ್ತಾರೆ. ಸ್ವಯಂ ಸೇವಕರಾಗಬಯಸುವವರು ಸರ್ವರೂ ಅವರೊಡನೆ ಕೂಡಲೇ ಪತ್ರವ್ಯವಹಾರ ಮಾಡಬೇಕಾಗಿ ವಿನಂತಿಯಿದೆ.

ಹುಬ್ಬಳ್ಳಿ, ತಾ. ೧೬-೧-೩೦. — ರಾ. ವಿ. ಕಡಿಗುದರಿ, ದಲದ ಪ್ರಕಟಣಾ ಕಾರ್ಯದರ್ಶಿ.

ದಕ್ಷಿಣ ಕನ್ನಡಾ ಗ್ರಾಮುದ್ಯೋಗಸ್ಥರು ತಮ್ಮ ಸಂಕಟಗಳನ್ನು ಕುರಿತು ಮದ್ರಾಸ್ ಸರಕಾರಕ್ಕೆ ಮನವಿ ಮಾಡಿದಾಗ ಸರಕಾರವು ಕೊಡಿಸಿದ ಅಪ್ಪಣೆ.

ರೆವಿನ್ಯೂ ಖಾತೆ.

ಜಿ. ಒ. M. S. ೩೩೪೯ ತಾ. ೨೦ ಡಿಸೆಂಬರ ೧೯೨೯.

ಹುಕುಂ — ಮಿ. ರಾ. ರಾ. ಕೆ. ಆರ್. ಕಾರಂತ ಎಮ್. ಎಲ್. ಸಿ.ಯವರು ತಾ. ೬-೨-೨೯ಕ್ಕೆ ದಕ್ಷಿಣ ಕನ್ನಡಾ ಗ್ರಾಮಭಾಗದ ಸಂಬಳ ವೃದ್ಧಿಯನ್ನು ಕುರಿತು ಬರೆದ ಪತ್ರವು ಸರಕಾರಕ್ಕೆ ಸಿಕ್ಕಿತು. ತಾರೀಕು ೨೮-೪-೨೯ರ ದಿನ ದಕ್ಷಿಣ ಕನ್ನಡಾ ಗ್ರಾಮನೌಕರರ ಸಂಘದ ಪ್ರತಿನಿಧಿಗಳು ತಮ್ಮ ಸಂಕಷ್ಟ ನಿವಾರಣೆಯ ಸಲುವಾಗಿ ಮುಖತಃ ಒಂದು ಮನವಿಯನ್ನು ನೀಡಿದರು. ಸರಕಾರದವರು ಅವರ ಬೇಡಿಕೆಗಳನ್ನು ಜಾಗ್ರತೆಯಾಗಿ ವಿಚಾರಮಾಡಿ ಈ ಕೆಳಗಿನ ಹುಕುಮನ್ನು ಕೊಡುತ್ತದೆ.

(i) ಗ್ರಾಮಭಾಗದ ಸಂಬಳವನ್ನು ಹೆಚ್ಚಿಸುವ ವಿಚಾರ: — ಸಂಬಳವನ್ನು ಏರಿಸುವ ವಿಚಾರದಲ್ಲಿ ಸರಕಾರವು ಈಗ ಮಾಡಲು ಸಾಧ್ಯವಿಲ್ಲನ್ನುತ್ತದೆ.

(ii) ಪ್ರಯಾಣ ಭತ್ತೆ — ಗ್ರಾಮ ಉದ್ಯೋಗಸ್ಥರಿಗೆ ಭತ್ತೆ ಕೊಡುವ ವಿಚಾರದಲ್ಲಿ ಈಗಿರುವ ನಿಯಮಗಳನ್ನು ಬದಲಿಸುವರೆ ಸರಕಾರವು ಕಾರಣವಿದೆಯೆಂದು ತಿಳಿಯುವುದಿಲ್ಲ.

(iii) ಅವರ ಮೇಲೆ ಹೊರಿಸಲ್ಪಟ್ಟ ಇತರ ಕೆಲಸಗಳನ್ನು ಕುರಿತು — ಮದ್ರಾಸು ಎಲೇಕ್ಷ ಕೋರ್ಟು ಅಕ್ಟ ೧೯ನೇ ಸೆಕ್ಷನಿನಂತೆ ಗ್ರಾಮ ಕೋರ್ಟುಗಳಿಗೆ ಸಂಬಂಧಿಸಿದ ಕೆಲವು ಕೆಲಸಗಳನ್ನು ಉದಾ — ಸಂಬ್ರಗಳ ಕೋರ್ಟು ರಜಿಸ್ಟರು ಇರಿಸುವುದು, ಕೋರ್ಟು ವರದಿ ಬರೆಯುವುದು, ಇವು ಶಾನುಭೋಗರ ಕೆಲಸಗಳು. ವಿಲೇಜ ಎಕೌಂಟು ಮ್ಯಾನ್ಯುಯಲ್‌ಕೆಗೆ ಹೊಂದಿ ನಮೂನೆ ಮೇರೆಗೆ ಗ್ರಾಮದ ಅಂಕಗಳನ್ನು ಬರೆಯುವುದು ಅವರ ಕೆಲಸ. ವಿಲ್ಲೇಜ ಸೆಟ್‌ಲ್‌ಮೆಂಟ್ ಪುಸ್ತಕಗಳಲ್ಲಿ ಹೊಲಗಳ ಗಡಿ ಕಾಣಿಸುವುದು. ಸಾಮಾನ್ಯವಾಗಿ ರೆವಿನ್ಯೂ ಇನ್ಸ್‌ಪೆಕ್ಟರು ಮತ್ತು ಲೆಂಡ್ ರೆಕಾರ್ಡ್ಸ ಡ್ರಾಫ್ಟ್‌ಮೆನರ ಕೆಲಸವು ಆಗಿರುವ ಪ್ರಸಂಗಗಳಲ್ಲಿ ಗ್ರಾಮಭಾಗದ ಕರ್ತವ್ಯವಲ್ಲವನ್ನು ಅವರಿಂದ ಮಾಡಿಸುವ ವಿಷಯಗಳು ಸರಕಾರಕ್ಕೆ ಕಂಡು ಬರುವುದಿಲ್ಲ.

(iv) ಮೇಲಾಧಿಕಾರರು ಗ್ರಾಮ ಉದ್ಯೋಗಸ್ಥರನ್ನು ಸರಿಯಾಗಿ ಕಂಡು ಕೊಳ್ಳುವ ವಿಚಾರದಲ್ಲಿ: — ಗ್ರಾಮ ಉದ್ಯೋಗಸ್ಥರನ್ನು ಅವರ ಯೋಗ್ಯತೆಗೆ ಸರಿಯಾಗಿ ನಡೆಸಿಕೊಂಡು ಹೋಗಬೇಕೆಂದು ನೋಡುವರೆ ಜಿಲ್ಲಾ ಕಲೆಕ್ಟರರಿಗೆ ರೆವಿನ್ಯೂ ಬೋರ್ಡಿನವರು ಸೂಚನೆ ಕೊಡುತ್ತಾರೆ.

(v) ತಾಲೂಕು ಆಫೀಸಿನಲ್ಲಿ ಹಾಜರಿ — ತಾಲೂಕು ಆಫೀಸಿನಲ್ಲಿ ಶ್ಯಾನುಭೋಗರು ದಿನಕ್ಕೆ ಇಂತಿಷ್ಟು ತಿಂಗಳು, ಅಥವಾ ತಿಂಗಳಿಗೆ ಇಂತಿಷ್ಟು ದಿನ ಹಾಜರಿರಬೇಕೆಂದು ನಿಶ್ಚಯಿಸಲು ಸಾಧ್ಯವಿಲ್ಲವೆಂದು ತಿಳಿಯುತ್ತದೆ. ಆದರೂ ಇದನ್ನು ಜಮಾಬಂದಿಗಳಲ್ಲಿ ಆದಷ್ಟು ಕಡಿಮೆ ಮಾಡಿಕೊಳ್ಳಬೇಕೆಂದು ರೆವಿನ್ಯೂ ಅಧಿಕಾರರಿಗೆ ಬುದ್ಧಿ ಹೇಳುತ್ತದೆ.

(ಗವರ್ನರ್ ಇನ್ ಕೌನ್ಸಿಲ್‌ರ ಹುಕುಮ ಮೇರೆಗೆ)

H. R. Pate, Sect. to the Govt.

ರುಚಿಕರ ಆಹಾರ.

ಸ್ತ್ರೀಪುರುಷರಿಗೆ, ಅತಿಥಿಗಳಿಗೆ ಬಂದಾಗ ರುಚಿಕರವಾದ ಸಾಮಾನ್ಯವಾದ ಆಹಾರವನ್ನು ತಯಾರಿಸುವ ಮನಸ್ಸಿದ್ದರೆ ಕೆಳಗಿನದೇ ಉತ್ತಮವು. ಬಿಸಿ ಹಾಲಿಗೆ ಸಕ್ಕರೆ ಹಾಕಿ ಬಿಸಿ ಗೋದಿ ರೊಟ್ಟಿ (Bread) ಯನ್ನು ಹಾಕಿ ಮೊಸರಿನವರೆ ಉತ್ತಮ. ರೊಟ್ಟಿಯು ಮೆದುಗೆಯನ್ನು ಹೀರುವ ವರೆಗೆ ಕಾದಿದ್ದು ತರುವಾಯ ಅವುಗಳನ್ನು ಚೆನ್ನಾಗಿ ಕಲಸಬೇಕು. ಸಕ್ಕರೆಯನ್ನು, ಸ್ವಲ್ಪ ಉಪ್ಪು ನೀರನ್ನು ಮಿಶ್ರಮಾಡಬೇಕು. ಇದು ಅತ್ಯಂತ ರುಚಿಕರವೂ ಆರೋಗ್ಯಕರವೂ ಆಗಿದೆ.

ಬಾಳೆಹಣ್ಣು.

ಎಲೆಬಾಳೆಹಣ್ಣಿನಲ್ಲಿ ಎಂತಹ ಉತ್ತಮ ಆಹಾರವಿದೆಯೆಂದು ಅನೇಕರಿಗೆ ತಿಳಿದಿಲ್ಲ. ಹಾಲಿನಲ್ಲಿ ತಯಾರಿಸಿದ ಅದರ ನೀರೊಡಗಿನವು ಹಲವಾರು ರುಚಿಕರವಾಗಿಯೂ ಶರೀರಾರೋಗ್ಯವನ್ನು ವರ್ಧಿಸುವಂತಹುದೂ ಆಗಿದೆ. ಹೊರಗಿನ ಸಿಪ್ಪೆಯನ್ನು ಇತರ ತರಕಾರಿಗಳಂತೆ ಉಪಯೋಗಿಸಿಕೊಳ್ಳಬಹುದು. ಶರೀರಕ್ಕೆ ಹಿತಕರವಾಗಿದೆ.

ಚೊಕೊಲೇಟುಗಳ ಉಪಯೋಗ.

ಹಿಂದೂಸ್ಥಾನದ ಜನರಿಗೆ ವಿಶೇಷ ಹಾನಿಯುಂಟುಮಾಡುವುದೆಂದರೆ ಚೊಕೊಲೇಟು ಮತ್ತು ಪೇಪರ್ ಮಿಠಾಯಿಗಳನ್ನು ತಿನ್ನುವಿಕೆ. ಅದರಲ್ಲಿಯೂ ಚೊಕೊಲೇಟು ಅತ್ಯಂತ ಹಾನಿಕರವಾಗಿದೆ. ಮಕ್ಕಳಿಗೆ ಅವು ವಿಶೇಷ ಹಾನಿಯನ್ನುಂಟುಮಾಡುವವು. ಚೊಕೊಲೇಟುಗಾಗಿ ಉಪಯೋಗಿಸುವ ಹಣವನ್ನು ಬಾದಾಮಿ, ಒಣದ್ರಾಕ್ಷೆ ದ್ರಾಕ್ಷಿಗಳಿಗೆ ಉಪಯೋಗಿಸಬಹುದು. ಆರೋಗ್ಯಕ್ಕೆ ಅವುಗಳ ಪ್ರಯೋಜನವೇ ಬಹಳ ಅಧಿಕವಿರುತ್ತದೆ.

[illegible]

800 [illegible] ಸೀಸೆ 1ಕ್ಕೆ [illegible]

[illegible] ದೊರೆಯುತ್ತವೆ. ನಮ್ಮ ವಿಳಾಸವನ್ನೂ [illegible] ಪ್ರಾಕ್ಟಿಯೊಳು [illegible] ನೋಡಿಕೊಂಡು ಕೊಳ್ಳಿರಿ.

ವೈ ಶ್ವಾ ನ ರಾ ಸ ವ .

([illegible], ಜಾಂಡೀಸಿಗೆ ಸಿದ್ಧೌಷಧ.)

[illegible] ಹುಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ [illegible] ಕಡಿಮೆಯಾಗುತ್ತದೆ. ಸೀಸೆ 1ಕ್ಕೆ ರೂ. 1—0—0.

ಲ ಕ್ಷ್ಮೀ ವಿ ಲಾ ಸ ರ ಸ .

(ಪ್ಲೇಗಿಗೆ)

[illegible] ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅತ್ಯವಶ್ಯಕವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀ ನಿ ವಾ ಸ ತೈ ಲ .

ಪ್ಲೇಗು ರೋಗಿಯ ಪ್ರತಿಸೆಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು [illegible]

ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—

ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ

ಮಂಗಳೂರು ಟವರಿನ ಹತ್ತಿರ.

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ | ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹ ರೂಪವಾಗಿರುವ [illegible] ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಕ್ರಮವಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳಿಗನುಸಾರವಾಗಿ ನಡೆಯುವದೇ ದಾರಿ. ಹಾಗಿಲ್ಲದಿದ್ದರೆ ಅದರಲ್ಲಿ ಹೇಳಿರುವ ಉಪಾಯವನ್ನು ಮಾಡುವದು ಮತ್ತೊಂದೇ ದಾರಿ.

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಚೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

4 ಆಣೆ ಟಪ್ಪಾಲು ಸ್ಟಾಂಪು

ಕಳುಹಿಸಿದರೆ 372 ಪುಟಗಳುಳ್ಳ ಬಹಳ ಉಪಯೋಗವಾದ ಮತ್ತು ಸುಂದರವಾದ

1930ನೇ ಇಸವಿಯ ಡೈರಿ

ಮುಫತ್ತಾಗಿ ಕಳುಹಿಸಲ್ಪಡುವುದು. ತ್ವರೆ ಮಾಡಿ!!

52—14 ಮದನ ಮಂಜರಿ ಫಾರ್ಮಸಿ,

1/94 ಚೀನ ಬಜಾರ್ ಮದರಾಸು.

ತಿಳಿಯದೇ ಧಾತುಕ್ಷಯವಾಗ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯ ತಾರುಣ್ಯದಲ್ಲಿಯೇ ನಿಜವಾಗಿ ಸಂಸಾರದ ಸುಖವು ದೊರೆಯದೇ ನಿರುತ್ಸಾಹ ನಿಂದಕಗಳು ಹುಟ್ಟುತ್ತವೆ. ಇಂಥ ಮನುಷ್ಯರ ಧಾತು ಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ಕೊಡುವಂತಹದ್ದು.

ವೈದ್ಯರಾಜ ಶ್ರೀ ಕೇಶವಶಾಸ್ತ್ರೀ ಪಿರಜಕರ ಇವರ,

ಶಕ್ತಿ ಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತ ಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ.

ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು, ಪೌರುಷತ್ವಹೀನ ದೇಹ, ಅಸ್ಥಿರ ಸ್ವಭಾವ, [illegible], ಅಂಜುಬುರುಕತನ, [illegible], ಸ್ವಪ್ನದೋಷ, ವೀರ್ಯದ ನೀರು, ಆಲಸ್ಯ, [illegible], ಉರಿಮೂತ್ರ, ಇಂದ್ರಿಯದ ಉರಿ, ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, [illegible], ಎಲ್ಲ ಥರದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ ರಸ, ರಕ್ತ, ಅಸ್ಥಿ, ಮಜ್ಜಾ, ವೀರ್ಯ ಮೊದಲಾದ ಏಳು ಧಾತುಗಳ ವೃದ್ಧಿಯಾಗಿ ಇಂದ್ರಿಯಕ್ಕೆ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ [illegible] ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟುಕಾಲ, ಕೆಂಪು ಹಾಗು ಬಿಳಿ ಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧ ತೊಲೆ ಮತ್ತು ಸಂಜೆಗೆ ಅರ್ಧ ತೊಲೆ ತಕ್ಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು [illegible] ತೊಲೆಯ ವರೆಗೆ ತಕ್ಕೊಳ್ಳಬೇಕು. [illegible] ದಿನಗಳ ವರೆಗೆ ನಡೆಯುವ ೧ ಬಾಟಲಿಗೆ ರೂ. ೧-೪-೦, ೪ ಬಾಟಲಿಗೆ ರೂ. ೪, ೧೨ ಬಾಟಲಿಗೆ ರೂ. ೧೧, ಹಾಗು ೧ ಬಾಟಲಿ ಪ್ಯಾಕಿಂಗ್ ಅಂಚೆ ಹಾಗು ಪ್ಯಾಕಿಂಗಿನ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ,

5c Divison, [illegible]

ಅರ್ಕಶೆಫಾ ಅಥವಾ ಆರೋಗ್ಯಬಿಂದು.

ಪ್ರವಾಹಿಮಿತ್ರ ಮೂರ್ತಿಮಂತವೈದ್ಯ.

ಇದು ಅರ್ಕವಿದ್ದು ಇದರಲ್ಲಿ ಸೀಸು ರಸಾಯನ [illegible]. ಎಷ್ಟು ದಿವಸ ಇಟ್ಟರೂ ಕೆಡುವುದಿಲ್ಲ. ಇದು ಪ್ರಸಿದ್ಧವಾಗಿ [illegible] ವರ್ಷಗಳು ಆಗುತ್ತ ಬಂದವು. ಇವತ್ತಿನ ವರೆಗೆ ಎರಡು ಲಕ್ಷಗಳವರೆಗೆ ಬಾಟಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ [illegible] ಪತ್ರಗಳು [illegible] ದಾಖಲೆಗಳು, [illegible], [illegible] ಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. [illegible] ಸಟೆಯೆಂದು ಸಿದ್ಧಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳ ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯಾಗಿದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತತ್ಕಾಲ ಗುಣಕೊಡುವದು. ಮತ್ತು ಎಂಥ ಭಯಂಕರ ರೋಗವು ಇದ್ದರೂ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರ್ಟಿಫಿಕೇಟುಗಳು ನಮ್ಮ ಹತ್ತಿರ ಹಾಜರು ಇರುತ್ತವೆ. ಇವನ್ನು ಬರೆಯಲಿಕ್ಕೆ ಜಾಗವು ಸಾಲದು ಕಾರಣ ಒಂದು ಸಾರೆ ತಕ್ಕೊಂಡು ಅನುಭವ ನೋಡಿರಿ.

ರೋಗದ ನಾಮಗಳು:—

ಕ್ಷಯರೋಗ, [illegible], ಹಡೆದ ಸಂಜು, ದಮ್ಮು, ಕೆಮ್ಮು, ಅಜೀರ್ಣ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, [illegible], [illegible] ಮೊದಲಾದವುಗಳು, [illegible], [illegible], [illegible], ಹೊಟ್ಟೆ ಶೂಲ, [illegible] ರೋಗಗಳು, ಬಾಲಗ್ರಹ, [illegible], ಮುಟ್ಟುದೋಷ, [illegible], [illegible], ಮತ್ತು [illegible] ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಿಂದ ಗುಣಬರುವುವು.

[illegible]

☞ ನಮ್ಮ ವಿಳಾಸ:— ಟಿ. ಎಮ್. ಮುಲ್ಲಾ,

ಸಂಪಾದಕ ಅರ್ಕಶೆಫಾ, ಹೆಡ್ ಆಫೀಸ

ಪೋಸ್ಟ ಕಾಪೂರ (ಬೆಳಗಾವ.)

Grand Clearing Sale!

ನಮ್ಮ '[illegible]' ಎಂಬ ಬಾಟಲಿಗಳನ್ನು ಕೊಂಡುವವರಿಗೆ ಈ ಕೆಳಗಿನ ಸಾಮಾಗ್ರಿಗಳು ಉಚಿತವಾಗಿ ಕೊಡಲ್ಪಡುವವು. 36ಘ ಗಡಿಯಾರ ಒಂದು, (ಮೂರು ವರುಷದ ಗ್ಯಾರಂಟಿ) [illegible] ವಾಚು, ಒಂದು ಚೈನು, ಒಂದು ಅಂಗಿ, ಒಂದು ಕರವಸ್ತ್ರ, ಒಂದು ಕನ್ನಡಿ, ಒಂದು ಬಾಚಣಿಗೆ, ಒಂದು ಸಾಬೂನು, ಒಂದು ಫೌಂಟೆನ್ ಪೆನ್ನು, ಒಂದು ಛತ್ರಿ, ಒಂದು [illegible], [illegible] ಗುಂಡಿಗಳು, ಒಂದು ಜೋಡಾ ಮೆಟ್ಟುಗಳು. (ಕಾಲಿನ ಅಳತೆಯನ್ನು ಕಳುಹಿಸಬೇಕು.) ಕ್ರಯ ರೂ. 4. ಟಪ್ಪಾಲು ಖರ್ಚು 10 ಆಣೆ. ಒಟ್ಟು ರೂ. 4—10—0. ಇಂಗ್ಲೀಷಿನಲ್ಲಿಯೇ ಬರೆಯಿರಿ.

ಪೋಲ್ ಎಂಡ್ ಕೊ,

ಶಾಮಬಜಾರ್ ಸ್ಟ್ರೀಟ್,

ಪಿ. ಓ. ಬಾಗ್ ಬಜಾರ್, ಕಲಕತ್ತಾ.

PAUL & CO,

Sham Bazaar Street,

P. O. Bag Bazaar, Calcutta.

[illegible]

[illegible]

[illegible] ವಿದ್ಯಾಭ್ಯಾಸವು ಪ್ರತಿಯೊಂದು ಮಗುವಿಗೂ [illegible] ಪಾಶ್ಚಾತ್ಯ ದೇಶಗಳಲ್ಲಿ ಜನರು ತಿಳಿದು [illegible] ಅರ್ಧ ಶತಮಾನಕ್ಕಿಂತಲೂ ಹೆಚ್ಚಾಯಿತು. [illegible] ಆಯಾ ಸರಕಾರದವರು ತಕ್ಕ ಏರ್ಪಾಡುಗಳನ್ನು [illegible] ಎಲ್ಲಾ ಮಕ್ಕಳಿಗೂ, ಅಂದರೆ ಎಲ್ಲಾ ಹುಡುಗರಿಗೂ ಎಲ್ಲಾ ಹುಡುಗಿಯರಿಗೂ, ವಿದ್ಯಾಭ್ಯಾಸವು ದೊರಕುವಂತೆ [illegible] ಓದುಬರಹ ಬಾರದೆ ಇರುವವರ ಸಂಖ್ಯೆಯನ್ನೇ ಅತಿ [illegible]. ಅಮೆರಿಕ, ಕೆನಡಾ, ಆಸ್ಟ್ರೇಲಿಯಾ, ಜರ್ಮನಿ, ಇಂಗ್ಲೆಂಡ್ ಇವೇ ಮುಂತಾದ ದೇಶಗಳಲ್ಲಿ ಶೇಕಡಾ ತೊಂಬತ್ತೈದು ಜನರಿಗೆ ಓದುಬರಹವಿದೆ.

ನಮ್ಮ ದೇಶದಲ್ಲಿ ಯಾದರೂ ಓದುಬರಹ ಇಲ್ಲದೆ ಇರುವವರ ಸಂಖ್ಯೆಯೇ ಅತಿ ಜಾಸ್ತಿ. ನೂರು ಜನರಲ್ಲಿ ಸುಮಾರು ತೊಂಬತ್ತಮೂರು ಜನರಿಗೆ ಅಕ್ಷರದ ಗುರ್ತೇ ಇಲ್ಲ. ವಿದ್ಯಾಭ್ಯಾಸದ ಮಟ್ಟಿಗೆ ಈ ಜನರು ಕುರುಡರೇ ಎಂತ ಹೇಳಬಹುದು. ತಮ್ಮ ತಮ್ಮ ಮತ ಸಂಬಂಧವೇಯಾಗಲಿ ಅಥವಾ ದೇಶದಲ್ಲಿ ದಿನಾಗಲೂ ನಡೆಯುತ್ತಿರುವ ಎಷ್ಟೋ ವಿಷಯಗಳನ್ನು ಕುರಿತಾಗಲಿ ಜ್ಞಾನಸಂಪಾದನೆಯನ್ನು ಮಾಡುವುದಕ್ಕೆ ಇವರಿಗೆ ಆಸ್ಪದ ಬಲು ಕಡಿಮೆ. ಇದಕ್ಕೆ ವಿದ್ಯೆ ಇಲ್ಲದಿರುವುದೇ ಒಂದು ದೊಡ್ಡ ಕಾರಣ. ಶೇಕಡಾ ೯೩ ಜನರು ವಿದ್ಯಾವಿಹೀನರಾಗಿರುವುದರಿಂದ ಅವರು ಪುಸ್ತಕಗಳನ್ನೂ ವರ್ತಮಾನ ಪತ್ರಿಕೆಗಳನ್ನೂ ಓದಿ ವಿಷಯಗಳನ್ನು ಅರಿತು ಲೋಕವ್ಯವಹಾರಗಳು ಹೇಗೆ ಮುಂದಕ್ಕೆ ಸಾಗುತ್ತಿವೆ ಎಂಬುದನ್ನು ಅರಿಯುವುದು ಅಸಾಧ್ಯ.

ಇತ್ತೀಚೆಗೆ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸಿ ಅವರನ್ನು ಅಕ್ಷರಸ್ಥರೂ, ನಿಪುಣರೂ, ಜ್ಞಾನವಂತರೂ ಆಗುವಂತೆ ಮಾಡಿ, ಆ ಮಕ್ಕಳು ದೊಡ್ಡವರಾದಾಗ ಬುದ್ಧಿವಂತಿಕೆಯಿಂದಲೂ, ಚತುರತೆಯಿಂದಲೂ ದೇಶದಲ್ಲಿ ಕೆಲಸಮಾಡುವಂತೆ ಅವರಿಗಾಗಿ ಎಷ್ಟೋ ಜನರು ಶ್ರಮಪಡುವರು. ಆದರೂ ವಿದ್ಯಾಭ್ಯಾಸವನ್ನು ತಮ್ಮ ಮಕ್ಕಳಿಗೆ ಕೊಡಿಸದೆ ಇರುವ ತಾಯಿತಂದೆಗಳು ಇನ್ನೂ ಅನೇಕರಿರುವರು. ಮನೆಬಾಗಲಲ್ಲಿ ಪಾಠಶಾಲೆಯಿದ್ದರೂ, ಅಲ್ಲಿಗೆ ತಮ್ಮ ಮಕ್ಕಳನ್ನು ಕಳುಹಿಸದೆ ಇರುವ ಪೋಷಕರು ಎಷ್ಟಿಲ್ಲ!

ನಮ್ಮ ಸರಕಾರದವರು ಪ್ರಜೆಗಳಿಗೆಲ್ಲಾ ವಿದ್ಯಾಭ್ಯಾಸವನ್ನು ದೊರಕಿಸುವುದಕ್ಕೋಸ್ಕರ ಪಾಠಶಾಲೆಗಳನ್ನು ಎಲ್ಲೆಲ್ಲಿಯೂ ಸ್ಥಾಪಿಸಿರುತ್ತಾರೆ. ೧೯೦೧ನೇ ಸಾಲಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೋಸ್ಕರ ಮೈಸೂರಲ್ಲಿ ಎಂಟೂ ಮುಕ್ಕಾಲು ಲಕ್ಷ ರೂಪಾಯಿಗಳನ್ನು ಮಾತ್ರ ವೆಚ್ಚಮಾಡುತ್ತಿದ್ದರು. ಈಗ ಈ ವಿದ್ಯಾಭ್ಯಾಸಕ್ಕೋಸ್ಕರವೇ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿವೆ. ಅಂದರೆ [illegible] ವರ್ಷಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಖರ್ಚು ಎರಡರಷ್ಟು ಹೆಚ್ಚಾಗಿದೆ. ಆದರೆ ಓದುಬರಹ ಉಳ್ಳ ಜನರು ಮಾತ್ರ ಎರಡರಷ್ಟು ಹೆಚ್ಚಾಗಲಿಲ್ಲ. ಇದಕ್ಕೆ ಕಾರಣವೇನೆಂತ ತಿಳಿಯುವುದು ಅತ್ಯಾವಶ್ಯಕ.

ಒಂದು ಮಗು ಶಾಲೆಗೆ ಹೋಗಿ ಸೇರಿದ ಮಾತ್ರಕ್ಕೆ ಅದಕ್ಕೆ ವಿದ್ಯಾಭ್ಯಾಸ ಉಂಟಾಯಿತು. ಮತ್ತು ಅಲ್ಲಿ ಕಲಿತ ವಿದ್ಯೆ ಅದರ ಜೀವಮಾನದಲ್ಲೆಲ್ಲಾ ಉಳಿಯುವುದು ಎಂತ ಹೇಳಲಿಕ್ಕಾಗುವುದಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ಮತ್ತು ಎರಡನೇ ದರ್ಜೆಗಳಲ್ಲಿ ಕೊಡುವ ಶಿಕ್ಷಣವು ಬಹಳ ಕಡಿಮೆ. ಈ ಶಿಕ್ಷಣವನ್ನು ಹೊಂದಿ ಪಾಠಶಾಲೆಯನ್ನು ಬಿಡುವವರು ಮೂರು ನಾಲ್ಕು ವರ್ಷಗಳಲ್ಲಿಯೇ ತಾವು ಕಲಿತದ್ದನ್ನೆಲ್ಲಾ ಸಂಪೂರ್ಣವಾಗಿ ಮರೆತುಬಿಡುತ್ತಾರೆಂಬುದು ವಿಧಿತವಾಗಿದೆ. ಹಳ್ಳಿಗಳಿಗೆ ಹೋಗಿ ಇಂಥಾ ಬಾಲಕಬಾಲಕಿಯರನ್ನು ಪರೀಕ್ಷೆಮಾಡಿದ್ದರಲ್ಲಿ, ಅವರಿಗೆ ಅಕ್ಷರದ ಗುರ್ತು ಕೂಡಾ ಇಲ್ಲದೆ ಇರುವುದನ್ನು ಪ್ರತ್ಯಕ್ಷ ನೋಡಿದ್ದಾಯಿತು. ಪ್ರತಿಯೊಬ್ಬ ಶಾಲಾ ಇನ್ಸಪೆಕ್ಟರ್ ರವರ ಅನುಭವವೂ ಇದೇಯಾಗಿರುತ್ತದೆ. ವಿದ್ಯಾರ್ಥಿಗಳು ನಾಲ್ಕನೇ ದರ್ಜೆಯ ಪಾಠಗಳನ್ನಾದರೂ ಪೂರೈಸದೇ ಹೋದರೆ, ದೊಡ್ಡವರಾದ ಮೇಲೆ ಅವರು ವಿದ್ಯಾವಿಹೀನರೆಂದು ಅನ್ನಿಸಿಕೊಳ್ಳುವರೆಂಬುದರಲ್ಲಿ ಸಂಶಯವೇನೂ ಇಲ್ಲ. ನಾಲ್ಕನೆಯ ದರ್ಜೆಗೆ ಬರುವ ಮುಂಚೆಯೇ ಶಾಲೆಯನ್ನು ಬಿಡುವವರು ತಾವು ಕಲಿತ ವಿದ್ಯೆಯನ್ನು ಮರೆಯುವರು ಎಂದ ಮೇಲೆ, ಅವರ ವಿದ್ಯಾ[illegible]

[illegible] ಹಣವು ನಿಷ್ಪ್ರಯೋಜನ[illegible]ವಾಗಿದೆ.

[illegible] ದೇಶದಲ್ಲಿ ಒಂದನೆಯ ದರ್ಜೆಯಲ್ಲಿ ಸೇರಿದ ೧೦೦ ಬಾಲಕರಲ್ಲಿ ನಾಲ್ಕನೆಯ ದರ್ಜೆಯ ವರೆಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಯುವವರು ೩೦ ಮಂದಿ ಮಾತ್ರ. ಬಾಲಕಿಯರಲ್ಲಿ ೧೦೦ರಲ್ಲಿ ೬ ಮಂದಿ ಮಾತ್ರ ನಾಲ್ಕನೆಯ ದರ್ಜೆಯ ವರೆಗೆ ಹೋಗುತ್ತಾರೆ. ಇದರಿಂದ ನಾವು ತಿಳಿದುಕೊಳ್ಳಬೇಕಾದ ಅಂಶವೇನೆಂದರೆ, ಬಾಲಕರ ಪ್ರಾಥಮಿಕ ವಿದ್ಯಾಭ್ಯಾಸದ ಖರ್ಚಿನಲ್ಲಿ ಶೇಕಡಾ ೮೦ ಪಾಲೂ ಬಾಲಕಿಯರ ವಿದ್ಯಾಭ್ಯಾಸದ ಖರ್ಚಿನಲ್ಲಿ ಶೇಕಡಾ ೯೪ ಪಾಲೂ ನಿರರ್ಥಕವಾಗಿ, ಅಂದರೆ ಓದುಬರಹ ಇರುವವರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಉಪಯೋಗವಿಲ್ಲದೆ, ಹೋಗುತ್ತಿದೆ. ಪ್ರಾಥಮಿಕ ವಿದ್ಯಾಭ್ಯಾಸದ ಮುಖ್ಯ ಉದ್ದೇಶವು ಜನರನ್ನು ಅಕ್ಷರಸ್ಥರಾಗಿ ಮಾಡುವುದು. ಆ ಉದ್ದೇಶವು ಬಹಳವಾಗಿ ನೆರವೇರುವುದಿಲ್ಲವೆಂದ ಮೇಲೆ, ಅಷ್ಟು ಧನವೂ—ಅಂದರೆ ೩೦ ಲಕ್ಷ ರೂಪಾಯಿಗಳಲ್ಲಿ ಸುಮಾರು ೧೭ ಲಕ್ಷ ನಿಷ್ಪ್ರಯೋಜನವೆಂದಲ್ಲದೆ ಬೇರೆ ಹೇಳುವುದೇನಿದೆ?

ಬ್ರಿಟಿಷ್ ಇಂಡಿಯಾದಲ್ಲೂ ಇದೇ ರೀತಿ ಹಣವು ಉಪಯೋಗವಿಲ್ಲದೆ ಹೋಗುತ್ತಿದೆ ಎಂಬುದೂ ತಿಳಿದುಬಂದಿದೆ. ಅಲ್ಲಿ ಒಂದನೇ ದರ್ಜೆಯಲ್ಲಿ ಸೇರಿದ ೧೦೦ ಮಕ್ಕಳಲ್ಲಿ ೧೮ ಮಂದಿಯೇ ಪ್ರಾಥಮಿಕ ಶಿಕ್ಷಣವನ್ನು ಮುಗಿಸುತ್ತಾರೆ. ಆದುದರಿಂದ ಶೇಕಡಾ ೮೨ ಪಾಲು ವೆಚ್ಚವು ನಿರರ್ಥಕವೆಂದು ಹೇಳಲು ಅನುಮಾನವೇನು?

ಈ ನಷ್ಟವಾಗದಂತೆ ನಾವು ಮಾಡಬೇಕಾದ ಕೆಲಸವೇನು? ಇಷ್ಟು ಹೆಚ್ಚು ಧನವ್ಯಯವು ನಿಷ್ಪ್ರಯೋಜಕವಾಗಿ ಹೋಗದ ಹಾಗೆ ನಾವು ಹೇಗೆ ವರ್ತಿಸಬೇಕು ಎಂತ ಕೆಲವರು ಕೇಳಬಹುದು. ಅದಕ್ಕೆ ಈ ಕೆಳಗೆ ಹಲವು ಸಲಹೆಗಳನ್ನು ಕೊಟ್ಟಿವೆ.

೧. ನಾಲ್ಕನೆಯ ದರ್ಜೆಗೆ ಹೋಗುವ ಮುಂಚೆ ಶಾಲೆಯನ್ನು ಬಿಡುವ ವಿದ್ಯಾರ್ಥಿಗಳ ತಾಯಿತಂದೆಗಳಿಗೂ ಪೋಷಕರಿಗೂ ಉಪಾಧ್ಯಾಯರುಗಳು ತಕ್ಕ ತಿಳುವಳಿಕೆ ಕೊಟ್ಟು, ತಮ್ಮ ಶಿಷ್ಯರೆಲ್ಲರೂ ಪ್ರಾಥಮಿಕ ವಿದ್ಯೆಯನ್ನು ಮಧ್ಯದಲ್ಲಿ ಬಿಡದೆ ಪೂರ್ತಿಗೊಳಿಸುವಂತೆ ಪ್ರೇರೇಪಿಸುವುದು.

೨. ವಿದ್ಯಾವಂತರೂ, ಸಮಾಜದ ಮುಖಂಡರೂ, ಈ ವಿಷಯವನ್ನು ಅರಿತ ಬೇರೇ ಅನೇಕ ಮಹನೀಯರುಗಳೂ ಅಲ್ಲಲ್ಲಿ ಉಪನ್ಯಾಸಗಳನ್ನು ನಡೆಸಿ, ಮಕ್ಕಳು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸದಿದ್ದರೆ ದೊಡ್ಡವರಾದ ಮೇಲೆ ಅವರಿಗೆ ಓದುಬರಹದ ಗುರ್ತು ಸಹ ಇರುವುದಿಲ್ಲವೆಂಬುದನ್ನು ಒತ್ತಿ ಹೇಳುತ್ತಿರುವುದು.

೩. ಹಳ್ಳಿಗಾಡುಗಳಲ್ಲಿ ಪಂಚಾಯಿತಿದಾರರೂ ಆಗಾಗ್ಗೆ ಮನೆಮನೆಗಳಿಗೂ ಹೋಗಿ, ಮಕ್ಕಳು ಶಾಲೆಗೆ ಹೋಗದೆ ಇದ್ದರೆ ಅವರನ್ನು ಅಲ್ಲಿಗೆ ಕಳುಹಿಸುವಂತೆ ಮಾಡಿ, ಪ್ರಾಥಮಿಕ ವಿದ್ಯಾಭ್ಯಾಸವನ್ನಾದರೂ ಅವರು ಪೂರೈಸುವಂತೆ ಶ್ರಮತೆಗೆದುಕೊಳ್ಳುವುದು.

೪. ಬಡತನದಿಂದ ಜೀವನೋಪಾಯಕೋಸ್ಕರ ಕೆಲಸ ಮಾಡುವುದಕ್ಕೆ ಬೇಗನೆ ವಿದ್ಯಾಭ್ಯಾಸವನ್ನು ಬಿಡಬೇಕೆಂಬ ಅವಶ್ಯಕವಿದ್ದಲ್ಲಿ, ಆ ವಿದ್ಯಾರ್ಥಿಗಳಿಗೆ ಸ್ವಲ್ಪ ಹಣ ಸಹಾಯವನ್ನು ಅಥವಾ ದಿವಸಕ್ಕೊಮ್ಮೆ ಒಂದು ಊಟದ ಏರ್ಪಾಡನ್ನು ಮಾಡುವುದಕ್ಕೆ ಐಶ್ವರ್ಯವಂತರೂ, ದೇವಸ್ಥಾನಾಧಿಪತಿಗಳೂ, ಮಠಾಧಿಪತಿಗಳೂ ಮುಂದಾಳಾಗಿ ನಿಂತಿರುವುದು.

ಹೀಗೆ ಇನ್ನೂ ಅನೇಕ ವಿಧಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ವೆಚ್ಚಮಾಡುವ ಧನವು ಜನಾಂಗಕ್ಕೆ ನಷ್ಟವಾಗದಂತೆ ನೋಡುವುದು ಪ್ರತಿಯೊಬ್ಬನ ಕರ್ತವ್ಯವು.

ಹೆಸರುಗೊಂಡ ನರ್ತಕರೂ ಗಾಯಕರೂ ಇದ್ದರು. ರಾಮ ಲಕ್ಷ್ಮಣ ಭರತ, ಶತ್ರುಘ್ನರು ಹುಟ್ಟಿದ ದಿವಸ ಪಟ್ಟಣದ ಯಾವ ಭಾಗದಲ್ಲಿ ನೋಡಿದರೂ ನರ್ತನವೂ ಗಾಯನವೂ ಇತ್ತೆಂದು ತೋರುತ್ತದೆ. ರಾಜರ ಅರಮನೆಗಳಲ್ಲಿ ಅವರ ನಿದ್ರಾ ಸಮಯವು ಹತ್ತಿರಬರುವಾಗ ಗಾಯನವಾಗುತ್ತಿತ್ತು. ಗಾಯನ ಕೇಳುತ್ತಾ ಕೇಳುತ್ತಾ ಅರಸರು ನಿದ್ದೆ ಹೋಗುತ್ತಿದ್ದರು. ಅರಸರು ಬೆಳಿಗ್ಗೆ ಏಳುವ ಸಮಯವಾದಾಗ ಗಾಯನದಿಂದಲೇ ಎಬ್ಬಿಸುತ್ತಿದ್ದರು.

[ಸಶೇಷ]

ಹಿಂದೂಸ್ಥಾನದ ಭರತಶಾಸ್ತ್ರ ನಾಟ್ಯ ಅಥವಾ ನೃತ್ಯಕಲೆ.

ಹಿಂದೂದೇಶದಲ್ಲಿ ಭರತಶಾಸ್ತ್ರವು ವೇದಗಳ ಕಾಲದಿಂದಲೇ ಪ್ರಚಾರದಲ್ಲಿತ್ತೆಂಬುದಕ್ಕೆ ಅನೇಕ ಸಂಸ್ಕೃತ ಗ್ರಂಥಗಳಲ್ಲಿ ಅಲ್ಲಲ್ಲಿ ಸೂಚನೆಗಳು ತೋರುತ್ತಿವೆ. ಈ ನಾಟ್ಯ ಅಥವಾ ನೃತ್ಯಕಲೆಗೆ ಭರತಶಾಸ್ತ್ರವೆನ್ನುವರು. ಯಾಕೆಂದರೆ ಈ ನಾಟ್ಯಕಲೆಯ ಮೂಲಪುರುಷನು ಭರತಋಷಿಯಾಗಿರುತ್ತಾನೆ. ಈ ಭರತಋಷಿಗೆ ಈ ಕಲೆಯನ್ನು ಕಲಿಸಿದ ಗುರುವು ತಾಂಡವಮುನಿಯಾಗಿರುತ್ತಾನೆ. ತಾಂಡವಮುನಿಯ ಗುರು ಈಶ್ವರನು. ಈಶ್ವರನು ತಾನೇ ಕುಣಿದು ಈ ಕಲೆಯನ್ನು ತಾಂಡವಮುನಿಗೆ ಕಲಿಸಿದನು. ಅವನ ಶಿಷ್ಯನಾದ ಭರತಋಷಿಯು ಭರತಶಾಸ್ತ್ರವನ್ನು ಬರೆದನು.

ಈ ನಾಟ್ಯಕಲೆಯಲ್ಲಿ ನೃತ್ಯ, ಲಾಸ್ಯ ಎಂಬ ಎರಡು ಭೇದಗಳಿವೆ.

ನೃತ್ಯವೆಂದರೆ ಕುಣಿಯುವದು. ಈ ಕ್ರಮದ ಪ್ರಕಾರ ಕುಣಿಯುವಾಗ ಮಾತನಾಡಲಿಕ್ಕಾಗಲೀ ಹಾಡಲಿಕ್ಕಾಗಲೀ ಅಭಿನವಗಳನ್ನು ಮಾಡಲಿಕ್ಕಾಗಿ ಇರುವುದಿಲ್ಲ. ಈ ಕುಣಿಯುವಿಕೆಯನ್ನು ನೋಡುವುದರಿಂದಲೇ ಕುಣಿಯುವವನ ಅಥವಾ ಕುಣಿಯುವವಳ ಮನಸ್ಸಿನ ಭಾವನೆಗಳು ಪ್ರೇಕ್ಷಕರಿಗೆ ತಿಳಿಯುವದು. ಈ ಕುಣಿಯುವಿಕೆಯು ದಶಾವತಾರ ಆಟದಲ್ಲಿ ಬಹಳ ಅಭಿವೃದ್ಧಿಯನ್ನು ಪಡೆದಿದೆ. ಅದಲ್ಲದೆ ತಮಿಳು ದೇಶದಲ್ಲಿ ವೇಶ್ಯಾಸ್ತ್ರೀಯರು ಕುಣಿಯುವಾಗ ಇದೇ ಪದ್ಧತಿಯನ್ನು ಅನುಸರಿಸುತ್ತಾರೆ. ಅವರು ಹಾಡುಗಳನ್ನು ಹಾಡಿ ಕುಣಿಯುವದಿಲ್ಲ. ಹಾಡುವವರು ಅವರ ಹಿಂದೆ ನಿಂತು ಹಾಡುವರು. ಮರಾಠಿ, ಕರ್ನಾಟಕ ದೇಶದಲ್ಲಿ ವೇಶ್ಯಾಸ್ತ್ರೀಯರು ಕುಣಿಯುವಾಗಲೇ ಹಾಡುಗಳನ್ನು ಹಾಡುವ ಪದ್ಧತಿಯನ್ನು ಅನುಸರಿಸುತ್ತಾರೆ. ಇದಕ್ಕೆ ನರ್ತನ ಅಥವಾ ಭರತನಾಟ್ಯವೆಂದು ಹೇಳುವರು.

ಲಾಸ್ಯ—ಈ ತರದ ನಾಟ್ಯದ ಮೂಲಪುರುಷಳು ಶಿವನ ಪತ್ನಿಯಾದ ಪಾರ್ವತಿಯಾಗಿರುತ್ತಾಳೆ. ಶಿವಭಕ್ತನೂ ಬಾಣಾಸುರನ ಮಗಳೂ ಆದ ಉಷಾದೇವಿಗೆ ಪಾರ್ವತಿಯು ಈ ತರದ ನಾಟ್ಯವನ್ನು ಕಲಿಸಿದಳು. ಈ ಉಷಾದೇವಿಯು ಕೃಷ್ಣನ ಮೊಮ್ಮಗನಾದ ಅನಿರುದ್ಧನನ್ನು ಮದುವೆಯಾಗಿ ಕೃಷ್ಣನ ರಾಜಧಾನಿಯಾದ ದ್ವಾರಕಾ ಪಟ್ಟಣದಲ್ಲಿ ಒಂದು ಉಳಿಕೊಂಡಳು. ನಂದಗೋಕುಲ ಮತ್ತು ವೃಂದಾವನದಲ್ಲಿರುವ ಗೋಪಿಕಾಸ್ತ್ರೀಯರು ಉಷಾದೇವಿಯಿಂದ, ನಾಟ್ಯವನ್ನು ಕಲಿತುಕೊಂಡರು. ಇವರಿಂದ ಸೌರಾಷ್ಟ್ರದೇಶದ ಸ್ತ್ರೀಯರು ಈ ತರದ ನಾಟ್ಯವನ್ನು ಕಲಿತರು. ಸೌರಾಷ್ಟ್ರ ದೇಶದಿಂದ ಈ ಕಲೆಯು ಹಿಂದೂದೇಶದಲ್ಲಿ ಹಬ್ಬಿತು. ಉಷಾದೇವಿಗೆ ಚಿತ್ರಲೇಖೆ ಎಂಬ ಸ್ನೇಹಿತೆಯೊಬ್ಬಳಿದ್ದಳು. (ಇವಳನ್ನು ಜನರು ಸಾಧಾರಣವಾಗಿ ಚಿತ್ರನ ಲೇಖೆಯೆನ್ನುವರು) ಇವಳು ಚಿತ್ರಗಳನ್ನು ಬರೆಯುವುದರಲ್ಲಿ ಬಹಳ ಪ್ರವೀಣಳಾಗಿದ್ದಳು. ಇವಳು ಆ ಸಮಯದಲ್ಲಿ ಹಿಂದೂದೇಶದಲ್ಲಿದ್ದ ಪ್ರತಿ ಒಬ್ಬ ಅರಸನ ಚಿತ್ರವನ್ನು ಬರೆದಿಡುತ್ತಿದ್ದಳು. ಈ ಉಷೆಯು ತಾನೆ ಸ್ವಪ್ನದಲ್ಲಿ ಕಂಡ ಅರಸರನ್ನು ಈ ಚಿತ್ರಗಳನ್ನು ನೋಡಿ ಗುರುತಿಸುತ್ತಿದ್ದಳು. ಅದಲ್ಲದೆ ಇವಳು ಬೇರೆ ಬೇರೆ ರೀತಿಯ ಕುಣಿತದ ಕ್ರಮಗಳನ್ನು ಚಿತ್ರಗಳಲ್ಲಿ ಬಿಡಿಸಿ ತೋರಿಸುತ್ತಿದ್ದಳಂತೆ. ಸರಸ್ವತಿಯು ಗಾಯನದ ಮತ್ತು ಕಾವ್ಯದ ದೇವತೆ. ಮಹಾದೇವನು ನಾಟ್ಯ ಮತ್ತು ಗಾಯನದ ವ್ಯಾಕರಣದ ದೇವತೆಯಾಗಿರುತ್ತಾನೆ.

ಋಗ್ವೇದದ ಕಾಲ—ಈ ಕಾಲದಲ್ಲಿರುವ ಜನರಲ್ಲಿ ಹೆಂಗಸರು ಸಣ್ಣ ವಸ್ತ್ರವನ್ನು ಉಟ್ಟು ಜರಿಯ ರವಕೆಯನ್ನುಟ್ಟು ಕುಣಿಯುವ ಪದ್ಧತಿಯಿತ್ತೆಂದು ತೋರುತ್ತದೆ. ಈ ತರದ ಪದ್ಧತಿಯು ಹಿಂದೂದೇಶದಲ್ಲಿ ಮಾಯವಾದರೂ ಪಾಶ್ಚಿಮಾತ್ಯದೇಶದ ಜನರಲ್ಲಿ ಈಗಲೂ ವಾಡಿಕೆಯಲ್ಲಿದೆ. ಗಂಡಸರು ವೇದಗಳ ಕಾಲದಲ್ಲಿ ಭಂಗಾರದ ಕವಚವನ್ನು ಹಾಕಿ ಅಭಿನಯಯುಕ್ತವಾಗಿ ಯುದ್ಧದ ನಾಟ್ಯಗಳನ್ನಾಡುತ್ತಿದ್ದರು.

ಭಕ್ತರ ನಾಟ್ಯ—ಈಗ ಭಜನೆಯ ಸಮಯ ಪಂಢರಪುರದಲ್ಲಿಯೂ ಬಂಗಾಳದಲ್ಲಿಯೂ ಕುಣಿಯುವ ನಾಟ್ಯವೂ ಋಗ್ವೇದದ ಕಾಲದಲ್ಲಿತ್ತೆಂದು ತೋರುತ್ತದೆ. ಆಗ ದೇವತೆಗಳು ಈ ನಾಟ್ಯವನ್ನಾಡುತ್ತಿದ್ದರೆಂದು ಕಾಣುತ್ತದೆ.

ರಾಮಾಯಣದ ಕಾಲ—ಈ ಕಾಲದಲ್ಲಿಯೂ ನರ್ತನ ಮತ್ತು ಗಾಯನ ವಿದ್ಯೆಗಳು ಬಹಳ ಉನ್ನತಿಯನ್ನು ಪಡೆದು ದಶರಥನ ರಾಜಧಾನಿಯಾದ ಅಯೋಧ್ಯಾ ಪಟ್ಟಣದಲ್ಲಿ

[illegible]

[illegible] (ಪ್ರ. ರ.) [illegible] (ಕ.ಸ.)

[illegible] ವೈದ್ಯ [illegible] ಮುದ್ದು [illegible] ವೈದ್ಯ [illegible] ವೈದ್ಯರ [illegible] ಮಾಡದೆ! ಅನೇಕ ಕೃತಿಗಳ [illegible] ವೈದ್ಯರಿಂದ [illegible] ಇಲ್ಲ ಪರೀಕ್ಷೆ ಪಡಿಸೋಣಾಗುತ್ತದೆ ಎಲ್ಲಾ ತರದ [illegible], [illegible], [illegible], ನವ್ಯ, [illegible] ನಮ್ಮಲ್ಲಿ ಯಾವಾಗಲೂ [illegible] ತಯಾರ [illegible]. [illegible] ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, [illegible] ಕಾಲ, [illegible], [illegible] ವ್ಯಕ್ತಿ [illegible] ತಿಂದಿರುವ ಅಮಲು ಪದಾರ್ಥಗಳ ಅಭ್ಯಾಸ [illegible] ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು [illegible] ಹಾಗೆ ತಮ್ಮ [illegible] ಎಂಬ [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು [illegible] ಎಂಬೀ ವಿವರಗಳು [illegible] ಮುಖಾಂತರ [illegible] ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ [illegible] ಸಂದರ್ಭ [illegible] ಸಂಗತಿಗಳಲ್ಲಿ [illegible] ನಡೆಸಲ್ಲಿ [illegible] ಆಗಿ [illegible] ಗರೀಬರಿಗೆ ಅವರ ಅಗತ್ಯದ ಮತ್ತಿನ [illegible] ರೋಗಕ್ಕೆ ಬೇಕಾದ ಮದ್ದು ವಿವರ ಅವನ್ನು ಸೇವಿಸುವ ಎಲ್ಲಾ [illegible] ಸದರಿ ಈ ವೈದ್ಯಶಾಲೆಯು [illegible] ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು [illegible] ಇವೆ. [illegible] ವಿವರಕ್ಕೆ [illegible] ಮುಖಾಂತರ ವ್ಯವಹಾರ ನಡೆಸಬಹುದು.

[illegible] ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

[illegible] (ದ. ಕ)

ಅತ್ಯುತ್ತಮ ಕಾದಂಬರಿಗಳು.

೧ [illegible] (ಪತ್ತೇದಾರಿ)	೧-೪-೦	೭. [illegible]	೧-೪-೦
೨ ಭಗವಾನ್‌ದಾಸ ,,	೧-೦-೦	೮. [illegible]	೧-೪-೦
೩ [illegible] ,,	೦-೧೧-೦	೯ ಶಕ್ತಿಮಯಿ	೦-೦-೦
೪ [illegible]	೦-೧೨-೦	೧೦ ಸೌಭಾಗ್ಯ [illegible]	೧-೨-೦
೫ [illegible] ,,	೦-೮-೦	೧೧ [illegible]	೦-೮-೦
೬ [illegible] ,,	೧-೪-೦	೧೨ [illegible]	೦-೮-೦

ಇನ್ನು ನೂರಾರು ಬಗೆಯ ಪುಸ್ತಕಗಳು ನಮ್ಮಲ್ಲಿ ಸಿಗುವವು [illegible] ಬರೆಯಿರಿ; [illegible] ಕಮಿಶನ್

ವಿಳಾಸ:— ಧಿ. ದ. [illegible]

[illegible] (ಜಿ ಧಾರವಾಡ)

Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.

MANGALORE

[illegible]

[illegible] ಔಷಧಗಳು.

[illegible] ಚಿನ್ನ ಭಂಗಾರದ ಪದಕಗಳು [illegible]

[illegible] — [illegible] ರು. ೧.

[illegible] — [illegible] ೧೪.

[illegible] — [illegible] ೧೩.

[illegible] — [illegible] ೧೪

[illegible] — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ [illegible]

[illegible] — [illegible] ರು. ೧—೨—೦. ರು. ೧—೪—೦. ೧—೧೨—೦

[illegible] ರು. ೦—೬—೦

[illegible] ರು. ೦—೬—೦ LIBERAL DISCOUNT TO TRADE

ಕಾರಖಾನೆ:—CAWASHAPUR, BOMBAY.

ಎಲ್ಲಾ ಕಡೆಗಳಲಿ ಡಾ. ಯೆಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ಬೇಕಾಗಿದ್ದಾರೆ. Sayani Road, P. O. Cadell ad, Bombay. No. 14.

'ಲೋಧ್ರ'ದ ಮಹಿಮೆ

ಸ್ತ್ರೀಯರ ಪುರಸ್ಕಾರ ಪತ್ರ

ಸಣ್ಣ ಶೀಸೆಯಿಂದಲೇ ಗುಣವಾಯಿತು.

ಶ್ರೀಮತಿ ಎನ್. ಕನಕಮ್ಮ, [illegible] ಎನ್. ನರಸಯ್ಯ, ಗ್ರಾಮ ಮ್ಯಾಜಿಸ್ಟ್ರೇಟ್, ಕದರಿ ಇವರು ಬರೆದಿರುವುದು— ನಿಮ್ಮ ಒಂದು ಸಣ್ಣ ಬಾಟಲ್ ಲೋಧ್ರವನ್ನು ಉಪಯೋಗಿಸಿದ ಮಾತ್ರದಿಂದಲೇ ಗುಣವುಂಟಾಯಿತು. ಒಂದು ದೊಡ್ಡ ಶೀಸೆ ಲೋಧ್ರವನ್ನು ಕಳುಹಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇಂಗ್ಲಿಷ್ ವೈದ್ಯವು ಪ್ರಯೋಜನವಿಲ್ಲ.

ಶ್ರೀಮತಿ ಇಂದಿರಾಕುಮಾರಿ ದೇವಿ, ಮಟ್ಟೂರು, ಇವರು ಬರೆದಿರುವುದು—

ಸ್ವಾಮಿ, ನಾನು ಈಗ ತಮ್ಮ ಲೋಧ್ರವನ್ನು ಸೇವಿಸುತ್ತಿದ್ದೇನೆ. ಇದಕ್ಕೆ ಮುಂಚೆ ನನ್ನ ಋತುಕಾಲದಲ್ಲಿ ಬಹಳ ಬಾಧೆಯುಂಟಾಗುತ್ತಿತ್ತು ಮತ್ತು ಕ್ರಮತಪ್ಪಿ ೨೦ ದಿನಗಳೊಳಗಾಗಿಯೇ ಬಹಿಷ್ಠೆಯಾಗುತ್ತಿದ್ದೆನು. ೨ ವರ್ಷಗಳ ಕಾಲ ಆಂಗ್ಲ ಔಷಧಾಲಯಗಳಲ್ಲಿ ಔಷಧಿ ಸೇವಿಸಿಯೂ ಪ್ರಯೋಜನವಿಲ್ಲದಿರಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ನಾನು ಸಮ್ಮತಿಸಲಿಲ್ಲ. ಅನಂತರ ತಮ್ಮ ಪ್ರಸಿದ್ಧವಾದ ಲೋಧ್ರ ಎರಡು ಬಾಟಲ್ ತರಿಸಿ ಸೇವಿಸಿದೆನು. ಅಂದಿನಿಂದ ಕ್ರಮವಾಗಿ ೨೮ ದಿನಕ್ಕೊಂದು ಸಲ ಬಾಧೆಯಿಲ್ಲದೆ ಬಹಿಷ್ಠೆಯಾಗುತ್ತ ಸುಖವಾಗಿದ್ದೇನೆ. ಮಿಕ್ಕ ಇತರ ಬಾಧೆಗಳೂ ನಿವೃತ್ತಿಯಾಗಿವೆ. ಪುನಃ ಈಗ ಎರಡು ಬುಡ್ಡಿ ಲೋಧ್ರ ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಮೂರು ವರ್ಷಗಳ ವ್ಯಾಧಿಯು ಮೂರು ವಾರಗಳಲ್ಲಿ ಮಾಯವಾಯಿತು.

ಶ್ರೀಮತಿ ಜಯ ಲಕ್ಷ್ಮಮ್ಮ, ಬಾಲಿಕಾ ಪಾಠಶಾಲೆ, ಕುಣಿಗಲ್, ಇವರು ಬರೆದಿರುವುದು—

ಕಳೆದ ಮೂರು ವರುಷಗಳಿಂದಲೂ ನನಗೆ ಋತುವು ಸರಿಯಾಗಿ ಆಗುತ್ತಿಲ್ಲ. ೨ ಅಥವಾ ೩ ತಿಂಗಳಿಗೊಂದು ಸಾರಿಯಾಗುತ್ತಿದ್ದೆನು. ಈ ಸಂದರ್ಭಗಳಲ್ಲಿ ಸೊಂಟನೋವು, ಹಿಮ್ಮಡಿ ನೋವು, ಮತ್ತು ನಿಶ್ಶಕ್ತಿಯುಂಟಾಗಿ ಬಹಳ ಕಷ್ಟಪಡುತ್ತಿದ್ದೆನು. ಈ ಸಮಯದಲ್ಲಿ ತಮ್ಮ 'ಲೋಧ್ರ' ೨ ಬುಡ್ಡಿ ತರಿಸಿ ಸೇವಿಸಿದೆನು. ಅಂದಿನಿಂದ ಈ ಬಾಧೆಗಳೆಲ್ಲವೂ ಮಾಯವಾಗಿ ಸಕಾಲಕ್ಕೆ ಬಹಿಷ್ಠೆಯಾಗುತ್ತ ಶರೀರಾರೋಗ್ಯವನ್ನು ಅನುಭವಿಸುತ್ತಿದ್ದೇನೆ. ಈ ದಿವ್ಯೌಷಧಿಯನ್ನು ಸಿದ್ಧಿಸದೆ ಇನ್ನೂ ಸೇವಿಸಬೇಕೆಂದಿರುವುದರಿಂದ ಇನ್ನೂ ಎರಡು ಬುಡ್ಡಿ ಕಳುಹಿಸುವುದು. ಸ್ತ್ರೀಯರ ಎಲ್ಲಾ ವ್ಯಾಧಿಗೂ 'ಲೋಧ್ರ'ವು ದಿವ್ಯೌಷಧಿಯೆಂದು ನಾನು ಖಂಡಿತವಾಗಿಯೂ ಹೇಳುತ್ತೇನೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 8486.

ಏಜಂಟರು— ಪಾ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲಾಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಲ್ಪಡುತ್ತವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

[illegible] ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್.

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

[illegible]

ಕೊಡಗು ದೇಶದ ರಾಜ್ಯಭಾರ ಕ್ರಮ.

ಲೇಖಕ—ಎಮ್. ಜಿ. ನಾಗಪ್ಪ.

(ಹಿಂದಿನ ಸಂಚಿಕೆಯಿಂದ ಮುಂದುವರಿಸಿದುದು)

[illegible] ಎಂಬ ಒಬ್ಬ ಪಾರ್ಸಿಯು ಮಡಿಕೇರಿ [illegible] ವೀರರಾಜೇಂದ್ರ ಒಡೆಯನ ಮಿತ್ರನಾಗಿದ್ದನು. [illegible] ಬಂದೊಡನೆ ಆತನು ಮಾಡಿದ [illegible] ಅವನಿಗೆ ತಿಳಿದಿತ್ತು. ಇವನು ಕೊಡಗನ್ನು ಬಿಟ್ಟು ಹೋಗುತ್ತೇನೆಂದು ಹೇಳಿ ರಾಜನ ಅಪ್ಪಣೆಯನ್ನು ಪಡೆದು [illegible] ಬಂದು ಕುಳಿತುಕೊಂಡನು. ಅವನು ಅಲ್ಲಿಂದ ಹೊರಟು ಕೊಡಗು ಗಡಿಯನ್ನು ದಾಟುವಷ್ಟರಲ್ಲಿ ಗೂಢಚಾರರು ಅವನನ್ನು ಕೊಂದುಹಾಕಿದರು. ಇದೇ ತರದ ಕಥೆಗಳು ಅನೇಕ ಇವೆ.

ರಾಜ್ಯಭಾರದಲ್ಲಿ ಯಾವ ಯಾವ ತರದಲ್ಲಿ ಅತ್ಯಾಚಾರಗಳು ನಡಿಯುತ್ತಿದ್ದವು ಎಂಬುದಕ್ಕೆ ಆಧಾರಗಳು ಸಿಕ್ಕುವುದಿಲ್ಲ. ಸ್ಥೂಲವಾಗಿ ಹೇಳುವದಾದರೆ ಜನರಿಗೆ ಬೇರೆ ಬೇರೆ ತರದ ಕಷ್ಟಗಳು ಇತ್ತೆಂದು ಹೇಳಬಹುದು. ಒಬ್ಬ ಪ್ರಜೆಯ ಮೇಲೆ ರಾಜನಿಗೆ ಸ್ವಲ್ಪ ವಿಶ್ವಾಸವು ಕಡಿಮೆಯಾಯಿತೆಂದರೆ ಅವನು ಪ್ರಾಣ ಕಳಕೊಳ್ಳುವುದರಲ್ಲಿ ಸಂದೇಹವಿರಲಿಲ್ಲ. ಈ ತರದ ಪ್ರಾಣಹತ್ಯ ಮಾಡುವ ಸೇವಕರು ಯಾವಾಗಲೂ ರಾಜನ ಸಂಗಡಲೇ ಇದ್ದರು.

ಕೊಡಗಿನ ಗಡಿಯೊಳಗೆ ಬೇರೆ ಬೇರೆ ತರದ ಕ್ರೂರಕೃತ್ಯಗಳು ನಡೆದಾಗ್ಯೂ ಗಡಿಯ ಹೊರಗಿರುವವರಿಗೆ ಯಾವ ತರದ ಬಾಧೆಯೂ ಇರಲಿಲ್ಲ. ಕೊಡಗರು ಹೊರದೇಶಗಳಿಗೆ ಹೋಗಿ ಸೂರೆಸುಲಿಗೆ ಮಾಡುತಿದ್ದರೆಂದು ಹೇಳಿದರೂ ಈ ತರದ ಬಾಧೆಯು ವಿಶೇಷವಾಗಿರಲಿಲ್ಲ. ಅಥವಾ ಕೊಡಗಿನಲ್ಲಿ ತಪ್ಪುಗಳನ್ನು ಮಾಡಿ ಓಡಿ ಬಂದವರಿಗೂ ಗಡಿಯಲ್ಲಿರುವ ರಾಜ್ಯಗಳಲ್ಲಿ ಆಶ್ರಯವು ಸಿಕ್ಕುತ್ತಿರಲಿಲ್ಲ.

ರಾಜನ ಕೈಕೆಳಗೆ ಇದ್ದ ಅಧಿಕಾರಿಗಳು ವಿಶೇಷವಾಗಿರಲಿಲ್ಲ. ಒಳದೇಶದ ರಾಜ್ಯಭಾರವು ಬಹಳ ಕಡಿಮೆ ಖರ್ಚಿನಿಂದ ಉತ್ತಮ ರೀತಿಯಲ್ಲಿ ನಡಿಯುತಿತ್ತು. ರಾಜ್ಯದ ಪ್ರತಿಯೊಂದು ದೊಡ್ಡ ವಿಭಾಗಕ್ಕೆ ಇಬ್ಬರು ಸುಭೇದಾರರು ಇದ್ದರು. ಸಣ್ಣ ವಿಭಾಗಗಳಿಗೆ ಒಬ್ಬೊಬ್ಬ ಪಾರುಪತ್ಯಗಾರನು ಇದ್ದನು. ಈ ಅಧಿಕಾರಿಗಳು ಕಂದಾಯವನ್ನು ವಸೂಲುಮಾಡಿ ಸಾಧಾರಣ ತರದ ನ್ಯಾಯಗಳನ್ನು ತೀರ್ಮಾನಿಸುತ್ತಿದ್ದರು. ಜವಾಬು ದಾರಿಯ ಪ್ರತಿ ಒಂದು ಹುದ್ದೆಯು ಕೊಡಗರಿಗಲ್ಲದೆ ಬೇರೆಯವರಿಗೆ ಸಿಕ್ಕುತ್ತಿರಲಿಲ್ಲ. ಪ್ರತಿ ಒಂದು ಹುದ್ದೆದಾರನ ಖರ್ಚಿಗಾಗಿ ವಸ್ತ್ರವನ್ನೂ, ಆಹಾರ ಜೀನಸುಗಳನ್ನೂ, ಭೂಮಿಯನ್ನೂ ಸ್ವಲ್ಪ ಹಣವನ್ನೂ ಕೊಡುತ್ತಿದ್ದರು. ರಾಜ್ಯಭಾರದ ಇನ್ನು ಚಿಲ್ಲರೆ ಕೆಲಸಗಳನ್ನು ಗ್ರಾಮದ ಗೌಡನು ಮಾಡುತ್ತಿದ್ದನು. ರಾಜ್ಯಭಾರ ಸಮ್ಮಂಧವಾದ ಸಾಧಾರಣ ತರದ ಕೆಲಸಗಳನ್ನೆಲ್ಲಾ ಆಯಾ ನಾಡಿನವರೆ ಸಂಬಳವಿಲ್ಲದೆ ಮಾಡಬೇಕಿತ್ತು.

ನ್ಯಾಯ ವಿಚಾರ.

ನ್ಯಾಯಗಳೆಲ್ಲಾ ಸರಿಯಾಗಿ ತೀರ್ಮಾನಿಸಲ್ಪಡುತ್ತಿದ್ದವು ಕಾಯಿದೆ ಕಾನೂನುಗಳು ಇರಲಿಲ್ಲ. ನ್ಯಾಯಗಳನ್ನು ದೇಶದ ಪೂರ್ವಪದ್ಧತಿಗಳಿಗನುಸಾರವಾಗಿ ತೀರ್ಮಾನಿಸುತ್ತಿದ್ದರು. ಚಿಲ್ಲರೆ ತರದ ತಪ್ಪಿತಗಳನ್ನು ಕೆಳ ಉದ್ಯೋಗಸ್ಥರು ತೀರಿಸುತ್ತಿದ್ದರು. ದೊಡ್ಡ ದೊಡ್ಡ ನ್ಯಾಯಗಳನ್ನು ರಾಜನೇ ತೀರ್ಮಾನಿಸುತ್ತಿದ್ದನು. ಆಯಾ ಸ್ಥಳಗಳಲ್ಲಿ ಊರಿನವರಲ್ಲಿ ಬುದ್ಧಿವಂತರಾದವರನ್ನು ಕೂಡಿಸಿ ಇವರ ಸಹಾಯದಿಂದ ನ್ಯಾಯಗಳನ್ನು ತೀರ್ಮಾನಿಸುತ್ತಿದ್ದ ಈ ಪಂಚಾಯತರು ಊರಿನವರಾದ್ದರಿಂದ ಅನ್ಯಾಯಕ್ಕೆ ಎಡೆಯಿರಲಿಲ್ಲ. ಇವರು ತೀರ್ಮಾನಿಸಿದರಲ್ಲಿ ಕಕ್ಷಿಗಾರರಿಗೆ ಸರಿಕಾಣದೆ ಇದ್ದರೆ ರಾಜನಿಗೆ ಅಪೀಲು ಮಾಡಬಹುದಿತ್ತು. ಆದರೆ ಕೊಡಗು ನಿವಾಸಿಗಳಿಗೆ ವ್ಯಾಜ್ಯಗಳಿಗೆ ಹೋಗುವುದಕ್ಕೆ ವಿಶೇಷ ಮನಸ್ಸಿರಲಿಲ್ಲ. ಯಾವ ತರದ ಕಾಯಿದೆ ಕಾನೂನುಗಳು ಇಲ್ಲದೆ ಇದ್ದರೂ ನ್ಯಾಯ ತೀರ್ಮಾನ ಮಾಡುವುದರಲ್ಲಿ ಅನ್ಯಾಯಗಳು ನಡಿಯುತ್ತಿರಲಿಲ್ಲ.

ಚಿಲ್ಲರೆ ತಕ್ಸೀರುಗಳಿಗೆ ಕೊರಡೆ ಹೊಡಿಯುವುದು, ಅಥವಾ ಅಪರಾಧಿಯು ಯಾವುದಾದರೂ ಖಚೇರಿಯಲ್ಲಿ ಒಂದೆರಡು ದಿವಸ ಕೆಲಸ ಮಾಡುವದು ಇವೇ ಶಿಕ್ಷೆಗಳಾಗಿದ್ದವು. ರಾಜದ್ರೋಹ ಮಾಡಿದರೆ ಮಾತ್ರ ಕಠಿಣ ತರದ ಶಿಕ್ಷೆಗೆ ಗುರಿಯಾಗುತ್ತಿದ್ದರು. ಆನೆಯ/ಕಾಲಡಿಯಲ್ಲಿ ಹಾಕಿ ಕೊಲ್ಲುವದು, ಕೊಡಗರ ಕತ್ತಿಯಿಂದ ತಲೆಹೊಡಿಸುವುದು, ಇವುಗಳೇ ಕಠಿಣ ತರದ ಶಿಕ್ಷೆಗಳು. ಕೈಕಾಲುಗಳ ಬೆರಳುಗಳನ್ನು ಕಡಿಯುವದು, ಗಿಡಿಗೆ ಹಗ್ಗ ಹಾಕಿ ತೂಗಾಡಿಸುವುದು, ಹಲ್ಲು ಉದ್ಧುರಿಸುವುದು, ಮೂಗನ್ನು ಕಿವಿಗಳನ್ನು ಕೊಯ್ಯುವದು, ಅಥವಾ ಕೈಗಳು ಕಡಿಯುವುದು ಇವೇ ಇನ್ನು ಕೆಲವ ಕಠಿಣ ಶಿಕ್ಷೆಗಳು. ಮರಣದಂಡನೆಯನ್ನು ಗುಪ್ತನಲ್ಲಿ ವಿಧಿಸುತ್ತಿದ್ದರು. ಅಪರಾಧಿಯು ತಲೆತಪ್ಪಿಸಿಕೊಂಡು ಹೋದನೆಂದು ಪುಕಾರೆ ಹುಟ್ಟಿಸಿ ಅವನನ್ನು ಹುಡುಕಲಿಕ್ಕೆ ಜನರನ್ನು ಕಳುಹಿಸಿದಂತೆ ನಟಿಸಿ ಈ ರೀತಿಯಲ್ಲಿ ಮರಣದಂಡನೆಯನ್ನು ವಿಧಿಸುತ್ತಿದ್ದರು

ಪೊಲೀಸು.

ಕಾಯಿದೆ ಕಾನೂನುಗಳು ಇಲ್ಲದೆ ಪೂರ್ವ ಪದ್ಧತಿಗನುಸಾರವಾಗಿ ನ್ಯಾಯ ತೀರ್ಮಾನಿಸುವ ಈ ಕೊಡಗು ರಾಜ್ಯದಲ್ಲಿ ಪೋಲೀಸ ಸಿಬಂದಿಯು ಅವಶ್ಯವಿರಲಿಲ್ಲ. ದೇಶವು ಬಹಳ ಸಣ್ಣದಾದುದರಿಂದ ಅಪರಾಧಿಗಳನ್ನು ಗೊತ್ತುಹಚ್ಚುವುದು ಕಷ್ಟವಾಗಿರಲಿಲ್ಲ. ಎಲ್ಲಾ ದಾರಿಗಳಲ್ಲಿಯೂ ಪಹರೆಯವರು ಯಾವಾಗಲೂ ಇರುತ್ತಿದ್ದರು. ಕಾಗದ ಪತ್ರಗಳು ಸರಿಯಾಗಿ ಅರಮನೆಗೆ ಮೈಯಲ್ಪಡುತ್ತಿದ್ದವು. ದೇಶದಲ್ಲಿ ಏನಾದರೂ ವಿಶೇಷ ಸಂಭವಿಸಿದರೆ ರಾಜನಿಗೆ ಕೂಡಲೆ ಆ ಸಂಗತಿಯು ತಿಳಿಯುತ್ತಿತ್ತು.

ಹೆದ್ದಾರಿಗಳನ್ನು ಬಿಟ್ಟು ಉಳಿದ ಎಲ್ಲಾ ದಾರಿಗಳಿಂದ ಒಳಗೆ ಬರುವದಾಗಲಿ ಹೊರಗೆ ಹೋಗುವದಾಗಲಿ ಆಕ್ಷೇಪಕರವಾಗಿತ್ತು. ಗಡಿಯಲ್ಲಿರುವ ಎಲ್ಲಾ ದಾರಿಗಳಲ್ಲಿ ಪಹರೆಯವರು ಇದ್ದರು. ಪ್ರಯಾಣಿಕರು ಇವರಿಂದ ಪತ್ರವನ್ನು ಪಡೆದ ವಿನಹ ಗಡಿದಾಟಿ ಹೋಗಕೂಡದಿತ್ತು. ಕೊಡಗಿನ ನಿವಾಸಿಗಳೂ ಅಪ್ಪಣೆ ಪಡೆದವಿನಹ ಹೊರಗೆ ಹೋಗಕೂಡದಿತ್ತು. ಕೊಡಗು ನಿವಾಸಿಯು ಬೇರೆ ದೇಶಕ್ಕೆ ಏನಾದರೂ ಕೆಲಸಕ್ಕೆ ಹೋಗುವದಾದರೆ ತಾನು ಇಂಥ ಕೆಲಸಕ್ಕೆ ಹೋಗುತ್ತೇನೆಂದು ಹೇಳಿಹೋಗಬೇಕಿತ್ತು. ಅದಲ್ಲದೆ ಅವನ ಹೆಂಡಿರು ಮಕ್ಕಳನ್ನು ಇದಕ್ಕೆ ಜವಾಬುದಾರಿಯಾಗಿ ಕೊಡಗಿನಲ್ಲಿಯೇ ಬಿಟ್ಟುಹೋಗಬೇಕಾಗಿತ್ತು. ಕುಟುಂಬ ಸಮೇತ ದೇಶವನ್ನು ಬಿಟ್ಟುಹೋಗುವದಾದರೆ ಅಪ್ಪಣೆ ಪಡೆದ ವಿನಹ ಹೋಗಕೂಡದಿತ್ತು. ತಪ್ಪಿಸಿಕೊಂಡು ಹೋಗಲಿಕ್ಕೆ ಪ್ರಯತ್ನಿಸಿದರೆ ಕಠಿಣ ತರದ ಶಿಕ್ಷೆಗೆ ಗುರಿಯಾಗುತ್ತಿದ್ದರು. ಇದರಿಂದ ಹೊರಗಿನ ಜನರು ಕೊಡಗನ್ನು ಸೆರೆಮನೆಯಂತೆ ಭಾವಿಸುತ್ತಿದ್ದರು.

ಬೇರೆ ಬೇರೆ ಖಚೇರಿಗಳಲ್ಲಿರುವ ಪೇಟೆಗಳು ಮತ್ತು ಗಡಿಗಳನ್ನು ಕಾಯುವ ಪಹರೆಯವರು ಪೋಲೀಸ ಕೆಲಸವನ್ನು ಮಾಡುತ್ತಿದ್ದರು. ನಿವಾಸಿಕರಲ್ಲಿ ಯಾವ ತರದ ಜಗಳಗಳೂ ಇಲ್ಲದ್ದರಿಂದಲೂ ಪ್ರತಿ ಒಬ್ಬರು ಪ್ರೀತಿಯಿಂದ ನಡಿಯುತ್ತಿದ್ದುದರಿಂದಲೂ ಕಳವುಗಳು ಆಗುತ್ತಿರಲಿಲ್ಲ. ಹೆದ್ದಾರಿಗಳಲ್ಲಿಯೂ ಕಳವುಗಳೂ ಹೊಡೆದಾಟಗಳೂ ಆಗುತ್ತಿರಲಿಲ್ಲ. ಪ್ರಯಾಣಸ್ಥರಿಗೆ ಕಳ್ಳಕಾಕರ ಯಾವ ತರದ ಭಯವೂ ಇರಲಿಲ್ಲ.

ಪರದೇಶದ ಪ್ರಯಾಣಸ್ಥರನ್ನು ಮಾತ್ರವೇ ಗುಮಾನಿನಿಂದ ಕಾಯುತ್ತಿದ್ದರು. ಯುರೋಪಿಯನ ಪ್ರಯಾಣಿಕರಿಗೆ ಬಹಳ ಸಂಶಯವಿತ್ತು. ಆದರೆ ಅವರಿಗೂ ಊರಿನ ನಿವಾಸಿಕರೊಡನೆ ಮಾತನಾಡಿ ದೇಶದ ಸಮಾಚಾರಗಳನ್ನು ತಿಳುಕೊಳ್ಳಲಿಕ್ಕೆ ಸಾಧ್ಯವಿರಲಿಲ್ಲ.

ಸೈನ್ಯ.

ಕೊಡಗಿಗೆ ಪ್ರತ್ಯೇಕ ಸೈನ್ಯವಿರಲಿಲ್ಲ. ಎಲ್ಲಾ ರಹಿತರೂ ಯುದ್ಧ ವಿದ್ಯೆಯನ್ನು ಕಲಿತವರಾಗಿ ಯಾವಾಗಲೂ ದೇಶಕ್ಕೆ ಕಷ್ಟಬಂದೊದಗಿದಾಗ ಸಿದ್ಧರಾಗಿಯೇ ಇದ್ದರು. ಮಲಬಾರಿನ ನಾಯರರ ಹಾಗೂ, ತುಳು ದೇಶದ ಬಂಟರ ಹಾಗೂ ಉತ್ತರ ಹಿಂದೂಸ್ಥಾನದ ರಾಜಪುತ್ರರು ಮತ್ತು ಸಿಖ್ಖರ ಹಾಗೂ ಪ್ರತಿ ಒಬ್ಬ ಕೊಡಗನು ಶಿಪಾಯಿಯಾಗಿದ್ದನು. ತನ್ನ ಮನೆಮಾರು ಆಸ್ತಿಯನ್ನು ಕಾಪಾಡುವದರಲ್ಲಿ ಮಾತ್ರವೆ ಶಿಪಾಯಿಯಲ್ಲ. ರಾಜ್ಯಭಾರದ ಎಲ್ಲಾ ಕೆಲಸಗಳಲ್ಲಿ ಯೋಗ್ಯನೇ ಆಗಿದ್ದನು ಇವರೆಲ್ಲರಿಗೆ ಮಾನ್ಯದ ಭೂಮಿಗಳು ಇದ್ದವು. ದೇಶಕ್ಕಾಗಿ ಕಾದಾಡುವದು ತಮ್ಮ ಕರ್ತವ್ಯವೆಂದು ಭಾವಿಸಿದ್ದರು.

ಇವರ ಮೇಲಧಿಕಾರಿಗಳಿಗೆ ಸರ್ವ ಕಾರ್ಯಗಾರ, ಕಾರ್ಯಗಾರ, ಸುಭೇದಾರ, ಮತ್ತು ಜಮಾದಾರ ಎಂಬ ಹೆಸರುಗಳು ಇದ್ದವು. ಜಮಾದಾರನ ಕೈಕೆಳಗೆ ೧೦ ಮಂದಿ ಶಿಪಾಯಿಗಳೂ, ಸುಭೇದಾರನ ಕೈಕೆಳಗೆ ಅಂಥಾ ೧೦ ಮಂದಿ ಜಮಾದಾರರ ಸೈನ್ಯವೂ ಇತ್ತು. ಕಾರ್ಯಗಾರರ ಕೈಕೆಳಗೆ ಅನೇಕ ಸುಭೇದಾರರ ಸೈನ್ಯವೂ ಸರ್ವ ಕಾರ್ಯಗಾರರ ಕೈಕೆಳಗೆ ಅನೇಕ ಕಾರ್ಯಗಾರರ ಸೈನ್ಯವೂ ಇತ್ತು. ಎಲ್ಲಾ ತರದ ಪಹರೆಯವರೂ ರಹಿತರೇ ಆಗಿದ್ದರು. ಇವರು ೧೫ ದಿವಸದ ಸರತಿ ಪ್ರಕಾರ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ಇವರ ಊಟ ಉಪಚಾರದ ಖರ್ಚು ಸರಿಕಾರದಿಂದ ಕೊಡಲ್ಪಡುತ್ತಿತ್ತು. ಆದರೆ ಸಂಬಳವಿರಲಿಲ್ಲ. ಇತರ ಎಲ್ಲಾ ರಾಜ್ಯಭಾರದ ಕೆಲಸಗಳನ್ನೂ ಇದೇ ರೀತಿ ಸರತಿ ಪ್ರಕಾರ ಮಾಡುತ್ತಿದ್ದರು. ಆಯಾ ಕೆಲಸಗಳನ್ನು ಅವರವರ ವಾಡಿಕೆಯ ಪ್ರಕಾರವೇ ಕೊಡುತ್ತಿದ್ದರು. ಹೀಗಿದ್ದುದರಿಂದ ಅವರ ಮನೆ ಕೆಲಸಗಳಿಗೂ ಯಾವ ತರದ ತೊಂದರೆಯೂ ಆಗುತ್ತಿರಲಿಲ್ಲ. ಇದನ್ನು ಕ್ರಮಪಡಿಸಲಿಕ್ಕೆ ಕಾಯಿದೆ ಕಾನೂನುಗಳು ಅಗತ್ಯವಿರಲಿಲ್ಲ. ರಹಿತರು ತಾವಾಗಿ ಈ ಕೆಲಸಗಳನ್ನು ಏನೂ ತಪ್ಪಿಲ್ಲದೆ ನಿರ್ವಹಿಸುತ್ತಿದ್ದರು. ಈ ರೀತಿಯಲ್ಲಿ ರಹಿತರು ದೇಶಾಯದ ಕೆಲಸವನ್ನು ಮಾಡುತ್ತಲೂ ಯುದ್ಧ ವಿದ್ಯೆ ಕಲಿತುದರಿಂದಲೂ ಇವರಲ್ಲಿ ವೀರತ್ವವೂ ಒಗ್ಗಟ್ಟೂ ಬೆಳೆದಿತ್ತು. ಇವರು ಕ್ರಮಪ್ರಕಾರ ಯುದ್ಧವಿದ್ಯೆಯನ್ನು ಕಲಿಯದೆ ಇದ್ದರೂ ಪ್ರತಿ ಒಂದು ವರ್ಗದ ಮುಖಾಲಿಕನು ಯಾವಾಗಲೂ ಯುದ್ಧ ಸನ್ನದ್ಧನಾಗಿಯೇ ಇದ್ದುದರಿಂದ ವೈರಿಗಳ ಬಾಧೆಯಿಂದ ದೇಶವನ್ನು ರಕ್ಷಿಸುವದಕ್ಕೆ ಇದು ಒಳ್ಳೆ ಉಪಾಯವಾಗಿತ್ತು.

ಕೊಡಗರೆಲ್ಲರೂ ಯುದ್ಧ ವಿದ್ಯಾವಿಶಾರದರಾಗಿ ಮಹಾ ವೀರರಾಗಿದ್ದರು. ಇವರು ಅಭ್ಯಾಸಮಾಡಿದ ಯುದ್ಧವಿದ್ಯೆಯು ಪರ್ವತ ಪ್ರದೇಶವಾದ ಕೊಡಗು ದೇಶಕ್ಕೆ ತಕ್ಕುದಾಗಿತ್ತು. ಇವರು ಚುರುಕಾಗಿಯೂ, ಸಾಹಸವುಳ್ಳವರಾಗಿಯೂ ಇದ್ದರು. ಉಪಾಯಗಳಿಂದಲೇ ಯುದ್ಧ ಮಾಡುತ್ತಿದ್ದರು. ಯುದ್ಧದ ಸಮಯ ಸೂರೆಸುಲಿಗೆ ಮಾಡುವುದರಲ್ಲಿ ಇವರಿಗೆ ಬಹಳ ಪ್ರೀತಿ. ಇದರಿಂದ ಕೊಡಗಿನ ಸುತ್ತಮುತ್ತಲಿನ ಜನರು ಕೊಡಗರು ಬಹಳ ಕ್ರೂರತನದಿಂದ ಸುಲಿಗೆಮಾಡುತ್ತಿದ್ದರೆಂದು ಹೇಳುತ್ತಿದ್ದರು. ಸಮರಾಂಗಣದಲ್ಲಿ ನಿಂತು ಇವರು ಯುದ್ಧ ಮಾಡದೆ ಇದ್ದರೂ ಶತ್ರು ಸೈನ್ಯಕ್ಕೆ ಬರುತ್ತಿದ್ದ ಆಹಾರ ಸಾಮಗ್ರಿಗಳನ್ನು ಅವರಿಗೆ ಸಿಕ್ಕದಂತೆ ದಾರಿಯಲ್ಲಿ ತಡೆಗಟ್ಟುವದು, ದಾರಿಗಳನ್ನು ಅಡ್ಡಕಟ್ಟುವದು, ಮರೆಯಾದ ಸ್ಥಳದಲ್ಲಿ ಅಡಗಿದ್ದು ಫಕ್ಕನೇ ಶತ್ರುಗಳ ಮೇಲೆ ಬೀಳುವದು ಇದರಲ್ಲಿ ಈ ಪರ್ವತನಿವಾಸಿಗಳೂ ವ ಕೊಡಗರೂ ಬಹಳ ವಿಚಕ್ಷಣರಾಗಿದ್ದರು. ದೇಶದ ಇರುಕಗ್ಗುಗಳೂ ಕಳ್ಳ ದಾರಿಗಳೂ ಇವರಿಗೆ ಚೆನ್ನಾಗಿ ತಿಳಿದಿದ್ದುದರಿಂದಲೂ, ರಾಜನ ಮೇಲೆ ಮಮತೆಯುಳ್ಳವರಾಗಿ ವಿಧೇಯರಾಗಿ ನಡಿಯುತ್ತಿದ್ದುದರಿಂದಲೂ, ತಮ್ಮ ಪರ್ವತ ಸೀಮೆಯ ಭೂಮಿಯಾದ ಕೊಡಗಿನ ಮೇಲೆ ವಾತ್ಸಲ್ಯವಿದ್ದುದರಿಂದಲೂ ದೇಶವನ್ನು ಕಾಪಾಡುವದರಲ್ಲಿ ಧೈರ್ಯದಿಂದ ಕಾದಾಡುತ್ತಿದ್ದುದರಿಂದಲೂ ಇವರು ಕ್ರಮಪ್ರಕಾರ ಯುದ್ಧವಿದ್ಯೆಯನ್ನು ಕಲಿಯದೆ ಇದ್ದರೂ ಆ ವಿದ್ಯೆಯನ್ನು ಕಲಿತವರಂತೆಯೇ ಪ್ರವೀಣರಾಗಿದ್ದರು.

ಕೊಡಗು ದೇಶದಲ್ಲಿ ಯುದ್ಧ ವಿದ್ಯಾವಿಶಾರದರಾದ ಕೊಡಗರು ಎಷ್ಟು ಮಂದಿ ಇದ್ದರೆಂದು ಅನ್ಯದೇಶಿಯರಿಗೆ ತಿಳಿಯುತ್ತಿರಲಿಲ್ಲ. ಆದರೆ ಕೊಡಗಿನಲ್ಲಿ ಯಾವ ಸಮಯದಲ್ಲಿಯಾದರೂ ೧೫,೦೦೦ ಕೊಡಗರು ಸನ್ನದ್ಧರಾಗಿಯೇ ಇದ್ದರೆಂಬ ಮಾತು ವಾಡಿಕೆಯಲ್ಲಿತ್ತು. ೧೭೮೫ರಲ್ಲಿ ಟೀಪುಸುಲ್ತಾನನ ಸೈನ್ಯದಲ್ಲಿ ಮುಸಲ್ಮಾನರಾದ ೧೫೦೦೦ದಿಂದ ೭೦೦೦೦ ವರೆಗೆ ಕೊಡಗು ಸೈನಿಕರಿದ್ದರೆಂದು ತಿಳಿಯಬರುತ್ತದೆ. ೧೭೯೨ನೇ ಇಸವಿಯಲ್ಲಿ ಲಾರ್ಡ ಕೋರ್ನವಾಲಿಸರ ಸೈನ್ಯಕ್ಕೆ ೪೦೦೦ ಮಂದಿ ಕೊಡಗು ಸೈನಿಕರು ಸಹಾಯಕರಾಗಿ ಬಂದಿದ್ದರು. ೧೭೯೯ರಲ್ಲಿ ೫೦೦೦ ಕೊಡಗು ಸೈನಿಕರು ಇಂಗ್ಲೀಷರ ಸಹಾಯಕ್ಕೆ ಬಂದಿದ್ದರು.

ಯಾವ ಸಮಯದಲ್ಲಿಯಾದರೂ ೮೦೦೦ ಮಂದಿ ಸೈನಿಕರನ್ನು ಕೂಡಿಸಲಿಕ್ಕೂ ಅವಶ್ಯ ಬಿದ್ದರೆ ಇನ್ನು ೪೦೦೦ ಸೈನಿಕರನ್ನು ಒಟ್ಟುಕೂಡಿಸಲಿಕ್ಕೂ ಕೊಡಗು ರಾಜನು ಶಕ್ತನಾಗಿದ್ದನೆಂದು ಕರ್ನಲ್ ಮೆಕೆಂಜಿಯು ಬರೆದಿರುತ್ತಾನೆ. ಬಟ್ಟರೆ ಆಯುಧ ಧಾರಿಗಳಾದ ಸೈನಿಕರು ೬೦೦೦ ಅಥವಾ ೭೦೦೦ ಇದ್ದರೆಂದು ಊಹಿಸಿದರೆ ಅತಿಶಯೋಕ್ತಿಯಾಗಲಾರದು. ಇದರಲ್ಲಿ ಮೈಸೂರು ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಿಂದ ೫ ರೂಪಾಯಿ ಸಂಬಳಕ್ಕೆ ಬೇರೆ ಕೆಲಸಗಳಿಗೆ ಬಂದವರನ್ನು ಕೂಡಿಸಬಹುದು.

ಮೇಲಿನ ರೀತಿಯಲ್ಲಿ ಗಣಿಸಿದ ಸೈನಿಕರಲ್ಲಿ ಕೊಡಗರು ಮಾತ್ರವೆ ಇದ್ದರೂ ಕೊಡಗು ದೇಶದಲ್ಲಿರುವ ಇತರ ಜಾತಿಯವರು ಸೈನಿಕರಾಗಿರಲಿಲ್ಲ. ಮಾತ್ರವಲ್ಲ ಪರ್ವತ ನಿವಾಸಿಗಳಾದ ಕೊಡಗರಷ್ಟು ಚುರುಕಾಗಿಯೂ ದೃಢಕಾಯರಾಗಿಯೂ ಇರಲಿಲ್ಲ.

ಆಯುಧಗಳನ್ನು ಧರಿಸಿದ ಕೊಡಗು ಸೈನಿಕರನ್ನು ನೋಡಿದರೆ ಚಲಿಸುವ ಆಯುಧ ಶಾಲೆಯೋ ಎಂದು ಹೇಳಬಹುದು. ಒಂದು ಕೈಯಲ್ಲಿ ಕೋವಿ, ಒಡಿಯಲ್ಲಿ ಸೊಂಟಕ್ಕೆ ಕಟ್ಟಿದ ದಟ್ಟಿಯ ಒಂದು ಉಂಗುರಕ್ಕೆ ಸಿಕ್ಕಿಸಿದ ಹರವಾದ ಕತ್ತಿಯು ಇನ್ನೊಂದು ಕಡೆಯಿಂದ ತೂಗಾಡುತ್ತಿತ್ತು. ಈ ಕತ್ತಿಯ ತುದಿಯು ಅಗಲವಾಗಿ ಬಹಳ ಬಲವುಳ್ಳದ್ದಾಗಿತ್ತು. ಇದಕ್ಕೆ ಒರೆಯು ಇರಲಿಲ್ಲ. ಇದಲ್ಲದೆ ಸೊಂಟದ ಮುಂದುಗಡೆಯಲ್ಲಿ ಬೆಳ್ಳಿ ಕಟ್ಟಿದ ಅಥವಾ ದಂತದ ಹಿಡಿ ಇರುವ ಕತ್ತಿಯು ದಟ್ಟಿಯಲ್ಲಿ ಸಿಕ್ಕಿಸಿಕೊಂಡದ್ದನ್ನು ನೋಡಬಹುದು. ಇದು ಯುದ್ಧ ಕಾಲದಲ್ಲಿ ಹೆಚ್ಚು ಪ್ರಯೋಜನಕ್ಕೆ ಬೀಳುತ್ತಿರಲಿಲ್ಲ.

[illegible] ಮತ್ತು [illegible]

ಉಪಯೋಗಿಸಲ್ಪಡುವ ಔಷಧಗಳು.

1. [illegible]—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, [illegible] ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು [illegible], ಬಿಳಿ ಶ್ವೇತ ಸೆರಗು, ಕಫಪಿತ್ತ, ಒಳಜ್ವರ, ಮಲಬದ್ಧತೆ, [illegible] ಕಳೆದುಹೋದ ಶಕ್ತಿಯು ಪುನಃ ಹೊಂದಲ್ಪಡುವುದು. ಕ್ರಯ ಡಬ್ಬಿ 1ಕ್ಕೆ ರೂ. 2—8—0. ಮೂರು ಡಬ್ಬಿಗಳಿಗೆ ರೂ. 7.

2. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನದೋಷಗಳು, ಮುಟ್ಟುಸ್ರಾವವು ಹೆಚ್ಚು [illegible], ಮಲಬದ್ಧತೆ, ಒಳಜ್ವರ, ರಕ್ತಹೀನತೆ, [illegible] ಮತ್ತು ಗರ್ಭಕೋಶದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ [illegible]. ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ. 2—4—0. ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ. 6—4—0.

3. ಮೇಹ [illegible]—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗತಕ್ಕ [illegible] ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

4. ಮಲೇರಿಯಾ ನಿವಾರಣ—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—8—0. 3 ಬಾಟ್ಲಿಗಳಿಗೆ ರೂ. 4—4—0.

5. ಬಾಲಗ್ರಹ ಗುಟಿಕೆ—ಬಾಲಗ್ರಹಕ್ಕೂ, ಕಫಕ್ಕೂ, ಜ್ವರಕ್ಕೂ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10. 3ಕ್ಕೆ ರೂ. 1—12—0.

6. ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಬಾಣಂತಿಯರಿಗೆ. ಬಾಟ್ಲಿ 1ಕ್ಕೆ ರೂ. 1—8—0. 3ಕ್ಕೆ 4—4—0.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸ [illegible].

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, ದ. ಕ.

ಮುಂದೆ [illegible] ತಯಾರಾಗುವ [illegible] ಮತ್ತು [illegible] ಗಳು ಹೊಸದಾಗಿ [illegible] ಬರುವ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಯಾರಾಗಿದೆ! ತಯಾರಾಗಿದೆ!!

ಎರಡನೇ ಮತ್ತು ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ

ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Diamonds ವಜ್ರಗಳು Diamonds

Bola Shrinivas Rao,

C/o BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ವಿಲಾಯತಿಯಿಂದ ನೇರಾ ತರಿಸುವ ಚಲೋ ವಜ್ರಗಳು.

— ಮಾರಾಟಕ್ಕಿವೆ. —

ಬೋಳ ಶ್ರೀನಿವಾಸ ರಾವ್,
C/o ಬೋಳ ಮಂಗೇಶ ರಾವು.
ಮಂಗಳೂರು.

ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ

ಚಕ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬೈಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ಕ್ರಮಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

Diamonds Diamonds!!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಜುನ್ಯಾಕ (first quality Selected) ಎಮ್ ಸ್ಟರ್ಡೆಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲ್ಲರ್,
ಡೊಂಗರಕೇರಿ, ಮಂಗಳೂರು.

'ಅಂಬಾ ತಾಯಿತ್'

